ದೃಶ್ಯಾದೃಶ್ಯ ಮನುಷ್ಯ

ಅನುವಾದಕ :

ಟಿ. ವಿ. ರಾಜಪ್ಪ, ಎಂ.ಎ., ಬಿ.ಟಿ.,


ನಿವೃತ್ತ ಹೈಸ್ಕೂಲು ಮುಖ್ಯೋಪಾಧ್ಯಾಯ

ಪ್ರಕಾಶಕರು :

...ಟಕ ಥಿಯಸಾಫಿಕಲ್ ಫೆಡರೇಷನ್

(...ಸಾಸಫಿ ಶಿಕ್ಷಣ ಮತ್ತು ಪ್ರಚಾರ ಸಮಿತಿ ವಿಭಾಗ)

... ಕೃಷ್ಣರಾಜೇಂದ್ರ ರಸ್ತೆ, ಬೆಂಗಳೂರು-೫೬೦ ೦೦೪.



Charles Webster
Leadbeater

Most respectfully Presented to
B. M. Sree Kala Bhavana by

Kamalamma
&
S. R. Guru
Doddballapur
20 - 6 - 2017

ದೃಶ್ಯಾದೃಶ್ಯ ಮನುಷ್ಯ

ಧ ವಿಧ ಬೆಳವಣಿಗೆ ಅಂತಸ್ತುಗಳಲ್ಲಿರುವ ಮನುಷ್ಯರ ತೇಜಸ್ಸುಗಳ ಉದಾಹರಣೆ
ಳು-ದಿವ್ಯದೃಷ್ಟಿಯಿಂದ ಪರಿಶೋಧಿಸಲ್ಪಟ್ಟ ಫಲಿತಾಂಶ) ಯೋಗಿ ಲೆಡ್ಬೀಟರ್ರವರ,
Man, Visible and Invisible) ಗ್ರಂಥದ ಭಾಷಾಂತರ.

ಅನುವಾದಕ :

ಟಿ. ವಿ. ರಾಜಪ್ಪ ಎಂ.ಎ., ಬಿ.ಟಿ.,
ನಿವೃತ್ತ ಹೈಸ್ಕೂಲು ಮುಖ್ಯೋಪಾಧ್ಯಾಯ

ಪ್ರಕಾಶಕರು :

ಕರ್ನಾಟಕ ಥಿಯೊಸಾಫಿಕಲ್ ಫೆಡರೇಷನ್
(ಥಿಯಾಸಫಿ ಶಿಕ್ಷಣ ಮತ್ತು ಪ್ರಚಾರ ಸಮಿತಿ ವಿಭಾಗ)
ಶ್ರೀ ಕೃಷ್ಣರಾಜೇಂದ್ರ ರಸ್ತೆ, ಬೆಂಗಳೂರು—೫೬೦೦೦೪

ಪ್ರಥಮ ಮುದ್ರಣ 1000 ಪ್ರತಿಗಳು

"Drisyadrisya Manushya"
Translation of C. W. Leadbeater's
"Man, Visible and Invisible"

Kannada Translation by
T. V. Rachappa M.A., B.T.,
Retd. High School Headmaster

Published by
The Karnataka Theosaphical Federation
(Theosophy Shiskashana and Prachara Samithi Section)
Sri Krishnarajendra Road, Bangalore – 560 004

ಬೆಲೆ :

ಅರ್ಧ
ಪೂರ್ಣ

ಮಾರಾಟಗಾರರು :
ಕರ್ನಾಟಕ ಥಿಯಸಾಫಿಕಲ್ ಫೆಡರೇಷನ್ ಕಛೇರಿ.
ಶ್ರೀ ಕೃಷ್ಣರಾಜೇಂದ್ರ ರೋಡು, ಬೆಂಗಳೂರು—೫೬೦೦೦೪

ಮುದ್ರಕರು :
ಶ್ರೀ ಭಗವಾನ್ ಇಂಡಸ್ಟ್ರೀಸ್ (ಪ್ರಿಂಟರ್ಸ್ ಅಂಡ್ ಬೈಂಡರ್ಸ್)
81/82 ಗಾಂಧಿಬಜಾರ್ ಬೆಂಗಳೂರು—560 004
ದೂರವಾಣಿ : 65131

ವಿಷಯಸೂಚಿ

ಧ್ಯಾಯ		ಪುಟ
1	ಈ ವಿಷಯಂಗಳು ಹೇಗೆ ತಿಳಿದು ಬಂದವು ?	1
2	ಪ್ರಕೃತಿ ಮಟ್ಟದ ಅಂತಸ್ತುಗಳು	6
3	ದಿವ್ಯದೃಷ್ಟಿ	11
4	ಮನುಷ್ಯನದೇಹಗಳು	16
5	ತ್ರಿಮೂರ್ತಿಗಳು	22
6	ಪ್ರಪ್ರಥಮ ಸೃಷ್ಟಿತರಂಗಗಳು	28
7	ಪಶುಗಳ ರೂಪದಲ್ಲಿರುವ ಸಮೂಹಾತ್ಮಗಳು	32
8	ಊರ್ಧ್ವಮುಖ ಬೆಳವಣಿಗೆ	34
9	ಮಾನವ ಪ್ರಜ್ಞೆ	38
10	ಮೂರನೆಯ ಚೈತನ್ಯ ಉತ್ಸೃಷ್ಟಿ	42
11	ಮಾನವನು ಹೇಗೆ ಬೆಳೆಯುತ್ತಾನೆ	48
12	ಮಾನವನ ದೇಹಗಳು ನಮಗೆ ತೋರಿಸುವುದೇನು ?	52
13	ಬಣ್ಣಗಳು ಮತ್ತು ಅವುಗಳ ಅರ್ಥ	55
14	ಪ್ರತಿರೂಪ	61
15	ಕಾಡುಮನುಷ್ಯ	66
16	ಸಾಧಾರಣ ಮನುಷ್ಯ	70
17	ಥಟ್ಟನೆ ಎದ್ದು ಮನುಷ್ಯನನ್ನು ಆಳುವ ಭಾವನೆಗಳು	73
18	ದೀರ್ಘಕಾಲ ಮುಂದುವರಿಯುವ ಪರಿಸ್ಥಿತಿಗಳು	79
19	ಸಂಸ್ಕೃತಿಯುಳ್ಳ ಮಾನವ (ಬೆಳೆದಮನುಷ್ಯ)	89
20	ಜೀವನ್ಮುಕ್ತನ ಕಾರಣದೇಹ	96
21	ಆರೋಗ್ಯ ಸ್ಥಿತಿತೇಜಸ್ಸು	101
	ಎರಡನೆಯ ಭಾಗ, ಮನಶ್ಶರೀರ	106
	ನಿನ್ನನ್ನು ನೀನು ತಿಳಿ. ಉಪೋದ್ಘಾತ—ಅನುವಾದಕನಿಂದ	119
	"ನಿನ್ನನ್ನು ನೀನು ತಿಳಿ" ವಿಷಯ	122
	ಅಂತರಾತ್ಮ ಮತ್ತು ದೇಹಾತ್ಮ	129

ಅನುವಾದಕನ ಮುನ್ನುಡಿ

ಇಂತಹ ವಿಜ್ಞಾನ ಸಹಿತವಾದ ದಿವ್ಯಜ್ಞಾನವನ್ನು ಈ ಗ್ರಂಥದ ಮೂಲಕ ಪ್ರಸಾರಮಾಡುವುದರಿಂದ ಯೋಗಿಲೆಡ್ಬೀಟರ್ರವರು ಅಧ್ಯಾತ್ಮ ಪ್ರಪಂಚಕ್ಕೆ ತುಂಬ ಉಪಕಾರ ಮಾಡಿರುತ್ತಾರೆ. ಈ ಮಹನೀಯರಿಗೆ ನಮ್ಮ ಅನಂತವಂದನೆಗಳು. ಏಕೆಂದರೆ ಅನೇಕಮುಮುಕ್ಷುಗಳು, ಅಹಿಂಸಾಪರಮೋಧರ್ಮಃ ಎಂಬ ಉಕ್ತಿಯನ್ನು ಕೇವಲ ಸ್ಥೂಲಲೋಕದಲ್ಲಿ ಮಾಡುವ ಕೆಲಸಗಳಿಗೆ ಮಾತ್ರ ಅನ್ವಯವಾಗುವಂತೆ ಅರ್ಥಮಾಡಿಕೊಳ್ಳುತ್ತಾರೆ. ಸ್ಥೂಲದೇಹದ ಮೂಲಕ ಮಾಡುವ ಹಿಂಸೆಗಿಂತಲೂ, ರಾಗದ್ವೇಷಗಳನ್ನು ವ್ಯಕ್ತಪಡಿಸುವ ಕಾಮದೇಹದ ಮೂಲಕ ಆಗತಕ್ಕ ಹಿಂಸೆಯು ಒಂದಕ್ಕೆ ಮೂನ್ನೂರಷ್ಟು ಪ್ರಬಲವಾದುದೂ ಇವಕ್ಕಿಂತಲೂ ದುಷ್ಟ ಯೋಚನೆಗಳು ಮತ್ತು ಸಂಕಲ್ಪಗಳು, ಇವುಗಳ ಮೂಲಕಮಾಡುವ ಘೋರಕರ್ಮವು ಒಂದಕ್ಕೆ ಸಾವಿರದಷ್ಟು ಹೆಚ್ಚುಪ್ರಭಾವಯುತ ವಾದುದು, ಎಂಬ ತತ್ವವು ಈ ಗ್ರಂಥವನ್ನು ಓದುವವರಿಗೆ ಚೆನ್ನಾಗಿ ಮನವರಿಕೆ ಯಾಗುತ್ತದೆ. ಅಲ್ಲದೆ ದುರಿತಕರ್ಮವನೊಲ್ಲದಿರು ಪುಣ್ಯವನ್ನೆಮಾಡು ಎಂಬ ನಿಜಗುಣ ಶಿವಯೋಗಿಗಳ ಉಕ್ತಿಯಂತೆಯೂ ಕೆಟ್ಟ ದನ್ನುಬಿಟ್ಟು ಒಳ್ಳೆಯದನ್ನೆಮಾಡು—ಎಂಬ ಭಗವಾನ್ ಬುದ್ಧರ ಉಕ್ತಿಯಂತೆಯೂ ಒಳ್ಳೆಯದು ಶಾಶ್ವತವಾದುದು—ಕೆಟ್ಟದು ಕ್ಷಣಿಕವಾದದೂ, ಹೇಗೆ-ಎಂಬ ತತ್ವ ವನ್ನೂ ಸಹ ಈ ಗ್ರಂಥವು ಬಹು ಚೆನ್ನಾಗಿ ವಿವರಿಸಿ ತಿಳಿಸುತ್ತದೆ. ಅಲ್ಲದೆ ಒಳ್ಳೆ ಯದು ನಮ್ಮ ಉನ್ನತ ಪ್ರಭಾವಕ್ಕೆ ಸೇರಿಕೊಂಡು ಜನ್ಮಜನ್ಮಕ್ಕೂ ಮುಂದುವರಿ ಯುತ್ತದೆ. ಕೆಟ್ಟದ್ದು ನಮ್ಮ ಕೆಳಗಿನ ಮಟ್ಟದ ಪ್ರಕೃತಿಯಲ್ಲಿ ಸೇರಿಕೊಂಡು ಮುಂದುವರಿಯುತ್ತಾ ಅದಕ್ಕೆ ವಿರೋಧವಾದ ಒಳ್ಳೆಯದನ್ನು ಬೆಳಸಿಕೊಂಡ ಕೂಡಲೇ ಉದುರಿ ಹೋಗುತ್ತದೆ.

"ದ್ಯೂತಂ ಛಲಯತಾಮಸ್ಮಿ ತೇಜಸ್ತೇಜಸ್ವಿ ನಾಮಹಂ" ಎಂಬ ಗೀತಾ ಶ್ಲೋಕದಂತೆ ಇತರರಿಗೆ ಕೇಡುಂಟುಮಾಡಿ ತಾನು ಸುಖಪಡಬಹುದು ಎಂಬ ಬುದ್ಧಿ ಯುಳ್ಳವರಿಗೆ ತಾವು ಮಾಡುವಂಥ ದುಷ್ಕರ್ಮದಫಲವನ್ನು ಅನುಸರಿಸುವುದರ ಮೂಲಕವೇ ಪಾಠಕಲಿತುಅವರು ಉತ್ತಮರಾಗುತ್ತಾ ಹೋಗುವಂತೆ ಪ್ರೇರೇಪಿಸತಕ್ಕ ಭಗವಂತನ ನಿಯಮ ವಿರುತ್ತದೆ. ಆದುದರಿಂದ ಶ್ರೀಕೃಷ್ಣನು ಮೇಲ್ಕಂಡ ಶ್ಲೋಕ ದಲ್ಲಿ ಆ ಕೆಟ್ಟಬುದ್ಧಿಯೂ ತಾನೇ ಮತ್ತು ಸರ್ವೋತ್ತಮರಾಗಿ ಎಲ್ಲರಿಗೂ ಒಳ್ಳೆಯ ದನ್ನೇ ಮಾಡುವಂತಹಜ್ಞಾನಿಗಳ ತೇಜಸ್ಸೂ ತಾನೇ—ಎಂದು ಹೇಳಿರುವುದು. ಮಗು ದೀಪವನ್ನು ಮುಟ್ಟಿ ಕೈಸುಟ್ಟುಕೊಳ್ಳುವ ಮೂಲಕ ಪ್ರಕೃತಿಯ ನಿಯಮವನ್ನು ಅರ್ಥ

ಮಾಡಿಕೊಳ್ಳುವಂತೆ ಜನರು ಮೊದಮೊದಲು ಧರ್ಮಕಟ್ಟಳೆಗೆ ವಿರೋಧವಾಗಿ ನಡೆಯುವುದರ ಮೂಲಕ ಆ ಭಗವಂತನ ನಿಯಮವನ್ನು ಕ್ರಮಶಃ ಅರ್ಥಮಾಡಿಕೊಂಡು ಕೊನೆಗೆ ಹರಿಶ್ಚಂದ್ರ ಮತ್ತು ಶ್ರೀರಾಮರಂತಹ ಧರ್ಮಾತ್ಮರಾಗುತ್ತಾರೆ. ಬಾಲಜೀವರುಗಳು ಎಂದರೆ ಪಶುಜನ್ಮದಿಂದ ಆಗತಾನೆ ಮಾನವ ಜನ್ಮಕ್ಕೆ ಬಂದಿರುವಂತಹರು ಇರುತ್ತಾರೆ. ಇಂತಹ ಕಾಡುಮನುಷ್ಯರನ್ನು ಸಂಧಿಸುವುದಕ್ಕೆ ಆಗುವುದಿಲ್ಲ. ಆದರೆ ಅವರಿಗಿಂತ ಸ್ವಲ್ಪ ಮುಂದುವರಿದ ಆಸ್ಟ್ರೇಲೀಯ ಖಂಡದಲ್ಲಿನ ಕೆಲವರು ಕಾಡುಮನುಷ್ಯರು ಇರುತ್ತಾರಂತೆ ಅಂತಹರಲ್ಲೊಬ್ಬನು ಹಸಿವಾದಾಗ ಬೇರೆ ಆಹಾರ ಸಿಕ್ಕದೇ ತನ್ನ ಹೆಂಡತಿಯನ್ನೇ ಕೊಂದು ತಿಂದುಬಿಟ್ಟನಂತೆ. ಆಗ ಆತನ ಸಮೀಪದಲ್ಲಿದ್ದ ಒಬ್ಬ ಕ್ರೈಸ್ತ ಪಾದ್ರಿಯು "ನೀನು ಹೀಗೆ ಮಾಡಿದ್ದು ಸರಿಯಲ್ಲ" ವೆಂದು ಖಂಡಿಸಿದಾಗ ಆ ಕಾಡು ಮನುಷ್ಯನು "ಮಾಂಸ ರುಚಿಯಾಗಿತ್ತೆಂದು " ಉತ್ತರಿಸಿದನಂತೆ, ಇಂತಹರೇ ವಾಸ್ತವವಾಗಿಯೂ ಬಾಲಜೀವಾತ್ಮರುಗಳು. ಇಂತಹ ಕಾಡುಮನುಷ್ಯ ದರ್ಜೆಯಲ್ಲಿರುವವನ ಜೀವಾತ್ಮನ ತೇಜಸ್ಸು ಎಂದರೆ ಪ್ರಭಾವಳಿಯು ಮೊದಲ್ಗೊಂಡು ತನ್ನ ಪ್ರೀತಿಪಾತ್ರರಿಗೆ ಮಾತ್ರ ತ್ಯಾಗಮಾಡತಕ್ಕ ಸಾಧಾರಣ ಮನುಷ್ಯ ಮತ್ತು ಅನೇಕ ಜನ್ಮಗಳಲ್ಲಿ ಅನುಭವಪಡೆದು ಈಶ್ವರ ಸಂಕಲ್ಪವನ್ನು ಸರಿಯಾಗಿ ಅರ್ಥಮಾಡಿಕೊಂಡು ಯಾರಿಗೂ ಕೆಡಕುಬಯಸದೇ ಎಲ್ಲರಿಗೂ ಒಳ್ಳೆಯದನ್ನೇ ಮಾಡುತ್ತಾ ಭಗವಂತನೊಡನೆ ಸಹಕರಿಸಲು ಹೃತ್ಪೂರ್ವಕವಾಗಿ ಯಾರು ಪ್ರಯತ್ನ ಮಾಡುತ್ತಿರುತ್ತಾರೆಯೋ ಅಂತಹ ಬೆಳೆದ ಜೀವಾತ್ಮರುಗಳು ಅಥವ ಮುಮುಕ್ಷುಗಳವರೆಗೆ ಆಯಾದರ್ಜೆಯವರ ಪ್ರಭಾವಳಿಯು ಅವರ ಬೆಳವಣಿಗೆ ಅಂತಸ್ತನ್ನು ಹೇಗೆ ಪತ್ತೆಹಚ್ಚಿ ತೋರಿಸುತ್ತದೆ– ಎಂಬ ಸಂಸರಣನಿಯಮವನ್ನು ಉಚಿತವಾದ ಉದಾಹರಣೆಗಳ ಮೂಲಕ ಈ ಗ್ರಂಥವು ಪರಿಷ್ಕಾರವಾಗಿ ತಿಳಿಯುವಂತೆ ಬೋಧಿಸುತ್ತದೆ.

ಮೇಲ್ಕಂಡ ಭಗವದ್ಗೀತೆ ಶ್ಲೋಕದಲ್ಲಿ "ತೇಜಸ್ತೇಜಸ್ವಿನಾಮಹಂ" ಎಂದು ಹೇಳಿದೆ- ಇಲ್ಲಿ "ತೆಜಸ್ಸು' ಎಂಬ ಶಬ್ದವು 'ಜ್ಞಾನ, ವನ್ನು ಸೂಚಿಸುವಂತಹ ಅಲಂಕಾರಿಕ ಶಬ್ದವೆಂದು ನಾನು ತಿಳಿದು ಕೊಂಡಿದ್ದೆ ಆದರೆ ಈ ಗ್ರಂಥವನ್ನು ವ್ಯಾಸಂಗ ಮಾಡಿದಮೇಲೆ ಅದು ಬರಿಯ ಅಲಂಕಾರಿಕ ಭಾಷೆಯಲ್ಲ -ಪ್ರತಿಯೊಬ್ಬ ಮನುಷ್ಯನ ಸ್ಥೂಲ ದೇಹದ ಸುತ್ತಲೂ ಆತನಬೆಳವಣಿಗೆ ಅಂತಸ್ತು ಮತ್ತು ಆತ್ಮ ಸ್ವಭಾವವನ್ನು ಸೂಚಿಸುವಂತಹ ತೇಜಸ್ಸಿನ ಆವರಣವು ಪ್ರಸರಿಸಿರುತ್ತದೆಂಬುದು ಖಚಿತವಾಗಿ ತಿಳಿಯಬಂದಿತು. ಅಲ್ಲದೆ ಹಿಂದೂ ಸಂಸ್ಕೃತಿಯಲ್ಲಿ ದೇವಸ್ಥಾನದಲ್ಲಿ ವಿಗ್ರಹಕ್ಕೆ ಲೋಹದಿಂದ ಮಾಡಲ್ಪಟ್ಟ ಪ್ರಭಾವಳಿಯನ್ನು ಅಲಂಕರಿಸುತ್ತಾರೆ. ಇದರ ಅರ್ಥವೂ ಕೂಡ ಮೇಲ್ಕಂಡ ಭಗವದ್ಗೀತೆ ಶ್ಲೋಕದಂತೆ ಈಶ್ವರನ ಸುತ್ತಲೂ ಪ್ರಸರಿಸಿರುವ ತೇಜಸ್ಸು ಎಂಬಂಶವು ಖಚಿತವಾದಂತೆ ಆಯಿತು, ಈಗ ಈ ಗ್ರಂಥವಲ್ಲೂ ಮತ್ತು ಥಿಯಾಸಫಿಯ

ಇತರೆ ಗ್ರಂಥಗಳಲ್ಲೂ ಹೇಳಿರುವಂತೆ ಪ್ರತಿಯೊಬ್ಬ ಸಾದಾರಣ ಮನುಷ್ಯನ ತೇಜಸ್ಸು ಸುಮಾರು 1½ ಮೊಳದವರೆಗೂ ಬೆಳೆದ ಮನುಷ್ಯನ (ಮುಮುಕ್ಷು) ತೇಜಸ್ಸು ಇನ್ನೂ ದೊಡ್ಡದಾಗಿಯೂ, ಯೋಗಮಾರ್ಗವನ್ನು ಪ್ರವೇಶಿಸಿರುವನ ತೇಜಸ್ಸು ಸುಮಾರು 2–3 ಫರ್ಲಾಂಗುಗಳಷ್ಟೂ ಜೀವನ್ಮುಕ್ತನ ತೇಜಸ್ಸು ಸುಮಾರು ಒಂದು ಮೈಲಿಯವರೆಗೂ ಭಗವಾನ್ ಬುದ್ಧರ ತೇಜಸ್ಸು 3 ಮೈಲಿದೂರವೂ ಮತ್ತು ನಮ್ಮ ಈ ಭೂಗೋಳಕ್ಕೆ ಈಶ್ವರನ ಪ್ರತಿನಿಧಿಯಾಗಿರುವ ಸನತ್ಕುಮಾರಮಹರ್ಷಿಗಳ ತೇಜಸ್ಸು ಈ ಭೂಗೋಳವನ್ನೆಲ್ಲ ಆವರಿಸಿ–ಎಂದರೆ 24 ಸಾವಿರ ಮೈಲಿ ಸುತ್ತಳತೆಯುಳ್ಳಷ್ಟು ವಿಸ್ತಾರವಾಗಿದೆಯೆಂದೂ ತಿಳಿದು ಬರುತ್ತದೆ. ಈ ತೇಜಸ್ಸು ಆ ವ್ಯಕ್ತಿಗಳ ವಿಜ್ಞಾನಮಯ ಕೋಶ ಮತ್ತು ಆನಂದಮಯ ಕೋಶಗಳ ಪ್ರಸರಣೆಯೇ ಆಗಿರುತ್ತದೆ.

ಅಲ್ಲದೆ ಮತ್ತೊಂದು ಖಚಿತವಾದ ವಿಚಾರಧಾರೆ. ನಮ್ಮ ಹಿಂದೂ ಸನ್ಯಾಸಿಗಳು ಕಾವಿಬಣ್ಣದ ಬಟ್ಟೆಯನ್ನು ಏಕೆ ಧರಿಸುತ್ತಾರೆ.? ಎಂಬ ತತ್ವವೂ ಕೂಡ ಈ ಗ್ರಂಥದ ದಿವ್ಯ ಬೆಳಕಿನಲ್ಲಿ ಮನವರಿಕೆಯಾಯಿತು. ಕಾವಿ ಬಣ್ಣವು ಸ್ವಾರ್ಥಿಯ ತೇಜಸ್ಸಿನಲ್ಲಿ ಎದ್ದು ಕಾಣುತ್ತದೆ. (ಜಿಪುಣನ ಚಿತ್ರವನ್ನು ನೋಡಿರಿ) ಈ ಸ್ವಾರ್ಥವನ್ನು ಗೆದ್ದಿದ್ದೇನೆ ಎಂಬುದರ ಕುರುಹೇ ಕಾವಿಬಣ್ಣ ಸ್ವಾರ್ಥವನ್ನು ಪೂರ್ತ ಮೂಲೋತ್ಪಾಟನೆ ಮಾಡಿಲ್ಲದಿದ್ದರೂ ಚಿಂತೆಯಿಲ್ಲ. ಈ ಉನ್ನತ ಧ್ಯೇಯಕ್ಕಾಗಿ ಬಾಳುವಂತಹರು ನಿಜವಾದ ಸನ್ಯಾಸಿಗಳು ಮತ್ತು ಯೋಗಿಗಳು ಈ ಯರ್ಥವನ್ನೇ ಅನಾಶ್ರೀ ತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿಯಃ। ಸಸನ್ಯಾಸೀಚ ಯೋಗಿಚ-ನನಿರಗ್ನಿಃ ನಚಾಕ್ರಿಯಃ॥ ಎಂಬ ಗೀತಾ ಶ್ಲೋಕವು ಪ್ರತಿಪಾದಿಸುತ್ತದೆ.

"ಸತ್ಯಂ ಶಿವಂ ಸುಂದರಂ" ಎಂಬ ಧ್ಯೇಯದಂತೆ ಈಗಿನ ಕಾಲದಲ್ಲಿ ಪ್ರತಿಯೊಬ್ಬ ಹಳ್ಳಿ ಹೆಂಗಸೂ ಸಹ ನಾಜೋಕಾದ ಉಡುಪನ್ನು ಧರಿಸಿಕೊಂಡು "ಫೇಸ್‌ಪೌಡರ್" ಮೊದಲಾದ ಅಲಂಕಾರ ದ್ರವ್ಯಗಳಿಗಾಗಿ ಸಾಕಾದಷ್ಟು ಹಣವನ್ನು ಖರ್ಚ ಮಾಡುತ್ತಿರುತ್ತಾರೆ. ಸರಿಯೇ ಆದರೆ ಒಬ್ಬ ದಿವ್ಯದೃಷ್ಟಿಯುಳ್ಳ ಯೋಗಿಯು ನಮ್ಮ ತೇಜಸನ್ನು ನೋಡಿದಾಗ ಕೋಪ–ತಾಪಗಳಿಗೆ ಸಂಬಂಧಪಟ್ಟ ಮಾಲಿನ್ಯ ತೇಜಸ್ಸು ಇಲ್ಲದಿದ್ದರೆ ನಮ್ಮ ಆಂತರಂಗಿಕ ಸ್ವಭಾವವೂ ಕೂಡ ಸುಂದರವಾಗಿಯೂ ರಮ್ಯವಾಗಿಯೂ ಇರುವಂತೆ ಆಗುತ್ತದೆ. ಈ ಗ್ರಂಥವು ಕೊಡುವ ಬೆಲೆಕಟ್ಟುವುದಕ್ಕೆ ಸಾಧ್ಯವಿಲ್ಲದಷ್ಟು ತಿಳಿವಳಿಕೆಯಿಂದ ಓದುಗರ ದ್ವೇಷ, ಕೋಪ, ಜಿಪುಣತನ ಖಿನ್ನತೆ ಇಂದ್ರಿಯಲೋಲುಪ್ತತೆ ಮೊದಲಾದ ಸ್ವಾರ್ಥೋದ್ದೇಶಗಳಿಗೆ ಸಂಬಂಧಪಟ್ಟ ಅಮಂಗಳಕರವೂ ಅಸಹ್ಯಕರವೂ ಆದ ತೇಜಸ್ಸಿನ ಮಾಲಿನ್ಯವನ್ನು ತೊಡೆದುಹಾಕಿ ಕರುಣೆ, ಪ್ರೀತಿ, ಸಹಾನುಭೂತಿ, ಸಂತೋಷ, ಭಕ್ತಿ ಮತ್ತು ಉನ್ನತ ಧ್ಯೇಯಕ್ಕೆ ಸಂಬಂಭಪಟ್ಟ ಶೋಭಾಯಮಾನವೂ-ದಿವ್ಯವೂ ಆದ ತೇಜಸ್ಸನ್ನು ಮೈಗೂಡಿಸುವಂತಹ ಸಾಧು ಸ್ವಭಾವದ ಸಭ್ಯ

ಪ್ರಹಸ್ಥರಾಗಿ ಮಾರ್ಪಡುವಂತೆ ಸ್ಫೂರ್ತಿ ಉತ್ಸಾಹಗಳನ್ನು ಪಡೆಯಲಿ-ಎಂಬಆಶಯ
ದಿಂದ ಈ ದಿವ್ಯ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಿಸಲಾಗಿದೆ.

ಕೊನೆಯದಾಗಿ ಈ ಗ್ರಂಥದಲ್ಲಿನ ಚಿತ್ರಗಳಿಗಾಗಿ 6752 ರೂ ಖರ್ಚುಬಿದ್ದಿದೆ. ಇಷ್ಟು ಭಾರಿ ಮೊಬಲಗನ್ನು ನಮ್ಮ ಸಮಿತಿಯಿಂದ ಒದಗಿಸಲು ಸಾಧ್ಯವಿರಲಿಲ್ಲ. ಇಂತಹ ಸಂದರ್ಭದಲ್ಲಿ ಉದಾರಹೃದಯರಾದ ನಮ್ಮ ಸೋದರರೊಬ್ಬರು(4000–) ನಾಲ್ಕುಸಾವಿರ ರೂಗಳಷ್ಟು ಮೊಬಲಗನ್ನು ದಾನಮಾಡಿ ಈ ಪುಸ್ತಕ ಮುದ್ರಣಕ್ಕೆ ಸಹಾಯಮಾಡಿರುತ್ತಾರೆ. ಅಲ್ಲದೆ ಇನ್ನು ಹೆಚ್ಚಾಗಿ ಮಾಡುವವರಾಗಿರುತ್ತಾರೆ. ಅವರು ಬೆಳಕಿಗೆ ಬರಕೂಡದು ಎಂಬ ಉದ್ದೇಶವುಳ್ಳವರಾದುದರಿಂದ ಈ ಮಹನೀಯರ ಹೆಸರನ್ನು ಇಲ್ಲಿ ನಮೂದಿಸಿಲ್ಲ. ಈ ಮಹನೀಯರಿಗೂ ಒಂದೊಂದು ಪುಸ್ತಕದ ಕ್ರಯವನ್ನು ಮೊದಲೇ ಕೊಟ್ಟು ಸಹಾಯಮಾಡಿದ ನಮ್ಮ ಅನೇಕ ಸೋದರರಿಗೆಲ್ಲ ಥಿಯಾಸಫಿ ಬೆಳಕು ಪ್ರತಿಜನ್ಮದಲ್ಲೂ ದೊರೆತು ಅವರುಗಳ ಜನ್ಮವು ಸಾರ್ಥಕವೂ ಧನ್ಯವೂ ಆಗಲಿ ಎಂಬುದಾಗಿ ಹಾರೈಸುತ್ತೇನೆ.ಅಲ್ಲದೆ ಮೇಲ್ಕಂಡ ಸೋದರ ಸೋದರಿಯರಿಗೂ ಈ ಗ್ರಂಥವನ್ನು ಭಾಷಾಂತರಿಸಿಸಲು ಅನುಮತಿಕೊಟ್ಟ ಅಡಿಯಾರಿನ T. P. H. ಮ್ಯಾನೇಜರಾದ ಸೋ॥ ಕೆ. ಎನ್. ರಾಮನಾಥನ್ ಅವರಿಗೂ, ಇದರಲ್ಲಿನ ತಪ್ಪುಗಳನ್ನು ತಿದ್ದುವಕಾರ್ಯದಲ್ಲಿ ಸಹಾಯಕರಾಗಿದ್ದ ನನ್ನ ಅಳಿಯಂದಿರು ಚಿ॥ಟಿ. ಎಸ್. ಜಯದೇವಣ್ಣನವರಿಗೂ, ಮತ್ತು ಈ ಗ್ರಂಥವನ್ನು ಆದಷ್ಟು ತಪ್ಪಿಲ್ಲದೆ ಅಂದವಾಗಿ ಮುದ್ರಣಮಾಡಿಕೊಟ್ಟ ಶ್ರೀಭಗವಾನ್ ಇಂಡಸ್ಟ್ರೀಸ್ ಮಾಲೀಕರಾದ ಶ್ರೀ॥ಎಂ. ಜಿ. ಸತ್ಯನಾರಾಯಣಶೆಟ್ಟರಿಗೂ ಮತ್ತು ಕಡೆಯದಾದರೂ ಲೆಯಲ್ಲಿ ಪ್ರಥಮಸ್ಥಾನದಲ್ಲಿರುವ ಥಿಯಾಸಫಿ ಪ್ರಚಾರ ಸಮಿತಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಈ ಗ್ರಂಥವನ್ನು ಥಿಯಾಸಫಿ ಪ್ರಚಾರ ಸಮಿತಿಯ ಹನ್ನೊಂದನೆಯ ಕಾಣಿಕೆ ಯನ್ನಾಗಿ ಸ್ವೀಕರಿಸಬೇಕೆಂದು ಓದುಗರಲ್ಲಿ ಪ್ರಾರ್ಥಿಸುತ್ತೇನೆ.

ಬೆಂಗಳೂರು
ತಾ॥15–9–77

ಟಿ. ವಿ. ರಾಚಪ್ಪ
ಅನುವಾದಕ

ವಿ. ಸೂ : (2ನೆಯ ಭಾಗದಲ್ಲಿರುವ ವಿಷಯಗಳನ್ನು ಈ ಗ್ರಂಥಕರ್ತರೇ ಬರೆದಿರುವ "ಅಂತರಂಗ ಜೀವಿತ" (Inner Life) ಎಂಬ ಗ್ರಂಥದಿಂದ ಆರಿಸಲಾಗಿದೆ—ಏಕೆಂದರೆ ವಿಷಯಗಳು ಈ ಗ್ರಂಥಕ್ಕೆ ಅನುಬಂಧ ವಾಗಿವೆ — T. V. R.)

ಚಿತ್ರಗಳ ಪುಟ ಸೂಚಿಕೆ

	ಚಿತ್ರಗಳು	ಪುಟ
1	ಬಣ್ಣಗಳ ಅರ್ಥಸೂಚಿ	ಮುಖ ಪತ್ರ
2	ತತ್ವದರ್ಪಣ	16
3	ಮೂರು ಸೃಷ್ಟಿತರಂಗಗಳು	28
4	ಚೈತನ್ಯದ ಅವತರಣ–ಆರೋಹಣ	34
5	ಕಾಡುಮನುಷ್ಯನ ಕಾರಣ–ಮನೋದೇಹಗಳು	66
6	ಕಾಡುಮನುಷ್ಯನ ಕಾಮದೇಹ	68
7	ಸಾಧಾರಣ ಮನುಷ್ಯನ ಕಾರಣ–ಮನೋ–ಕಾಮ ದೇಹಗಳು	70
8	ಪ್ರೇಮ ಭಾವನೆ–ಚಿತ್ರ	73
9	ಭಕ್ತಿ ಭಾವನೆ ಚಿತ್ರ	75
10	ಕೋಪೋದ್ವೇಗ–	76
11	ಭಯ	77
12	ಪುಂಸ್ತ್ರೀ—ಪ್ರೇಮ	81
13	ಮಂಗೋಪ	83
14	ಜಿಪುಣತೆ	84
15	ಆಳವಾದ ದುಃಖ	85
16	ಭಕ್ತ	86
17	ವಿಜ್ಞಾನಿ	87
18	ಸಂಸ್ಕೃತ ಮನುಷ್ಯನ ಕಾರಣದೇಹ	89
19	,, ಮನೋದೇಹ	91
20	,, ಕಾಮದೇಹ	92
21	,, ಜೀವನ್ಮುಕ್ತನ ಕಾರಣದೇಹ	96
22	ಆರೋಗ್ಯ ಸ್ಥಿತಿ ತೇಜಸ್ಸು	104
23	ಅನಾರೋಗ್ಯಸ್ಥಿತಿ ,,	105

ಬಣ್ಣಗಳ ಅರ್ಥ



1 ಉನ್ನತ ಮಟ್ಟದ ಆಧ್ಯಾತ್ಮಿಕ ಭಾವನೆ	1 ಭಕ್ತಿ ಪ್ರೇಮ ಮಿಶ್ರ	1 ಉನ್ನತ ಧ್ಯೇಯಕ್ಕಾಗಿ ಭಕ್ತಿ	1 ಪರಿಶುದ್ಧ ಭಕ್ತಿ	1 ಸ್ವಾರ್ಥೋ ದ್ವೇಶವುಳ್ಳ ಭಕ್ತಿ
2 ಭಯಮಿಶ್ರ ಭಕ್ತಿ ಭಾವನೆ	2 ಉನ್ನತ ಮಟ್ಟದ ಪ್ರತಿಭೆ	2 ಖಚಿತವಾದ ವಿಚಾರ ಶಕ್ತಿ	2 ಕೆಳಗಿನ ಮಟ್ಟದ ಗ್ರಹಣ ಶಕ್ತಿ	2 ಅಹಂಭಾವ
3 ಸಹಾನುಭೂತಿ	3 ಮಾನವತೆಗಾಗಿ ಪ್ರೇಮ	3 ನಿಸ್ವಾರ್ಥ ಪ್ರೇಮ	3 ಸ್ವಾರ್ಥದಿಂದ ಕಲುಷಿತವಾದ ಪ್ರೇಮ	3 ಪರಿಶುದ್ಧ ಪ್ರೇಮ
4 ಸಮಯೋಚಿತವಾಗಿ ಹೊಂದಿಕೊಳ್ಳುವಗುಣ	4 ಹೊಟ್ಟೆ ಕಿಚ್ಚು	4 ಕಪಟ	4 ಭಯ	4 ಖಿನ್ನತೆ
5 ಸ್ವಾರ್ಥತೆ	5 ದುರಾಶೆ	5 ಕೋಪ	5 ಇಂದ್ರಿಯ ಚಾಪಲ್ಯ	5 ದ್ವೇಷ

ದೃಶ್ಯಾದೃಶ್ಯ ಮನುಷ್ಯ

ಮಾನವನು ಕುತೂಹಲಕರವಾದಂತಹ ಗಹನಜೀವಿಯು. ಯಾರು ಮಾನವ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಆಸಕ್ತಿ ವಹಿಸುತ್ತಾರೆಯೋ ಅಂತಹರಿಗೆ ಮಾನವನ ಭೂತ-ವರ್ತಮಾನ ಮತ್ತು ಭವಿಷ್ಯಕ್ಕೆ ಸಂಬಂಧಪಟ್ಟ ಸಂಸರಣದ ಅಧ್ಯಯನದಲ್ಲಿ ಅಶೋಷ್ಯವಾದ ಆಸಕ್ತಿಯು ಕೆರಳುವುದರಲ್ಲಿ ಸಂಶಯವಿಲ್ಲ. ಎಂತಹ ಶ್ರಮಸಾಧ್ಯವಾದ ರೀತಿಯಲ್ಲಿ ಬಹುನಿಧಾನವಾಗಿ ಮೆಟ್ಟಲು ಮೆಟ್ಟಲಾಗಿ ಹತ್ತಿಕೊಂಡು ಈಗಿನ ಸಂಸರಣ ಮಟ್ಟವನ್ನು ತಲುಪಿರುತ್ತಾನೆ.—ಈಗ ಯಾವ ಬೆಳವಣಿಗೆ ಮಟ್ಟದಲ್ಲಿರುತ್ತಾನೆ. ಮುಂದಿನ ಎಂತಹ ವಿಸ್ಮಯಕರವಾದ ಪ್ರಗತಿಯು ಭವಿಷ್ಯದಲ್ಲಿ ಹುದುಗಿದೆ—ಇಂತಹ ಪ್ರಶ್ನೆಗಳಿಗೆ ಗಮನ ಕೊಡದೆ ಇರುವವರು ಕೇವಲ ಕೆಲವರು ಮಾತ್ರ. ವಿಮರ್ಶಾತ್ಮಕ ಬುದ್ಧಿಯುಳ್ಳವರೆಲ್ಲರೂ ಅನಾದಿ ಕಾಲದಿಂದಲೂ ಇಂತಹ ಸ್ವಾರಸ್ಯಕರವಾದ ಪ್ರಶ್ನೆಗಳನ್ನು ಪರ್ಯಾಲೋಚನೆ ಮಾಡಿಯೇ ಇರುತ್ತಾರೆ.

ಪಾಶ್ಚಾತ್ತರಾದ ನಮ್ಮಲ್ಲಿ ಮೇಲ್ಕಂಡಂತಹ ಪ್ರಶ್ನೆಗಳಿಗೆ ಬಂದಿರುವ ಉತ್ತರಗಳು ವಿಧವಿಧವಾಗಿಯೂ ಅನೇಕವಾಗಿಯೂ ಇರುತ್ತವೆ. ಮತ ಗ್ರಂಥಗಳ ಆಧಾರದ ಮೇಲೆ–ತಮ್ಮ ಉತ್ತರಗಳೇ ಸಾಧುವಾದುವು ಎಂಬುದಾಗಿ—ಒತ್ತಿ ಹೇಳಲ್ಪಟ್ಟಿರುವವುಗಳು ಕೆಲವು-ಮತ್ತೆ ಕೆಲವು ಅತೀತವೂ ಮತ್ತು ಗಹನವೂ ಆದ ಮಾರ್ಗಗಳಲ್ಲಿ ತಾತ್ವಿಕ ರೀತಿಯಲ್ಲಿ ವಿಮರ್ಶೆ ಮಾಡಿದ ಪ್ರಯತ್ನಗಳ ಫಲಿತಾಂಶಗಳು. ಮತಗ್ರಂಥಗಳ ಆಧಾರದ ಮೇಲೆ ರೂಪಿಸಲ್ಪಟ್ಟಿರುವ ಕಥೆಯನ್ನು ಒಪ್ಪಲು ಸಾಧ್ಯವಿಲ್ಲ, ಏಕಂದರೆ ಅದು ಸಮಂಜಸವಾಗಿಲ್ಲ-ವಿಚಾರಾತ್ಮಕ ಅನ್ವೇಷಣೆಗಳು ಕೇವಲ ಭೌತಿಕ ದೃಷ್ಟಿಯಿಂದ ಕೈಗೊಳ್ಳಲ್ಪಟ್ಟಿರುತ್ತವೆ. ಆದರೆ ಭೌತಿಕ ದೃಷ್ಟಿಗೆ ಎಟುಕದ ವಿದ್ಯಮಾನಗಳು ಎಷ್ಟೋ ಇವೆ. ಆದುದರಿಂದ ಮತ ಗ್ರಂಥಗಳ ಪ್ರಮಾಣಗಳಾಗಲೀ ಬರಿಯ ಭೌತಿಕ ದೃಷ್ಟಿಯಿಂದ ಕೈಗೊಂಡ ವೈಜ್ಞಾನಿಕ ಅನ್ವೇಷಣೆಗಳಾಗಲೀ ಸಮರ್ಪಕವಾದ ರೀತಿಯಲ್ಲಿ ಉತ್ತರಗಳನ್ನು ಕೊಡಲಾರವು. ಈ ಸಮಸ್ಯೆಯ ವಿಷಯವಾಗಿ ವಾಸ್ತವ ದೃಷ್ಟಿಯಿಂದ ಬೇರೆ ವಿಜ್ಞಾನ ಕ್ಷೇತ್ರದಲ್ಲಿ ನಡೆಸುವ ಅನ್ವೇಷಣೆಯಂತೆಯೇ ಸಮಗ್ರವಾದ ರೀತಿಯಲ್ಲಿ ಪರಿಶೋಧನೆ ನಡೆಸಬೇಕಾಗಿದೆ.

ಥಿಯಾಸಫಿಯು ಈ ವಿಷಯವಾಗಿ ಮುಂದಿಡುವ ಸಿದ್ಧಾಂತವು ಮೇಲ್ಕಂಡ ಎರಡು ಮಾರ್ಗಗಳಿಗೂ ತೀರ ಭಿನ್ನವಾದ ಆಧಾರವನ್ನು ಪಡೆದಿದೆ-ಮೇಲ್ಕಂಡ ಮತೀಯಗ್ರಂಥಗಳ ವ್ಯಾಸಂಗವನ್ನಾಗಲೀ ಅಥವ ಸ್ವತಂತ್ರವಾದ ರೀತಿಯಲ್ಲಿ ವಿಮರ್ಶೆ ಮಾಡುವ ತಾತ್ವಿಕ ಮಾರ್ಗವನ್ನಾಗಲೀ ಅಲ್ಲಗಳೆಯದೇ ಅದು ಮಾನವನ ಸ್ವರೂಪವನ್ನು ಮತ್ತು ಆತನ ಬೆಳವಣಿಗೆಗೆ ಸಂಬಂಧಪಟ್ಟ ಸಂಸರಣ ನಿಯಮವನ್ನೂ ವಾಸ್ತವವಾದ ರೀತಿಯಲ್ಲಿ ವಿಮರ್ಶೆ ಮಾಡತಕ್ಕ ವಿಷಯಗಳೆಂದು ಪರಗಣಿಸುತ್ತದೆ-ಅದು ಮುಂದಿಡುವ ಸಿದ್ಧಾಂತವು ಬರೀ ಗಾಳಿಗೋಪುರದಂತಹ ಕಲ್ಪನೆಯಲ್ಲ—ಒಂದು ನಿರ್ದಿಷ್ಟವಾದ ವಾಸ್ತವಾಂಶವೇ ಆಗಿರುತ್ತದೆ. ಅದರ ಹೇಳಿಕೆಯು ತುಂಬ ಪರಿಷ್ಕಾರವಾದುದು–ಯಾರು ಮಾನವನ ಸ್ವರೂಪ ಮತ್ತು ಆತನ ಸಂಸರಣ ನಿಯಮದ ವ್ಯಾಸಂಗಕ್ಕೆ ತಕ್ಕ ಯೋಗ್ಯತೆಯನ್ನು ಮೈಗೂಡಿಸಿಕೊಳ್ಳಬಲ್ಲರೋ ಅಂತಹರೆಲ್ಲರೂ ಆತನ ಬೆಳವಣಿಗೆಗೆ ಸಂಬಂಧಪಟ್ಟ ಭೂತ–ವರ್ತಮಾನ ಮತ್ತು ಭವಿಷ್ಯಭಾಗಗಳನ್ನು ವ್ಯಾಸಂಗ ಮಾಡಿ ಸ್ವಾನುಭವವನ್ನು ಪಡೆಯಬಹುದು-ಆ ರೀತಿಯ ವಿಮರ್ಶಾತ್ಮಕ ದೃಷ್ಟಿಗೆ ಮಾನವನ ಹಿಂದಿನ ಬೆಳವಣಿಗೆ–ಈಗಿನ ಹಂತ ಮತ್ತು ಮುಂದಿನ ಬೆಳವಣಿಗೆ ಮೆಟ್ಟಲುಗಳು–ಇವೆಲ್ಲವೂ ಒಂದು ಮಹತ್ತರವಾದ ಪರಸ್ಪರ ಸಂಬಂಧವುಳ್ಳಯೋಜನೆಯ ಭಾಗಗಳೆಂಬುದು ಖಚಿತವಾಗುತ್ತದೆ. ಅಲ್ಲದೇ ಅಂತಹ ಯೋಜನೆಯ ಬೆಳಕಿನಲ್ಲಿ ಹಿಂದಿನ ಮತ ಬೋಧೆಗಳನೇಕಕ್ಕೆ ಅರ್ಥ ದೊರೆಯುತ್ತದೆ. ಆದರೆ ಆ ಮೇಲ್ಕಂಡ ಯೋಜನೆಯು ಆ ಮತ ಗ್ರಂಥಗಳ ಆಧಾರದ ಮೇಲೆ ರೂಪಿಸಲ್ಪಟ್ಟಿಲ್ಲ. ಆದರೆ ಮೇಲಿನ ಲೋಕಗಳಿಗೆ ಸಂಬಂಧಪಟ್ಟ ದಿವ್ಯ ದೃಷ್ಟಿಯನ್ನು ಬೆಳೆಸಿಕೊಂಡಿರುವವರು ಯಾರು ಬೇಕಾದರೂ ಆ ಯೋಜನೆಯ ಪ್ರತಿಯೊಂದು ಹಂತವನ್ನು ಸ್ವತಃ ಪರಿಶೀಲಿಸಿ–ಥಿಯಾಸಫಿಯನಿರೂಪಣವು ಸರಿಯಾದುದು ಎಂಬ ಬಗ್ಗೆ ರುಜುವಾತು ಕೊಡಬಹುದು. ಈ ರೀತಿ ಮೇಲ್ಮಟ್ಟದ ದಿವ್ಯದೃಷ್ಟಿಯನ್ನು ಬೆಳೆಸಿಕೊಂಡಿರುವವರು ಕೆಲವರು—ನಮ್ಮ ಪರಿಶೋಧಕರಲ್ಲಿರುತ್ತಾರೆ. ಆದರೆ ಇಂತಹ ಶಕ್ತಿಗಳು ಸಾಮಾನ್ಯ ಜನರಲ್ಲಿ ಇನ್ನೂ ಬೀಜರೂಪವಾಗಿರುತ್ತವೆ. ಇಂತಹ ಸಾಮಾನ್ಯ ಜನತೆಯೇ ಅಧಿಕ ಸಂಖ್ಯೆಯಲ್ಲಿರುತ್ತದೆ.

ಮಾನವನ ಬೆಳವಣಿಗೆಗೆ ಸಂಬಂಧಪಟ್ಟ ಹಿಂದಿನ ವೃತ್ತಾಂತವನ್ನು ಗೊತ್ತು ಹಚ್ಚುವುದರಲ್ಲಿ ಹಿಂದಿನ ಮತ ಗ್ರಂಥಗಳಲ್ಲಿ ಕಂಡು ಬರುವ ವಿಷಯವೇ ಅಲ್ಲದೇ - (ಮತ ಗ್ರಂಥಗಳಲ್ಲಿ ವೈಜ್ಞಾನ ದೃಷ್ಟಿಗೆ ಸಮರ್ಪಕವಾದ ನಿದರ್ಶನಗಳು ದೊರೆಯದೇ ಇರಬಹುದು—T.V.R.) ಪ್ರಕೃತಿಗೆ ಸಂಬಂಧಪಟ್ಟ ಒಂದು ಗೊತ್ತಾದ ಸೂಕ್ಷ್ಮಹಂತದಲ್ಲಿ ಭೂತಕಾಲದಲ್ಲಿ ನಡೆದು ಹೋದ ಸಂಗತಿಗಳೆಲ್ಲವೂ ಅಳಿಸಲಾರದ ರೀತಿಯಲ್ಲಿ ಚಿತ್ರಿಸಲ್ಪಟ್ಟಿವೆ. ಆ ಸೂಕ್ಷ್ಮಮಟ್ಟದ ಲೋಕಕ್ಕೆ ತಮ್ಮ ಪ್ರಜ್ಞೆಯನ್ನು ಹತ್ತಿಸಬಲ್ಲವರೆಲ್ಲರೂ ಹಿಂದಿನ ಘಟನೆಗಳನ್ನೆಲ್ಲ ಕರಾರುವಾಕ್ಕಾಗಿ, ನಡೆದದ್ದು ನಡೆ

ದಂತೆಯೇ ಓದಿ ತಿಳಿದುಕೊಳ್ಳಬಹುದು (ಈ ಆಕಾಶಲಿಪಿಯನ್ನು ನಮ್ಮ ಹಿಂದೂ ಸಂಸ್ಕೃತಿಯಲ್ಲಿ "ಚಿತ್ರಗುಪ್ತರ ಬರವಣಿಗೆ" ಎಂದು ಕರೆದಿದೆ. ವಾಸ್ತವವಾಗಿಯೂ ಇದು ವ್ಯಕ್ತಿಗಳು ಬರೆದಿರುವ ಬರವಣಿಗೆಯಲ್ಲ-ಫೋಟೋ ತೆಗೆದುಕೊಳ್ಳುವ (Automatic Camera) ಯಂತ್ರದಂತೆ ನಡೆದ ಘಟನೆಗಳೆಲ್ಲವೂ ಗುಪ್ತವಾಗಿ ಚಿತ್ರಿಸಲ್ಪಟ್ಟಿವೆ-ಇದಕ್ಕೆ 'ಚಿತ್ರಗುಪ್ತ' ಎಂಬ ಶಬ್ದಗಳನ್ನು ಅದಲು ಬದಲು ಮಾಡಿದರೆ ಸರಿಯಾದ ಅರ್ಥ ಬರುವ 'ಗುಪ್ತಚಿತ್ರ' ವೆಂಬುದು ಸಿದ್ಧಿಸುತ್ತದೆ. ಪ್ರತಿಯೊಬ್ಬ ಮನುಷ್ಯನೂ ತಿಳಿದು-ಅಥವ ತಿಳಿಯದೇ ಮಾಡುವ ಪ್ರತಿಯೊಂದು ಕಾರ್ಯವೂ ಆಡುವ ಪ್ರತಿಯೊಂದು ಮಾತೂ, ಮಾಡುವ ಪ್ರತಿಯೊಂದು ಯೋಚನೆಯೂ ಮೇಲ್ಕಂಡ ಆಕಾಶ-ಗುಪ್ತಚಿತ್ರದಲ್ಲಿ ಚಿತ್ರಿಸಲ್ಪಡುತ್ತದೆ. ಇದನ್ನೇ ನಮ್ಮ ಪೂರ್ವಿಕರು ಲಾಕ್ಷಣಿಕ ಭಾಷೆಯಲ್ಲಿ ಚಿತ್ರಗುಪ್ತರು ಬರೆದುಕೊಳ್ಳುತ್ತಾರೆಂದು ಹೇಳಿರುತ್ತಾರೆ. (T.V.R.) ಹಿಂದಿನ ಘಟನೆಗಳಿಗೆಲ್ಲ-ಸಪ್ರಮಾಣವಾದ ಆಧಾರವೇ ಈ ಆಕಾಶಲಿಪಿ. ಇನ್ನು ಮುಂದಿನ ಬೆಳವಣಿಗೆಗೆ ಸಂಬಂಧಪಟ್ಟುದನ್ನು ಹಿಂದಿನಂತೆಯೇ ಮುಂದಿನ ಇನ್ನೂ ಅದ್ಭುತವಾದ ಪ್ರಗತಿ ಕಾದಿದೆಯೆಂಬಂಶವನ್ನು ಸಮಂಜಸವಾದ ರೀತಿಯಲ್ಲಿ ಊಹಿಸಿ ತಿಳಿದುಕೊಳ್ಳುವ ಮಾರ್ಗವು ಮೊದಲನೆಯದು. ನಮಗಿಂತಲೂ ಸಂಸರಣ ಪಥದಲ್ಲಿ ಮುಂದುವರಿದ ವ್ಯಕ್ತಿಗಳಿಂದ ಮುಂದಿನ ಪ್ರಗತಿಗೆ ಸಂಬಂಧಪಟ್ಟ ಸಂಗತಿಗಳನ್ನು ಸಾಕ್ಷಾತ್ತಾಗಿ ತಿಳಿದುಕೊಳ್ಳುವಂಥದು 2ನೆಯ ಮಾರ್ಗವು. ಅಂತಹ ಮುಂದುವರಿದ ಮಹಾವ್ಯಕ್ತಿಗಳ ಮಟ್ಟವನ್ನು ನಾವು ಮುಟ್ಟಬೇಕಾದರೆ ಬಹುದೀರ್ಘಕಾಲ ಹಿಡಿಯಬಹುದು. ಅಂತಹ ಮಹಾತ್ಮರನ್ನು ಸಂಧಿಸಿರುವಂಥ ಸುಯೋಗವನ್ನು ಪಡೆದವರು ತಾವಿರುವಸ್ಥಿತಿಗೂ ಸಂಸರಣದಲ್ಲಿ ಹಂತ-ಹಂತವಾಗಿ ಮುಂದುವರಿದಂಥವರ ಬೆಳವಣಿಗೆ ಅಂತಸ್ತುಗಳಿಗೂ ಹೋಲಿಸಿ ತಿಳಿದುಕೊಳ್ಳಬಹುದಾದ ಮೂರನೆಯ ಮಾರ್ಗವೂ ಇದೆ. ಸ್ಥೂಲ ದೃಷ್ಟಿಯಿಂದ ವಿಮರ್ಶೆ ಮಾಡುವುದಾದರೆ-ಒಬ್ಬ ಬಾಲಕನು ತನಗಿಂತ ಚಿಕ್ಕವರ ದರ್ಜೆಗೂ ಮತ್ತು ತನಗಿಂತ ಸ್ಥೂಲ ದೇಹದ ವಯಸ್ಸಿನ ಪ್ರಕಾರ ಬೆಳೆದು ಪ್ರೌಢರಾಗಿರುವವರ ಅಂತಸ್ತುಗಳೊಡನೆ ಹೋಲಿಸಿಕೊಂಡು ತಾನೂಕೂಡ ಕಾಲಕ್ರಮವಾಗಿ ಪ್ರೌಢನಾಗಿ ಬೆಳೆಯುವ ಅವಕಾಶವನ್ನು ಹೊಂದಿರುವುದಾಗಿ ಊಹಿಸಿ ತಿಳಿದುಕೊಳ್ಳಬಹುದಲ್ಲವೇ !

ಈಗಿನ ಸ್ಥಿತಿಯಲ್ಲಿರುವ ಮಾನವನ ಬೆಳವಣಿಗೆ ಮಟ್ಟ-ಮತ್ತು ಈ ಮಟ್ಟದಿಂದ ಬೆಳೆದು ಮುಂದುವರಿಯ ಬೇಕಾದರೆ ನಮ್ಮ ಜೀವಿತದಬಾಳು ಹೇಗಿರಬೇಕು— ಎಂದರೆ ನಮ್ಮ ಯೋಚನೆಗಳು ನಮ್ಮ ರಾಗಭಾವನೆಗಳು ಮತ್ತು ನಮ್ಮ ಕೆಲಸಗಳೂ ಯಾವ ನಿಯಮವನ್ನು ಅನುಸರಿಸಿದರೆ ನಾವು ಉದ್ದೇಶಿಸಿರುವ ಮುಂದಿನ ಮೆಟ್ಟಿಲನ್ನು ಮುಟ್ಟಬಹುದು-ಇವುಗಳನ್ನೆಲ್ಲ ವಿದ್ಯಾರ್ಥಿಗಳು ವ್ಯಾಸಂಗ ಮಾಡಿ ತಿಳಿದುಕೊಳ್ಳಬಹುದು. ಸಂಸರಣಕ್ಕೆ ಸಂಬಂಧಪಟ್ಟ ಪ್ರಗತಿದಾಯಕವಾದ ಸಾಧಾರಣ

ನಿಯಮಗಳನ್ನು ಕಂಡು ಕೊಂಡ ಮೇಲೆ ಅವುಗಳನ್ನು ತಮ್ಮ ದೃಷ್ಟಿಪಥದಲ್ಲಿಟ್ಟು ಕೊಂಡು ಅವುಗಳಂತೆ ತಮ್ಮ ಬಾಳನ್ನು ಅಳವಡಿಸಿಕೊಳ್ಳಲು ಪ್ರಯತ್ನ ಪಡುತ್ತಿರುವ ನಿಷ್ಠರಾದ ಸಾಧಕರುವಾಸ್ತವವಾಗಿಯೂ ಆ ನಿಯಮಗಳು ಹೇಗೆ ದಿನಚರಿಜೀವಿತದಲ್ಲಿ ಅನುಷ್ಠಾನಕ್ಕೆ ಬರಬಲ್ಲುವು—ಎಂಬುದನ್ನು ಕಂಡುಕೊಳ್ಳುತ್ತಾರೆ. ಥಿಯಾಸಫಿಯಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ದಿವ್ಯದೃಷ್ಟಿಗೆ-ಜೀವಾತ್ಮನೂ ಮತ್ತು ಆತನ ಕೋಶ ಗಳೂ ಹೇಗೆ ಕಾಣುತ್ತವೆ ಎಂಬಂಶವನ್ನು ತಿಳಿಸಿದರೆ ಸಹಾಯವಾಗುತ್ತದೆ ಎಂದೂ ಅಲ್ಲದೇ ಈಗಾಗಲೇ ದಿವ್ಯದೃಷ್ಟಿಯನ್ನು ಬೆಳೆಸಿಕೊಂಡಿರುವಂಥವರಿಗೆ ಆ ದೃಷ್ಟಿಗೆ ಗೋಚರವಾಗುವ ದೃಶ್ಯಗಳನ್ನು ಅರ್ಥ ಪತ್ತಾಗಿ ತಿಳಿದುಕೊಳ್ಳಲಿ-ಎಂಬ ಉದ್ದೇಶ ದಿಂದಲೂ ಈ ಪುಸ್ತಕವನ್ನು ಬರೆಯಲಾಗಿದೆ.

ಪ್ರಪಂಚದ ಬಹುಭಾಗದ ಜನರಿಗೆ ಈ ದಿವ್ಯದೃಷ್ಟಿಯಲ್ಲಿ ನಂಬಿಕೆಯಿರುವುದಿಲ್ಲ ವೆಂಬಂಶವು ನನಗೆ ಗೊತ್ತು. ಅಲ್ಲದೆ ಯಾರ್ಯಾರು ಈ ವಿಷಯವನ್ನು ಕೂಲಂಕುಷ ವಾಗಿ ವ್ಯಾಸಂಗ ಮಾಡಿರುತ್ತಾರೆಯೋ ಅಂಥವರಿಗೆ ಮನುಷ್ಯನು ಮೇಲ್ಕಂಡ ದಿವ್ಯ ದೃಷಿಯನ್ನು ಬೆಳೆಸಿಕೊಳ್ಳಲು ಸಾಧ್ಯವೆಂಬ ಬಗ್ಗೆ -ತಳ್ಳಿಹಾಕುವುದಕ್ಕೆ ಸಾಧ್ಯವಿಲ್ಲದಷ್ಟು ಖಚಿತವಾದ ನಿದರ್ಶನಗಳು ಕಂಡು ಬಂದಿವೆ-ಎಂಬ ಸಂಗತಿಯೂ ನನಗೆ ತಿಳಿದಿರು ತ್ತದೆ. ಆದುದರಿಂದ ಈ ವಿಷಯವಾಗಿ ವ್ಯಾಸಂಗವನ್ನು ಕೈಗೊಳ್ಳದಿರುವಂಥವರ ಅಭಿಪ್ರಾಯಗಳಿಗೆ ಬೆಲೆಕೊಡಲು ಸಾಧ್ಯವಿಲ್ಲ. ಯಾರಾದರೂ ವಿವೇಕಶಾಲಿಯಾದ ವಿದ್ಯಾರ್ಥಿಯು-ನಾನು ಬರೆದಿರುವ "ದಿವ್ಯದೃಷ್ಟಿ" "Clairvoyavee" ಎಂಬ ಗ್ರಂಥದಲ್ಲಿ ಕೊಟ್ಟಿರುವ ಈ ಸಂಬಂಧವಾದ ನಿದರ್ಶನಗಳನ್ನೆಲ್ಲ ಓದಿ ಮನನ ಮಾಡಿ ಅನಂತರ-ನಿದರ್ಶನಗಳನ್ನು ನಾನು ಯಾವ ಗ್ರಂಥಗಳಿಂದ ಎತ್ತಿಬರೆದಿರುತ್ತೇನೆಯೋ ಅಂತಹ ಗ್ರಂಥಗಳನ್ನು ಸಹ ಓದಿ ಗಮನಿಸಿದರೆ ದಿವ್ಯದೃಷ್ಟಿಯನ್ನು ಮಾನವನು ಬೆಳೆಸಿಕೊಳ್ಳುವುದಕ್ಕೆ ಸಾಧ್ಯವಿದೆಯೆಂಬ ಬಗ್ಗೆ ಅಪ್ರತಿಹತವಾದ ರುಜುವಾತುಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಯಾರಿಗೆ ಇಂತಹ ದಿವ್ಯದೃಷ್ಟಿಯು ಬೆಳೆದು ಈಗಾಗಲೇ ಅದನ್ನು ಪ್ರಯೋಗ ಮಾಡುತ್ತಿರುತ್ತಾರೆಯೋ ಅಂತಹರಿಗೆ ಅಜ್ಞರಾದ ಬಹುಸಂಖ್ಯಾತ ಜನತೆಯ ಅಪನಂಬಿಕೆಯು ಹಾಸ್ಯಾಸ್ಪದವಾಗಿ ಪರಿಣಮಿಸುತ್ತದೆ. ಒಬ್ಬ ಕುರುಡನು ಸ್ಥೂಲ ದೃಷ್ಟಿಯುಳ್ಳ ಕಣ್ಣುಗಳಿರುವುದು ಸುಳ್ಳೆಂದು ಘೋಷಿಸಿದರೆ—ಕಣ್ಣುಳ್ಳ ನಾವು ಅವನ ಹೇಳಿಕೆಗೆ ವಿರೋಧವಾಗಿ ವಾದಮಾಡುವುದು ಅನುಚಿತವೆಂದು ಭಾವಿಸುತ್ತೇವೆಯಲ್ಲವೇ ? ಆತನಿಗೆ ನಾವು ಇಷ್ಟು ಹೇಳಬಹುದು. "ನನಗೆ ಕಣ್ಣುಗಳು ಕಾಣುತ್ತವೆ. ನನ್ನ ದೈನಂದಿನ ಅನೇಕ ಅನುಭವಗಳು ನನಗೆ ಕಣ್ಣಿರುವುದಕ್ಕೆ ಸಾಕ್ಷಿ ಹೇಳುತ್ತವೆ.—ಈ ನನ್ನ ಸಾಕ್ಷಾತ್ ಅನುಭವಗಳನ್ನು ನೀನಂ ಸುಳ್ಳು ಮಾಡಲಾರೆ" ಎಂದು ಹೇಳಬೇಕಾಗುತ್ತದೆ. ಹೀಗೆಯೇ ದಿವ್ಯದೃಷ್ಟಿಯಿದ್ದು ಅದನ್ನು ಪ್ರಯೋಗ ಮಾಡಿ ಅನೇಕ ರುಜುವಾತುಗಳನ್ನು ಪಡೆದಿರುವಂಥವನಿಗೆ-

ತಿಳಿಯದ ಜನರು ಎಷ್ಟು ಸಾವಿರ ಸಂಖ್ಯೆಯಲ್ಲಿ ಬಂದು ಅದಕ್ಕೆ ವಿರೋಧವಾಗಿ ಹೇಳಿದರೂ-ಆತನು ತನ್ನ ದಿವ್ಯದೃಷ್ಟಿಯ ಅನುಭವದಲ್ಲಿ ಸಂಶಯ ಪಡುವುದಕ್ಕೆ ಸಾಧ್ಯವಿಲ್ಲ.

ಆದುದರಿಂದ ನಾನು ಈ ಗ್ರಂಥದಲ್ಲಿ ದಿವ್ಯದೃಷ್ಟಿಯ ಬಗ್ಗೆ ರುಜುವಾತು ಕೊಡಲು ಎತ್ನಿಸುವುದಿಲ್ಲ. ಅದಿರುವುದು ವಾಸ್ತವಾಂಶವೆಂದು ವಿಮರ್ಶಾತ್ಮಕವಾದ ಬುದ್ಧಿಯುಳ್ಳವರೆಲ್ಲರೂ ಒಪ್ಪುತ್ತಾರೆಂದು ನಂಬಿ, ಆ ದಿವ್ಯ ದೃಷ್ಟಿಗೆ ಮನುಷ್ಯರು ಹೇಗೆ ಕಾಣುತ್ತಾರೆಂಬ ಬಗ್ಗೆ ವಿವರಣೆಯನ್ನು ಕೊಡುತ್ತಾ ಹೋಗುತ್ತೇನೆ. ಅಲ್ಲದೆ ದಿವ್ಯ ದೃಷ್ಟಿಯನ್ನು ಬೆಳೆಸಿಕೊಳ್ಳುವ ವಿಧಾನಗಳ ವಿಷಯವಾಗಿಯೂ ಕೂಡ ನಾನು ಆ ನನ್ನ ಪುಸ್ತಕದಲ್ಲಿ ಬರೆದಿರುವಂತೆ ವಿವರಗಳನ್ನು ಇಲ್ಲಿ ಕೊಡುವುದಿಲ್ಲ. ಆದರೆ ಥಿಯಾಸಫಿಯನ್ನು ವ್ಯಾಸಂಗ ಮಾಡದೆ ಇರುವಂತಹ ಓದುಗರಿಗೆ ಸಹಾಯಕವಾದ ಆ ವಿಷಯದ ಬಗ್ಗೆ ಅತ್ಯಾವಶ್ಯಕವಾದ ಅಂಶಗಳನ್ನು ಮಾತ್ರ ಬರೆಯಬೇಕಾಗುತ್ತದೆ.

———

ಅಧ್ಯಾಯ ೨

ಪ್ರಕೃತಿ ಮಟ್ಟದ ಅಂತಸ್ತುಗಳು

ವಿಸ್ತಾರವಾದ ಕ್ಷೇತ್ರಕ್ಕೆ ಅನ್ವಯವಾಗುವಂತಹ ಸಾರ್ವತ್ರಿಕ ನಿಯಮಗಳನ್ನು ವಿವರಿಸಿ ಹೇಳುವುದಕ್ಕೆ ಮೊದಲು ಈ ದಿವ್ಯದೃಷ್ಟಿಯ ಮೂಲಕ ಕಂಡು ಬಂದ ಕೆಲವು ವಾಸ್ತವಾಂಶಗಳನ್ನು ಓದುಗರ ಮುಂದೆ ಇಡುವುದು ಸೂಕ್ತವೆಂದು ತೋರುತ್ತದೆ. ಈ ದಿವ್ಯದೃಷ್ಟಿಯಿಂದ ವಿಮರ್ಶೆ ಮಾಡಿದರೆ ನಮ್ಮ ಸುತ್ತಮುತ್ತಲೂ ಇರುವ ಪ್ರಪಂಚದ ಸ್ವಭಾವವು ಎಷ್ಟು ತೊಡಕಾದುದು, ಎಂಬಂಶವು ಎದ್ದು ಕಾಣುತ್ತದೆ. ನಮ್ಮ ಸಾಧಾರಣ ದೃಷ್ಟಿಗೆ ಗೋಚರವಾಗುವ ಪ್ರಪಂಚಕ್ಕೂ ದಿವ್ಯ ದೃಷ್ಟಿಗೆ ಕಂಡುಬರುವ ಪ್ರಪಂಚಕ್ಕೂ ಏಷ್ಟೋ ತಾರತಮ್ಯವಿರುತ್ತದೆ-ಎಂದರೆ ಮೊದಲಿನದಕ್ಕಿಂತಲೂ ಎರಡನೆಯದು ತುಂಬ ನಂಬಲರ್ಹವಾದ ಲಕ್ಷಣಗಳನ್ನೊಳಗೊಂಡಿದೆ.

ವಸ್ತುವು ಭಿನ್ನ ಭಿನ್ನವಾದ ಪರಿಸ್ಥಿತಿಗಳಲ್ಲಿರುತ್ತದೆಂದೂ ಈ ಪರಿಸ್ಥಿತಿಗಳನ್ನು, ಒತ್ತಡ ಮತ್ತು ಶಾಖಗಳನ್ನು ವ್ಯತ್ಯಾಸ ಮಾಡುವುದರ ಮೂಲಕ, ಬದಲಾಯಿಸಲು ಸಾಧ್ಯವೆಂದೂ ಅನೇಕರಿಗೆ ತಿಳಿದಂಶವೇ ಆಗಿದೆ. ವಸ್ತುವಿನ ಮೂರು ಸ್ಥಿತಿಗಳಾದ ಘನ-ದ್ರವ-ಮತ್ತು ಆವಿರೂಪಗಳು ಇರುವುದೂ ಮತ್ತು ಈ ಪರಿಸ್ಥಿತಿಗಳನ್ನು, ಒತ್ತಡ ಮತ್ತು ಶಾಖಗಳನ್ನು ಸೂಕ್ತವಾಗಿ ಬದಲಾಯಿಸುವುದರ ಮೂಲಕ ಬದಲಾಯಿಸಬಹುದೆಂಬ ಸಂಗತಿಯೂ ತಿಳಿದಂಶವೇ ಆಗಿರುತ್ತದೆ. ಆದರೆ ಕೆಲವು ವಸ್ತುಗಳನ್ನು ಒಂದು ಪರಿಸ್ಥಿತಿಯಿಂದ ಮತ್ತೊಂದು ಪರಿಸ್ಥಿತಿಗೆ ಬದಲಾಯಿಸಲು ಸಾಧ್ಯವಾಗಿಲ್ಲವೆಂದು ರಸಾಯನ ಶಾಸ್ತ್ರಜ್ಞರು ಹೇಳುತ್ತಾರೆ. ಆದಾಗ್ಯೂ ನೀರು ಶಾಖವನ್ನು ತಗ್ಗಿಸಿದರೆ ಮಂಜುಗಡ್ಡೆಯಾಗಿಯೂ, ಶಾಖವನ್ನು ಹೆಚ್ಚಿಸುವುದರ ಮೂಲಕ ಆವಿಯಾಗಿಯೂ ಪರಿವರ್ತಿತವಾಗುವಂತೆ, ಯಾವ ಘನವಸ್ತುವನ್ನಾದರೂ ದ್ರವ ರೂಪಕ್ಕೂ ಅಥವ ಆವಿರೂಪಕ್ಕೂ ಮೇಲ್ಕಂಡ ನಿಯಮಗಳ ಪ್ರಕಾರ ತರಲು ಸಾಧ್ಯವೆಂಬಂಶವು ಗುಪ್ತ ವಿದ್ಯಾ ಪರಿಶೋಧಕರಿಗೆ ಖಚಿತವಾಗಿದೆ. ಹೀಗೆಯೇ ದ್ರವ ರೂಪದಲ್ಲಿರುವ ವಸ್ತುವನ್ನು ಘನ ರೂಪಕ್ಕೂ ಅಥವ ಆವಿರೂಪಕ್ಕೂ ತರಬಹುದು. ಗಾಳಿಯನ್ನೇ ದ್ರವರೂಪಕ್ಕೆ ತಂದಿರುವ ನಿದರ್ಶನಗಳೂ ಹಾಗೆಯೇ ಇತರೆ ಅನಿಲ

(ವಾಯುರೂಪ) ಗಳನ್ನು ಘನೀರೂಪವಾದ ಚಪ್ಪಡಿಗಳಂತೆ ಪರಿವರ್ತಿಸಿರುವ ನಿದರ್ಶಗಳೂ ಇವೆಯೆಂಬಂಶವು ನಮಗೆ ಗೊತ್ತು.

ಗುಪ್ತರಾಸಾಯಿನಿಕ ಶಾಸ್ತ್ರವು-ಮೇಲ್ಕಂಡ ಆವಿರೂಪಕ್ಕಿಂತಲೂ ಸೂಕ್ಷ್ಮವಾದ ಮತ್ತೊಂದು ಪರಿಸ್ಥಿತಿಯಿದೆಯೆಂದೂ ಅದನ್ನು ಅತಿವಾಯು (etheric) ತತ್ವವೆಂದು ಕರೆಯುಬಹುದು ಎಂದೂ ಹೇಳುತ್ತದೆ. ವಿಜ್ಞಾನವು ಯಾವುದನ್ನು ಅತಿವಾಯು ತತ್ವವೆಂದು (ಈಥರ್) ಕರೆಯುತ್ತದೆಯೋ ಆದೂ ಕೂಡ ಮೂಲಸ್ಥಿತಿಯಲ್ಲ. ಅದೂ ಕೂಡ ಒಂದೇ ಸ್ವಭಾವದ ವಸ್ತುವಲ್ಲ. ಕೆಳಗಿನ ಘನ ದ್ರವಾದಿರೂಪಗಳಂತೆ ಪ್ರಕೃತಿಯ ಮತ್ತೊಂದು ಸೂಕ್ಷ್ಮ ಸ್ಥಿತಿಯೆಂಬುದು ಗುಪ್ತರಸಾಯನ ಶಾಸ್ತ್ರಕ್ಕೆ ಕಂಡು ಬಂದಿದೆ. ಅದು ಹೊಸವಸ್ತುವಲ್ಲ. ಆದರೆ ಅದು ವಸ್ತುವಿನ ಮತ್ತೊಂದು ಸೂಕ್ಷ್ಮರೂಪ. ಯಾವ ಮೂಲವಸ್ತುವನ್ನಾದರೂ ತೆಗೆದುಕೊಳ್ಳೋಣ. ಜಲ ಜನಕ, ಚಿನ್ನ-ಬೆಳ್ಳಿ ಮುಂತಾದುವು—ಇವುಗಳಲ್ಲಿ ಪ್ರತಿಯೊಂದನ್ನು ಅವು ಇರುವ ಸಹಜ ಪರಿಸ್ಥಿತಿಯಿಂದ ಎಂದರೆ ಅನಿಲ ಅಥವ ಘನರೂಪದಿಂದ ಅತಿವಾಯು ರೂಪಕ್ಕೆ ಬದಲಾಯಿಸಲು ಸಾಧ್ಯ—ಹೇಗೆ ಚಿನ್ನದಂತಹ ಮೂಲವಸ್ತುಗಳು ಸ್ವಾಭಾವಿಕವಾಗಿ ಘನರೂಪದಲ್ಲೂ, ಪಾದರಸವು-ದ್ರವರೂಪದಲ್ಲೂ, ಆಮ್ಲಜನಕವು-ವಾಯುರೂವದಲ್ಲೂ ಇರುತ್ತವೆಯೋ ಹಾಗೆಯೇ, ಅತಿವಾಯುರೂಪದಲ್ಲೂ ಕೂಡ ಕೆಲವು ವಸ್ತುಗಳು ಸಹಜವಾಗಿರುತ್ತವೆ. ಇವುಗಳನ್ನು ಸಹ ಅವು ಇರುವ ಅತಿವಾಯುರೂಪದಿಂದ ಮೇಲಿನ ಮಟ್ಟಗಳ ಸೂಕ್ಷ್ಮ ರೂಪಗಳಿಗೂ ಅಥವ ಕೆಳಗಿನ ಮಟ್ಟದ ವಾಯು—ದ್ರವ ಮತ್ತು ಘನರೂಪಗಳಿಗೂ ಬದಲಾಯಿಸಲು ಸಾಧ್ಯವಿದೆ. ವಿಜ್ಞಾನವು ತಿಳಿದಿರುವಂತೆ ಇರುವ 60-70 ಮೂಲವಸ್ತುಗಳ ಅಣುಗಳನ್ನು ಭೇದಿಸಲು ಸಾಧ್ಯವಿಲ್ಲ—ಎಂದರೆ ಚಿನ್ನ, ಪಾದರಸ, ಆಮ್ಲಜನಕ ಮೊದಲಾದ ಮೂಲಸ್ತುಗಳನ್ನು ಬೇರೆ ರೂಪಗಳಗೆ ಬದಲಾಯಿಸಲು ಸಾಧ್ಯವಾಗುವುದಿಲ್ಲವೆಂಬ ವಿಜ್ಞಾನದ ಸಿದ್ಧಾಂತವು ಒಂದು ಕಾಲದಲ್ಲಿತ್ತು. ಆಂಗ್ಲೇಯ ಭಾಷೆಯ ಆಟಂ (Atom) ಎಂಶಬ್ದವು ಗ್ರೀಕ್‌ಧಾತುವಿನಿಂದ ರೂಪನಿಷ್ಪತ್ತಿ ಹೊಂದಿ ಬಂದಿದೆ. ಅದರ ಅರ್ಥ—ಭೇದಿಸಲು ಸಾಧ್ಯವಿಲ್ಲ (Uncuttable) ವೆಂಬುದು. ವಿಜ್ಞಾನವು ಹಿಂದೆ ತಿಳಿದುಕೊಂಡಿದ್ದ ಪ್ರಕಾರ ಪ್ರತಿಯೊಂದು ಮೂಲವಸ್ತುವೂ ಮೂಲವಸ್ತುವಾಗಿಯೇ ಉಳಿಯುತ್ತದೆ. ಅದನ್ನು ಭೇದಿಸಿ ಸೂಕ್ಷ್ಮತರ ಸ್ಥಿತಿಗೆ ತೆಗೆದುಕೊಂಡು ಹೋಗಲು ಸಾಧ್ಯವೇ ಇಲ್ಲ ಎಂಬ ನಿಲುವನ್ನು ಹೊಂದಿತ್ತು. ಆ ಕಾಲದಲ್ಲೂ ಕೂಡ ಗುಪ್ತರಸಾಯನ ಶಾಸ್ತ್ರವು ಪ್ರತಿಯೊಂದು ಮೂಲವಸ್ತುವಿನ (Element) ಪರಿಸ್ಥಿತಿಯನ್ನೂ ವಿಜ್ಞಾನವು ನಿರ್ದೇಶಿಸುವ ಅತಿವಾಯು ಮಟ್ಟದಿಂದ ಇನ್ನೂ ಮೂರು ದರ್ಜೆಗಳ ಸೂಕ್ಷ್ಮ ಪರಿಸ್ಥಿತಿಗೆ ಬದಲಾಯಿಸಬಹುದೆಂದೂ ಕೊನೆಯಲ್ಲಿ ಆ ರೀತಿ ಬದಲಾಯಿಸಲ್ಪಟ್ಟ ಪರಿಸ್ಥಿತಿಯ ಪರಮಾಣುಗಳು ಚಿನ್ನ–ಪಾದರಸ–ಜಲಜನಕ

ಮುಂತಾದ ಎಲ್ಲ ಮೂಲವಸ್ತುಗಳಿಗೂ ಸಮಾನವಾದುದೆಂದೂ – ಆದರೆ ಅವುಗಳಲ್ಲಿ ಕೆಲವು ಧನ ಸ್ವಭಾವದುವು (Positive) ಮತ್ತೆ ಕೆಲವು ಋಣಸ್ವಭಾವದುವು (Negative) ಎಂಬ ತತ್ವವನ್ನು ಕಂಡುಹಿಡಿದಿದೆ.

ಈ ಪರಮಾಣುಗಳ ಲಕ್ಷಣಗಳು ಮತ್ತು ಅವು ಹೇಗೆ ಸಂಯೋಜಿತವಾಗಿ ವಿಧ ವಿಧವಾದ ಮೂಲವಸ್ತುಗಳಾಗಿ ಪರಿವರ್ತಿತವಾಗುತ್ತವೆಯೆಂಬ ವಿಧಾನಗಳು ತುಂಬ ಸ್ವಾರಸ್ಯಕರವಾದ ವ್ಯಾಸಂಗವೇ. ಆದರೆ ಇದು ನಮ್ಮ ಸಧ್ಯದ ವಿಷಯಕ್ಕೆ ಸಂಬಂಧಪಟ್ಟುದಲ್ಲ. (ಆದಾಗ್ಯೂ ಈ ವಿಷಯದಲ್ಲಿ ಅಭಿರುಚಿವಹಿಸುವಂತಹರು 1895ನೆಯ ಇಸವಿ ನವಂಬರ್ ಮಾಹೆ (Lucifer) 'ಲ್ಯೂಸಿಫರ್' ಎಂಬ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುವ ಗುಪ್ತರಸಾಯನ ಶಾಸ್ತ್ರದ ಮೇಲೆ ಬರೆದಿರುವ ಬೆಸಂಟರವರ ಲೇಖಗಳನ್ನು ನೋಡಬಹುದು. ಈಚೆಗೆ ಈ ಲೇಖನವು ಪ್ರತ್ಯೇಕ ಪುಸ್ತಕವಾಗಿ ಪುನರ್ಮುದ್ರಣವಾಗಿರುತ್ತದೆ) ಮೇಲ್ಕಂಡ ಪರಮಾಣಗಳೂ ಕೂಡ ನಮ್ಮ ಸ್ಥೂಲಲೋಕಕ್ಕೆ ಸಂಬಂಧಪಟ್ಟವೇ ಆಗಿರುತ್ತವೆ. ಇವುಗಳನ್ನೂ ಕೂಡ ಭೇದಿಸಿ ಅವುಗಳಿಂದ ಒಂದು ದರ್ಜೆ ಸೂಕ್ಷ್ಮ ಮಟ್ಟಕ್ಕೆ ತರಬಹುದಾದ ವಿಧಾನಗಳಿವೆ. ಆ ರೀತಿ ಭೇದಿಸಲ್ಪಟ್ಟ ಪರಮಾಣುಗಳು ಪರಿವರ್ತಿತವಾಗುವ ಪ್ರಕೃತಿ ಮಟ್ಟವು ಈ ಭೂಲೋಕಕ್ಕೆ ಮೀರಿದಷ್ಟು ಸೂಕ್ಷ್ಮ ಸ್ಥಿತಿಗೆ ಹೋಗುತ್ತದೆ. ಅದಕ್ಕೆ ಆಸ್ಟ್ರಲ್ ವರ್ಲ್ಡ್—ಕಾಮಲೋಕವೆಂದು ಹೇಳಬೇಕಾಗುತ್ತದೆ. ಏಕೆಂದರೆ ಆ ಸೂಕ್ಷ್ಮತಮ ಮಟ್ಟದ ಪ್ರಕೃತಿಯು ಸ್ಥೂಲಲೋಕದ ಶಾಖ, ಒತ್ತಡ ಮೊದಲಾದುವುಗಳಿಗೆ ಸಂಬಂಧಪಟ್ಟ ನಿಯಮಗಳಿಗೆ ಒಗ್ಗೂಡುವ ಪರಿಸ್ಥಿತಿಯಲ್ಲಿರುವುದಿಲ್ಲ. ಶಾಖವನ್ನು ಎಷ್ಟು ಹೆಚ್ಚಿಸಿದರೂ ಅಥವಾ ಕಡಿಮೆ ಮಾಡಿದರೂ ಆ ಮಟ್ಟದ ಪ್ರಕೃತಿಯಲ್ಲಿ ಯಾವ ಬದಲಾವಣೆಯೂ ಕಂಡುಬರುವುದಿಲ್ಲ. ಈ ಕಾಮಲೋಕದ ಪ್ರಕೃತಿಯೂ ಕೂಡ ಸ್ಥೂಲಲೋಕದಂತೆಯೇ ಒಂದಕ್ಕಿಂತ ಒಂದು ಸೂಕ್ಷ್ಮ—ಅಥವ ಒಂದಕ್ಕಿಂತ ಒಂದು ಸ್ಥೂಲವಾದ ಏಳು ಹಂತಗಳಲ್ಲಿರುತ್ತದೆ. ಅದನ್ನು ಅಲ್ಲಿಯ ಮಟ್ಟದ ಒಂದು ಹಂತದಿಂದ ಮತ್ತೊಂದು ಮೇಲಿನ ಹಂತಕ್ಕೆ ವಿಭಜಿಸಲು ಸಾಧ್ಯ. ಆ ರೀತಿ ವಿಭಜಿಸುತ್ತಾ ಹೋದರೆ ಆಲೋಕದ ಪರಮಾಣು ದರ್ಜೆಯನ್ನು ತಲುಪುತ್ತೇವೆ. ಆ ಪರಮಾಣಗಳು ಕಾಮಲೋಕ ಅಥವ (ಹಿಂದೂ ಸಂಸ್ಕೃತಿ ರೀತ್ಯಾ) ಅಪ್ ತತ್ವಕ್ಕೆ ಸಂಬಂಧಪಟ್ಟುವುಗಳು.

ಹೀಗೆಯೇ ನಮ್ಮ ವಿಭಜನೆ ಕ್ರಮನ್ನು ಮುಂದುವರಿಸಿದರೆ— (ಅಪ್-ತತ್ವ) ಕಾಮಲೋಕವನ್ನು ಪಡೆದು ಅದಕ್ಕಿಂತ ಸೂಕ್ಷ್ಮತರವಾದ ಮನೋಲೋಕ (ತೇಜಸ್ತತ್ವ) ವನ್ನು ಪ್ರವೇಶಿಸುತ್ತೇವೆ, ಇಂತಹ ಸೂಕ್ಷ್ಮಮಟ್ಟದಲ್ಲೂ ಕೂಡ ಸ್ಥೂಲಲೋಕದಲ್ಲಿರುವಂತೆ ಘನ, ದ್ರುವ, ವಾಯು—ಅತಿವಾಯುತತ್ವ ಸೂಕ್ಷ್ಮ

ಆತ್ಮೀಯ-ಅಣು-ಪರಮಾಣು- ಎಂಬ ಏಳು ಮಟ್ಟಗಳ ಸಾಂದ್ರತೆಯ ಪ್ರಕೃತಿಯಿರುತ್ತದೆ. ಈ ಏಳು ಮಟ್ಟಗಳಲ್ಲಿ ಆಲೋಕವು ಕೂಡ ವಿಭಾಗವಾಗಿರುವುದನ್ನು ಕಂಡುಕೊಳ್ಳುತ್ತೇವೆ. ಈ ರೀತಿ ಕೈಗೊಂಡ ನಮ್ಮ ಪ್ರಯೋಗಗಳಿಂದ ನಮಗೆ ಖಚಿತವಾಗಿ ತಿಳಿದು ಬಂದಿರುವುದೇನೆಂದರೆ ಪ್ರಕೃತಿಯು ಅನೇಕ ಸಾಂದ್ರತೆ ಮಟ್ಟಗಳಲ್ಲಿ ವಿಭಜಿತವಾಗಿರುತ್ತದೆ. ಆದರೆ ಆ ರೀತಿ ವಿಭಜನೆ ಮಾಡುವ ನಮ್ಮ ಶಕ್ತಿಗೆ ಪರಿಮಿತಿಯಿರುತ್ತದೆ. ಇದುವರಗೆ ನಾವು ನಡೆಸಿರುವ ಪ್ರಯೋಗಗಳ ಫಲಿತಾಂಶವಾಗಿ ನಮಗೆ ಖಚಿತವಾಗಿ ತಿಳಿದಿರುವುದೇನೆಂದರೆ, ಒಂದೊಂದು ವಿಶೇಷ ಸಾಂದ್ರತೆ ಮಟ್ಟದ—(ಎಂದರೆ ಒಂದೊಂದು ಬಗೆಯ ವೇಗ ಪರಿಮಿತಿಯುಳ್ಳ) ಪರಮಾಣುಗಳಿಂದ ರಚಿತವಾದ ಬೇರೆ ಬೇರೆ ತತ್ವಗಳಿರುತ್ತವೆ (ತತ್ವವೆಂದರೆ-ಆ ಲೋಕದ ಪರಮಾಣು ಚಲಿಸುವಂತಹ ವೇಗಪರಿಮಿತಿ ಎಂದು ಡಾ॥ ಬೆಸಂಟರವರು ಒಂದು ಕಡೆ ಹೇಳುತ್ತಾರೆ T.V.R.) ಈ ತತ್ವಗಳೆಲ್ಲವೂ ಪರಸ್ಪರ ಸ್ಪಂದಗತಿಯಲ್ಲಿ ತಾರತಮ್ಯವನ್ನು ಹೊಂದಿದ್ದಾಗ್ಯೂ ಎಲ್ಲವೂ ಒಂದೇ ವಿಶ್ವದ ವಿಭಾಗಗಳೆಂಬುದನ್ನು ಮರೆಯಕೂಡದು.

ನಮ್ಮ ಥಿಯೂಸಫಿ ಸಾಹಿತ್ಯದಲ್ಲಿ ಈ ತತ್ವ ಅಥವ ಲೋಕಗಳನ್ನು ಒಂದರ ಮೇಲೊಂದಿರುವಂತೆ ಚಿತ್ರಿಸಿರುತ್ತೇವೆ—(Planes). ಆದರೆ ವಾಸ್ತವವಾಗಿಯೂ ಅವುಗಳ ಪರಸ್ಪರ ಸಂಬಂಧವು ಆ ರೀತಿಯಿರುವುದಿಲ್ಲ. ಇಲ್ಲಿ 'ಮೇಲೆ'-'ಕೆಳಗೆ' ಎಂಬ ಶಬ್ದಗಳನ್ನು ಮರದ ಬೀರಿನಲ್ಲಿರುವ ಪತ್ತಿಗೆಗಳಂತೆ ಅರ್ಥ ಮಾಡಿಕೊಳ್ಳಕೂಡದು—ಸೂಕ್ಷ್ಮ ತತ್ವವು ಸ್ಥೂಲ ತತ್ವಕ್ಕಿಂತ ಹೆಚ್ಚು ವೇಗಗತಿಯಲ್ಲಿ ಚಲಿಸುವ ಪರಮಾಣುಗಳುಳ್ಳದು ಎಂದು ಭಾವಿಸಬೇಕು. ಕೇವಲ ಸಾಂದ್ರತಮವಾದ ಸ್ಥೂಲ ಲೋಕದ ಘನವಸ್ತುಗಳಲ್ಲೂ ಕೂಡ (ಉದಾಹರಣೆಗಾಗಿ ಕಲ್ಲು ಚಪ್ಪಡಿ) ಅದರ ಅಣುಗಳು ಒಂದಕೊಂದು ತಾಕದೆ ಅವುಗಳಲ್ಲಿ ಪ್ರತಿಯೊಂದು ಚಲಿಸುವಷ್ಟು ಅದರ ಸುತ್ತಲೂ ಅವಕಾಶವಿರುತ್ತದೆ. ಆದುದರಿಂದ ಅಂತಹ ಮಧ್ಯ ಪ್ರದೇಶದಲ್ಲಿ ಮೇಲಿನ ಲೋಕಗಳ ಸೂಕ್ಷ್ಮ ಪ್ರಕೃತಿಯ ಅಣುಗಳು ಚಲಿಸುತ್ತಿರುತ್ತವೆ. ಹೀಗೆ ಪ್ರತಿಯೊಂದು ತತ್ವದ ಅಣುಗಳೂ, ಅಣುಸಮುದಾಯಗಳೂ ಅವರ ದರ ಸಾಂದ್ರತೆ ಮಟ್ಟದಲ್ಲಿ ಚಲಿಸುವುದಕ್ಕೆ ಯಾವ ಅಡಚನೆಯೂ ಇರುವುದಿಲ್ಲ (ಉದಾಹರಣೆಗಾಗಿ-ಒಂದು ನಾನ್‌ರೊಟ್ಟಿ ಚೂರನ್ನು ಕಾಫಿಯಲ್ಲಿ ಎದ್ದಿದರೆ—ಏನಾಗುತ್ತದೆ? ನೋಡಿ ಆ ರೊಟ್ಟಿಯಲ್ಲಿರುವ ರಂಧ್ರಗಳಲ್ಲಿ ದ್ರವರೂಪವಾದ ಕಾಫಿಯು ಬಂದು ಸೇರಿಕೊಳ್ಳುತ್ತದೆ. ಒಂದೇ ಸ್ಥಳಾವಕಾಶದ ಚೌಕಟ್ಟಿನಲ್ಲಿ—ರೊಟ್ಟಿಗೆ ಸಂಬಂಧಪಟ್ಟ ಹಿಟ್ಟಿನ ಅಂಶ ನೀರಿನ, ಅಂಶ, ಹಾಲು-ಸಕ್ಕರೆ-ಕಾಫಿ-ಅಂಶಗಳು ಹೇಗೆ ಸೇರಿಕೊಂಡಿರುತ್ತತೆಯೋ, ಹಾಗೆ ಸ್ಥೂಲ-ಕಾಮ-ಮತ್ತು ಮನೋಲೋಕಗಳ ಪ್ರಕೃತಿಗಳು ಅವುಗಳಿಗಿಂತ ಸೂಕ್ಷ್ಮವಾದ ಮೇಲಿನ ಲೋಕಗಳ ಪ್ರಕೃತಿಗಳೂ ಕೂಡ ಓತಪ್ರೋತವಾಗಿ ಸೇರಿ

ಕೊಂಡಿವೆ—T.V.R.) ಸ್ಥೂಲ ಲೋಕ ತತ್ವವನ್ನು ಕಾಮಲೋಕ ತತ್ವವೂ ಇವೆರಡನ್ನೂ ಇವಕ್ಕಿಂತ ಸೂಕ್ಷ್ಮವಾದ ಮೇಲಿನ ಲೋಕ ತತ್ವಗಳೂ ಒಳಗೆ ವ್ಯಾಪಿಸಿ-ಹೊರಕ್ಕೆ ಬಹುದೂರ ಚಾಚಿಕೊಂಡಿರುತ್ತವೆ. ಆದುದರಿಂದ ನಾವು ಕಾಮಲೋಕಕ್ಕೆ ಹೇಗಬೇಕಾದರೆ ಏಣಿ ಹತ್ತಿಕೊಂಡು ಹೋದ ಹಾಗೆ ಪ್ರದೇಶದಲ್ಲಿ ಚಲಿಸಿಕೊಂಡು ಹೋಗಬೇಕಾಗಿಲ್ಲ. ನಮ್ಮ ದೃಷ್ಟಿಯನ್ನು ಮೇಲ್ಮಟ್ಟಕ್ಕೆ ತಿರುಗಿಸಬೇಕು, ಎಂದರೆ ಆ ಮಟ್ಟದ ದಿವ್ಯದೃಷ್ಟಿಯನ್ನು ಬೆಳೆಸಿಕೊಳ್ಳಬೇಕು—ಎಂದರ್ಥ.

ಅಧ್ಯಾಯ ೩

ದಿವ್ಯದೃಷ್ಟಿ

ಈಗ ಮತ್ತೊಂದು ಪ್ರಾಮುಖ್ಯವಾದ ವಿಚಾರವಿದೆ, ಮೇಲ್ಕಂಡ ಭಿನ್ನ-ಭಿನ್ನ ಸಾಂದ್ರತೆ ಮಟ್ಟಗಳ ಪ್ರಕೃತಿಯು ಹೊರಗಿನ ಪ್ರಪಂಚದಲ್ಲಿರುವಂತೆಯೇ ಮನುಷ್ಯನೊಳಗೂ ಇರುತ್ತದೆ. ಮನುಷ್ಯನಿಗೆ, ನಮಗೆ– ಗೋಚರವಾಗುವಂತಹ ಸ್ಥೂಲ ದೇಹವೇ ಅಲ್ಲದೇ ಮೇಲ್ಮಟ್ಟದ ಲೋಕಗಳಿಗೆ ಸಂಬಂಧಪಟ್ಟಂತೆ ಪ್ರತಿಯೊಂದರಲ್ಲೂ ಒಂದೊಂದು ದೇಹ ಅಥವ ಕೋಶವಿದೆ. ಈ ದೇಹ ಅಥವ ಕೋಶಗಳು ಆಯಾ ಮಟ್ಟದ ಪ್ರಕೃತಿ ಸಾಂದ್ರತೆಗೆ ಅನುಗುಣವಾಗಿ ರಚಿಸಲ್ಪಟ್ಟಿವೆ. ಮನುಷ್ಯನಿಗೆ ನಮ್ಮ ಕಣ್ಣಿಗೆ ಕಾಣುವ ಸ್ಥೂಲ ದೇಹವೇ ಅಲ್ಲದೆ. ಅದನ್ನು ಸಜೀವವಾಗಿಟ್ಟಿರುವ ಪ್ರಾಣಮಯ ಕೋಶವೂ ಇದೆ. ಈ ಪ್ರಾಣಮಯ ಕೋಶವು (Ethericbody) ದಿವ್ಯದೃಷ್ಟಿಗೆ ಗೋಚರವಾಗುತ್ತದೆ. ಹೀಗೆಯೇ ಇನ್ನೂ ಉನ್ನತ ಮಟ್ಟದ ದಿವ್ಯ ದೃಷ್ಟಿಯನ್ನು ಬೆಳೆಸಿಕೊಂಡಿರುವವನಿಗೆ ಆ ಲೋಕದ ಮಟ್ಟದ ಕಾಮದೇಹವೂ (Astral Body) ಕಾಣುತ್ತದೆ. ಇದೇ ನಿಯಮವು ಮನುಷ್ಯನ ಮನೋ ದೇಹಕ್ಕೂ ಅನ್ವಯಿಸುತ್ತದೆ. ಮನುಷ್ಯನ ಆತ್ಮಕ್ಕೆ ಒಂದಲ್ಲ ಅನೇಕ ದೇಹಗಳಿವೆ. ಸಾಕಾದಷ್ಟು ಬೆಳೆದ ಮನುಷ್ಯನು ಈಯೆಲ್ಲ ಲೋಕಗಳಲ್ಲೂ ತನ್ನ ಶಕ್ತಿಗಳನ್ನು ಅಭಿವ್ಯಕ್ತ ಮಾಡಬಲ್ಲನು. ಅಲ್ಲದೆ ಆಯಾ ಲೋಕದಲ್ಲಿ ಹೊರಗಿನಿಂದ ಬರುವ (ಇಂದ್ರಿಯ ಸ್ಪರ್ಶಗಳನ್ನು) ತಾಡನಗಳನ್ನು ಅರಿಯ ಬಲ್ಲನು.

ಮನುಷ್ಯನು ಬೆಳೆದಂತೆಲ್ಲ ಈ ದೇಹಗಳನ್ನು ಒಂದಾದ ಮೇಲೊಂದರಂತೆ ರಚಿಸಿಕೊಳ್ಳುತ್ತಾನೆಂದು ತಿಳಿಯಕೂಡದು. ಪ್ರತಿಯೊಬ್ಬ ಮನುಷ್ಯನಿಗೂ ಈ ಮೇಲ್ಕಂಡ ಕೋಶಗಳೆಲ್ಲವೂ ಮೊದಲಿನಿಂದಲೂ ಇವೆ. ಈ ಉನ್ನತ ಮಟ್ಟದ ದೇಹಗಳಿಗೆ ಸಂಬಂಧಪಟ್ಟ ಪ್ರಕೃತಿಯನ್ನು ನಾವು ಸದಾ ಉಪಯೋಗ ಮಾಡುತ್ತಿರುತ್ತೇವೆ. ಆದರೆ ಅದು ನಮಗೆ ಅರಿವಾಗುವಂತಿಲ್ಲ, ನಾವು ಯೋಚಿಸುವ ಪ್ರತಿಯೊಂದು ಸಂದರ್ಭದಲ್ಲೂ ನಮ್ಮೊಳಗಿರುವ ಮನಸ್ತತ್ವವನ್ನು ವಿನಿಯೋಗಿಸುತ್ತೇವೆ. ಆ ಮಟ್ಟದ ದಿವ್ಯದೃಷ್ಟಿಯುಳ್ಳ ಮನುಷ್ಯನಿಗೆ ಆ ಮಟ್ಟದ ಪ್ರಕೃತಿಯ ಚಲನೆಯ ರೂಪದಲ್ಲಿ ಅಭಿವ್ಯಕ್ತವಾಗುವ ಯೋಚನೆಯು ಕಾಣಿಸುವುದು. ಮೊದಲು ಆಚಲನೆಯು ಮನುಷ್ಯನ ಮನೋದೇಹದಲ್ಲೂ ಅನಂತರ ಆ ದರ್ಜೆಗೆ ಸಂಬಂಧಪಟ್ಟ ಆತನ ಸೂತ್ರಲೂ ಪ್ರಸರಿಸಿರುವ ಆ ಲೋಕದ ಪ್ರಕೃತಿಯಲ್ಲೂ ಅಭಿವ್ಯಕ್ತವಾಗು

ತ್ತದೆ. ಆದರೆ ಆ ಯೋಚನೆಯು ಆತನ ಸ್ಥೂಲ ಪ್ರಜ್ಞೆಗೆ ಬರುವುದಕ್ಕೆ ಮುಂಚೆ, ಆ ಯೋಚನೆಗೆ ಸಂಬಂಧಪಟ್ಟ ಸ್ಪಂದಗಳು ಕಾಮದೇಹದಲ್ಲೂ, ಅನಂತರ ಪ್ರಾಣಮಯ ಕೋಶದಲ್ಲೂ ಅನಂತರ ಕಟ್ಟಕಡೆಯಲ್ಲಿ ಆತನ ಸ್ಥೂಲ ಮೆದುಳಿನ ಬೂದು ಬಣ್ಣದ ಪ್ರಕೃತಿಯಲ್ಲೂ ಕ್ರಮಶಃ ಅಭಿವ್ಯಕ್ತವಾಗಬೇಕಾಗುತ್ತದೆ.

ಹೀಗೆ ನಾವು ಯೋಚಿಸುವ ಪ್ರತಿಯೊಂದು ಸಂದರ್ಭದಲ್ಲೂ ನಮಗೆ ತಿಳಿಯದಂತೆ ದೀರ್ಘವಾದ ಬದಲಾವಣೆಗಳ ಸರಣಿಗೆ ಒಳಗಾಗುತ್ತೇವೆ. ಹೀಗೆಯೇ ನಮಗೆ ಸುಖ ದುಃಖಗಳ ರೂಪವಾದ 'ವೇದನೆ'ಯುಂಟಾದಾಗಲೂ ಕೂಡ ನಮಗೆ ತಿಳಿಯದಂತಹ ಅನುಭವಗಳ ಪರಂಪರೆಗಳು ಒಳಗೇ ನಡೆಯುತ್ತವೆ. ಉದಾಹರಣೆಗಾಗಿ ಒಲೆಯ ಮೇಲಿಟ್ಟಿರುವ ಪಾತ್ರೆಯನ್ನು ಮುಟ್ಟಿ 'ಅದು ಬಿಸಿ' ಯೆಂದು ಹೇಳುತ್ತೇವೆ. ಹಾಗೆ ಹೇಳುವುದಕ್ಕೆ ಮೊದಲು ನಮ್ಮ ಕೈಯನ್ನು ಥಟ್ಟನೆ ಹಿಂದಕ್ಕೆ ತೆಗೆದುಕೊಳ್ಳುತ್ತೇವೆ. ಆದರೆ ಪ್ರಾಣಿಶಾಸ್ತ್ರವು 'ಥಟ್ಟನೆ' ಎಂಬ ಶಬ್ದಕ್ಕೆ ಆಕ್ಷೇಪಿಸುತ್ತದೆ. ಏಕೆಂದರೆ, ಹಾಗೆ ಕೈಯು ಹಿಂದಕ್ಕೆ ಸರಿಯುವುದಕ್ಕೆ ಮುಂಚೆ ನಡೆಯುವ ವಿದ್ಯಮಾನಗಳ ಸರಣಿಯು ದೀರ್ಘವಾದುದು. ಬಿಸಿಯನ್ನು ಅರಿತುಕೊಳ್ಳುವುದು— ಕೈಯ್ಯಲ್ಲ ಮೆದುಳು. ಕೈಯ್ಯಲ್ಲಿರುವ ಜ್ಞಾನವಾಹಿನಿನರಗಳು 'ಆಬಿಸಿ' ಎಂಬ ಅರಿವನ್ನು ಮೆದುಳಿಗೆ ತಿಳಿಸುತ್ತವೆ. ಆಗ ಮೆದುಳು ಕೂಡಲೇಕರ್ಮೇಂದ್ರಿಯವಾದ ಕೈಯ್ಯಿಗೆ-ಹಿಂದಕ್ಕೆ ತೆಗೆದುಕೋ-ಎಂದು ಅವಸರದ ಸಂದೇಶವನ್ನು ಕೊಡುತ್ತದೆ. ಈ ವಿಧವಾದ ಪರಿಣಾಮಗಳ ಫಲಿತಾಂಶವಾಗಿ ಕೈಯ್ಯುಥಟ್ಟನೆ ಹಿಂದಕ್ಕೆ ಸರಿಯುತ್ತದೆ. ಆದರೆ ಇದೆಲ್ಲಕ್ಷಣ ಮಾತ್ರದಲ್ಲಿ ನಡೆದು ಹೋದಂತೆ ಭಾಸವಾಗುತ್ತದೆ. ಇದೇ ರೀತಿಯಲ್ಲಿ ಯೋಚನೆಯ ವೃತ್ತಿಯೂ ಕೂಡ ಥಟ್ಟನೆ ನಡೆದಂತೆ ಕಾಣುತ್ತದೆ. ಆದರೆ ವಾಸ್ತವಾಗಿಯೂ ಹಾಗಲ್ಲ. ಏಕೆಂದರೆ ಪ್ರತಿಯೊಂದು ಯೋಚನೆಯೂ ಮೇಲೆ ವಿವರಿಸಿರುವಂತೆ ಹಂತ-ಹಂತವಾಗಿ ಹಾದು ಹೋಗಬೇಕಾಗಿದೆ. ಇಂದ್ರಿಯಗಳ ಮೂಲಕ ಬರುವ ಪ್ರತಿಯೊಂದು ತಾಡನವೂ ಕೂಡ-ಸ್ಥೂಲ-ಅತಿವಾಯು ತತ್ವ-ಅಪ್ ತತ್ವ-ಕೆಳಗಿನ ಮನಸ್ತತ್ವಗಳ ಮೂಲಕ ಹಂತ–ಹಂತವಾಗಿ ಹಾದು ಕಾರಣ ದೇಹದಲ್ಲಿರುವ ಅಂತರಾತ್ಮನಿಗೆ ತಲುಪುತ್ತದೆ. ಅದಕ್ಕೆ ಜವಾಬು ರೂಪದಲ್ಲಿ ಅಂತರಾತ್ಮನ ಸಲಹೆಯು ಕೊಡ ಅದೇ ಮಾರ್ಗವನ್ನು ಹಂತ-ಹಂತವಾಗಿ ಅನುಸರಿಸಿಕೊಂಡು ಒಂದು ಕ್ರಿಯೆಯ ರೂಪದಲ್ಲಿ ವ್ಯಕ್ತವಾಗುತ್ತದೆ.

ಇದಕ್ಕೆ ಅನ್ವಯಿಸುವಂತೆ ಒಂದು ಉದಾಹರಣೆಯನ್ನು ಕೊಡೋಣ. ಅಂತರಾತ್ಮನಿಗೂ—ದೇಹಗಳಿಗೂ ಇರುವ ಸಂಬಂಧವು ತಂತಿಯ ಕಛೇರಿ ಪದ್ಧತಿಯನ್ನು ಹೋಲುತ್ತದೆ. ಈ ತಂತಿ ವರ್ತಮಾನಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಿ ತಲುಪುವುದಕ್ಕೆ ಮೊದಲು ಮಧ್ಯೆ ಇರುವ ನಿಲ್ದಾಣ

ಗಳನ್ನು ಹಾದು ಹೋಗಬೇಕಾಗುತ್ತವೆ. ಸ್ಥೂಲ ಲೋಕದಿಂದಲೇ ಅಲ್ಲದೇ-ಕಾಮ ಲೋಕ ಮತ್ತು ಮನೋಲೋಕಗಳಿಂದಲೂ ಸಹ ವರ್ತಮಾನಗಳು ಬರುವುದಕ್ಕೆ ಅವಕಾಶವಿರುತ್ತದೆ. ಈಗ ಕಾಮದೇಹವು ಸ್ಥೂಲ ಲೋಕದಿಂದ ಬರುವ ತಾಡನ ಗಳನ್ನು ಮೇಲಕ್ಕೆ ಸಾಗಿಸುವ ಸೇತುವೆಯಂತೆ ಇರುವುದೇ ಅಲ್ಲದೇ. ತನ್ನ ಮಟ್ಟದ ಕಾಮಲೋಕದಿಂದಲೂ ಸಹ ಬರುವ ತಾಡನಗಳನ್ನು ಮನೋದೇಹದ ಮೂಲಕ ಅಂತರಾತ್ಮನಿಗೆ ಕಳುಹಿಸಬಲ್ಲುದು. ಆಗ ಜೀವಾತ್ಮನು ಸ್ಥೂಲ ಲೋಕದಲ್ಲಿ ಪ್ರಜ್ಞಾವತ್ತಾಗಿ ಬಾಳುವುದರ ಜೊತೆಗೆ ಕಾಮಲೋಕದಲ್ಲೂ ಕೂಡ ಪ್ರಜ್ಞಾವತ್ತಾಗಿ ಬಾಳುವುದರ ಮೂಲಕ ಆ ಲೋಕಕ್ಕೆ ಸಂಬಂಧಪಟ್ಟ ವಿದ್ಯಮಾನಗಳನ್ನು ತಿಳಿದು ಕೊಳ್ಳಲು ಸಾಧ್ಯವಿರುತ್ತದೆ. ಹೀಗೆಯೇ ಮನೋಲೋಕದ ವಿದ್ಯಮಾನಗಳನ್ನು ಸಹ ತನ್ನ ಮನೋದೇಹದ ಮೂಲಕ ತಿಳಿದುಕೊಳ್ಳಬಹುದು. ಆದರೆ ಹೀಗೆ ಮಾಡ ಬೇಕಾದರೆ ಆತನು ತನ್ನ ಪ್ರಜ್ಞೆಯನ್ನು ಕಾಮಲೋಕದ ಮಟ್ಟದಲ್ಲೂ ಅಥವ ಮನೋಲೋಕದ ಮಟ್ಟದಲ್ಲೂ ಕೇಂದ್ರೀಕರಿಸುವುದನ್ನು ಕಲಿಯಬೇಕು. ಈಗ ತನ್ನ ಪ್ರಜ್ಞೆಯನ್ನು ಸ್ಥೂಲ ಲೋಕದಲ್ಲಿ ಕೇಂದ್ರೀಕರಿಸಿರುತ್ತಾನೆ. ಇದರಂತೆಯೇ ನಾನು 'ದಿವ್ಯದೃಷ್ಟಿ' ಎಂಬ ಗ್ರಂಥದಲ್ಲಿ ವಿವರಿಸಿ ತಿಳಿಸಿರುವಂತೆ ಮೇಲಿನ ಲೋಕ ಗಳಲ್ಲೂ ತನ್ನ ಪ್ರಜ್ಞೆಯನ್ನು ಕೇಂದ್ರೀಕರಿಸುವುದನ್ನು ಕಲಿಯಬೇಕು ಅಷ್ಟೇ.

ವಿಜ್ಞಾನವು ಮೇಲ್ಕಂಡ ಸೂಕ್ಷ್ಮ ಲೋಕಗಳ ಇರುವಿಕೆಯನ್ನು ಒಪ್ಪದೆ ಇರಬಹುದು—ಆದಾಗ್ಗೂ ಗುಪ್ತವಿದ್ಯೆ ಮುಂದಿಡುವ ಮೇಲ್ಕಂಡ ಲೋಕಗಳಿಗೆ ಸಂಬಂಧಪಟ್ಟ ಬೋಧೆಯಲ್ಲಿ ಅದರ ನಿಲುವಿಗೆ ವಿರೋಧವಾದುದು ಸ್ವಲ್ಪವೂ ಇರುವುದಿಲ್ಲ. ಯಾರು ತಮ್ಮ ದಿವ್ಯದೃಷ್ಟಿಯನ್ನು ಮೇಲ್ಕಂಡ ಹಂತಗಳಿಗೆ ತಕ್ಕಂತೆ ಬೆಳೆಸಿಕೊಂಡಿರುತ್ತಾರೆಯೋ—ಅಂತಹ ಪರಿಶೋಧಕರಿಗೆ ಮೇಲಿನ ಲೋಕಗಳ ವಿದ್ಯ ಮಾನಗಳು ಕರತಲಾಮಲಕದಂತೆ ಸಾಧಕನ ಅನುಭವಕ್ಕೆ ಬಂದಿರುತ್ತವೆ. ಆದರೆ ಈ ವಿಷಯಗಳನ್ನು ಅವರು ನಂಬಲು ಸಾಧುವಾದ ಬೋಧೆಗಳ ರೂಪದಲ್ಲಿ ಪ್ರಪಂಚದ ಮುಂದೆ ಇಟ್ಟಿರುತ್ತಾರೆಯೇ ವಿನಾ—ಆ ನಂಬಿಕೆಗಳನ್ನು ಇತರರ ಮೇಲೆ ಹೊರಿಸಬೇ ಕೆಂಬ ಉದ್ದೇಶದಿಂದ ಅಲ್ಲ. ಅಲ್ಲದೆ ಪ್ರಪ್ರಥವಾಗಿ ಇಂತಹ ವಿಷಯಗಳನ್ನು ವ್ಯಾಸಂಗ ಮಾಡಬೇಕೆಂದಿರುವ ವಿದ್ಯಾರ್ಥಿಗಳು ಈ ವಿಷಯವನ್ನು ವಿಜ್ಞಾನ ದೃಷ್ಟಿ ಯಿಂದ ವಿಮರ್ಶೆ ಮಾಡಿನೋಡಲಿ. ಅದು ಸಮಂಜಸವಾಗಿದ್ದರೆ ನಂಬಬಹುದು, ಇಲ್ಲದಿದ್ದರೆ ಬಿಡಬಹುದು. ಈಗ ನಮಗೆ ಪರಿಚಯವಾಗಿರುವ ಭೂಲೋಕದ ವಿದ್ಯ ಮಾನಗಳನ್ನು ಸಮಂಜಸವಾದ ರೀತಿಯಲ್ಲಿ ಅನುಸರಿಸಿಕೊಂಡು ಬರುವ ಸೂಕ್ಷ್ಮ ಪ್ರಕೃತಿ ಪರಿಸ್ಥಿತಿಗಳೇ ಮೇಲಿನ ಲೋಕಗಳೂ, ವಾಸ್ತವವಾಗಿಯೂ ಭೂಲೋಕ ಮೊದಲ್ಗೊಂಡು ಉಳಿದ ಮೇಲ್ದರ್ಜೆ ಎಲ್ಲಲೋಕ ತತ್ವಗಳೂ ವಿಶ್ವದ ಉಪಭಾಗ

ಗಳಾಗಿವೆ—ಈ ಯಂಶದಯಥಾರ್ಥವನ್ನು ತುಂಬ ಉನ್ನತ ಮಟ್ಟದ ಬೆಳವಣಿಗೆ ಯುಳ್ಳ ಜೀವಾತ್ಮನು ಮಾತ್ರ ಅನುಭವಕ್ಕೆ ತಂದುಕೊಳ್ಳಬಲ್ಲನು.

ಈ ವಿಷಯವನ್ನು ಗ್ರಹಿಸಲು ಒಂದು ಉದಾರಣೆಯನ್ನು ತೆಗೆದುಕೊಳ್ಳೋಣ. ಈ ಉದಾಹರಣೆಯು ವಾಸ್ತವ ಪರಿಸ್ಥಿತಿಯನ್ನು ಪ್ರತಿನಿಧಿಸದೆ ಇದ್ದಾಗ್ಯೂ, ಈ ವಿಷಯವನ್ನು ಮನವರಿಕೆ ಮಾಡಿಕೊಳ್ಳಲು ತುಂಬ ಪ್ರಯೋಜನಕರವಾಗಿರುತ್ತದೆ. ನಮ್ಮ ಸ್ಥೂಲ ದೇಹದ ಕಣ್ಣುಗಳ ರಚನೆಯು ಈಗಿರುವಂತೆ ಇಲ್ಲದೇ ಬೇರೆ ರೀತಿ ಯಲ್ಲಿರುತ್ತದೆಯೆಂದು ಊಹಿಸೋಣ. ನಮ್ಮ ಕಣ್ಣಿನಲ್ಲಿ ಘನ ಮತ್ತು ದ್ರವ ವಸ್ತುಗಳಿರುತ್ತವೆ. ಕಣ್ಣಿನಲ್ಲಿರುವ ಘನ ವಸ್ತುವು ಹೊರಗಿನ ಘನ ವಸ್ತುಗಳನ್ನು ಮಾತ್ರ ಗೊತ್ತು ಹಚ್ಚಬಲ್ಲುದು. ಕಣ್ಣಿನಲ್ಲಿರುವ ದ್ರವ ವಸ್ತುವು ಹೊರಗಿನ ಪ್ರಪಂಚದ ದ್ರವಗಳನ್ನು ಮಾತ್ರ ತಿಳಿಯಬಲ್ಲುದು—ಎಂದು ಊಹಿಸೋಣ. ಅಲ್ಲದೆ ಕೆಲವರ ಕಣ್ಣಿನಲ್ಲಿ ದ್ರವ ವಸ್ತು ಮಾತ್ರ ಇರುತ್ತೆಂದೂ ಮತ್ತೆ ಕೆಲವರ ಕಣ್ಣಿನಲ್ಲಿ ಘನ ವಸ್ತು ಮಾತ್ರ ಇರುತ್ತೆಂದೂ ಊಹಿಸೋಣ! ಆಗ ಈ ರೀತಿ ಪ್ರತ್ಯೇಕ ನೋಟವುಳ್ಳ ಜನರಿಗೆ ಪ್ರಪಂಚವು ಹೇಗೆ ಅಪೂರ್ಣವಾಗಿ ಗೋಚರವಾಗುತ್ತಿತ್ತು ನೋಡಿರಿ! ಅಂತಹ ಭಿನ್ನ ದೃಷ್ಟಿಪಾಟವವುಳ್ಳವರಿಬ್ಬರೂ ಸಮುದ್ರ ದಡದಲ್ಲಿ ನಿಂತಿರುತ್ತಾರೆಂದು ಊಹಿಸೋಣ. ಆಗ ಕೇವಲ ಘನ ವಸ್ತುವಿನಿಂದ ಮಾಡಲ್ಪಟ್ಟ ಕಣ್ಣುಳ್ಳವನಿಗೆ, ಸಮುದ್ರದ ನೀರು ಕಾಣುತ್ತಿರಲಿಲ್ಲ. ನೀರಿರುವ ಪ್ರದೇಶವು ಒಂದು ಅಗಾಧವಾದ ಹಳ್ಳದಂತೆಯೂ-ಅದರಲ್ಲಿರುವ ಮೀನು, ತಿಮಿಂಗಲ ಮೊದಲಾದುವು ಗಳು ಆ ಹಳ್ಳದಲ್ಲಿ ಗಾಳಿಯಲ್ಲಿ ಹಾರುತ್ತಿರುವಂತೆ ಭಾಸವಾಗುತ್ತಿತ್ತು. ಅಲ್ಲದೆ. ಅಂತಹನಿಗೆ ಆಕಾಶದಲ್ಲಿ ತೇಲುತ್ತಿರುವ ಮೋಡಗಳೂ ದ್ರವಸ್ವರೂಪವು-ಆದುದ ರಿಂದ ಗೋಚರಿಸುತ್ತಿರಲಿಲ್ಲ. ಅಲ್ಲದೆ ಸೂರ್ಯನು ಮೋಡಗಳ ಅಡಚನೆಯಿಲ್ಲದೇ ಯಾವಾಗಲೂ ಪ್ರಕಾಶಿಸುತ್ತಿರುವಂತೆ ಕಂಡು ಬರುತ್ತಿದ್ದನು. ಈತನ ಪಾಲಿಗೆ ಮೋಡ ಕವಿದ ದಿನವು ಅರ್ಥವಾಗುತ್ತಿರಲಿಲ್ಲ. ಅಲ್ಲದೆ ಮೋಡ ಕವಿದಾಗ ಬಿಸಿಲಿನ ಝಳವು ತಗ್ಗುತ್ತದೆ— ಈ ವ್ಯತ್ಯಾಸವು ಆತನಿಗೆ ಅರ್ಥವಾಗುತ್ತಿರಲಿಲ್ಲ. ಒಂದು ಲೋಟದ ನೀರನ್ನು ತುಂಬಿ ಕೊಟ್ಟರೆ ಅದು ಬರಿಯ ಲೋಟದಂತೆ ಆತನಿಗೆ ಕಂಡುಬರುತ್ತಿತ್ತು.

ಕೇವಲ ದ್ರವ ವಸ್ತುವಿನಿಂದ ರಚಿಸಲ್ಪಟ್ಟ ಕಣ್ಣುಗಳುಳ್ಳವನಿಗೆ ಅದೇ ಸಮುದ್ರದ ದೃಶ್ಯವುತೀರ ವಿಪರೀತವಾಗಿ ಕಂಡು ಬರುತ್ತದೆಯಲ್ಲವೇ ? ಆತನಿಗೆ ನೀರಿನ ರಾಶಿಯು ಕಂಡು ಬರುತ್ತಿತ್ತು. ಆದರೆ ತೀರವಾಗಲೀ ತಳವಾಗಲೀ ಕಾಣು ತ್ತಿರಲಿಲ್ಲ. ಆತನಿಗೆ ಮೋಡಗಳು ಹಾದು ಹೋಗುವುದು ಕಾಣುತ್ತಿತ್ತು. ಆದರೆ ಅವು ಎಂತಹ ಹಿನ್ನೆಲೆಯಲ್ಲಿ ಹಾದು ಹೋಗುತ್ತಿದೆಯೋ-ಅದು ಕಾಣುತ್ತಿರಲಿಲ್ಲ.

ನೀರು ತುಂಬಿದ ಲೋಟವನ್ನು ನೋಡಿದಾಗ ನೀರು ಕಾಣುತಿತ್ತು. ಆದರೆ ಆ ನೀರಿಗೆ ಆ ವಿಧವಾದ ರೂಪ ಏಕೆ ಬಂದಿದೆಯೆಂಬಂಶವು ಗೊತ್ತಾಗುತ್ತಿರಲಿಲ್ಲ. ಇಂತಹ ಅಪೂರ್ಣ ದೃಷ್ಟಿಯುಳ್ಳವರು ಒಬ್ಬರ ಪಕ್ಕದಲ್ಲೊಬ್ಬರು ನಿಂತಿರುತ್ತಾರೆಂದು ಊಹಿಸೋಣ. ಪ್ರತಿಯೊಬ್ಬನೂ ತನಗೆ ಗೋಚರವಾಗುವಂತೆ ಪ್ರಪಂಚವನ್ನು ವರ್ಣಿಸುತ್ತಾನೆಂದೂ ಪ್ರತಿಯೊಬ್ಬನಿಗೂ ತನ್ನದೇ ಸರಿಯಾದ ದೃಷ್ಟಿಯೆಂದೂ ಬೇರೆ ದೃಷ್ಟಿಗಳು ಇರುವುದಕ್ಕೆ ಸಾಧ್ಯವಿಲ್ಲವೆಂದೂ ಭಾವಿಸುತ್ತಾರೆಂದೂ ಇಟ್ಟುಕೊಳ್ಳೋಣ ಆಗ ಒಬ್ಬನು ಮತ್ತೊಬ್ಬನನ್ನು ವಚಕ ಅಥವ ಬುದ್ಧಿ ಭ್ರಮಣೆಯುಳ್ಳವನೆಂದು ಭಾವಿಸುತ್ತಾನೆಯಲ್ಲವೇ ?

ಮೇಲ್ಕಂಡ ಉದಾಹರಣೆಯು ನಮಗೆ ಹಾಸ್ಯಾಸ್ಪದವಾಗಿ ತೋರಬಹುದು. ಆದರೆ ನಮ್ಮಲ್ಲಿ ಪ್ರತಿಯೊಬ್ಬನಿಗೂ ಪ್ರಪಂಚದ ವಾಸ್ತವವಾಗಿಯೂ ಪೂರ್ಣವಾದ ಸ್ವರೂಪವನ್ನು ಗ್ರಹಿಸಲು ಸಾಧ್ಯವಿಲ್ಲ. ಏಕೆಂದರೆ ನಮ್ಮ ದೃಷ್ಟಿಯು ಕೇವಲ ಪರಿಮಿತಿಯುಳ್ಳುದು. ಆದರೆ ತನ್ನ ಸಹಜ ಪರಿಮಿತಿ ಸ್ಥಿತಿ ದೃಷ್ಟಿಯನ್ನೇ ಪೂರ್ಣವೆಂದು ಭಾವಿಸಿ ಇತರರು ತಮ್ಮ ದಿವ್ಯ ದೃಷ್ಟಿಯನ್ನು ವಿಕಾಸಪಡಿಸಿಕೊಂಡಿರುವವರು ಇದ್ದು ನಮ್ಮ ದೃಷ್ಟಿಗೆ ಎಟುಕದ ವಿಷಯಗಳನ್ನು ಅವರು ಪತ್ತೆಹಚ್ಚಿ ನಮಗೆ ತಿಳಿಸಿದರೆ, ಅವರು ಹೇಳುವುದು ಬರೀ ಊಹಾಕಲ್ಪಿತವೆಂದು ನಾವು ಭಾವಿಸುತ್ತೇವೆ. ಪ್ರತಿಯೊಬ್ಬನೂ ತನಗೆ ಕಾಣುವಷ್ಟೇ ಇಡೀ ಪ್ರಪಂಚವೆಲ್ಲವೂ–ಎಂಬುದಾಗಿ ನಂಬುವಷ್ಟು ತಪ್ಪು ಮಾಡುತ್ತಾನೆ. ಆದರೆ ವಿಜ್ಞಾನದ ನಿದರ್ಶನವು ಅಪ್ರತಿ ಹತವಾದುದು ಮತ್ತು ನಿರ್ವಿವಾದವಾದುದು. ವಿಶಾಲವಾದ ಪ್ರಪಂಚದಲ್ಲಿ ನಮ್ಮ ಕಿವಿ ಮತ್ತು ಕಣ್ಣಿಗೆ ಗೋಚರಿಸುವುದು ಕೇವಲ ಅತ್ಯಲ್ಪ ಭಾಗವು. ನಮ್ಮ ಸಾಧಾರಣ ದೃಷ್ಟಿಗೆ ಕಾಮನ ಬಿಲ್ಲಿನ ಏಳು ಬಣ್ಣಗಳು ಮಾತ್ರ ಗೋಚರವಾಗುತ್ತದೆ. ಆದರೆ ನೀಲಿ ಬಣ್ಣಕ್ಕಿಂತಲೂ ಅತಿವೇಗವಾಗಿ ಚಲಿಸುವ ಸೂರ್ಯ ಕಿರಣಗಳಾಗಲಿ ಕೆಂಪು ಬಣ್ಣಕ್ಕಿಂತ ಮಂದಗತಿಯಲ್ಲಿ ಚಲಿಸುವ ಸೂರ್ಯ ಕಿರಣಗಳಾಗಲೀ ನಮಗೆ ಕಾಣುವುದೇ ಇಲ್ಲ. ಆದರೆ ದಿವ್ಯದೃಷ್ಟಿಯನ್ನು ಬೆಳೆಸಿಕೊಂಡಿರುವಂಥವನು ಪ್ರಪಂಚದಿಂದ ಬರುವ ಉನ್ನತ ಮಟ್ಟದ ಸ್ಪಂದಗಳನ್ನು ಗ್ರಹಿಸಿ ನಮಗಿಂತಲೂ ಅದರ ಹೆಚ್ಚು ಭಾಗವನ್ನು ಗ್ರಹಿಸಬಲ್ಲನು ಎಂಬಂಶವು ನಿಸ್ಸಂದೇಹವಾದುದು.

———


ಅಧ್ಯಾಯ ೪

ಮನುಷ್ಯನ ದೇಹಗಳು

ಈ ಪುಟಕ್ಕೆ ಲಗತ್ತಿಸಿರುವ ತತ್ವದ ದರ್ಪಣವನ್ನು ನೋಡಿರಿ. ಅದರಲ್ಲಿ ಏಳು ತತ್ವಗಳೂ ಅವುಗಳ ಹೆಸರುಗಳೂ (ಹಿಂದೂ ಸಂಸ್ಕೃತಿ ರೀತ್ಯಾ) ಮತ್ತು ಅವುಗಳಲ್ಲಿ ಕೆಲವಕ್ಕೆ ಸಂಬಂಧಪಟ್ಟ ಕೋಶಗಳ ಹೆಸರುಗಳೂ ಕೊಡಲ್ಪಟ್ಟಿವೆ. ಈ ತತ್ವಗಳಿಗೆ ಬೌದ್ಧ ಸಂಪ್ರದಾಯ ಮತ್ತು ಹಿಂದೂ ಸಂಪ್ರದಾಯಕ್ಕೆ ಅನುಗುಣವಾದ ಸಂಸ್ಕೃತದ ಹೆಸರುಗಳನ್ನು ಪ್ರಯೋಗ ಮಾಡಿದೆ. ಏಕೆಂದರೆ ಆಂಗ್ಲೇಯ ಭಾಷೆಯಲ್ಲಿ ಇವುಗಳಲ್ಲಿ ಕೆಲವಕ್ಕೆ ಸೂಕ್ತವಾದ ಹೆಸರುಗಳು ದೊರೆಯುವುದಿಲ್ಲ. ಈ ಹೆಸರುಗಳಲ್ಲಿ ಪ್ರತಿಯೊಂದನ್ನೂ ಅರ್ಥವತ್ತಾಗಿ ವಿನಿಯೋಗ ಮಾಡಿದೆ.

ಬೌದ್ಧ ಸಂಪ್ರದಾಯದಲ್ಲಿನ 'ನಿರ್ವಾಣ' ಎಂಬ ಶಬ್ದವು ಅತ್ಯಂತ ಉನ್ನತ ಮಟ್ಟದ ಆಧ್ಯಾತ್ಮಿಕ ಸಿದ್ಧಿಯನ್ನು ಸೂಚಿಸುತ್ತದೆ. ನಿರ್ವಾಣವನ್ನು ಹೊಂದುವುದು ಎಂದರೆ ಮಾನವ ಬೆಳವಣಿಗೆ ಮಟ್ಟವನ್ನು ಅತಿಗಳೆದು ನಮ್ಮ ಗ್ರಹಣ ಶಕ್ತಿಗೆ ಅತೀತವಾದಂತಹ ಶಾಂತ್ಯಾನಂದಗಳನ್ನು ಪಡೆಯುವುದು-ಎಂದರ್ಥ. ಈ ಲೋಕಕ್ಕೆ ಸಂಬಂಧಪಟ್ಟದೆಲ್ಲವನ್ನು ಪೂರ್ತವಿಸರ್ಜಿಸಿ ಸಾಧಕನು ತುಂಬ ಉನ್ನತ ಮಟ್ಟದ ಅತೀತವಾದ ಸಿದ್ಧಿ ಮಹಿಮಾನ್ವಿತವಾದ ಆಧ್ಯಾತ್ಮಿಕ ಸ್ಥಿತಿಯನ್ನು ಪಡೆಯುತ್ತಾನೆ. ಇಂತಹ ಸ್ಥಿತಿಗೂ ಶೂನ್ಯಕ್ಕೂ (ಪೂರ್ತವಿನಾಶ) ಯಾವ ವ್ಯತ್ಯಸವೂ ಇಲ್ಲವೆಂದು ಪಾಶ್ಚಾತ್ಯರು ಭಾವಿಸುವುದುಂಟು-ಇದು ಕೇವಲ ತಪ್ಪು ಅಭಿಃಪ್ರಾಯವೆಂದು ಹೇಳಬೇಕಾಗಿಲ್ಲ. ಏಕೆಂದರೆ ಇಂತಹ ಅತ್ಯುನ್ನತ ಮಟ್ಟದ ಪ್ರಜ್ಞೆಯನ್ನು ಬಳಸುವ ಸುಯೋಗವನ್ನು ಪಡೆಯುವುದು-ಎಂದರೂ-ಈ ಕಲ್ಪದಲ್ಲಿ ಮಾನವನಿಗಾಗಿ ವಿಧಾಯಕವಾಗಿರುವಂಥ ಮಾನವ ಸಂಸರಣದ ಅಂತಿಮ ಘಟ್ಟವಾದ ಜೀವನ್ಮುಕ್ತಿ ಪದವಿ ಪಡೆಯುವುದು ಎಂದರೂ ಒಂದೇ-ಅರ್ಥ ಅಂತಹ ಪದವಿಯನ್ನು ಪಡೆದವನು ಮಾನವನಲ್ಲ—ಮಾನವಾತೀತನಾಗುತ್ತಾನೆ. ಸಾಮಾನ್ಯ ಮಾನವ ವರ್ಗಕ್ಕೆ ಇಂತಹ ಬೆಳವಣಿಗೆ ಮಟ್ಟವನ್ನು ಪಡೆಯಬೇಕಾದರೆ ಇನ್ನೂ ಮೂರು ಪ್ರದಕ್ಷಿಣಗಳ ಕಾಲ ಎಂದರೆ ಕೊಟ್ಯಂತರ ವರ್ಷಗಳು ಬೇಕಾಗುತ್ತದೆ. ಆದರೆ ಅವರಲ್ಲಿ ಯಾರು ಕೆಲವರು ಮಾತ್ರ-ಎಂತಹ ಕಷ್ಟಗಳು ಪ್ರಾಪ್ತವಾದರೂ ಅವುಗಳಿಗೆ ಹೆದರದೆ, ದೃಢವಾದ ಇಚ್ಛಾಶಕ್ತಿಯಿಂದ ಮುನ್ನುಗ್ಗಿ—ಆ ದೈವಿಕ ರಾಜ್ಯವನ್ನು ಕ್ರಾಂತಿಕಾರಕವಾದ ಪ್ರಯತ್ನದಿಂದ ಪಡೆಯಲೇಬೇಕೆಂದು ಶ್ರಮಿಸುತ್ತಾರೆಯೋ ಅಂತಹರಿಗೆ ಅದನ್ನು ಕೆಲವೇ ಜನ್ಮಗಳಲ್ಲಿ ಪಡೆಯಲು ಸಾಧ್ಯವಾಗುತ್ತದೆ.

ಚಿತ್ರ 2 ತತ್ವದರ್ಪಣ



ಈ ತತ್ವ ದರ್ಪಣದಲ್ಲಿ ಕೊಟ್ಟಿರುವ-ನಿರ್ವಾಣ ಪರನಿರ್ವಾಣ ಮಹಾಪರನಿರ್ವಣ ಎಂಬ ಶಬ್ದಗಳಿಂದ ನಮಗೆ ಎಟಕುವಷ್ಟು ಅತ್ಯುನ್ನತ ಮಟ್ಟದ ಪ್ರಜ್ಞೆ ಸ್ಥಿತಿಯೇ ನಿರ್ವಾಣ, ಲೋಕ, ಇದಕ್ಕಿಂತ ಒಂದು ದರ್ಜೆಮೇಲ್ಪಟ್ಟದ್ದು ಪರನಿರ್ವಾಣ ಅದಕ್ಕಿಂತ ಒಂದು ದರ್ಜೆ ಮೇಲಿರುವುದು-ಮಹಾಪರನಿರ್ವಾಣವೆಂದು ಹೇಳಲ್ಪಟ್ಟಿದೆ. 'ನಿರ್ವಾಣ' ಶಬ್ದಕ್ಕೆ ಹಿಂದಿರುವ ಪರ ಮತ್ತು 'ಮಹಾಪರ' ಎಂಬ ವಿಶೇಷಣಗಳು ಶ್ರೇಷ್ಠ ಮತ್ತು 'ಶ್ರೇಷ್ಠತರ' ಎಂದರೆ ಅದಕ್ಕಿಂತ ಉತ್ತಮವಾದುದು ಎಂಬ ಅರ್ಥ ಕೊಡುತ್ತದೆ. ಬಹುಶಃ ಸಾವಿರಾರು ವರ್ಷಗಳ ಹಿಂದೆಯೇ ಇಂತಹ ಊಹೆಗೆ ಸಾಧ್ಯವಿಲ್ಲದಷ್ಟು ಅರ್ಥ ಗರ್ಭಿತವಾದ ಶಬ್ದಗಳನ್ನು ಪ್ರಯೋಗ ಮಾಡಿರುವುದನ್ನು ನೋಡಿದರೆ—ಮೇಲ್ದರ್ಜೆ ಪ್ರಜ್ಞಾಸ್ಥಿತಿಗಳು ಅವರಿಗೂ ಕೂಡ ನಮ್ಮಂತೆಯೇ ಗ್ರಹಣ ಶಕ್ತಿಗೆ ಮೀರಿರಬೇಕು—ಅಥವ ಗೊತ್ತಿದ್ದರೂ ಆ ಉನ್ನತ ಮಟ್ಟದ ಪ್ರಜ್ಞೆಯನ್ನು ವ್ಯಕ್ತ ಪಡಿಸುವಂತಹ ಶಬ್ದಗಳು ಭಾಷೆಯಲ್ಲಿ ದೊರೆಯದೇ ಹೋಗಿರಬೇಕು. (ಆದರೆ ಹಿಂದೂ ಸಂಸ್ಕೃತಿಯಲ್ಲಿ ನಿರ್ವಾಣ ಲೋಕಕ್ಕೆ ಸತ್ಯಲೋಕವೆಂದೂ-ಪರನಿರ್ವಾಣಕ್ಕೆ ವೈಕುಂಠ ಲೋಕವೆಂದೂ ಮಹಾಪರ ನಿರ್ವಾಣಕ್ಕೆ ಕೈಲಾಸವೆಂದೂ ಹೆಸರಿಟ್ಟಿರುತ್ತಾರೆ. ಒಂದು ದೃಷ್ಟಿಯಿಂದ ಈ ವಿಧವಾದ ಹೆಸರುಗಳು ಆ ಲೋಕಗಳ ಉನ್ನತ ಮಟ್ಟದ ಪ್ರಜ್ಞಾಸ್ಥಿತಿಗೆ ಪರಿಮಿತಿಕಲ್ಪಿಸಿದಾಗ್ಯೂ ತ್ರಿಮೂರ್ತಿಗಳ ಸಹಜ ಪ್ರಜ್ಞೆಗೆ ಸಂಬಂಧಪಟ್ಟ ಲೋಕಗಳೆಂಬುದಾಗಿ ಒಂದು ವಿಧವಾದ ನಿರ್ದಿಷ್ಟತೆಯನ್ನು ಸೂಚಿಸಿದಂತೆ ಆಗುತ್ತದೆ. ಆದರೆ ಆ ಉನ್ನತ ಮಟ್ಟದ ಪ್ರಜ್ಞೆ ಅಂತಸ್ತುಗಳಿಗೆ ನಾವು ಹತ್ತಿಹೋದಾಗ ಮಾತ್ರ ಅವುಗಳ ಸರಿಯಾದ ಅರ್ಥ ನಮಗೆ ಅನುಭವವಾಗುತ್ತದೆಯೇ ವಿನಾ-ನಮ್ಮ ಸಧ್ಯಸ್ಥಿತಿಯಲ್ಲಿ ಅವುಗಳ ಲಕ್ಷಣಗಳನ್ನು ಊಹಿಸುವುದಕ್ಕೂ ಸಾಧ್ಯವಿಲ್ಲವೆಂದೇ ಹೇಳಬೇಕಾಗುತ್ತದೆ. ಒಟ್ಟಿನಲ್ಲಿ ಬೌದ್ಧ ಸಂಪ್ರದಾಯವೇ ವಿಜ್ಞಾನ ದೃಷ್ಟಿಯಿಂದ ಕೂಡಿದ ಕರಾರುವಾಕ್ಕಾದ ವಿಮರ್ಶಾತ್ಮಕ ಮಾರ್ಗವೆಂದು ಹೇಳಬೇಕಾಗುತ್ತದೆ ಏಕೆಂದರೆ ನಮ್ಮ ಹಿಂದೂ ಜನಗಳ ದೃಷ್ಟಿಯಲ್ಲಿ 'ಶಿವ' ನೆಂದರೆ ನಮ್ಮಂತಹ ಒಬ್ಬ ವ್ಯಕ್ತಿ. ಆದರೆ, ಅಸಾಧಾರಣವಾದ ಮಹಿಮೆಯುಳ್ಳವನು ಎಂದು ಅರ್ಥ ಮಾಡಿಕೊಳ್ಳುತ್ತಾರೆ. ಈಚೆಗೆ ಶಿವ-ಪಾರ್ವತಿಯರನ್ನು ನಟ-ನಟಿಯರಂತೆ ಪ್ರತಿ ನಿಧಿಸುವ ಚಿತ್ರಗಳು ಹೇರಳವಾಗಿ ದೊರೆಯುತ್ತವೆ—T.V.R.)

'ಬುದ್ಧಿ' ಎಂಬ ಹೆಸರು ಮೇಲಿನಿಂದ ನಾಲ್ಕನೆಯದಾದ ಮಾನವ ಸ್ವಭಾವಕ್ಕೆ ಕೊಡಲ್ಪಟ್ಟಿದೆ. ಆದರೆ 'ಮನಸ್ಸು' ಎಂಬ ಹೆಸರು ಕ್ರಿಯಾತ್ಮಕವಾದ ಮಾನವ ಸ್ವಭಾವಕ್ಕೆ ಕೊಡಲ್ಪಟ್ಟಿದೆ. ಈ ಮನಸ್ತತ್ವವು ಎರಡು ಭಾಗಗಳಾಗಿವಿಂಗಡಿಸಲ್ಪಟ್ಟಿದೆ. ಮೇಲಿನದಕ್ಕೆ 'ಅರೂಪ'ವೆಂದೂ ಕೆಳಗಿನದಕ್ಕೆ 'ರೂಪ'ವೆಂದೂ ಹೆಸರು ಕೊಟ್ಟಿದೆ. ಇದಕ್ಕೆ ಕಾರಣವಿದೆ—ಕೆಳಗಿನ ದರ್ಜೆಯ ಮನಸ್ತತ್ವದ ಪ್ರಕೃತಿಯು ಮಾನವನ

ಯೋಚನೆಗಳಿಗೆ ತಕ್ಕ ರೂಪಗಳನ್ನು ಕಟ್ಟುವ ಸ್ವಭಾವದ್ದು—ಆದರೆ 'ಅರೂಪ ಲೋಕದಲ್ಲಿನ ಪ್ರಕೃತಿಯು ಮಾನವನ ಉನ್ನತ ಮಟ್ಟದ ತತ್ವ ವಿಚಾರಕ್ಕೆ ತಕ ಸಾಧನವು-ಆ ಮಟ್ಟದಲ್ಲಿ ರೂಪಗಳು ನಿರ್ಮಿತವಾಗುವುದಿಲ್ಲ. ತಾತ್ವಿಕ ವಿಚಾರಕ್ ಸಂಬಂಧಪಟ್ಟ ಯೋಚನೆಗಳು ಆ ಮಟ್ಟದ ದಿವ್ಯ ದೃಷ್ಟಿಯುಳ್ಳವನಿಗೆ ಅಲೆಗ ರೂಪದಲ್ಲಿ ವ್ಯಕ್ತವಾಗುತ್ತವೆ. ಈ ಯೆರಡು ಮಟ್ಟಗಳ ಯೋಚನೆಗಳ ವಿಷ ವಾಗಿ ವಿಪುಲವಾದ ವಿವರಣೆಯನ್ನು "ದೇವಚಾನ್ ಅಥವ ಸ್ವರ್ಗ" ಎಂಬ ಕೈಪಿ ಗ್ರಂಥದಲ್ಲೂ "ಸಂಕಲ್ಪ ರೂಪಗಳು" ಎಂಬ ಗ್ರಂಥದಲ್ಲೂ ಕೊಟ್ಟಿದೆ.

ಆಂಗ್ಲೇಯ ಭಾಷೆಯ 'ಅಸ್ಟ್ರಲ್' (Astral) ಎಂಬ ಶಬ್ದವು ಮಧ್ಯಯುಗ ಸಂಸ್ಕೃತಿಯಿಂದ ಬಳಕೆಗೆ ಬಂದಿರುತ್ತದೆ. ಇದರ ಅರ್ಥವು "ನಕ್ಷತ್ರದಂ ಹೊಳೆಯುವಂಥದು" ಎಂದು. ಸ್ಥೂಲ ಲೋಕಕ್ಕಿಂತಲೂ ಒಂದು ದರ್ಜೆ ಸೂಕ್ಷ ವಾದ 'ಅಪ್' ತತ್ವಕ್ಕೆ ಈ ಹೆಸರನ್ನು ಕೊಟ್ಟಿದೆ. ಏಕೆಂದರೆ, ಅದರ ತತ್ವ ತುಂಬ ದೇದೀಪ್ಯ ಮಾನವಾಗಿ ಪ್ರಕಾಶಿಸುತ್ತದೆ. ಏಕೆಂದರೆ ಅಲ್ಲಿಯ ತತ್ವ ಚಲನೆಯು ಅತಿ ತೀವ್ರವಾದ ವೇಗ ಗತಿಯುಳ್ಳುದು (ನಮ್ಮ ಸ್ಥೂಲ ಲೋಕ ವಾಯು ತತ್ವಕ್ಕಿಂತಲೂ ಐದು ದರ್ಜೆ ಮೇಲಟ್ಟದ ಸ್ಪಂದಗತಿಯುಳ್ಳುದು-ಅದು) ಈ 'ಅಸ್ಟ್ರಲ್' ಅಥವ ಅಪ್ ತತ್ವದ ಪ್ರಕೃತಿಯು ನಮ್ಮ ರಾಗ ಭಾವನೆಗಳನ್ನೂ— ಉದ್ವೇಗಗಳನ್ನೂ ವೇದನೆಗಳನ್ನೂ (ಸುಖ-ದುಃಖ-ಶೀತ-ಉಷ್ಣಾದಿ) ವ್ಯಕ್ತ ಪ ಸುವ ಸಾಧನವು. ದಿವ್ಯ ದೃಷ್ಟಿಯುಳ್ಳ ಪರಿಶೋಧಕನ ದೃಷ್ಟಿಗೆ ಮಾನವನ ಕಾವ ದೇಹದ ಮೂಲಕ ಆತನ ರಸಭಾವನೆಗಳೆಲ್ಲವೂ ಅಭಿವ್ಯಕ್ತವಾಗುತ್ತವೆ. ಮನುಷ್ಯ ಕಾಮದೇಹದ ಪ್ರಕೃತಿಯು ಆತನ ರಸಭಾವನೆಗಳು ವ್ಯತ್ಯಾಸವಾದಂತೆಲ್ಲ ತೀವ್ರವಾ ಬದಲಾವಣೆಗಳನ್ನು ಹೊಂದುತ್ತಲೇ ಇರುತ್ತದೆ. ಈ ವಿಷಯವಾಗಿ ಸಧ್ಯದಲ್ಲ ವಿವರಗಳನ್ನು ಕೊಡಲಾಗುತ್ತದೆ.

ನಮಗೆ ಪರಿಚಿತವಾಗಿರುವ ಬಣ್ಣಗಳೂ—ಅವುಗಳಲ್ಲಿನ ಅತಿ ಸೂಕ್ಷ್ಮವಾ ಪ್ರಭೇದಗಳೂ ಮತ್ತು ನಮ್ಮ ಗ್ರಹಣ ಶಕ್ತಿಗೆ ಮೀರಿದಷ್ಟು ನಾಜೋಕಾದ ಬಣ್ಣ ಗಳೂ—ಎಂದರೆ ಮೇಲಿನ ಸ್ಪಂದಶೃತಿಗೆ ಅನುಸಾರವಾಗಿ ಅಭಿವ್ಯಕ್ತವಾಗುವಂತ ಕಣ್ಣನ್ನು ಕೋರೈಸುವಷ್ಟು ಪ್ರಕಾಶಮಾನವಾಗಿ ಮೇಲಿನ ಲೋಕಗಳ ಪ್ರಕೃ ಸಾಂದ್ರತೆಗಳ ಮೂಲಕ ಅಭಿವ್ಯಕ್ತವಾಗುತ್ತವೆ. ನಮ್ಮ ಈ ಪುಸ್ತಕದ ವರ್ಣರಂಜಿ ವಾದ ಚಿತ್ರಗಳಲ್ಲಿ ಮಾನವನ ಕಾಮದೇಹ, ರೂಪದೇಹ (ಮನೋದೇಹ) ಮತ್ತು ಕಾರಣ ದೇಹಗಳ ಭಿನ್ನ ಭಿನ್ನ ಪರಿಸ್ಥಿತಿಗಳನ್ನು ಉದಾಹರಿಸಲು ಪ್ರಯತ್ನ ಪಟ್ಟಿರುತ್ತೇವೆ.

ಎರಡನೆಯ ಚಿತ್ರದಲ್ಲಿ ಕಂಡು ಬರುವಂತೆ ತತ್ವಗಳು ಇರುವುದು-ಏಳು ಎಂಬಂಶವನ್ನು ಗಮನಿಸತಕ್ಕದ್ದು. ಅಲ್ಲದೆ ಪ್ರತಿಯೊಂದು ಏಳೇಳು ಉಪತತ್ವಗಳಾಗಿ ವಿಂಗಡವಾಗಿದೆ. "ಏಳು" ಎಂಬ ಸಂಖ್ಯೆಯು ತುಂಬ ಪವಿತ್ರವೂ ಗಹನವೂ ಆದುದು. ಏಕೆಂದರೆ ಪರಾತ್ಪರ ಚೈತನ್ಯದ ಅಭಿವ್ಯಕ್ತತೆಯು ಏಳು-ದರ್ಜೆಗಳಲ್ಲಿ ಆಗುವವರೆಗೂ ಪೂರ್ತಿಯಾಗುವುದಿಲ್ಲ (ಈ 'ಏಳು' ಎಂಬುದು ಗುಪ್ತವಿದ್ಯೆಗೆ ಸಂಬಂಧಪಟ್ಟ ಪವಿತ್ರ ಸಂಖ್ಯೆಯು 'ನಾನು'-'ನಾನಲ್ಲದ್ದು'-'ನಾನು' ಮತ್ತು 'ನಾನಲ್ಲದ್ದು' ಇವುಗಳ ಪರಸ್ಪರ ಸಂಬಂಧ—ಹೀಗೆ ಒಂದು—ಮೂರೇ ಆಗುತ್ತದೆ. ಒಂದು—ಎರಡಾಗುತ್ತದೆ ಎಂದು ಹೇಳುವುದು ಸರಿಯಲ್ಲ, ಏಕೆಂದರೆ ಎರಡರ ಮಧ್ಯೆ ಇರುವ ಸಂಬಂಧವು ಮೂರನೆಯದು. 'ಪುರುಷ' 'ಪ್ರಕೃತಿ'—ಇವೆರಡರ ಪರಸ್ಪರ ಸಂಬಂಧವನ್ನು ಸೂಚಿಸುವುದು ಮೂರನೆಯದಾದ ದೈವೀಪ್ರಕೃತಿ—ಹೀಗೆ ಮೇಲ್ಮಟ್ಟದಲ್ಲೂ ಒಂದಿದ್ದುದು—ಮೂರೇ ಆಗುತ್ತದೆ. ಈ ಮೂಲತತ್ವಗಳನ್ನು ಪುರುಷ (ಶಿವ)-ಪ್ರಕೃತಿ-(ಬ್ರಹ್ಮ) ಇವೆರಡಕ್ಕಿರುವ ಪರಸ್ಪರ ಸಂಬಂಧವನ್ನು 'ದೈವೀ ಪ್ರಕೃತಿ' ಅಥವ 'ವಿಷ್ಣು' ತತ್ವವೆಂದು ಕರೆಯಲ್ಪಟ್ಟಿದೆ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಮಮಯೋನಿಃ ಮಹತ್ ಬ್ರಹ್ಮ ತಸ್ಮಿನ್ ಗರ್ಭಂ ತಧಾಮ್ಯಹಂ! ಬ್ರಹ್ಮ ತತ್ವದಲ್ಲಿ ನಾನು ಗರ್ಭವನ್ನುಂಟು ಮಾಡುತ್ತೇನೆ. ಆ ಮೂಲಕ ಸಮಸ್ತ ಜೀವ ರಾಶಿಗಳೂ ಉತ್ಪತ್ತಿಯಾಗುತ್ತವೆ ಎಂದು ೧೪ನೆಯ ಅಧ್ಯಾಯ ೩ನೆಯ ಶ್ಲೋಕದಲ್ಲಿ ಹೇಳಿರುತ್ತಾನೆ. ಈ ಸಂದರ್ಭದಲ್ಲಿ ಶ್ರೀ ಕೃಷ್ಣನು ಪರಾತ್ಪರ ಚೈತನ್ನದಲ್ಲಿ ಒಂದಾಗಿ ಹೀಗೆ ಹೇಳುತ್ತಾನೆ. ಈ ಮೇಲ್ಕಂಡಂತೆ ಏಕೈಕ ಚೈತನ್ನವು ಮೂರೇ ಆಗಿ ಆವಿರ್ಭವಿಸುತ್ತದೆ. ಈ ಮೂರು ತತ್ವಗಳು ವಿಧ-ವಿಧವಾಗಿ ಸೇರಿ ವಿಭಾಗವಾಗುವುದರ ಮೂಲಕ ಏಳೇ ಆಗುತ್ತವೆ. ಸಪ್ತಲೋಕಗಳು, ಸಪ್ತದಾತುಗಳು, ಸಪ್ತಸ್ವರಗಳು ಸಪ್ತರ್ಷಿಗಳು, ಸಪ್ತಗ್ರಹಗಳು, ಸತ್ಪಾಗ್ನಿ ಸಪ್ತಪ್ರಜಾಪತಿಗಳು, ಎಂಬುದಾಗಿ ನಮ್ಮ ಹಿಂದೂ ಸಂಸ್ಕೃತಿಯಲ್ಲಿ ಸಪ್ತಸಂಖ್ಯೆಯ ಪುನರಾವರ್ತನೆಯು ಹೇರಳವಾಗಿ ದೊರೆಯುತ್ತದೆ.

ಸಪ್ತಪ್ರಾಣಾಃ ಪ್ರಭವನ್ತಿತಸ್ಮಾತ್ ಸಪ್ತಾರ್ಚಿಷಃ ಸಮಿಧಃ ಸಪ್ತೇಮೇ ಲೋಕಾ ಯೇಷು ಚರಂತಿ ಸಪ್ತಹೋಮಾಃ। ಪ್ರಾಣಾಗುಹಾಶಯೊನಿಹಿತಾಃ ಸಪ್ತ-ಸಪ್ತ॥ ಮುಂಡಕೋಪನಿಷತ್, ದ್ವಿತೀಯ ಮುಂಡಕ, ೪ನೆಯ ಶ್ಲೋಕ, ಸಪ್ತ ಲೋಕಗಳು, ಸಪ್ತದೇಹಗಳು, ಸಪ್ರಪ್ರಾಣಗಳು ಚಲಿಸುತ್ತಿರುವ ವಿಷಯಕ್ಕೆ ಈ ಉಪನಿಷತ್ತಿನಲ್ಲಿ ಪ್ರಮಾಣ ದೊರೆಯುತ್ತದೆ. (ಈಗ ಮೂರು 7 ಹೇಗಾಗುತ್ತದೆ—ಎಂಬಂಶದ ಬಗ್ಗೆ 'ಪ್ರಜ್ಞಾ ಅಧ್ಯಯನ' ವೆಂಬ ಗ್ರಂಥದ 58-59 ಪುಟ ನೋಡಿರಿ).

ನಮ್ಮ ಪರಿಮಿತಿಯುಳ್ಳ ಶಕ್ತಿಗೆ ಎಟಕುವಷ್ಟು ಪರಿಶೋಧನೆ ನಡೆಸಿದ್ದರಲ್ಲಿ ಕೆಳಗಿನ ತತ್ವಗಳಲ್ಲೆಲ್ಲ ಏಳು, ಏಳು, ಪ್ರಭೇದಗಳು ಎದ್ದು ಕಾಣುತ್ತವೆ. ಹೀಗೆಯೇ ನಮಗೆ ಎಟುಕದೆ ಇರುವಂತಹ ಮೇಲಿನ ತತ್ವಗಳಲ್ಲೂ ಸಹ ಏಳೇಳು ಉಪ ತತ್ವಗಳೂ ಏಳೇಳು ಪ್ರಭೇದಗಳೂ ಇರಬೇಕೆಂದು ಊಹಿಸಬೇಕಾಗುತ್ತದೆ. ಈ ಭೂಲೋಕದಲ್ಲಿ ಮೂರು ಪ್ರಮಾಣಗಳು ಎಂದರೆ ಉದ್ದ, ಅಗಲ, ಎತ್ತರ ಮೂರು ಪರಿಮಾಣಗಳು ಮಾತ್ರ ಗೋಚರವಾಗುತ್ತವೆ. ಉದಾಹರಣೆಗೆ ಪೆಟ್ಟಿಗೆಯ 3 ಮುಖಗಳು (ಉದ್ದ, ಅಗಲ, ಎತ್ತರ) ಮಾತ್ರ ಗೋಚರವಾಗುತ್ತವೆ. ಆದರೆ 4 ನೆಯ ಪರಿಮಾಣ ಎಂದರೆ ಅದರೊಳಗಿನ ಭಾಗವು ಕಾಣುವುದಿಲ್ಲ. ಆದರೆ ಕಾಮ ಲೋಕ (ಆಸ್ಟ್ರಲ್) ಪ್ರಜ್ಞೆಗೆ ಪೆಟ್ಟಿಗೆಯ ಒಳಭಾಗವೂ ಕೂಡ ಗೋಚರವಾಗುತ್ತದೆ. ಹೀಗೆಯೇ ಮೇಲೆ ಮೇಲಿನ ಲೋಕಗಳಿಗೆ ಪ್ರಜ್ಞೆ ಹತ್ತಿದಂತೆಲ್ಲ ಅದರ ಪರಿಮಿತಿಗಳು ಒಂದೊಂದಾಗಿ ಕಳೆಚಿಬೀಳುತ್ತವೆ.

ಮೇಲಿನ ಪ್ರಜ್ಞೆಗೆ ಕಾಣುವುದನ್ನೆಲ್ಲ ಬರೆದು ವಿವರಿಸುವುದು ನನ್ನ ಸಧ್ಯದ ಉದ್ದೇಶವಲ್ಲ. ಸಧ್ಯಕ್ಕೆ ಮಾನವನ ಶರೀರಗಳ ಸ್ವಭಾವಗಳಿಗೆ ಸಂಬಂಧಪಟ್ಟುದನ್ನು ಮಾತ್ರ ವಿಮರ್ಶಾತ್ಮಕ ಬುದ್ಧಿಯಿಂದ ಬರೆಯುತ್ತೇನೆ. ಮನುಷ್ಯನು ಸಂಸರಣದ ಮಾರ್ಗದಲ್ಲಿ ಈಗಿನ ಅಂತಸ್ತಿಗೆ ಹೇಗೆ ಬಂದನು–ಎಂಬ ವಿಷಯವನ್ನೇ ಪ್ರಾಮುಖ್ಯವಾಗಿಟ್ಟುಕೊಂಡು ಬರೆಯಬೇಕೆಂದಿರುತ್ತೇನೆ.

ಸೌರ ಬ್ರಹ್ಮಾಂಡವು ಸೃಷ್ಟಿಯಾದಾಗಿನಿಂದಲೂ ಸಂಸರಣವು ಎಂತೆಂತಹ ಬದಲಾವಣೆಗಳ ಮೂಲಕ ನಮ್ಮನ್ನು ಸಧ್ಯದ ಅಂತಸ್ತಿಗೆ ತಂದು ಬಿಟ್ಟಿದೆ ? ಸೃಷ್ಟಿಯಾದಿಯಿಂದ ಇದುವರೆಗೆ ನಡೆದುಕೊಂಡು ಬಂದಿರುವ ಘಟನೆಗಳ ಚರಿತ್ರೆಯನ್ನೆಲ್ಲ ಆಕಾಶಲಿಪಿಯೆಂಬ ಪ್ರಕೃತಿಯ ಅಳಿಸಲಾರದ ದಫ್ತರದಲ್ಲಿ ಚಿತ್ರಿಸಲ್ಪಟ್ಟಿರುತ್ತದೆ. ಆ ಭೂತ ಕಾಲಕ್ಕೆ ಸಂಬಂಧಪಟ್ಟ ಘಟನೆಗಳನ್ನೆಲ್ಲ ನಮ್ಮ ಕಣ್ಣು ಮುಂದೆ ಹಾದು ಹೋಗುವಂತೆ ಮಾಡಿಕೊಳ್ಳಬಹುದು. ಆ ರೀತಿ ಹಿಂದಿನ ಚರಿತ್ರೆಯನ್ನು ಪರಿಶೀಲಿಸಿದಾಗ ಆ ರೀತಿ ಪರಿಶೀಲನೆ ನಡೆಸುವವನು ತಾನೇ ಆಯಾ ಕಾಲದಲ್ಲಿದ್ದು ಸಾಕ್ಷಾತ್ತಾಗಿ ಅವುಗಳನ್ನೆಲ್ಲ ನೋಡಿದಂತೆ ಭಾಸವಾಗುತ್ತದೆ. ಈ ರೀತಿ ಪರಿಶೋಧನೆ ನಡೆಸುವವರು ಇಷ್ಟಪಟ್ಟರೆ ಒಂದೊಂದು ಘಟನೆಯನ್ನೂ ತನ್ನ ಪರಿಶೀಲನೆಗೆ ಅವಶ್ಯಕವಾದಷ್ಟು ಕಾಲ ತನ್ನ ಕಣ್ಣು ಮುಂದೆ ಇರುವಂತೆ ಮಾಡಿಕೊಂಡು ನಿಧಾನವಾಗಿ ಪರಿಶೀಲಿಸಬಹುದು. ಅಥವ ಆವಶ್ಯಕವಾದಲ್ಲಿ ಒಂದು ಶತಮಾನದಲ್ಲಿ ನಡೆದ ಘಟನೆಗಳನ್ನೆಲ್ಲ ಕೆಲವೇ ನಿಮಿಷಗಳಲ್ಲಿ ಪಕ್ಷಿಯನೋಟದಿಂದ ನೋಡಿ ಮುಗಿಸಬಹುದು. ದಿವ್ಯ ದೃಷ್ಟಿಯನ್ನು (ಕಾರಣದೇಹದ) ಆ ಮಟ್ಟಕ್ಕೆ ಬೆಳೆಸಿಕೊಂಡಿರುವವರಿಗೆ ಮಾತ್ರ ಇಂತಹ ಸೌಲಭ್ಯವಿರುತ್ತದೆ. ಈ ಆಕಾಶಲಿಪಿಯು (ದೈವಿಕನೆನಪು)

ಮನೋಲೋಕದಲ್ಲಿ ಪ್ರತಿ ಬಿಂಬಿತವಾಗಿರುತ್ತದೆ. ಮನೋಲೋಕಕ್ಕಿಂತ ಕೆಳಗಿನ ಮಟ್ಟದ ದಿವ್ಯ ದೃಷ್ಟಿಗೆ ಅದು ಎಟುಕಲಾರದು. ಆದರೆ ಅರೂಪಲೋಕಕ್ಕೆ ಸಂಬಂಧಪಟ್ಟ ದಿವ್ಯ ದೃಷ್ಟಿಯನ್ನು ಯಾರು ಬೆಳೆಸಿಕೊಂಡಿರುತ್ತಾರೆಯೋ ಅಂತಹರು ಆಕಾಶಲಿಪಿಯನ್ನು ಸುಲಭವಾಗಿ ಓದಬಹುದು. ಕೊನೆಯಪಕ್ಷ ರೂಪಲೋಕದ ಮಟ್ಟದಲ್ಲಾದರೂ ಯಾರು ತಮ್ಮ ಸ್ವಪ್ರಜ್ಞೆಯಿಂದ ವ್ಯವಹರಿಸ ಬಲ್ಲರೋ ಅಂತಹರಿಗೆ ಮಾತ್ರ ಆ ದೈವಿಕವಾದ ಲಿಪಿಯ ಸೌಲಭ್ಯವು ದೊರೆಯ ಬಲ್ಲುದು.

ಅಧ್ಯಾಯ ೫

ತ್ರಿಮೂರ್ತಿಗಳು

ಈಯದ್ಭುತವಾದ ಸೃಷ್ಟಿಕ್ರಮದಲ್ಲಿ ಮಾನವನು ಹೇಗೆ ಕೆಳಗಿನ ಲೋಕಗಳಲ್ಲಿ ಆವಿರ್ಭವಿಸಿದನು ಎಂಬ ತತ್ವವನ್ನು ವಿಮರ್ಶಿಸೋಣ. ಈ ವಿಮರ್ಶೆಯಲ್ಲಿ ಮತಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪ್ರಸ್ತಾಪಿಸಬೇಕಾಗುತ್ತದೆ. ಆದರೆ ಹಾಗೆ ಮಾಡುವ ಸಂದರ್ಭವಲ್ಲಿ ಮತಾನುಯಾಯಿಗಳ ಬುಡವಿಲ್ಲದ ನಂಬಿಕೆಗಳಾಗಲೀ ಅವರ ಊಹಾಪೋಹಗಳಾಗಲೀ ನಮಗೆ ಅಗತ್ಯವಿಲ್ಲ. ಕೇವಲ ವಿಜ್ಞಾನ ದೃಷ್ಟಿಗೆ ರುಜುವಾತಾದ ಅಂಶಗಳನ್ನು ಮಾತ್ರ ಗಮನಿಸೋಣ.

ಮನುಷ್ಯನ ಮೂಲವನ್ನು ತಿಳಿಯಲು ಮೇಲ್ಕಂಡ ಲಿಪಿಗಳನ್ನು ವಿಮರ್ಶಿಸಿದಾಗ ನಮಗೆ ಕಂಡುಬರುವುದೇನು ? ಮನುಷ್ಯನು ಬಹುದೀರ್ಘ ಕಾಲದ ದಿವ್ಯ ಸಂಸರಣದ ಫಲಿತಾಂಶವಾಗಿ ಸಧ್ಯದ ಬೆಳವಣಿಗೆ ಮಟ್ಟವನ್ನು ಮುಟ್ಟಿರುತ್ತಾನೆ, ಅಲ್ಲದೆ ಆತನಲ್ಲಿ ಮೂರು ದೈವಿಕ ಚೈತನ್ಯ ಪ್ರವಾಹಗಳು ಸಂಗಮವಾಗಿರುತ್ತವೆ. (ತ್ರಿವೇಣಿ ಸಂಗಮ) ಕ್ರೈಸ್ತಮತದ ಪವಿತ್ರ ಗ್ರಂಥದಲ್ಲಿ ಮಾನವನು ದೇವನ ಪ್ರತಿಬಿಂಬಸ್ವರೂಪನು–ಎಂದು ಹೇಳಿದೆ. ಇದನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಈ ಹೇಳಿಕೆಯಲ್ಲಿ ಒಂದು ಗಹನವಾದ ತತ್ವವು ಅಡಗಿದೆಯೆಂಬುದು ಕಂಡು ಬರುತ್ತದೆ. ಎಲ್ಲ ಮತಗಳಲ್ಲೂ ಈಶ್ವರನು ತ್ರಿಮೂರ್ತಿ ಸ್ವರೂಪನೆಂದು ಹೇಳಿದೆ. ಹೀಗೆಯೇ ಮಾನವನ ಸ್ವಭಾವವೂ ಕೂಡ ಆ ಮೂಲದಂತೆಯೇ ಮೂರು ವಿಧವಾಗಿರುತ್ತದೆ. ಮಾನವನಿಗೂ ದೇವನಿಗೂ ಹೀಗೆ ಅನ್ಯೋನ್ಯ ಸಂಬಂಧವಿರುತ್ತದೆ.

ಈ ಸಂದರ್ಭದಲ್ಲಿ ಪರಾತ್ಪರವೂ, ಅನಂತವೂ-ನಿರುಪಾಧಿಕವೂ ಆದ ಪರಬ್ರಹ್ಮ ತತ್ವದ ವಿಷಯವಾಗಿ ಪ್ರಸಾಪಿಸುತ್ತಿಲ್ಲ. (ಏಕೆಂದರೆ ಆ ತತ್ವವು ಇದೆಯೆಂಬುದು ಮಾತ್ರ ಗೊತ್ತು–ಮತ್ತೇನೂ ಅದರ ವಿಷಯವಾಗಿ ನಾವು ಅರಿಯೆವು) ಆದರೆ ಈ ಸೌರಬ್ರಹ್ಮಾಡದ ಈಶ್ವರನ ಎಂದರೆ ಶಬ್ದ ಬ್ರಹ್ಮವೆಂದು ಹೇಳಲ್ಪಡುವ ಬ್ರಹ್ಮಾಂಡಾಧಿಪತಿಯ ವಿಷಯವಾಗಿ ಮಾತ್ರ ನಮಗೆ ತಿಳಿದಷ್ಟನ್ನು ಇಲ್ಲಿ ಬರೆಯುತ್ತಿದ್ದೇನೆ. ಇದುವರೆಗೆ ಏನೇನು ಒಳ್ಳೆಯದು ಸಾಧುವಾದುದು ಎಂಬುದು ಇದೆಯೋ ಅದೆಲ್ಲವೂ ನಮ್ಮ ಬ್ರಹ್ಮಾಂಡಾಧಿಪತಿಗೆ ಅನ್ವಯವಾಗುತ್ತದೆ. ಏಕೆಂದರೆ ಈ ಕಾಲದಲ್ಲಿ ಜನರು ತಮ್ಮಲ್ಲಿರುವ ಗುಣ-ದೋಷಗಳನ್ನೇ ಈಶ್ವರನಲ್ಲೂ ಇರುವಂತೆ ಆರೋಪಿಸುತ್ತಾರೆ. (ಆತನು ಒಬ್ಬ ದೊಡ್ಡ ಪಾಳೆಯಗಾರನ ರೂಪದಲ್ಲಿ ಜನರು ಭಾವಿಸುತ್ತಾರೆ.

T.V.R.) ತಮ್ಮಲ್ಲಿರುವ ಈರ್ಷಸೂಯೆಗಳೂ ಕೋಪತಾಪಗಳೂ ಮಾತ್ಸರ್ಯ-ಸೇಡು ತೀರಿಸಿಕೊಳ್ಳುವ ಸ್ವಭಾವವು ದೇವರಲ್ಲಿರುವಂತೆ ಜನರು ಭಾವಿಸುತ್ತಾರೆ. ಈ ವಿಧವಾದ ಆರೋಪಣೆಗಳನ್ನು ಕಾಡು ಮನುಷ್ಯನು ಮಾಡಿದರೆ– ಅಷ್ಟೇನೂ ಆಶ್ಚರ್ಯವಿಲ್ಲ. ಏಕೆಂದರೆ ಅಂಥವನಿಗೆ ಶಕ್ತಿ ಸಾಮರ್ಥ್ಯಗಳಿರುವುದು ರಕ್ತವನ್ನು ಹೀರುವ ಕ್ರೂರ ಕರ್ಮಗಳ ಮೂಲಕವೇ ಮನವರಿಕೆಯಾಗುವುದು. ಆದರೆ ಅಂತಹ ನೀಚಭಾವನೆಗಳು ನಾಗರೀಕರೆಂದೆನ್ನಿಸಿಕೊಳ್ಳುವಂತಹ ಜನರಲ್ಲಿದ್ದರೆ ಅಕ್ಷಮ್ಯವಾದ ಅಪರಾಧಗಳಾಗುತ್ತವೆ. ನಾವು ಯಾವ ಮಹಾಚೈತನ್ಯದಲ್ಲಿ ಬಾಳಿ, ಬದುಕಿ ವಾಸಮಾಡುತ್ತಿದ್ದೇವೆಯೋ ಅಂತಹ ಈ ನಮ್ಮ ಬ್ರಹ್ಮಾಂಡಾಧಿಪತಿಯಲ್ಲಿ ಭಗವಂತನಿಗೆ ಸಹಜವಾದಂಥ, ಪ್ರೇಮ, ಕರುಣೆ, ಜ್ಞಾನ, ವಿವೇಚನೆ, ತಾಳ್ಮೆದರ್ಪ, ಸರ್ವಜ್ಞತ್ವ, ಸರ್ವಶಕ್ತಿತ್ವ, ಸರ್ವವ್ಯಾಪಕತ್ವ, ಇವೂ ಇನ್ನೂ ಹೆಚ್ಚಾದ ಸದ್ಗುಣಗಳೆಲ್ಲವೂ ಇರುತ್ತವೆ. ಈ ಸಂದರ್ಭದಲ್ಲಿ ನಾನು ಒತ್ತಿ ಹೇಳಬೇಕಾದ ಒಂದಂಶವಿರುತ್ತದೆ. ಅದೇನೆಂದರೆ ನಾವು ಥಿಯಾಸಫಿಯಲ್ಲಿ ನಮ್ಮ ಪವಿತ್ರವಾದ ನಂಬಿಕೆಯ ಆಧಾರದಮೇಲೆ ಭಗವಂತನು ಇರುತ್ತಾನೆ ಎಂದು ಹೇಳುತ್ತಿಲ್ಲ. ದಿವ್ಯ ದೃಷ್ಟಿಯುಳ್ಳವನಿಗೆ ಈ ಮಹತ್ತರವಾದ ಭಗವಂತನ ಇರುವಿಕೆಯು ನಿರ್ವಿವಾದದುದು. ಸೂರ್ಯನ ಇರುವಿಕೆಯನ್ನು ಮನವರಿಕೆ ಮಾಡಿಕೊಳ್ಳುವುದು ಎಷ್ಟು ಖಚಿತವಾದದೋ ಭಗವಂತನ ಇರುವಿಕೆಯೂ ಅಷ್ಟೇ ಖಚಿತವಾದುದು. ಆದರೆ ಎಂತಹ ಬೆಳೆದ ಮನುಷ್ಯನಾದರೂ ಆತನನ್ನು ಸಾಕ್ಷಾತ್ತಾಗಿ ನೋಡುವುದಕ್ಕೆ ಸಾಧ್ಯವಿಲ್ಲದಿದ್ದಾಗ್ಯೂ-ಆತನ ಚಟುವಟಿಕೆಗಳೂ– ಆತನ ಘನೋದ್ದೇಶವೂ ಮೇಲಿನ ಲೋಕಗಳಲ್ಲಿ ಪ್ರಜ್ಞಾವತ್ತಾಗಿ ವ್ಯವಹರಿಸುವಂಥವರಿಗೆ ಆತನ ಇರುವಿಕೆಯನ್ನು ಘೋಷಿಸುತ್ತವೆ.

ಈಶ್ವರನು ಸೃಷ್ಟಿಗೆ ಸಂಬಂಧಪಟ್ಟ ಕೆಲಸದ ದೃಷ್ಟಿಯಿಂದ ತ್ರಿಮೂರ್ತಿ ಸ್ವರೂಪನಾಗಿರುತ್ತಾನೆ. (ಏಕ–ಮೂರ್ತಿಃತ್ರಯೋಭಾಗಃ) ಕೆಲಸದ ದೃಷ್ಟಿಯಿಂದ ಮೂರು ಮೂರ್ತಿಗಳಾದರೂ ತತ್ವ ದೃಷ್ಟಿಯಿಂದ ಒಬ್ಬನೇ, ಮತ ಗ್ರಂಥಗಳಲ್ಲಿ ಈ ತ್ರಿಮೂರ್ತಿಗಳ ವಿಷಯವಾಗಿ ಬರೆದಿರುವುದೆಲ್ಲ ಅಕ್ಷರಶಃನಂಬುವುದಕ್ಕೆ ಸಾಧ್ಯವಿಲ್ಲದೇ ಹೋದಾಗ್ಯೂ ಥಿಯಾಸಫಿ ಬೆಳಕಿನಲ್ಲಿ ಮತ ಗ್ರಂಥಗಳ ಹೇಳಿಕೆಗಳನ್ನು ವಿಮರ್ಶೆ ಮಾಡಿದರೆ ಎಷ್ಟೋ ಸತ್ಯಾಂಶವು ಅವುಗಳಲ್ಲಿರುವುದು ಎದ್ದು ಕಾಣುತ್ತದೆ.

ಈಶ್ವರನ ಅಭಿವ್ಯಕ್ತತೆಯನ್ನು ನಮ್ಮ ಅಲ್ಪಬುದ್ಧಿಯಿಂದ ಅರ್ಥ ಮಾಡಿಕೊಳ್ಳುವುದಕ್ಕಾಗಲೀ ಅಥವ ಆತನ ಸ್ವಭಾವವನ್ನು ಬೇರೆ ವಿಧವಾಗಿ ಪ್ರತಿನಿಧಿಸುವುದಕ್ಕಾಗಲೀ ಸಾಧ್ಯವಿಲ್ಲವೆಂಬಂಶವು ಸರ್ವರಿಗೂ ತಿಳಿದಂಶವೇ ಸರಿ. ಹೀಗಿದ್ದಾಗ್ಯೂ ಆತನ ಅಭಿವ್ಯಕ್ತತೆಯನ್ನು ಇದರಲ್ಲಿ ಕೊಟ್ಟಿರುವ "ತತ್ವ ದರ್ಪಣ"ದ ಚಿತ್ರದಲ್ಲಿ ಚಿತ್ರಿಸಿರುವಂತೆ ಸಂಕೇತ ಅಥವ ಚಿಹ್ನೆಗಳ ರೂಪದಲ್ಲಿವಿವರಿಸಿರುವುದು ಸ್ವಲ್ಪ ಮಟ್ಟಿಗೆ

ನಾವು ತಿಳಿದುಕೊಳ್ಳಲು ಸಹಾಯ ಮಾಡಿದೆ. ಮೊದಲನೆಯ ಅಥವ ಅತ್ಯಂತ
ಮೇಲಿನ ತತ್ವದಲ್ಲಿ ಈಶ್ವರನ ಅಭಿವ್ಯಕ್ತತೆಯನ್ನು ಮೂರು ಸಣ್ಣ ವೃತ್ತಗಳ ರೂಪ
ಗಳಲ್ಲಿ ಪ್ರತಿ ಬಿಂಬಿಸಿದೆ. ಆತನ ಈ ಮೂರು ಅಭಿವ್ಯಕ್ತತೆಗಳಿಗೂ ಪ್ರತಿಯೊಂದುಕ್ಕೂ
ತನ್ನದೇ ಆದ ಗುಣ ಮತ್ತು ಶಕ್ತಿ ವಿಶೇಷಗಳಿರುತ್ತವೆ ಆದರೆ ಮೊದಲನೆಯ
ರೂಪವು ಆ ಅತ್ಯಂತ ಉನ್ನತ ಮಟ್ಟದಿಂದ ಕೆಳಕ್ಕಿಳಿಯಲು ಸಾಧ್ಯವಿಲ್ಲ. ಆದರೆ
ತನ್ನ ಎರಡನೆಯ ಮೂರ್ತಿಯು ಎರಡನೆಯದಾದ ವೈಕುಂಠ ಲೋಕಕ್ಕೆ ಇಳಿದು ಆ
ತತ್ವದ ಪ್ರಕೃತಿಯಿಂದ ಒಂದು ಆವರಣವನ್ನು ಕಲ್ಪಿಸಿಕೊಳ್ಳುತ್ತಾನೆ. ಈ ಮೂಲಕ
ಈಶ್ವರನು ಒಂದು ದರ್ಜೆ ಕೆಳಕ್ಕೆ ಇಳಿದಂತಾಯಿತು-ಎಂದರೆ ಆತನ ಸ್ವರೂಪದಲ್ಲಿ
ಒಂದು ವಿಧವಾದ ಪರಿಮಿತಿಯುಂಟಾಯಿತು-ಎಂದು ತಿಳಿಯಬೇಕು. ಮೂರನೆಯ
ಮೂರ್ತಿಯು ಇನ್ನೂ ಒಂದು ದರ್ಜೆ-ಎಂದರೆ ಆಕಾಶ ತತ್ವದ ಮೇಲ್ಭಾಗಕ್ಕೆ ಇಳಿದು
ಆ ಸಂಬಂಧವಾದ ಪ್ರಕೃತಿಯಿಂದ ಒಂದು ದೇಹವನ್ನು ಕಲ್ಪಿಸಿಕೊಳ್ಳುತ್ತಾನೆ. ಈ
ಮೂರು ತತ್ವಗಳೂ ಬೇರೆ-ಬೇರೆ ಸ್ವಭಾವದುವು—ಒಂದು ಮತ್ತೊಂದಕ್ಕಿಂತ ಭಿನ್ನ
ವಾಗಿರುತ್ತದೆ. ಆದರೆ ಚುಕ್ಕೆ ರೂಪವಾದ ಗೆರೆಯು ನಮಗೆ ತಿಳಿಸುವುದೇನೆಂದರೆ,
ಆ ಮೂರು ರೂಪಗಳೂ ಒಂದೇ ಚೈತನ್ಯದ ಮುಖಗಳು ಎಂಬುದನ್ನು, ಹೊರಗಿನ
ಪ್ರಕೃತಿ ತತ್ವದ ದೃಷ್ಟಿಯಿಂದ ನೋಡಿದರೆ ಮೂರು ಬೇರೆ-ಬೇರೆ ಮೂರ್ತಿಗಳೇ,
ಆದರೆ ಕೆಳಗಿನ ಹಂತಗಳಲ್ಲಿ ಅಭಿವ್ಯಕ್ತವಾಗಿರುವ ಪ್ರತಿಯೊಂದು ವೃತ್ತವೂ
ಮೊದಲನೆಯದಾದ ಕೈಲಾಸ ತತ್ವದಲ್ಲಿರುವ ತ್ರಿಮೂರ್ತಿಗಳನ್ನು ಪ್ರತಿನಿಧಿಸುವ
ವೃತ್ತಗಳಿಗೆ ಸಂಬಂಧಪಟ್ಟಿವೆ. ಆ ಮೊದಲನೆಯ ಕೈಲಾಸ ತತ್ವದಲ್ಲಿ (ಆದಿತತ್ವ
ಬೌದ್ಧಸಂಪ್ರದಾಯದಲ್ಲಿ) ಮೂರು ಒಂದೇ ಎಂಬ ತತ್ವವನ್ನು-ಚುಕ್ಕೆರೂಪದ
ಗೆರೆಯು ತೋರಿಸುತ್ತದೆ.

ಹೀಗೆ ಮೂರು ಒಂದೇ ಎಂಬ ತತ್ವವನ್ನು "ಏಕಮೂರ್ತಿಃ ತ್ರಯೋಭಾಗಃ"
ಎಂದು ಹಿಂದೂ ಸಂಸ್ಕೃತಿಯೂ—"ತ್ರಿಮೂರ್ತಿಗಳ ಸ್ವರೂಪದಲ್ಲಿ ಒಬ್ಬನೇ
ಭಗವಂತನನ್ನು ಆರಾಧಿಸುತ್ತೇವೆ"—ಎಂದು ಕ್ರೈಸ್ತಮತವೂ ಘೋಷಿಸುತ್ತವೆ
ಇದರಿಂದ ಈ ಮೂರು ಮೂರ್ತಿಗಳಿಗೆ ಸಂಬಂಧಪಟ್ಟ ಕರ್ತವ್ಯವು ಬೇರೆ-ಬೇರೆ
ಯೆಂಬ ನಿಯಮವನ್ನು ಸರಿಯಾಗಿ ಅರ್ಥ ಮಾಡಿಕೊಂಡು ಆ ಮೂರು ಮೂರ್ತಿಗಳ
ಹಿಂದಿರುವ ಚೈತನ್ಯವು ಒಂದೇ ಎಂಬ ನಿತ್ಯತ್ವದ ಸಂಬಂಧವನ್ನು ಮರೆಯ ಕೊಡದು

'ಮೂರ್ತಿ' ಎಂಬ ಶಬ್ದದ ಅರ್ಥವನ್ನು ಸರಿಯಾಗಿ ಮನನ ಮಾಡಿಕೊಳ್ಳ
ಬೇಕು. ಮೂರ್ತಿ ಎಂದರೆ ಆಕಾರ. ಆಂಗ್ಲೇಯ ಭಾಷೆಯಲ್ಲಿ 'person' ಪರ್ಸನ್
ಎಂದರೆ ಅದೇ ಅರ್ಥ. ಹಿಂದೆ ರೋಮ್ ಜನರು ನಾಟಕದಲ್ಲಿ ಅಭಿನಯಿಸುತ್ತಿದ್ದ
ಪಾತ್ರಕ್ಕೆ ತಕ್ಕಂತೆ ಒಂದು ಮುಸುಕನ್ನು ಹಾಕಿಕೊಳ್ಳುತ್ತಿದರು, ಅದಕ್ಕೆ (persona)

ಎಂದು ಹೆಸರಿತ್ತು. ಹೀಗೆಯೇ ಆತ್ಮವು ಕೆಳಕ್ಕಿಳಿದು ತಾತ್ಕಾಲಿಕವಾಗಿ ಧರಿಸುವ ದೇಹ ಗಳ ರೂಪಗಳಲ್ಲಿ ಪಾತ್ರವನ್ನು ಅಭಿನಯಿಸಬೇಕಾಗುತ್ತದೆ. ಆರೀತಿ ಧರಿಸುವ ದೇಹ-ಅಥವ ಮುಸುಕಿನ ರೂಪದಲ್ಲಿ ವ್ಯಕ್ತವಾಗುವ ಚೈತನ್ಯಾಂಶಕ್ಕೆ (personality) ದೇಹತ್ಮವೆಂದು ಹೆಸರು ಬಂದಿದೆ. ಹೀಗೆಯೇ ಒಬ್ಬನೇ ಭಗವಂತನು ಬೇರೆ-ಬೇರೆ ಪ್ರಕೃತಿ ತತ್ವಗಳಲ್ಲಿ ಅಭಿವ್ಯಕ್ತನಾಗುವುದರಿಂದ—ಆ ರೀತಿ ಅಭಿವ್ಯಕ್ತವಾದ ರೂಪ ಗಳಿಗೆ 'ಮೂರ್ತಿಗಳು'-(persons) ಎಂಬ ಹೆಸರು ಬಂದಿರುತ್ತದೆ. ಈ ಭಿನ್ನ ರೂಪಗಳಿಗೆ ಮರುಳಾಗಿ ಅವುಗಳ ಹಿಂದಿರುವ ಚೈತನ್ಯವು ಒಂದೇ ಎಂಬುದನ್ನು ಮರೆಯ ಕೂಡದು.

(ಆದಿ) ಕೈಲಾಸ ತತ್ವದ ಮಟ್ಟದಲ್ಲಿ ವ್ಯಕ್ತವಾಗಿರುವ 'ತಂದೆ' ಸ್ವರೂಪನು ಒಬ್ಬ ಅಥವ ಒಂದು ಅಭಿವ್ಯಕ್ತತೆ—ಎರಡನೆಯ ಲೋಕವಾದ ವೈಕುಂಠ ತತ್ವದಲ್ಲಿ ಅಭಿವ್ಯಕ್ತವಾಗಿರುವ 'ಮಗ'(ಕ್ರೈಸ್ತಸಂಪ್ರದಾಯದ ರೀತ್ಯಾ)ಎಂಬ ವಿಷ್ಣು ಮೂರ್ತಿ- ಸತ್ಯಲೋಕದಲ್ಲಿ ಅಭಿವ್ಯಕ್ತವಾಗಿರುವ ಬ್ರಹ್ಮ ಮೂರ್ತಿ. (ಈ ಮೂರ್ತಿಯನ್ನು ಕ್ರೈಸ್ತರು ಪರಿಶುದ್ಧಾತ್ಮವೆಂದು ಕರೆಯುತ್ತಾರೆ). ಆದರೆ ಈ ಮೂರು ಮೂರ್ತಿ ಗಳೂ ಒಂದೇ—ವೈಭವದಲ್ಲೂ ಶಕ್ತಿ ಸಾಮರ್ಥ್ಯಗಳಲ್ಲೂ ಸಮಾನರು. ಆದರೆ ಅಭಿವ್ಯಕ್ತತೆಯಲ್ಲಿ ಮಾತ್ರ ತಾರತಮ್ಯತೆಯಿರುತ್ತದೆ. ಒಬ್ಬ ಮೂರ್ತಿ ಮತ್ತೊಬ್ಬ ಮೂರ್ತಿಗಿಂತಲೂ ಕಡಮೆ ದರ್ಜೆಯವನಂತೆ ತೋರುತ್ತದೆ. ಆದಾಗ್ಯೂ ಮೊದಲನೆಯ ತತ್ವ (ಕೈಲಾಸ)ದಲ್ಲಿ ಅಭಿವ್ಯಕ್ತವಾದಂತೆ ಆ ಮೂವರು ಮೂರ್ತಿ ಗಳೂ ಒಂದೇ-ಒಬ್ಬರು ಹೆಚ್ಚಲ್ಲ, ಮತ್ತೊಬ್ಬರು ಕಡಮೆಯಲ್ಲ. ಎಲ್ಲರೂ ನಿತ್ಯತ್ವ ದಲ್ಲಿ ಒಂದಾಗಿರುತ್ತಾರೆ, ಹಾಗೆಯೇ ಪ್ರತಿಯೊಬ್ಬ ಮೂರ್ತಿಯೂ ದೈವಿಕತೆಯ ದೃಷ್ಟಿಯಿಂದ ಒಬ್ಬನೇ ಪ್ರಭು, ಹೀಗೆಯೇ ಎರಡನೆಯ ಮೂರ್ತಿಯು ತನ್ನ ತಂದೆ ಯಾದ ಶಿವ ತತ್ವದ ಚೈತನ್ಯಾಂಶವನ್ನು ಪಾಲ್ಗೊಂಡಿರುವುದರಿಂದ ಆತನೂ ಭಗ ವಂತನೇ, ಆದರೆ ಪ್ರಕೃತಿ ತಾಯಿಯಿಂದ ಬಂದಿರುವ ದೇಹ ದೃಷ್ಟಿಯಿಂದ ಮಾನ ವನೂ ಹೌದು. ಈತನು ಈ ಸೌರಬ್ರಹ್ಮಾಂಡ ಸೃಷ್ಟಿಯಾಗುವುದಕ್ಕೆ ಮುಂಚೆಯೇ ದೈವಾಂಶ ಸಂಭೂತನಾಗಿದ್ದನು-ಆತನ ಅಭಿವ್ಯಕ್ತತೆಯು ವೈಕುಂಠದಲ್ಲಿ ಸಂಭವಿಸಿದ್ದು ಈ ಸೌರ ಬ್ರಹಾಂಡವು ಅಭಿವ್ಯಕ್ತವಾದಾಗ ಹೀಗೆ ಆತನು ಭಗವಂತನೂ ಮಾನವನೂ ಆದಾಗ್ಗೂ ಒಬ್ಬನೇ ಕ್ರಿಸ್ತನು. (ವಿಷ್ಣುವು) ಈ ರೀತಿಯಾದುದು ಭಗವಂತನು ದೇಹ ಧಾರಣೆ ಮಾಡಿದ್ದರಿಂದ ಅಲ್ಲ, ಮಾನವನು ಭಗವಂತನ ಮಟ್ಟಕ್ಕೆ ಹತ್ತಿದ್ದರಿಂದ. ಈ ರೀತಿ ಆತನು ಭಗವಂತನೊಡನೆ ಒಂದಾಗಿರುವುದು ಬರಿಯ ತತ್ವ ದೃಷ್ಟಿಯಿಂದ ಅಲ್ಲ- (ಮಾನವರೆಲ್ಲರೂ ತತ್ವದೃಷ್ಟಿಯಿಂದ ಭಗವಂತನ ಮಕ್ಕಳೇ–T.V.R.) ಕೆಳಗಿನ ಲೋಕಕ್ಕೆ ಇಳಿದ ಮೇಲೆ ಆ ಮೂಲಕ ಪಡೆಯುವ ಅನುಭವ ಸಾರವನ್ನೆಲ್ಲ ತನ್ನೊಳಗೆ ಮೈಗೂಡಿಸಿಕೊಳ್ಳುವ ದಿವ್ಯ ದೈವಿಕ ಸಾಮರ್ಥ್ಯದಿಂದ, ಆದರೆ ಈ ಸಾಮರ್ಥ್ಯವು

ಮುಂದಿನ ಮೂರನೆ ಚಿತ್ರದಲ್ಲಿ ಉದಾಹರಿಸಿರುವಂತೆ, ಇನ್ನೂ ಕೆಳಗಿನ ಲೋಕ ತತ್ವಗಳಿಗಿಳಿಯುವುದಕ್ಕೆ ಅನ್ವಯಿಸುತ್ತದೆ. (ಎಂದರೆ ಈ ಜಗತ್ತಿನ ಸಕಲ ರೂಪಗಳಲ್ಲೂ ಆತನ ಚೈತನ್ಯವಿದೆ. ಜಗತ್ತಿನಲ್ಲಿರುವ ಸಮಸ್ತ ಜೀವರಾಶಿಗಳ ದೇಹಗಳೂ ಎರಡನೆಯ ಮೂರ್ತಿಯ ಚೈತನ್ಯದ ಆಧಾರದ ಮೇಲೆ ನಿಂತಿವೆ. 2ನೆಯ ಸೃಷ್ಟಿತ ರಂಗಕ್ಕೆ ಸಂಬಂಧಪಟ್ಟ ಚೈತನ್ಯ ಧಾರೆಯು ಆತನಿಗೆ ಸಂಬಂಧಪಟ್ಟದು—T.V.R.)

ಮತ್ತೊಂದು ಜಟಿಲ ಪ್ರಶ್ನೆ (ಇದು ಕ್ರೈಸ್ತಮತ ಸಂಪ್ರದಾಯಕ್ಕೆ ಅನ್ವಯವಾಗತಕ್ಕದ್ದು—T.V.R) ಪರಿಶುದ್ಧಾತ್ಮ (ಬ್ರಹ್ಮ)ವು ತಂದೆಯಿಂದ ನೇರವಾಗಿ ಮೂರನೆಯ ತತ್ವಕ್ಕೆ ಇಳಿಯಿತೋ ಅಥವ (ವಿಷ್ಣು) ಕ್ರೈಸ್ತನ ಮೂಲಕ ಹಾದು ಬಂದಿತೋ ? ಎಂಬುದು–ಅದು ನೇರವಾಗಿ ಕೆಳಕ್ಕಿಳಿದು ಬಂದಿತೆಂದು ಒಂದು ಪಂಥದವರು—ಇಲ್ಲ, 'ಮಗ'ನಿಂದ ಕ್ರೈಸ್ತನ ಮೂಲಕ ಹಾದು ಬಂದು ಕೆಳಕ್ಕೆ ಇಳಿಯಿತೆಂದು ಮತ್ತೊಂದು ಪಂಥವರು—ಹಿಂದಿನ ಕಾಲದಲ್ಲಿ ವಾದ–ವಿವಾದಗಳಲ್ಲಿ ತೊಡಗಿದ್ದರು. ಇದು ನಮಗೆ ಎಟುಕದ ಪ್ರಶ್ನೆ—ನಮಗೆ ಸಂಬಂಧಪಟ್ಟದು ಅಲ್ಲ. ಇದಕ್ಕೆ ಏಕೆ ನಮ್ಮ ತಲೆ ಕೆಡಿಸಿಕೊಳ್ಳಬೇಕು ? ಆದರೆ ಅಂಥ ಶ್ರದ್ಧೆಯುಳ್ಳ ಮತಾನುಯಾಯಿಗಳು ಇಂತಹ ವಾಸ್ತವವಾಗಿಯೂ ಉಪಯೋಗವಿಲ್ಲದ ಸಮಸ್ಯೆಗಳನ್ನು ಬಿಡಿಸುವುದರಲ್ಲೇ ಹೆಚ್ಚು ಆಸಕ್ತಿ ವಹಿಸುತ್ತಾರೆ. ಮಾಡತಕ್ಕದ್ದೇನು ? ನಮ್ಮ 3ನೆಯ ಚಿತ್ರವು ಈ ಯೆರಡು ವಾದಗಳೂ ಸ್ವಲ್ಪ ಮಟ್ಟಿಗೆ ಸರಿಯೆಂಬ ಬಗ್ಗೆ ಸಮಾಧಾನ ಕೊಡುತ್ತದೆ. ಮೂರನೆಯ ಮೂರ್ತಿಯು ಎರಡನೆಯ ತತ್ವವನ್ನು ಹಾದು ಬಾರದೆ ಇರುವುದಕ್ಕೆ ಸಾಧ್ಯವೇ ಇಲ್ಲ. ಅಲ್ಲದೆ ನಮ್ಮ ಚಿತ್ರದಲ್ಲಿ ಮೂರನೆಯ ಮೂರ್ತಿಯನ್ನು ಪ್ರತಿನಿಧಿಸುವ ವೃತ್ತವು ನೇರವಾಗಿ ಕೆಳಕ್ಕಿಳಿದು ಮೂರನೆಯ ತತ್ವದಲ್ಲಿ ಅಭಿವ್ಯಕ್ತವಾಗಿರುವಂತೆ ಚಿತ್ರಿಸಿದೆ. (ನಮ್ಮ ಹಿಂದೂ ಸಂಸ್ಕೃತಿಯಲ್ಲೂ ಕೂಡ ಈ ವಿಧವಾದ ವಾದವಿವಾದಗಳಿವೆ. ಈಚೆಗೆ ಪುರಾಣದಲ್ಲಿ ಬ್ರಹ್ಮನು ವಿಷ್ಣುವಿನ ನಾಭಿಕಮಲದಿಂದ ಹೊರಹೊಮ್ಮಿರುತ್ತಾನೆಂಬ ಪ್ರತೀತಿಯಿದೆ—ಇಂತಹ ಪ್ರಶ್ನೆಗಳು ನಮ್ಮ ದಿನಚರಿಜೀವಿತದ ಮೇಲೆ ಯಾವ ಬೆಳಕೂಚೆಲ್ಲಲಾರವು, ಆದುದರಿಂದ ಯೋಗಿ ಲೆಡ್ಬೀಟರ್‌ರವರು ಹೇಳುವಂತೆ ಈ ವಿಷಯವಾಗಿ ನಮ್ಮ ತಲೆ ಕೆಡಿಸಿಕೊಳ್ಳಬೇಕಾದ ಅಗತ್ಯವಿಲ್ಲ—T.V.R.)

ಕ್ರೈಸ್ತ ಸಂಪ್ರದಾಯದ ಪ್ರಕಾರ ಮಾನವನು ದೇವನ ಪ್ರತಿ ಬಿಂಬವೆಂಬ ಪ್ರಸ್ತಾಪ ಬರುತ್ತದೆ. (ಹಾಗೆಯೇ ಹಿಂದೂ ಸಂಸ್ಕೃತಿಯಲ್ಲೂ ಕೂಡ ಮಮೈವಾಂಶೋ ಜೀವಲೋಕೇ ಜೀವಭೂತಸ್ಸನಾತನಃ–ಸಮಸ್ತ ಜೀವರಾಶಿಗಳೂ ನನ್ನ ಅಂಶೀಭೂತರಾಗಿರುತ್ತಾರೆಂದು ಶ್ರೀ ಕೃಷ್ಣನು ೭ನೆಯ ಶ್ಲೋ॥ ೧೫ನೆಯ ಅ॥ ಭಗವದ್ಗೀತೆಯಲ್ಲಿ ಹೇಳಿರುತ್ತಾನೆ. ಅಲ್ಲದೆ ಅಹಂಬ್ರಹ್ಮಾಸ್ಮಿ, ತತ್ವಮಸಿ,

ಎಂಬ ಉಪನಿಷತ್ತಿನ ಮಹಾವಾಕ್ಯಗಳೂ ಇವೆ—T.V.R.) ಈ ಸಾಮರಸ್ಯ ತತ್ತ್ವವು ಎಷ್ಟು ಅದ್ಭುತವಾದ ರೀತಿಯಲ್ಲಿ ಸಮಂಜಸವಾಗಿದೆ ನೋಡಿರಿ, ಈ ಹೋಲಿಕೆಯು ಮಾನವನ ಸ್ಥೂಲದೇಹದ ರೂಪಕ್ಕೆ ಸರ್ವಥಾ ಸಂಬಂಧಪಟ್ಟದಲ್ಲ. ಮಾನವನ ಅಂತರಾತ್ಮವು ಭಗವಂತನಂತೆಯೇ ತ್ರಿಪುಟಿಯಾಗಿದೆ—ಆತ್ಮ, ಬುದ್ಧಿ, ಮನಸ್ಸು, ಮೊದಲನೆಯ ಎರಡನೆಯ ಮತ್ತು ಮೂರನೆಯ ತತ್ತ್ವಗಳಲ್ಲಿ ಕ್ರಮವಾಗಿ ತ್ರಿಮೂರ್ತಿಗಳು ಆವಿರ್ಭಸಿರುವಂತೆಯೇ ಮಾನವನ ಆತ್ಮ, ಬುದ್ಧಿ ಮತ್ತು ಮನಸ್ಸು, ಆಕಾಶ ತತ್ತ್ವದ ಕೆಳಗಿನ ಭಾಗಗಳಲ್ಲಿ ಮೂರು ಕಾಣಿಸಿಕೊಂಡು ಅವುಗಳಲ್ಲಿ ಮೊದಲನೆಯದಾದ ಆತ್ಮವು ಆ ಮಟ್ಟಕ್ಕಿಂತ ಕೆಳಕ್ಕೆ ಇಳಿಯುವುದಿಲ್ಲ ಎರಡನೆಯದಾದ ಬುದ್ಧಿಯು ಒಂದು ದರ್ಜೆ ಕೆಳಕ್ಕಿಳಿದು ವಾಯು ತತ್ತ್ವದಲ್ಲಿ ಅಭಿವ್ಯಕ್ತವಾಗುತ್ತದೆ. ಮನಸ್ತತ್ವವು 2 ಹಂತಗಳು ಕೆಳಕ್ಕಿಳಿದು ತೇಜಸ್ತತ್ವದ ಮೇಲ್ಭಾಗದಲ್ಲಿ ಅಭಿವ್ಯಕ್ತವಾಗುತ್ತದೆ. ಹೀಗೆ ಭಗವಂತನ ಅಭಿವ್ಯಕ್ತತೆಯಲ್ಲೂ, ಮಾನವನ ಅಂತರಾತ್ಮದ ಅಭಿವ್ಯಕ್ತತೆಯಲ್ಲೂ ಹೋಲಿಕೆಯಿದೆ. ಎರಡು ಸಂದರ್ಭಗಳಲ್ಲೂ ಮೂರು ರೂಪಗಳಲ್ಲಿ ಅಭಿವ್ಯಕ್ತತೆಯಿದ್ದಾಗ್ಯೂ ಮೂರು ರೂಪಗಳ ಹಿಂದಿರುವ ಸಮಾನ ಚೈತನ್ಯವು ಒಂದೇ ಆಗಿರುತ್ತದೆ.

ಸಧ್ಯದಲ್ಲಿ ಅಭಿವ್ಯಕ್ತವಾದ ತ್ರಿಮೂರ್ತಿಗಳು ಹೇಗೆ ಮಾನವನ ತ್ರಿಸ್ವಭಾವಗಳನ್ನು ಬೆಳೆಸುವುದರಲ್ಲಿ ಪ್ರತಿಯೊಂದಕ್ಕೂ ಒಂದು ವಿಶೇಷ ಕರ್ತವ್ಯವಿರುತ್ತದೆ—ಎಂಬ ತತ್ತ್ವವನ್ನು ನಾವು ಗಮನಿಸಬೇಕಾಗಿದೆ. ಮಾನವನ ಸಂಸರಣದಲ್ಲಿ ಮೇಲ್ಕಂಡ ತ್ರಿಮೂರ್ತಿಗಳ ಚೈತನ್ಯವು ಹೇಗೆ ಪಾಲ್ಗೊಳ್ಳುತ್ತದೆ, ಎಂಬಂಶವನ್ನು ಈ ಪುಸ್ತಕದಲ್ಲಿ ಕೊಟ್ಟಿರುವ 3ನೆಯ ಚಿತ್ರದಲ್ಲಿ ಕಾಣಬಹುದು, ಅಡ್ಡಗೆರೆಗಳು ತತ್ವಗಳನ್ನು ನಿರ್ದೇಶಿಸುತ್ತವೆ ಅವುಗಳ ಮೇಲೆ ಇರುವ ತ್ರಿವೃತ್ತಗಳು ತ್ರಿಮೂರ್ತಿಗಳನ್ನು ಪ್ರತಿನಿಧಿಸುತ್ತವೆ. ಈ ವೃತ್ತಗಳಲ್ಲಿ ಅತ್ಯಂತ ಮೇಲ್ಮಟ್ಟದ್ದು ಮೊದಲನೆಯ ಮೂರ್ತಿಯನ್ನೂ (ಅದರಲ್ಲೂ ಆ ಚುಕ್ಕೆ ಅಥವ ಬಿಂದು ಮಾತ್ರ ಏಕೆಂದರೆ ಅದು ಪ್ರಪ್ರಥಮ ಅಭಿವ್ಯಕ್ತರಾದುದರ ಸಂಕೇತ) ಎರಡನೆಯದು (ಮಧ್ಯೆ ರೇಖೆಯಿಂದ ವಿಭಾಗವಾದುದು-ಪ್ರಕೃತಿ-ಪುರುಷರ ಸ್ಪಷ್ಟವಾದ ವಿಂಗಡನೆಯನ್ನು ಸೂಚಿಸುತ್ತದೆ) ಎರಡನೆಯ ಮೂರ್ತಿಯನ್ನೂ ಮೂರನೆಯ ವೃತ್ತದಲ್ಲಿ ಶಿಲುಬೆಯ ಚಿಹ್ನೆಯಿರುತ್ತದೆ. ಇದು ಮೂರನೆಯ ಮೂರ್ತಿಯನ್ನೂ ಪ್ರತಿನಿಧಿಸುತ್ತದೆ.

ಅಧ್ಯಾಯ ೬


ಪ್ರಪ್ರಥಮ ಸೃಷ್ಟಿ ತರಂಗಗಳು

ಮೂರನೆಯ ಮೂರ್ತಿಯಿಂದ ಹೊರಡುವ ಚೈತನ್ಯ ತರಂಗದಿಂದ ಬ್ರಹ್ಮಾಂಡ ಕ್ಷೇತ್ರಗಳ ರಚನೆಯು ಪ್ರಾರಂಭವಾಗುತ್ತದೆ. ಈ ಚೈತನ್ಯ ಧಾರೆಯು ಹೊರಹೊಮ್ಮು ವುದಕ್ಕೆ ಮುಂಚೆ ಏಳು ತತ್ವಗಳ ಪರಮಾಣು ಸ್ಥಿತಿಗಳು ಮಾತ್ರ ಇದ್ದುವು. ಉಪತತ್ವ ಗಳ ಪ್ರಭೇದಗಳು ಇರಲಿಲ್ಲ. ಜೀವಕಳೆಯನ್ನು ತುಂಬುವ ಪರಿಶುದ್ಧಾತ್ಮ (ಬ್ರಹ್ಮ)ನಿಂದ ಈ ಶುದ್ಧ ಸತ್ವ ಪ್ರಕೃತಿಯೊಳಕ್ಕೆ ಅತನ ಚೈತನ್ಯ ತರಂಗವು ಪ್ರವೇಶಿಸುತ್ತದೆ. ಈ ತರಂಗದ ಪ್ರಭಾವದಿಂದ ಪರಮಾಣುಗಳಿಗೆ, ರಾಗ ದ್ವೇಷ (ಆಕರ್ಷಿತವಾಗುವಿಕೆ-ದೂರ ಸರಿಯುವಿಕೆ) ರೂಪದಾದ ವಿಶೇಷ ಗುಣಗಳುಂಟಾಗಿ ಪ್ರತಿಯೊಂದು ತತ್ವದಲ್ಲೂ ಏಳೇಳು ಉಪತತ್ವಗಳು ರೂಪಗೊಂಡವು. 3ನೆಯ ಚಿತ್ರದಲ್ಲಿ ಶಿಲುಬೆ ಚಿಹ್ನೆ ಯುಳ್ಳ ವೃತ್ತವು ಮೂರನೆಯ ಮೂರ್ತಿಯನ್ನು ಪ್ರತಿನಿಧಿಸುತ್ತದೆ. ಅದರಿಂದ ಹೊರಹೊಮ್ಮುವ ಗೆರೆಯು ಪ್ರಥಮ ಸೃಷ್ಟಿ ತರಂಗವನ್ನು ಸೂಚಿಸುತ್ತದೆ. ದೈವಿಕ ಚೈತನ್ಯ ಧಾರೆಯು ಕೆಳಕ್ಕೆ ಇಳಿಯುತ್ತಾ ಎಂದರೆ ಪ್ರಕೃತಿಯೊಳಕ್ಕೆ ದೂರಿಕೊಂಡು ಬಂದಂತೆಲ್ಲ ಹೆಚ್ಚು-ಹೆಚ್ಚು ಕಪ್ಪಾಗಿ ಪರಿಣಮಿಸುತ್ತದೆ, ಎಂದರೆ ದೈವಿಕ ಚೈತನ್ಯವು ಪ್ರಕೃತಿಯ ಆವರಣದಿಂದ ಮುಚಿ ಹೋಗಿ ಅದರ ಸ್ವರೂಪವೇ ಮರೆಯಾಗಿ ಕಾಣ ದಂತೆ ಆಗುತ್ತದೆ.

ಹೀಗಿದ್ದಾಗ್ಗೂ ಚೇತನಾತ್ಮಕವಾದ ಶಕ್ತಿಯು ಕೇವಲ ಘನೀಭೂತವಾದ (ಕಲ್ಲು ಚಪ್ಪಡಿ) ವಸ್ತುಗಳಲ್ಲೂ ಕೂಡ ಇದ್ದೇ ಇರುತ್ತದೆ. ಈಚೆಗೆ ನೇಪಲ್ಸ್ ಎಂಬ ಪಟ್ಟಣದಲ್ಲಿ ಪ್ರೊಫೆಸ್ಸರ್ ಪ್ಲಾನ್ ಎಂಬುವವರು ನಡೆಸಿದ ಪ್ರಯೋಗಗಳ ಫಲಿತಾಂಶವಾಗಿ ಖನಿಜ ವಸ್ತುಗಳಲ್ಲೂ ಸಹ ಚೈತನ್ಯವಿದೆಯೆಂಬ ತತ್ವವು ರುಜು ವಾತಾಗಿ ಬಿಟ್ಟಿದೆ.

ಮೊದಲನೆಯ ತರಂಗದಿಂದ ಚೇತನಗೊಂಡಂತಹ ಪ್ರಕೃತಿಯೊಳಕ್ಕೆ ಎರಡನೆಯ ಮೂರ್ತಿಯಿಂದ ಎರಡನೆಯ ಚೈತನ್ಯ ತರಂಗವು ಧುಮುಕುತ್ತದೆ. ಆಗ ರೂಪಗಳು ಉತ್ಪತ್ತಿಯಾಗುತ್ತವೆ, ರೂಪಗಳು ರಚನೆಯಾಗಬೇಕಾದರೆ, ಮೊದಲಿದ್ದ ಶುದ್ಧ ಸತ್ವರೂಪವಾದ ಪ್ರಕೃತಿಯ ಸಹಾಯವೂ ಅದನ್ನು ಚೇತನ ಗೊಳಿಸಿದ ಮೂರನೆಯ ಮೂರ್ತಿಯಿಂದ ಹೊರ ಹೊಮ್ಮಿದ ಮೊದಲನೆಯ ಚೈತನ್ಯ ಧಾರೆಯ ಸಹಾಯವೂ—ಎರಡೂ ಆವಶ್ಯಕ.

ಚಿತ್ರ 3 ಮೂರು ಸೃಷ್ಟಿತರಂಗಗಳು



ವಿ. ಸೂ : ('ಸ್ಥೂಲ' ಎಂಬುದನ್ನು 'ಕಾಮ' ಎಂಬ ಸ್ಥಳದಲ್ಲೂ - 'ಕಾಮ' ಶಬ್ದವನ್ನು ಅದಕ್ಕಿಂತ ಒಂದು ಅಂತಸ್ತು ಮೇಲಿರುವಂತೆಯೂ ಓದಿಕೊಳ್ಳಬೇಕು.)

ಬಹುನಿಧಾನವಾಗಿಯೂ ಕ್ರಮ-ಕ್ರಮವಾಗಿಯೂ ಈ ಯೆರಡನೆಯ ಚೈತನ್ಯ ತರಂಗವು ಮೇಲಿನ ವೈಕುಂಠ ತತ್ವದಿಂದ ಇಳಿದುಕೊಂಡು ಬರುತ್ತದೆ. ಹಾಗೆ ಇಳಿದು ಬರುವುದರಲ್ಲಿ ಪ್ರತಿಯೊಂದು ಲೋಕದಲ್ಲೂ ಒಂದೊಂದು ಕಲ್ಪಕಾಲ— ಎಂದರೆ 432 ಕೋಟಿ ವರ್ಷಗಳ ಕಾಲ ತಂಗಿ ಇಳಿಯುತ್ತದೆ. ಈ ಚೈತನ್ಯದ ಧಾರೆಯನ್ನು ಎರಡನೆಯ ವ್ಯತ್ತ (ಮಧ್ಯೆ ಗೆರೆಯಿಂದ ವಿಭಾಗವಾದ)ದಿಂದ ಇಳಿದು ಬರುವ ಗೆರೆಯು ಪ್ರತಿನಿಧಿಸುತ್ತದೆ. ಈ ಗೆರೆಯು ಎಡಭಾಗದಲ್ಲಿ ಕೆಳಕ್ಕೆ ಇಳಿಯುತ್ತಾ ಬಂದಂತೆಲ್ಲ ಕಪ್ಪಾಗುತ್ತ ಬರುತ್ತದೆ. ಚೈತನ್ಯವು ಮರೆಯಾಗಿ ಪ್ರಕೃತಿ ಹೊದಿಕೆಯ ಪ್ರಭಾವವು ಹೆಚ್ಚುವಿಕೆಯನ್ನು ಆ ಕಪ್ಪು ಸೂಚಿಸುತ್ತದೆ. ಆಧಾರೆಯು ಕೇವಲ ಕೆಳಕ್ಕೆ (ಎಂದರೆ ಖನಿಜ ರೂಪಕ್ಕೆ) ಇಳಿದ ಮೇಲೆ ಊರ್ಧ್ವ ಮುಖವಾಗಿ (ಸಸ್ಯ, ಪ್ರಾಣಿ, ರೂಪಗಳ ಮೂಲಕ) ಹತ್ತುತ್ತಾ ಹೋಗಿ-ಅರೂಪಲೋಕದ ಮಟ್ಟದಲ್ಲಿ ಮೊದಲಿನ ವೃತ್ತದಿಂದ ಹೊರ ಹೊಮ್ಮಿದ ಮೂರನೆಯ ಚೈತನ್ಯ ಧಾರೆಯನ್ನು ಸಂಧಿಸಿ ಮಾನವ ರೂಪವನ್ನು ಧರಿಸುತ್ತದೆ. ಈ ಸಂಧಿಸುವಿಕೆಯನ್ನು ಕುರಿತು ಮುಂದೆ ಸವಿಸ್ತಾರವಾಗಿ ಪ್ರಸ್ತಾಪ ಮಾಡಲಾಗುತ್ತದೆ. ಸಧ್ಯಕ್ಕೆ ಅಧೋಮುಖ ವಾಗಿ ಇಳಿಯುತ್ತಿರುವ ಎರಡನೆಯ ಚೈತನ್ಯ ಧಾರೆಗೆ ಗಮನ ಕೊಡೋಣ. ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ ನಾಲ್ಕನೆಯ ಚಿತ್ರವನ್ನು ಗಮನಿಸೋಣ. ಈ ಚಿತ್ರವು ಬೇರೆಯಾಗಿ ತೋರಿದರೂ ಮೂರನೆಯ ಚಿತ್ರದಲ್ಲಿ ಉದಾಹರಿಸಲ್ಪಟ್ಟ ವಿಷಯವನ್ನೆ ಬೇರೆ ರೀತಿಯಲ್ಲಿ ವಿವರಿಸುತ್ತದೆ. ಕೆಳಕ್ಕೆ ಇಳಿಯುತ್ತಿರುವ ಎರಡನೆಯ ಚೈತನ್ಯ ತರಂಗವು, ಅರೂಪಲೋಕದಲ್ಲಿ ಮೊದಲನೆಯ ಭೂತವರ್ಗವಾಗಿಯೂ, ರೂಪಲೋಕದಲ್ಲಿ 2ನೆಯ ಭೂತವರ್ಗವಾಗಿಯೂ, ಕಾಮಲೋಕದಲ್ಲಿ 3ನೆಯ ಭೂತವರ್ಗವಾಗಿಯೂ ಪರಿಣಾಮಗೊಂಡು ಕ್ರಮೇಣ (೧) ಖನಿಜ (೨) ಸಸ್ಯ (೩) ಪಶು (೪) ಮಾನವ ಮತ್ತು (೫) ಅಧ್ಯಾತ್ಮ ಭಾವನೆಯೇ ಪ್ರಧಾನವಾಗಿವುಳ್ಳ ಮಾನವಾತೀತ ದರ್ಜೆಯನ್ನು ಪ್ರತಿನಿಧಿಸುವ ಮೇಲಿನ ಮಟ್ಟಗಳಿಗೆ ಹತ್ತುತ್ತದೆ.

ಎರಡನೆಯ ಚೈತನ್ಯ ತರಂಗವು ಕೆಳಕ್ಕೆ ಇಳಿಯುವ ಅವತರಣ ಮಾರ್ಗದಲ್ಲಿ ಭಿನ್ನ-ಭಿನ್ನ ಹಂತಗಳಲ್ಲಿ ಭಿನ್ನ-ಭಿನ್ನ ಹೆಸರುಗಳಿಂದ ಕರೆಯಲ್ಪಡುತ್ತದೆ. ಅದು ಪ್ರತಿಯೊಂದು ತತ್ವದ ಪರಮಾಣು ದರ್ಜೆಯ ಪ್ರಕೃತಿಯ ಹೊದಿಕೆಯನ್ನು ಪಡೆದಾಗ ಅದಕ್ಕೆ ಆತ್ಮ ಸತ್ವವೆಂದು (Mondic Essenee) ಅರೂಪಲೋಕದ ಕೆಳಗಿನ ಎರಡು ಉಪತತ್ವಗಳ ಪ್ರಕೃತಿಯ ಹೊದಿಕೆಯನ್ನು ಪಡೆದಾಗ ಒಂದನೆಯ ಭೂತವರ್ಗವೆಂದೂ ಹೆಸರು ಬಂದಿದೆ. ಒಂದನೆಯ ಭೂತವರ್ಗವಾಗಿ ಒಂದು ಕಲ್ಪಕಾಲ ಸಂಸರಣ ಹೊಂದಿದ ನಂತರ ಅದು ರೂಪಲೋಕಕ್ಕೆ ಇಳಿದು ಅಲ್ಲಿ ಎರಡನೆಯ ಭೂತವರ್ಗಕ್ಕೆ ಆತ್ಮದಂತೆ ಇದ್ದು ಒಂದು ಕಲ್ಪಕಾಲ ಸಂಸರಣ ಪಡೆಯುತ್ತದೆ. ಅನಂತರ ಕಾಮಲೋಕಕ್ಕೆ ಇಳಿದು ಮೂರನೆಯ ಭೂತವರ್ಗವನ್ನು ಚೇತನಗೊಳಿಸಿ, ಮತ್ತೆ ಒಂದು ಕಲ್ಪಕಾಲ

ಸಂಸರಣ ಹೊಂದುತ್ತದೆ. ಈ ಕೆಳಗಿನ ಯೆರಡು ಅಂತಸ್ತುಗಳಲ್ಲೂ ಭೂತಸತ್ವವು ಮಾನವರ ರೂಪದೇಹಮತ್ತು ಕಾಮದೇಹಗಳ ಸಂಪರ್ಕವನ್ನು ಹೊಂದಿ ಅವರ ಯೋಜನೆ ಮತ್ತು ರಸಭಾವಗಳ ಮೇಲೆ ತುಂಬ ಪರಿಣಾಮಕಾರಿಯಾಗಿ ಪ್ರಭಾವವನ್ನು ಬೀರುತ್ತವೆ. ಎರಡನೆಯ ಭೂತ ಸತ್ವವು ರೂಪದೇಹದ ಯೋಚನೆಗಳನ್ನೂ ಮೂರನೆಯ ಭೂತಸತ್ವವು ಕಾಮದೇಹದ ರಸಭಾವನೆಗಳನ್ನೂ ಪ್ರಚೋದನೆ ಮಾಡಿ ತಮ್ಮ ಅಧೋಮುಖವಾದ ಸಂಸರಣಕ್ಕೆ ಸಹಾಯ ಮಾಡುವಂತಹ ಕಾಮಕ್ರೋಧಾದಿ ಅರಿಷಡ್ವರ್ಗಗಳಿಗೆ ಒಳಗಾಗುವಂತೆ ಮನುಷ್ಯರನ್ನು ಪ್ರೇರೇಪಿಸುತ್ತದೆ. ಮನುಷ್ಯನು ಕಾಮಕ್ರೋಧಾದಿಗಳಿಗೆ ಒಳಗಾದಾಗ ಅವು ತನ್ನ ನೈಜವಾದ ಪ್ರವೃತ್ತಿಗಳೆಂದು ತಪ್ಪಾಗಿ ಭಾವಿಸುತ್ತಾನೆ, ವಾಸ್ತವವಾಗಿಯೂ ಹಾಗಲ್ಲ. (ಭಗವದ್ಗೀತೆ (ಶ್ಲೋ॥ 36-37 ಅ॥ 3) ಅಥಕೇನ ಪ್ರಯುಕ್ತೋಯಂ ಪಾಪಂ ಚರತಿ ಪೂರುಷಃ। ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ॥ ಮನುಷ್ಯನಿಗೆ ಪಾಪಕಾರ್ಯ ಮಾಡಬೇಕೆಂಬ ಇಚ್ಛೆಯು ಸಹಜವಾಗಿ ಇಲ್ಲದಿದ್ದರೂ ಯಾವುದೋ ಒಂದು ಮನುಷ್ಯನನ್ನು ಪಾಪಕಾರ್ಯ ಮಾಡುವಂತೆ ಪ್ರೇರೇಪಿಸುತ್ತದೆಯಲ್ಲ? ಅದು ಯಾವುದು ಸ್ವಾಮಿ? ಎಂದು ಅರ್ಜುನನು ಕೇಳಿದ ಪ್ರಶ್ನೆಗೆ ಶ್ರೀ ಕೃಷ್ಣನು ಮುಂದಿನ ಶ್ಲೋಕದಲ್ಲಿ ಹೀಗೆ ಉತ್ತರ ಹೇಳುತ್ತಾನೆ. "ಕಾಮ ಏಷಕ್ರೋಧ ಏಷ-ರಜೋಗುಣ ಸಮುಧ್ಭವಃ। ಮಹಾಶನಾ ಮಹಾಪಾಪ್ಮಾ ವಿಧ್ಯೇನಮಿಹ ವೈರಿಣಂ॥ ಕಾಮ ಒಂದು ಕ್ರೋಧ, ಒಂದು-ಇವೆರಡೂ ರಜೋಗುಣದಿಂದ ಹುಟ್ಟಿದುವು--ಇವುಗಳಿಗೆ ತೃಪ್ತಿ ಪಡಿಸಲು ಸಾಧ್ಯವಿಲ್ಲದಷ್ಟು ದೊಡ್ಡ ಹೊಟ್ಟೆಗಳಿವೆ—ಎಂತಹ ಘೋರವಾದ ಪಾಪ ಕರ್ಮಗಳನ್ನಾದರೂ ಮಾಡಿಸುತ್ತವೆ-ಇವುಗಳನ್ನು ಸಾಧಕನು ಶತ್ರುಗಳೆಂದು ತಿಳಿಯಬೇಕು" ಇದು ಬರೀ ಅಲಂಕಾರ ಭಾಷೆಯಲ್ಲ—ಅಹಂಕಾರವನ್ನು ಪೋಷಿಸುವ 2ನೆಯ ಭೂತ ಸತ್ವವೂ, ಕಾಮಕ್ರೋಧಾದಿಗಳನ್ನು ಪ್ರಚೋದನೆ ಮಾಡುವ 3ನೆಯ (ಕಾಮ) ಭೂತ ಸತ್ವವೂ ನಮ್ಮೊಳಗೆ ಸೇರಿಕೊಂಡು ಅವುಗಳಿಗೆ ಕೆಳಕ್ಕೆ ಇಳಿಯುವ ಮಾರ್ಗದಲ್ಲಿ ಉತ್ತೇಜನವನ್ನು ಕೊಡುವ ಮೇಲ್ಕಂಡ ಉದ್ವೇಗಗಳಿಗೆ ನಮ್ಮನ್ನು ಸಿಕ್ಕಿಸುತ್ತವೆ-ಪ್ರಕೃತಿಯಲ್ಲಿ ಯಾವ ಶಕ್ತಿಯೂ ಪೋಲಾಗುವುದಿಲ್ಲ—ಮನುಷ್ಯನು ಪ್ರವೃತ್ತಿ ಮಾರ್ಗದ ಹಂತದಲ್ಲಿ ಅನುಭವಕ್ಕಾಗಿ ಕಾಮ ಕ್ರೋಧಗಳಿಗೆ ಒಳಗಾಗುವುದು ಸಹಜವಾಗಿಯೇ ಇದೆ- ಆಗ ಅಂತಹ ವಾಮಶಕ್ತಿಗಳು ಪೋಲಾಗದಂತೆ 2ನೆಯ ಮತ್ತು 3ನೆಯ ಭೂತ ವರ್ಗಗಳ ಸಂಸರಣಕ್ಕೆ ಅನುಕೂಲವಾಗುವಂತೆ ಏರ್ಪಡಿಸಿರುವ ಪ್ರಕೃತಿ ನಿಯಮವಿದು—T.V.R.)

ಆತ್ಮ ಸತ್ವವು (Monadic Essence) ಮೂರನೆಯ ಭೂತವರ್ಗದಿಂದ ಕೆಳಕ್ಕಿಳಿದು ಖನಿಜ ರೂಪದ ವಸ್ತುಗಳಿಗೆ ಆತ್ಮವಾಗಿ ಸಂಸರಣ ಹೊಂದುತ್ತದೆ. ಅನಂತರ ಅದರ ಸಂಸರಣವು ಊರ್ಧ್ವಮುಖವಾಗಿ ಮುಂದುವರಿಯುತ್ತದೆ. ಈ

ದೈವಿಕ ಚೈತನ್ಯ ಧಾರೆಯು ಅರೂಪಲೋಕದಲ್ಲಿ ಮೊದಲನೆಯ ಭೂತ ವರ್ಗವನ್ನು ಚೇತನಗೊಳಿಸಿದಾಗಲೇ ಅನೇಕ ಧಾರೆಗಳಾಗಿ ವಿಭಾಗವಾಗಿತ್ತು. ಇದು ಕೆಳಕ್ಕಿಳಿದಂತೆಯೆಲ್ಲ ಒಡೆದು ಪ್ರತ್ಯೇಕವಾಗುವ ಸ್ವಭಾವವುಳ್ಳದು. ಒಂದು ಪ್ರವಾಹ ಅನೇಕ ಧಾರೆಗಳಾಗಿ ಒಡೆದು ವಿಭಾಗವಾಗುತ್ತದೆ. ಇದರ ಸಂಸರಣವನ್ನು ಹಿಂದಕ್ಕೆ ಎಂದರೆ ಹಿಂದಿನ ಹಂತಗಳನ್ನು ಗಮನಿಸುತ್ತಾ ಹೋದರೆ– ಆ ಪ್ರವಾಹವು ಹೊರ ಹೊಮ್ಮುವ ಮೂಲಕ್ಕೆ ತಲುಪಿದಾಗ ಬಹುಶಃ ಈ ಬೇರೆ-ಬೇರೆ ಧಾರೆಗಳೆಲ್ಲವೂ ಸಮರಸವಾದ ಒಂದು ಪ್ರವಾಹದಂತೆ ಕಾಣಬಹುದೋ-ಏನೋ, ಆದರೆ ಯಾವ ಪರಿಶೋಧಕನೂ ಅಂತಹ ಮೂಲವನ್ನು ನೋಡಿಲ್ಲ. ಆದರೆ ಈ ದೈವಿಕ ಚೈತನ್ಯದ ಪ್ರವಾಹವು ಒಡೆದು ವಿಭಾಗವಾಗುತ್ತಾ ಬಂದು ಕೊನೆಗೆ (ಮಾನವ ದರ್ಜೆಯಲ್ಲಿ) ಒಬ್ಬೊಬ್ಬ ವ್ಯಕ್ತಿಯ ಆತ್ಮವಾಗಿ ಬಿಡುತ್ತದೆ. ಈ ಕೊನೆಯ ಹಂತಕ್ಕೂ ಅದು ಪ್ರಾರಂಭದಲ್ಲಿರುವ ಸ್ಥಿತಿಗೂ ಅನೇಕ ಮಧ್ಯಂತರ ಸ್ಥಿತಿಗಳಿರುತ್ತವೆ. ಇದುವರೆಗೆ ನಾವು ಉದ್ದೇಶ ಪೂರ್ವಕವಾಗಿ ಬರೆದು ತಿಳಿಸಬೇಕೆಂಬುದು ಈಯೆಲ್ಲ ಭೂತ ವರ್ಗಗಳನ್ನು ಚೇತನಗೊಳಿಸತಕ್ಕಂತಹ ಚೈತನ್ಯದ ಸಂಸರಣವನ್ನೇ ವಿನಾ ಬಾಹ್ಯ ಹೊದಿಕೆಯುದಲ್ಲವೆಂಬಂಶವನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು. ಈ ಚೈತನ್ಯ ಪ್ರವಾಹವು ಘನೀಭೂತವಾದ ಸ್ಥೂಲ ಹೊದಿಕೆ (ಖನಿಜಾವಸ್ಥೆ)ಗಳನ್ನು ಪಡೆದಾಗ ಕೆಲವು ಗುಣ ವಿಶೇಷಗಳನ್ನು ಪಡೆಯುತ್ತದೆ–(ಇವುಗಳಲ್ಲಿ ಒಂದು ತನ್ನ ರೂಪವನ್ನು ಬದಲಾಯಿಸದಂತೆ ಕಾಪಾಡಿಕೊಳ್ಳುವ ಗುಣ—ಎಂಬುದಾಗಿ ಡಾ|| ಬೆಸಂಟರು ಬೇರೆ ಕಡೆ ಬರೆದಿರುತ್ತಾರೆ– T.V.R.) ಈ ಚೈತನ್ಯ ಪ್ರವಾಹವು ಸಸ್ಯ ವರ್ಗಕ್ಕೆ ಬಂದಾಗ ಒಂದೊಂದು ಗಿಡಕ್ಕೆ ಒಂದೊಂದು ಆತ್ಮದಂತೆ (Monad) ಇರುವುದಿಲ್ಲ. ಒಂದೇ ಜಾತಿಯ ಗಿಡಗಳಿಗೆಲ್ಲ ಒಂದು ಆತ್ಮದಂತೆ ಚೇತನ ಗೊಳಿಸುತ್ತಿರುತ್ತದೆ. ಸಸ್ಯವರ್ಗದಲ್ಲಿ ಭಾಗಾಂವುದು ಪುನಃ ಮೊದಲಿನ ಸ್ಥಿತಿಗೆ ಲೋಪ ಬರದಂತೆ ಹಿಂತಿರುಗುವುದು-ಈ ಹೊಂದಾಣಿಕೆ ಗುಣವನ್ನು ಆತ್ಮನು ಕಲಿಯುತ್ತಾನೆ. ಖನಿಜಾವಸ್ಥೆಯಲ್ಲಿ ಈ ಗುಣವಿರುವುದಿಲ್ಲ. ಅದು ಪೆಡಸಾಗಿಮುರಿಯುತ್ತದೆಯೇ ವಿನಾ ಬಾಗಲಾರದು-T.V.R.) ಸುಸರಣವಲ್ಲಿ ಮುಂದುವರಿದು ಇದು ಪ್ರಾಣಿ ವರ್ಗಕ್ಕೆ ಹತ್ತಿದಾಗ–ಇದು ಚೇತನ ಗೊಳಿಸುವ ರೂಪಗಳು ಕಡಮೆಯಾಗುತ್ತಾ ಬರುತ್ತವೆ, ಬಹುಶಃ ಸೊಳ್ಳೆಗಳಂತಹ ಲಕ್ಷಾಂತರ ಜೀವಿಗಳಿಗೆ ಒಂದು ಆತ್ಮವಿರಬಹುದು — ಆದರೆ ಹಸು ಮೊದಲಾದ ಸಸ್ತನಿ (ಹಾಲು ಕೊಟ್ಟು ಬೆಳೆಸುವಂತ ಸಂತಾನವಿರುವ ಪಶುಗಳಲ್ಲಿ) ಗಳಿಗೆ ಕೆಲವೇ ಎಂದರೆ 10-15ಕ್ಕೆ ಒಂದು ಆತ್ಮದಂತೆ ಚೇತನ ಗೊಳಿಸಬಹುದು.

ಅಧ್ಯಾಯ ೭

ಪಶುಗಳ ರೂಪದಲ್ಲಿರುವ ಸಮೂಹಾತ್ಮಗಳು

ಸಮೂಹಾತ್ಮವೆಂದರೆ ಅನೇಕ ವಿದ್ಯಾರ್ಥಿಗಳಿಗೆ ಅರ್ಥ ಮಾಡಿಕೊಳ್ಳಲು ಕಷ್ಟವಾದ ಸಮಸ್ಯೆಯಂತೆ ಇರಬಹುದು. ಇದಕ್ಕೆ ಒಂದು ಉಪಮಾನ ಕೊಟ್ಟರೆ, ಇದರ ಸಂಸರಣವು ಸುಲಭವಾಗಿ ಅರ್ಥವಾಗಬಹುದು. ಸಮೂಹಾತ್ಮವೆಂದರೆ ಒಂದು ತೊಟ್ಟಿಯಲ್ಲಿರುವ ನೀರಿನಂತೆ-ಎಂದು ಊಹಿಸೋಣ. ಅದರಲ್ಲಿ ಒಂದು ಲೋಟಾ ನೀರನ್ನು ತುಂಬಿ ತೆಗೆದರೆ ಅದು ಆ ಸಮೂಹಾತ್ಮಕ್ಕೆ ಸಂಬಂಧಪಟ್ಟ ಒಂದಾನೊಂದು ಪಶುವನ್ನು ಪ್ರತಿನಿಧಿಸುತ್ತದೆ. ಅದಕ್ಕೆ ಯಾವುದಾದರೂ ಬಣ್ಣವನ್ನು ಹಾಕಿದರೆ ಆ ಬಣ್ಣವು ತನ್ನ ಜೀವಿತ ಕಾಲದಲ್ಲಿ ಆ ಪಶುವು ಪಡೆದ ಅನುಭವ ವಿಶೇಷವನ್ನು ಪ್ರತಿನಿಧಿಸುತ್ತದೆ ಅಲ್ಲದೆ ಆ ನೀರು ಆ ಲೋಟದ ರೂಪವನ್ನು ತಾಳುತ್ತದೆ.

ಪಶುವಿನ ಸಾವು– ಎಂದರೆ ಆ ಲೋಟದ ಬಣ್ಣದ ನೀರನ್ನು ಆ ತೊಟ್ಟಿಯೊಳಕ್ಕೆ ಹಿಂತಿರುಗಿ ಸುರಿದಂತೆ ಆಗುತ್ತದೆ. ಆಗ ಆ ಬಣ್ಣವು ಆ ನೀರಿಗೆಲ್ಲ ತೆಳುವಾಗಿ ವ್ಯಾಪಕವಾಗುತ್ತದೆ. ಹೀಗೆಯೇ ಪಶುವು ತನ್ನ ಜೀವಿತ ಕಾಲದಲ್ಲಿ ಪಡೆದ ಅನುಭವಗಳೆಲ್ಲವೂ ಆ ಸಮೂಹಾತ್ಮಕ್ಕೆ ಸೇರಿಕೊಂಡು ಬೆರೆತು ಹೋಗುತ್ತವೆ. ಅನಂತರ ಮತ್ತೊಂದು ಲೋಟ ನೀರನ್ನು ಆ ತೊಟ್ಟಿಯಿಂದ ತೆಗೆದುಕೊಂಡರೆ— ಅದುವರೆಗೆ ಮಿಶ್ರವಾಗಿರುವ ಬಣ್ಣಗಳ ನೀರು ಬರುತ್ತದೆಯೇ ವಿನಾ ಮೊದಲಿನ ಶುದ್ಧವಾದ ನೀರು ದೊರೆಯುವುದಿಲ್ಲ. ಹೀಗೆ ಆ ಸಮೂಹಾತ್ಮಕ್ಕೆ ಸಂಬಂಧಪಟ್ಟ ಪ್ರಾಣಿಗಳ ಅನುಭವಗಳೆಲ್ಲವೂ ಆ ಸಮೂಹಾತ್ಮದಲ್ಲಿ ಶೇಖರವಾಗುತ್ತ ಬರುತ್ತದೆ.

ಮೇಲೆ ಹೇಳಿದ್ದು ಉದಾಹರಣೆಗೆ ಮಾತ್ರ ಒಂದೇ ಕಾಲದಲ್ಲಿ ಒಂದು ಲೋಟ ಮಾತ್ರ ನೀರು ಹೊರಕ್ಕೆ ಬರುವುದಿಲ್ಲ. ಏಕೆಂದರೆ ಅನೇಕ ಪ್ರಾಣಿಗಳು ಏಕ ಕಾಲದಲ್ಲಿ ಆ ಸಮೂಹಾತ್ಮದಿಂದ ಹೊರಕ್ಕೆ ಬರುತ್ತವೆ. ಪ್ರತಿಯೊಂದು ಪ್ರಾಣಿಯೂ ತನ್ನದೇ ಆದ ಅನುಭವವನ್ನು ತಂದು ಆ ಸಮೂಹಾತ್ಮಕ್ಕೆ ಸೇರಿಸುತ್ತದೆ, ಹೀಗೆ ಅನೇಕ ವಿಧವಿಧವಾದ ಗುಣಗಳು ಸಮೂಹಾತ್ಮದಲ್ಲಿ ಬೆಳೆಯುತ್ತವೆ. ಇದೇ ಪ್ರಾಣಿಗಳ ಹುಟ್ಟುಗುಣವೆಂಬುದು, ಉದಾಹರಣೆಗಾಗಿ ಒಂದು ಕೋಳಿಯ ಸಂಸರ್ಗದಲ್ಲಿ ಮೊಟ್ಟೆಗಳಿದ್ದು–ಮರಿಗಳಾದ ಬಾತುಗಳು ನೀರನ್ನು ಕಂಡ ಕೂಡಲೇ ಈಜುವುದಕ್ಕೆ ಹೋಗುತ್ತವೆ—ಆದರೆ ಕೋಳಿ ಮರಿಗಳು ನೀರನ್ನು ಕಂಡರೆ ಭಯಪಡುತ್ತವೆ. ಈಜುವುದು ಬಾತಿನ ಮರಿಗಳಿಗೆ ಹುಟ್ಟುಗುಣ–ಎಂದರೆ ಅದು ತನ್ನ ಸಮೂಹಾತ್ಮ

ದಿಂದ ಬಂದಿದ್ದು. ಆ ಬಾತಿನ ಮರಿಯೊಳಗಿರುವ ಚೈತನ್ಯಕ್ಕೆ ನೀರು ತನ್ನನ್ನು ಮುಳುಗಿಸುವುದಿಲ್ಲವೆಂಬ ಅನುಭವವಾಗಿರುತ್ತದೆ. ಆದುದರಿಂದ ಒಳಗಿನ ಚೈತನ್ಯದ ಒಲವಿಗೆ ಹೊರಗಿನ ಎಳೆಯ ಶರೀರವು ಓಗೊಟ್ಟು ಅದನ್ನು ಜಾರಿಗೆ ತರುತ್ತದೆ.

ಪ್ರತಿಯೊಂದು ಸಮೂಹಾತ್ಮದಲ್ಲೂ ಒಡೆದು ವಿಭಾಗವಾಗುವ ಪ್ರವೃತ್ತಿಯು ಕೆಲಸ ಮಾಡುತ್ತಿರುತ್ತದೆ. ಈ ರೀತಿ ಸಮೂಹಾತ್ಮವು ವಿಭಾಗವಾಗುವ ರೀತಿಯು ಒಂದು ಕಣವು ವಿಭಾಗವಾಗುವ ಕ್ರಮವನ್ನು ಹೋಲುತ್ತದೆ. ಸಮೂಹಾತ್ಮದಲ್ಲಿ ಮನಸ್ತತ್ವದ ಮಟ್ಟದಲ್ಲಿ ಒಂದು ವಿಧವಾದ—ತೆಳುವಾದ ಪೊರೆಯು ರೂಪಗೊಂಡು ಒಂದು ಸಮೂಹಾತ್ಮವು ಎರಡಾಗುವಂತೆ ಮಾಡುತ್ತದೆ. ಈ ಪೊರೆಯು ಸಾಂದ್ರವಾಗುತ್ತಾ ಹೋಗಿ ಒಂದು ಭಾಗದಲ್ಲಿರುವ ಚೈತನ್ಯಕ್ಕೂ ಮತ್ತೊಂದು ಭಾಗದಲ್ಲಿರುವ ಚೈತನ್ಯಕ್ಕೂ ಸ್ವಲ್ಪವೂ ಸಂಬಂಧವಿಲ್ಲದಂತೆ ಪ್ರತ್ಯೇಕತೆಯನ್ನು ಕಲ್ಪಿಸುತ್ತದೆ. ಆಗ ಒಂದು ಸಮೂಹಾತ್ಮವು ಒಡೆದು ಇಬ್ಭಾಗವಾಗಿ ಎರಡಾಗುತ್ತದೆ.

ಈ ರೀತಿ ವಿಭಾಗವಾಗುವ ಪ್ರವೃತ್ತಿಯು ಮುಂದುವರಿದು ಕೊನೆಗೆ ಪ್ರತಿಯೊಂದು ಸಮೂಹಾತ್ಮಕ್ಕೂ ಕೆಲವೇ ಶರೀರಗಳಿರುವಷ್ಟು ಪ್ರಭೇದಗಳುಂಟಾಗುತ್ತವೆ. ಈಯಂತಸ್ತಿನಿಂದ ವ್ಯಕ್ತಿ ಮಟ್ಟಕ್ಕೆ ಏರುವ ಸಂಸರಣ ಪ್ರವೃತ್ತಿಯು ಕೆಲವೇ ಜಾತಿ ಪಶುಗಳಲ್ಲಿರುವಂತೆ ಕಂಡು ಬರುತ್ತದೆ. ಕೆಲವು ಜಾತಿಯ ಸಾಕು ಪ್ರಾಣಿಗಳಲ್ಲಿ ಮಾತ್ರ ಇದು ಸಾಧ್ಯವಾಗುತ್ತದೆ, ಎಲ್ಲ ಜಾತಿಯ ಸಾಕು ಪ್ರಾಣಿಗಳೂ ವ್ಯಕ್ತಿತ್ವವನ್ನು ಪಡೆಯಲಾರವು. ಈ ಕಲ್ಪದ ಸಂಸರಣ ಪಥದಲ್ಲಿ ಅರ್ಧಕ್ಕಿಂತ ಸ್ವಲ್ಪ ದೂರ ಮುಂದೆ ಹೋಗಿರುತ್ತೇವೆ, ಈ ಕಲ್ಪಾಂತ್ಯದಲ್ಲಿ ಮಾತ್ರ ಈಗಿರುವ ಪಶುಗಳೆಲ್ಲವೂ ವ್ಯಕ್ತಿತ್ವದ ಮೂಲಕ ಮಾನವಜನ್ಮವನ್ನು ಪಡೆಯುತ್ತವೆ. ಆದುದರಿಂದ ಈ ಸಧ್ಯದಲ್ಲೇ ವ್ಯಕ್ತಿತ್ವ ಪಡೆಯುವಷ್ಟು ಬೆಳೆದಿರುವ ಪಶುಗಳು ಇತರೆ ಪ್ರಾಣಿಗಳಿಗಿಂತಲೂ ಸಂಸರಣದಲ್ಲಿ ಬಹುಮುಂದಿರಬೇಕು, ಅಂತಹ ಪಶುಗಳು ಕೇವಲ ವಿರಳ. ಆದಾಗ್ಯೂ ಅಂತಹ ವ್ಯಕ್ತಿತ್ವಕ್ಕೆ ಸಂಬಂಧಪಟ್ಟ ತೇರ್ಗಡೆಗಳು ಆಗಾಗ್ಗೆ ಸಂಭವಿಸುವುದುಂಟು. ಈ ಪ್ರಶ್ನೆಯಲ್ಲಿ ನಮಗೆ ಅಭಿರುಚಿ ಇರುವುದು ಸ್ವಾಭಾವಿಕ–ಏಕೆಂದರೆ ನಾವು ಕೂಡ ಬಹು ಹಿಂದೆ ಎಂದರೆ ಚಂದ್ರಗೋಳ ಮಾಲೆಯಲ್ಲಿ ಮನುಷ್ಯತ್ವವನ್ನು ಪಡೆದಿರುತ್ತೇವೆ. ಆ ಚಂದ್ರಗೋಳದ ಪಶುಗಳು ಈಗಿನ ಪಶುಗಳಿಗಿಂತ ಸಂಸರಣದಲ್ಲಿ ಹಿಂದಿದ್ದುವು. ಆದಾಗ್ಯೂ ವ್ಯಕ್ತಿತ್ವಕ್ಕೆ ಸಂಬಂಧಪಟ್ಟ ಸಂಸರಣ ನಿಯಮವು ಚಾಚೂತಪ್ಪದಂತೆ ತನ್ನದೇ ಆದರೀತಿಯಲ್ಲಿ ಕೆಲಸ ಮಾಡುತ್ತದೆ ಎಂಬುದನ್ನು ಮರೆಯಕೂಡದು.

ಅಧ್ಯಾಯ ೮


ಊರ್ಧ್ವಮುಖವಾದ ಬೆಳವಣಿಗೆ

ವಿವರಣೆಯನ್ನು ಮುಂದುವರಿಸುವುದಕ್ಕೆ ಮೊದಲು ನಾಲ್ಕನೆಯ ಚಿತ್ರದ ಕಡೆಗೆ ಗಮನ ಕೊಡೋಣ. ಇದರಲ್ಲಿ ಭೂತವರ್ಗಗಳು ಅಧೋ ಮುಖವಾಗಿ ಸಂಸರಣ ಹೊಂದಿ ಖನಿಜಾವಸ್ಥೆಗೆ ಇಳಿದಮೇಲೆ ಆತ್ಮಸತ್ವದ ಬೆಳವಣಿಗೆಯು ಹೇಗೆ ಹಂತ ಹಂತವಾಗಿ ಮುಂದುವರಿದಿರುತ್ತದೆಯೆಂಬ ಮುಂದಿನ ಅಂತಸ್ತುಗಳನ್ನು ರೇಖಾ ಚಿತ್ರಗಳ ಮೂಲಕ ಉದಾಹರಿಸಿರುತ್ತದೆ. ಇದರ ಅಧೋ ಮುಖವಾದ ಸಂಸರಣ ದಲ್ಲಿ (ಎಡಭಾಗದ ಕಲಂಗಳನ್ನು ನೋಡಿರಿ) ಆತ್ಮಸತ್ವವು ಸೂಕ್ಷ್ಮಮಟ್ಟದಿಂದ ಸ್ಥೂಲತರ ಮಟ್ಟಗಳಿಗೆ ಇಳಿಯುತ್ತಾ ಪ್ರತಿಹಂತದಲ್ಲೂ ತನ್ನ ಸುತ್ತಲೂ ಆಯಾ ದರ್ಜೆ ಪ್ರಕೃತಿಯನ್ನು ಹೊದಿಕೆಯಾಗಿ ಮಾಡಿಕೊಂಡು ಅದಕ್ಕೆ ಹೊರಗಿನಿಂದ ಬರುವ ತಾಡನಗಳಿಗೆ ಓಗೊಡುವ ಶಕ್ತಿಯನ್ನುಂಟು ಮಾಡಿ ಆ ಮೂಲಕ ಬರುವ ಸ್ಪಂದ ಗಳಿಗೆ ತಕ್ಕಂತೆ ಜವಾಬು ಕೊಡುವ ಚಾಕಚಕ್ಯತೆಯನ್ನು ಕಲಿಯುತ್ತದೆ. (ಆತ್ಮ ಸಂಸರ್ಗವಿಲ್ಲದಿದ್ದರೆ ಪ್ರಕೃತಿಯು ಹೊರಗಿನ ಸ್ಪಂದಗಳನ್ನು ಗ್ರಹಿಸುವುದನ್ನು ಕಲಿಯಲಾರದು). ಆದರೆ ಅದು ಕೇವಲ ಕೆಳಗಿನ ಮಟ್ಟಕ್ಕೆ ಇಳಿದ ಮೇಲೆ—ಎಂದರೆ ಪ್ರಕೃತಿಯೊಳಕ್ಕೆ ಮುಳುಗಿ ಹೋದ ಮೇಲೆ—ಅದರ ಪ್ರವೃತ್ತಿಯು ದೈವಿಕತೆಯ ಕಡೆಗೆ ತಿರುಗಿ ಊರ್ಧ್ವ ಮುಖವಾದ ಬೆಳವಣಿಗೆಯು ಪ್ರಾರಂಭವಾದ ಮೇಲೆ ಅದರ ಕೆಲಸವು ಬೇರೆ ರೀತಿಯದು ಆಗುತ್ತದೆ. ಈ ಊರ್ಧ್ವ ಮುಖವಾಗಿ ಮುಂದು ವರಿಯುವ ಸಂಸರಣ ಪಥದಲ್ಲಿ ಆತ್ಮಸತ್ವದ ಉದ್ದೇಶವು ಅಂತಸ್ತುವಾರಾಗಿ ಪಡೆದ ಹೊದಿಕೆಗಳನ್ನು ವ್ಯವಸ್ಥಿತವಾದ ಪ್ರಜ್ಞೆಯ ಸಾಧನಗಳಾದ ದೇಹಗಳನ್ನಾಗಿ ಪರಿವರ್ತಿಸುವುದೇ ಆಗಿದೆ—ಎಂದರೆ ಹೊರಗಿನ ತಾಡನಗಳನ್ನು ಯಥಾವತ್ತಾಗಿ ಸ್ವೀಕರಿಸಿ ಅವುಗಳಿಗೆ ಉಚಿತವಾದ ಜವಾಬು ಕೊಡುವುದರ ಮೂಲಕ ಪ್ರತಿ ಅಂತಸ್ತಿ ನಲ್ಲೂ ಸ್ವಪ್ರಜ್ಞೆಯಿಂದ ಬಾಳುವುದನ್ನು ಕಲಿಯುವುದರ ಮೂಲಕ ಆಯಾ ಅಂತಸ್ತಿನ ದೇಹವನ್ನು ಒಳಗಿನ ಪ್ರಜ್ಞೆಗೂ ಹೊರಗಿನ ಪ್ರಪಂಚಕ್ಕೂ ಮಧ್ಯೆ ಒಂದು ಸೇತುವೆ ಯಂತೆ ಪರಿವರ್ತನೆ ಮಾಡುವುದೇ ಆಗಿದೆ.

ಈ ಪ್ರಯತ್ನದಲ್ಲಿ ಅದು ಮೊದಲು ಕೇವಲ ಕೆಳದರ್ಜೆ ಪ್ರಕೃತಿಯಿಂದ ಪ್ರಾರಂಭಿಸುತ್ತದೆ, ಏಕೆಂದರೆ ಅದರ ಸ್ಪಂದಗಳು ಅಷ್ಟು ಸೂಕ್ಷ್ಮವಾಗಿಲ್ಲದೆ ಕೇವಲ ಒರಟಾಗಿರುವುದರಿಂದ ಅವುಗಳನ್ನು ತನ್ನ ಹತೋಟಿಗೆ ತೆಗೆದುಕೊಳ್ಳುವುದು ಸುಲಭ

ಚಿತ್ರ 4

ಚೈತನ್ಯದ ಅವತರಣ - ಆರೋಹಣ



ಸಾಧ್ಯವಾದುದು. ಮನುಷ್ಯನಿಗೆ ಉನ್ನತ ಮಟ್ಟದ ಕೋಶಗಳಿದ್ದಾಗ್ಯೂ ಆತನು ಪ್ರಾರಂಭದಲ್ಲಿ ಬಹುದೀರ್ಘಕಾಲ ಸ್ಥೂಲ ದೇಹದ ಮಟ್ಟದಲ್ಲಿ ಮಾತ್ರ ಪ್ರಜ್ಞಾವತ್ತಾಗಿ ಬಾಳುವುದನ್ನು ಕಲಿಯಬೇಕಾಗಿದೆ, ಅನಂತರ ಕಾಲಕ್ರಮೇಣ ಆತನು ತನ್ನ ಕಾಮದೇಹದಲ್ಲಿ ಪ್ರಜ್ಞೆಯನ್ನು ಬೆಳೆಸಿಕೊಳ್ಳುತ್ತಾನೆ. ಆತನ ಮನೋದೇಹಕ್ಕೆ ಸಂಬಂಧಪಟ್ಟ ಸ್ವಪ್ರಜ್ಞೆಯು ಬೆಳೆಯಬೇಕಾದರೆ ತುಂಬ ದೀರ್ಘಕಾಲ ಹಿಡಿಯುತ್ತದೆ.

ಈಗ ನಾಲ್ಕನೆಯ ಚಿತ್ರದಲ್ಲಿ ಖನಿಜ ವರ್ಗವು ಮೊದಲ್ಗೊಂಡು, ಸಸ್ಯವರ್ಗ—ಪಶುವರ್ಗ—ಮಾನವವರ್ಗ ಮತ್ತು ಮಾನವಾತೀತ ವರ್ಗ—ಇವುಗಳಲ್ಲಿ ಪ್ರತಿಯೊಂದನ್ನೂ ಪ್ರತಿನಿಧಿಸುವ ರೇಖಾ ಚಿತ್ರವು ಬೇರೆ-ಬೇರೆಯಾಗಿ ಕೊಟ್ಟಿರುತ್ತದೆ. ಈಗ ಮೊದಲನೆಯ ಖನಿಜ ವರ್ಗವನ್ನು ಪ್ರತಿನಿಧಿಸುವ ರೇಖಾ ಕೃತಿಯನ್ನು ತೆಗೆದುಕೊಳ್ಳೋಣ. ಇದರಲ್ಲಿ ಸಮವಾಗಿ ಪೂರ್ತ ಬೆಳೆದಿರುವ ಘನೀಭೂತವಾದ ಭಾಗ ಮತ್ತೊಂದು ಅತಿವಾಯು ತತ್ವದ ಭಾಗ, ಈ ಎರಡನೆಯ ಅಂತಸ್ತಿನಲ್ಲಿರುವ ಪ್ರಕೃತಿ ತತ್ವದ ಮೇಲೆ ಒಳಗಿನ ಆತ್ಮಸತ್ವಕ್ಕೆ ಹತೋಟಿ ಮೊಟಕಾಗಿದೆಯೆಂಬಂಶವನ್ನು ಮೇಲಕ್ಕೆ ಹೋಗುತ್ತ ಸಂಕುಚಿತವಾಗಿರುವ ತ್ರಿಕೋಣದಂತಹ ರೇಖಾಕೃತಿಯು ಪ್ರತಿನಿಧಿಸುತ್ತದೆ. ಅಲ್ಲದೆ ಆ ರೇಖಾ ಕೃತಿಯ ಕೊನೆಯಲ್ಲಿ ಕಾಮಲೋಕನೊಳಕ್ಕೆ ಅತ್ಯಲ್ಪವಾಗಿ ಚಾಚಿಕೊಂಡಿರುವ ಮೊನೆಯು ಈಗಾಗಲೇ ಆ ಮಟ್ಟದಲ್ಲಿ ಸ್ವಲ್ಪ ಪ್ರಜ್ಞೆ-ಉದಯವಾಗಿದೆ, ಎಂದರೆ ಆಶೆಯು ಮಸಕು-ಮಸಕಾಗಿ ಸ್ವಲ್ಪ ಆಗಲೇ ಬೆಳೆದಿದೆ ಎಂಬಂಶವನ್ನು ಸೂಚಿಸುತ್ತದೆ.

ಖನಿಜಗಳಿಗೆ ಆಶೆಯಿದೆಯೆಂದು ಹೇಳಿದರೆ ಅನೇಕರಿಗೆ ಆಶ್ಚರ್ಯವುಂಟಾಗಬಹುದು. ಆದರೆ ಪ್ರತಿಯೊಬ್ಬ ರಾಸಾಯನಿಕ ಶಾಸ್ತ್ರಜ್ಞನಿಗೆ-ಮೂಲವಸ್ತು (Elements)ಗಳಲ್ಲಿ ರಾಸಾಯನಿಕ ಒಲವು (chemical affinity) ಇರುವುದು ಚೆನ್ನಾಗಿ ಗೊತ್ತು-ಈ ಒಲವು ಅಥವ ಒಂದು ಮೂಲವಸ್ತುವಿಗೂ ಮತ್ತೊಂದಕ್ಕೂ ಪರಸ್ಪರ ಇರುವ ಆಕರ್ಷಣೆಯೇ ಆಶೆಯ ಪ್ರಾರಂಭ ಅಥವ ಮೊಳಕೆಯೆಂದು ಧಾರಾಳವಾಗಿ ಹೇಳಬಹುದು, ಒಂದು ಸಂಯೋಜಿತ ವಸ್ತುವಿನ (compound)ಲ್ಲಿ ಸೇರಿಕೊಂಡಿರುವ ಮೂಲವಸ್ತು ತನಗೆ ಹೆಚ್ಚು ಪ್ರಿಯವಾದ ಮತ್ತೊಂದು ವಸ್ತುವು ಹತ್ತಿರ ಬಂದರೆ, ಮೊದಲಿನ ವಸ್ತುವಿನ ಸಹವಾಸವನ್ನು ಕೂಡಲೇ ತ್ಯಜಿಸಿ ಆ ಹೆಚ್ಚು ಪ್ರಿಯವಾದ ವಸ್ತುವಿನೊಡನೆ ಸೇರಿಕೊಂಡು ಮತ್ತೊಂದು ಬೇರೆ ವಿಧವಾದ ಸಂಯೋಜಿತ ವಸ್ತುವಾಗಿ ಪರಿಣಮಿಸುತ್ತದೆ. ಉದಾಹರಣೆಗಾಗಿ ನೀರಿನಲ್ಲಿ ಆಮ್ಲಜನಕ ಜಲಜನಕವೆಂಬ ಎರಡು ಅನಿಲಗಳು ಸೇರಿಕೊಂಡಿರುತ್ತವೆ, ನೀರಿಗೆ ಸೋಡಿಯಂ ಎಂಬ ಲೋಹವನ್ನು ಹಾಕಿದರೆ ಆಮ್ಲಜನಕವು ಜಲ ಜನಕದ ಸಹವಾಸವನ್ನು ತ್ಯಜಿಸಿ ಸೋಡಿಯಂ ಲೋಹದೊಡನೆ ಮಿಳಿತವಾಗಿ ಸೋಡಿಯಂ

ಹೈಡ್ರಾಕ್ಸೈಡ್ ಎಂಬ ಮತ್ತೊಂದು ಸಂಯೋಜಿತ ವಸ್ತುವಾಗುತ್ತದೆ, ಬಿಡಲ್ಪಟ್ಟ ಜಲಜನಕವು ವಾಯುಮಂಡಲದಲ್ಲಿ ಸೇರಿಕೊಳ್ಳುತ್ತದೆ. ಹಾಗೆಯೇ ಸತು ಎಂಬ ಲೋಹದ ಚೂರುಗಳನ್ನು ಹೈಡ್ರೋಕ್ಲೋರಿಕ್ ಆಸಿಡ್ ಎಂಬ ದ್ರವದ ಸಾಂದ್ರತೆಯನ್ನು ಕಡಮೆ ಮಾಡಿ-ಅದರೊಳಕ್ಕೆ ಹಾಕಿದರೆ ಹೈಡ್ರೋಕ್ಲೋರಿಕ್ ಆಸಿಡ್ಡಿನಲ್ಲಿರುವ ಕ್ಲೋರೈನ್ ಎಂಬ ಅನಿಲವು ಜಲಜನಕದ ಸಹವಾಸವನ್ನು ಕೂಡಲೇ ತೊರೆದು ಸತುವಿನೊಡನೆ ಸೇರಿಕೊಂಡು ಜಿಂಕ್‌ಕ್ಲೋರೈಡ್ ಎಂಬ ಮತ್ತೊಂದು ಸಂಯೋಜಿತ ವಸ್ತುವು ಉತ್ಪತ್ತಿಯಾಗುತ್ತದೆ. ಬಿಡಲ್ಪಟ್ಟ ಜಲಜನಕವು ವಾಯುಮಂಡಲಕ್ಕೆ ಸೇರಿಕೊಳ್ಳುತ್ತದೆ. ಈ ಎರಡು ಉದಾಹರಣೆಗಳಿಂದ ಖನಿಜಗಳಲ್ಲಿ ಆಶೆಯು ಆಗಲೇ ಮೊಳಕೆಯಂತೆ ಉದಯವಾಗಿದೆ-ಯೆಂಬಂಶವು ಸ್ಪಷ್ಟವಾಗುತ್ತದೆ. ಈಗ ಸಸ್ಯವರ್ಗವನ್ನು ಪ್ರತಿನಿಧಿಸುವ ಪಟ್ಟಿಯನ್ನು ಗಮನಿಸಿದರೆ ಈ ಪಟ್ಟಿಯು ಘನ ಮತ್ತು ಅತಿವಾಯು ತತ್ವಗಳನ್ನು ಪ್ರತಿನಿಧಿಸುವ ಎರಡು ಭಾಗಗಳಲ್ಲೂ ಪೂರ್ತ ತುಂಬಿ ಕೊಂಡಂತೆ ವಿಸ್ತರಿಸಿದೆ. ಆದರೆ ಕಾಮಲೋಕದ ಮಟ್ಟದಲ್ಲಿ ಸಂಕುಚಿತವಾದ ತ್ರಿಕೋಣದಂತೆ ಇದೆ, ಎಂದರೆ ಅದರೊಳಗಿರುವ ಆತ್ಮಸತ್ವಕ್ಕೆ ಸ್ಥೂಲ ಮಟ್ಟದ ಘನ ಮತ್ತು ಅತಿವಾಯು ತತ್ವಗಳಿಗೆ ಸಂಬಂಧಪಟ್ಟ ಪ್ರಕೃತಿಯ ಮೇಲೆ ಪೂರ್ತ ಸ್ವಾಧೀನವಿರುತ್ತದೆಂದೂ—ಆದರೆ ಕಾಮಲೋಕದ ಪ್ರಕೃತಿ ತತ್ವದ ಮೇಲೆ ಅಷ್ಟರ ಮಟ್ಟಿಗೆ ಹತೋಟಿಯಿಲ್ಲದಿದಾಗ್ಯೂ ಹಿಂದಿನ ಖನಿಜಾವಸ್ಥೆಗಿಂತ ಆಶಾಸ್ವಭಾವವು ಹೆಚ್ಚು ಬೆಳೆದಿರುವುದು ಎದ್ದು ಕಾಣುತ್ತದೆ. ಸಸ್ಯ ಶಾಸ್ತ್ರವನ್ನು ವ್ಯಾಸಂಗ ಮಾಡಿರುವಂಥವರಿಗೆ ಸಸ್ಯಗಳಲ್ಲಿ ರಾಗ-ದ್ವೇಷಗಳ ಮೊಳಕೆಗಳು ಖನಿಜಗಳಲ್ಲಿರುವುದಕ್ಕಿಂತಲೂ ಹೆಚ್ಚಾಗಿ ಅಭಿವ್ಯಕ್ತವಾಗಿವೆಯೆಂಬಂಶ ಚೆನ್ನಾಗಿ ಮನದಟ್ಟಾಗಿರುತ್ತದೆ. ಅನೇಕ ಸಸ್ಯಗಳು ತಮ್ಮ ಆವಶ್ಯಕವಾದ ಬೆಳಕು ಮತ್ತು ನೀರನ್ನು ಪಡೆಯಲು ತುಂಬ ಚುರುಕಾದ ಜಾಗರೂಕತೆಯನ್ನು ಚತುರತೆಯನ್ನು ವ್ಯಕ್ತಪಡಿಸುವುದು—ಎದ್ದು ಕಾಣುತ್ತದೆ. (ನೆರಳಿನಲ್ಲಿ ಹುಟ್ಟಿರುವ ಒಂದು ಗಿಡವು ಆ ನೆರಳನ್ನು ತಪ್ಪಿಸಿಕೊಂಡು ಬೆಳಕಿನ ಕಡೆಗೆ ಬಾಗಿಬೆಳೆಯುವುದನ್ನು ನೋಡಬಹುದು. ಸೂರ್ಯ ಕಾಂತಿಹೂ—ಹೊತ್ತು ಬದಲಾಯಿಸಿದಂತೆಲ್ಲ ಸೂರ್ಯನ ಕಡೆಗೆ ತಿರುಗುತ್ತಿರುವುದನ್ನು ಗಮನಿಸಬಹುದು 'ಮುಟ್ಟಿದರೆ ಮುನಿಯು' ಎಂಬ ಗಿಡವು (ಮನುಷ್ಯನ ಸ್ಪರ್ಶಹಾಗಿರಲಿ) ಮನುಷ್ಯನಿಗೆ ಸಂಬಂಧಪಟ್ಟ ಮೂತ್ರ-ಅಥವ ಬೆವರು ಸಂಪರ್ಕವಾದರೂ ಸಾಕು ಕೂಡಲೇ ಮುದುರಿಕೊಳ್ಳುತ್ತದೆ—T.V.R.)

ಪಶುವರ್ಗವನ್ನು ಪ್ರತಿನಿಧಿಸುವ ಪಟ್ಟಿಯನ್ನು ಗಮನಿಸಿದರೆ ಅದಕ್ಕೆ ಸಂಬಂಧಪಟ್ಟ ಪ್ರಜ್ಞೆಯು ಹಿಂದಿನ ಅಂತಸ್ತಿಗಿಂತಲೂ ತುಂಬ ಹೆಚ್ಚಾಗಿ ಬೆಳೆದಿರುತ್ತದೆ. ಈ ಪಟ್ಟಿಯು ಸ್ಥೂಲಲೋಕದ ಘನ ಮತ್ತು ಅತಿವಾಯು ತತ್ವಗಳ ಮಟ್ಟಗಳ ತುಂಬ ವ್ಯಾಪಕವಾಗಿ ಬೆಳೆದಿರುವುದಲ್ಲದೇ-ಕೆಳಗಿನ ಮಟ್ಟದ ಕಾಮಲೋಕದ ಉಪತತ್ವದಲ್ಲೂ

ಸರಿಸಿದ್ದು—ಉಳಿದ ಉಪತತ್ವಗಳನ್ನೆಲ್ಲ ವ್ಯಾಪಿಸಿಕೊಂಡು ಮನೋಲೋಕದ ತಸ್ಸಿನಲ್ಲೂ ಸ್ವಲ್ಪ ಮಟ್ಟಿಗೆ ಚಾಚಿಕೊಂಡಿರುತ್ತದೆ. ಇದರಿಂದ ಸ್ಪಷ್ಟ ಪಡುವುದೇ ದರೆ ಪಶುವಿಗೆ ಕೆಳಗಿನ ಮಟ್ಟದ ಆಶೆಗಳು ಪುಷ್ಟವಾಗಿ ಬೆಳೆದಿವೆ—ಆದರೆ ಉನ್ನತ ಟ್ಟಗಳಲ್ಲಿರುವ ಪ್ರಕೃತಿಯ ಉಪತತ್ವಗಳ ಮೂಲಕ ವ್ಯಕ್ತವಾಗಬಹುದಾದ ನ್ನತ ಮಟ್ಟದ ಆಶೆಗಳು ಅಷ್ಟಾಗಿ ಬೆಳೆದಿಲ್ಲ. ಆದುದರಿಂದಲೇ ಆ ಭಾಗದಲ್ಲಿನ ಟ್ಟೆಯು ತ್ರಿಕೋಣಾಕೃತಿಯಲ್ಲಿ ಸಂಕುಚಿತವಾಗಿರುತ್ತದೆ. ಆದಾಗ್ಯೂ ಆ ಭಾಗ ಲ್ಲಿ ಪಟ್ಟೆಯು ತಲೆಯೆತ್ತಿರುವುದರಿಂದ ಒಂದೊಂದು ವೇಳೆ ವಿಶೇಷ ಸಂದರ್ಭದಲ್ಲಿ ತ್ಯುನ್ನತ ಮಟ್ಟದ ಭಕ್ತಿ-ಪ್ರೇಮಗಳು ಪಶುಗಳಲ್ಲಿ ಎದ್ದು ಕಾಣಿಸಿಕೊಳ್ಳುತ್ತವೆ. ುದಾಹರಣೆಗಾಗಿ ಎಷ್ಟೋ ಸಾಕಿದ ನಾಯಿಗಳೂ ಕುದುರೆಗಳೂ ತಮ್ಮ ದಣಿಗಳಿ ಗಿ ಪ್ರಾಣಾರ್ಪಣ ಮಾಡಿರುವ ನಿದರ್ಶನಗಳಿವೆ—T.V.R.)

ಮತ್ತೊಂದು ವಿಸೇಷ ಸಂಗತಿಯೇನೆಂದರೆ, ಪಶುವರ್ಗವನ್ನು ಪ್ರತಿನಿಧಿಸುವ ಟ್ಟೆಯು ಮನೋಲೊಕದಲ್ಲೂ ತನ್ನ ಮೊನೆಯನ್ನು ಚಾಚಿಕೊಂಡಿದೆ. ಇದರಿಂದ ೋಚನಾ ಶಕ್ತಿಯೂ ಕೂಡ ಈಗಾಗಲೇ ಬೆಳೆದು ಆ ಬಗ್ಗೆ ಮನೋಲೋಕದ ಪ್ರಕೃತಿ ನ್ನು ಸಹ ಆ ಬಗ್ಗೆ ತನ್ನ ಸಾಧನವನ್ನಾಗಿ ವಿನಿಯೋಗ ಮಾಡಿಕೊಂಡಿದೆಯೆಂಬುದು ಯು ಬರುತ್ತದೆ. ಒಂದಾನೊಂದು ಕಾಲದಲ್ಲಿ ಮನುಷ್ಯ ವರ್ಗವನ್ನು ಪಶುವರ್ಗ ದ ಪ್ರತ್ಯೇಕಿಸುವುದೇ ಮಾನವನಿಗೆ ಇರುವ ವಿಚಾರ ಶಕ್ತಿಯು-ಎಂದು ನಂಬುವ ಭಿಃಪ್ರಾಯವಿತ್ತು. ಮನುಷ್ಯನು ಯೋಚಿಸ ಬಲ್ಲನು—ಪಶುಗಳಿಗೆ ಹುಟ್ಟು ಗುಣ ಾತ್ರ ಇರುತ್ತದೆ ಎಂಬ ಅಭಿಃಪ್ರಾಯವು ಜನ ಜನಿತವಾಗಿತ್ತು. ಇದು ವಾಸ್ತವ ಗಿಯೂ ತಪ್ಪಾದುದು. ಏಕೆಂದರೆ, ನಾಯಿ, ಬೆಕ್ಕುಗಳನ್ನು ಸಾಕಿದ್ದು ಅವುಗಳೊಡನೆ ೀಹವನ್ನು ಬೆಳೆಸಿಕೊಂಡಿರುವಂಥವರಿಗೆ ಪಶುಗಳಲ್ಲೂ ವಿಚಾರ ಶಕ್ತಿಯಿದೆ ಂಬಂಶವು ಮನವರಿಕೆಯಾಗದೆ ಇರದು. ಆದರೆ ಪಶುಗಳಲ್ಲಿರುವ ಯೋಚನಾ ್ತಿಯು ತುಂಬ ಪರಿಮಿತಿಯುಳ್ಳುದುದೆಂಬುದೇನೋ ನಿಜ. ಸಾಧಾರಣ ಪಶು ಲ್ಲಿ ಮನಸ್ತತ್ವದ ಕೇವಲ ಕೆಳಭಾಗದ ಪ್ರಕೃತಿಯ ಮೂಲಕ ವ್ಯಕ್ತವಾಗಬಹುದಾ ಷ್ಟು ಮಾತ್ರ ಮನಸ್ಸು ಬೆಳೆದಿದೆ. ಆದರೆ ತುಂಬ ಬೆಳೆದ ಸಾಕು ಪ್ರಾಣಿಗಳಲ್ಲಿ ನೋಲೋಕಕ್ಕೆ ಸಂಬಂಧಪಟ್ಟ ಕೆಳಗಿನ ನಾಲ್ಕು ಉಪತತ್ವಗಳ ಪ್ರಕೃತಿಯನ್ನು ೀಸಬಹುದಾದಷ್ಟು ಯೋಚನಾ ಶಕ್ತಿಯು ಬೆಳೆದಿರುತ್ತದೆ. ಆದರೆ ಹಾಗೆ ಬೆಳೆದಿ ವ ಯೋಚನಾ ಶಕ್ತಿಯು ಕೇವಲ ಪರಿಮಿತಿಯುಳ್ಳದು ಎಂದು ಧಾರಾಳವಾಗಿ ಳಬಹುದು.

ಅಧ್ಯಾಯ ೯

ಮಾನವ ಪ್ರಜ್ಞೆ

ಮಾನವ ವರ್ಗವನ್ನು ಪ್ರತಿನಿಧಿಸುವ ಪಟ್ಟಿಯನ್ನು ಗಮನಿಸಿದರೆ, ಅನೇಕ ಹೊಸಲಕ್ಷಣಗಳು ಎದ್ದು ಕಾಣುತ್ತವೆ. ಈ ಪಟ್ಟಿಯು ಸ್ಥೂಲ ಲೋಕ, ಕಾಮ ಲೋಕ ಎರಡನ್ನೂ ಪ್ರತಿನಿಧಿಸುವ ಶಕ್ತಿ ವಿಶೇಷಗಳು ತುಂಬ ಬೆಳೆದಿರುವಿಕೆಯನ್ನು ಸೂಚಿಸುತ್ತದೆ. ಕಾಮದೇಹಕ್ಕೆ ಸಂಬಂಧಪಟ್ಟ ಕೆಳಗಿನ ಮಟ್ಟದ ಆಶೆಗಳೇ ಅಲ್ಲದೇ ಮೇಲಿನ ಉಪಲೋಕ ಪ್ರಕೃತಿ ತತ್ವಗಳಲ್ಲಿ ವ್ಯಕ್ತವಾಗಬಹುದಾದಂಥ ಪ್ರೇಮ, ಕರುಣೆ, ಭಕ್ತಿ ಮತ್ತು ಉತ್ಕಾಂಕ್ಷೆಗಳು ಪೂರ್ತ ಬೆಳೆದಿರುವುದನ್ನು ತೋರಿಸುತ್ತದೆ. ಇಷ್ಟೇ ಅಲ್ಲದೇ ಮನೋಲೋಕದ ರೂಪಲೋಕಕ್ಕೆ ಸಂಬಂಧಪಟ್ಟ ವಿಚಾರ ಶಕ್ತಿಗಳೂ ಸಹ ಪೂರ್ತ ಬೆಳೆದಿರುತ್ತವೆಂಬಂಶವು ವ್ಯಕ್ತವಾಗುತ್ತದೆ. ಆದರೆ ಅರೂಪ ಲೋಕದಲ್ಲಿನ ರೇಖಾ ಚಿತ್ರವು ಆತನ ಶುದ್ಧ ಮನಸ್ಸು ಪೂರ್ತ ಬೆಳೆಯದೆ ಇರುವ ಮಟ್ಟವನ್ನು ಸೂಚಿಸುತ್ತದೆ. ಆದಾಗ್ಯೂ ಪಶುವರ್ಗಕ್ಕೆ ಸಂಬಂಧಪಟ್ಟ ಪಟ್ಟಿಯಲ್ಲಿ ಕಂಡುಬಾರದೆ ಇರುವ ಅರೂಪಲೋಕದಲ್ಲಿರುವ ಕಾರಣ ದೇಹವೂ ಅದರಲ್ಲಿ ವಾಸಿಸುವ ಅಂತರಾತ್ಮನ ಇರುವಿಕೆಯೂ ಎದ್ದು ಕಾಣುತ್ತವೆ. ಮಾನವರ್ಗದ ಬಹುಸಂಖ್ಯಾತ ಜನರಿಗೆ ಕಾರಣ ದೇಹದಲ್ಲಿನ ಪ್ರಜ್ಞೆಯು ಅರೂಪಲೋಕದ ಕೇವಲ ಕೆಳಗಿನ ಉಪತತ್ವದ ಮಟ್ಟಕ್ಕಿಂತಲೂ ಹೆಚ್ಚಾಗಿ ಬೆಳೆದಿಲ್ಲ. ಬಹು ನಿಧಾನವಾಗಿಯಾದರೂ ಸಕ್ರಮವಾಗಿ ಸಂಸರಣವು ಮುಂದುವರಿದಂತೆಲ್ಲ ಅಂತರಾತ್ಮನು ತನ್ನ ಪ್ರಜ್ಞೆಯನ್ನು ಎರಡನೆ ಉಪತತ್ವದ ಮಟ್ಟಕ್ಕೆ ಬೆಳೆಸಿಕೊಳ್ಳುತ್ತಾನೆ. ಆದರೆ ಜೀವನ್ಮುಕ್ತ ಮಹಾತ್ಮರೂ ಮತ್ತು ಯೋಗ ಮಾರ್ಗದಲ್ಲಿ ಬಹುದೂರ ಮುಂದುವರಿದಿರುವವರೂ ಮಾತ್ರ ಮೊದಲನೆಯ ಉಪತತ್ವದ ಮಟ್ಟಕ್ಕೆ ತಮ್ಮ ಪ್ರಜ್ಞೆಯನ್ನು ಹತ್ತಿಸಬಲ್ಲರು.

ಇದರೀದ ಸಾಧಾರಣ ಮನುಷ್ಯನು ಮೇಲಿನಹಂತಗಳಲ್ಲಿ ಪ್ರಜ್ಞಾವತ್ತಾಗಿ ವ್ಯವಹರಿಸಬಲ್ಲನೆಂದು ಅರ್ಥವಲ್ಲ, ಕಾಡು ಮನುಷ್ಯನಲ್ಲಿ ಇನ್ನೂ ದ್ವೇಷಗಳೇ ಪ್ರಾಮುಖ್ಯವಾಗಿ ಕೆಲಸ ಮಾಡುತ್ತಿರುತ್ತವೆ. ಅಲ್ಲದೆ ಮಾನಸಿಕ ಬೆಳವಣಿಗೆಯೂ ಕೂಡ ಸ್ವಲ್ಪ ಮಟ್ಟಿಗೆ ಮುಂದುವರಿದಿರುತ್ತದೆ. ಇಂತಹ ಮನುಷ್ಯನಿಗೆ ನಿದ್ರೆ ಕಾಲದಲ್ಲಿ ಕಾಮ ಲೋಕಕ್ಕೆ ಸಂಬಂಧಪಟ್ಟಂತೆ ಅಸಕು–ಮಸಕಾದ ಪ್ರಜ್ಞೆ ಮಾತ್ರ ಇರಬಲ್ಲದು. ಆತನು ಸ್ಥೂಲ ದೇಹವನ್ನು ತ್ಯಜಿಸಿದ ಮೇಲೆ ಕಾಮಲೋಕದ ಕೆಳಗಿನ ಉಪತತ್ವಗಳಲ್ಲಿ ಮಾತ್ರ ಚಟುವಟಿಕೆಯಿಂದ ಬಾಳಬಲ್ಲನು, ಈ ಕೆಳಗಿನ ಉಪಲೋಕಗಳ ಜೀವನವೇ

ಅಂತಹನಿಗೆ ಇರುವುದೆಲ್ಲ ಉತ್ತರ ಲೋಕ ವಾಸವು. ಏಕೆಂದರೆ ಸ್ವರ್ಗಜೀವನಕ್ಕೆ ತಕ್ಕ ಯೋಗ್ಯತೆಯು ಆತನಿಗೆ ಇನ್ನೂ ಮೈಗೂಡಿರುವುದಿಲ್ಲ. ಆತನ ಪ್ರಜ್ಞೆಯೆಲ್ಲವೂ ಕಾಮಲೋಕದ ಕೆಳಗಿನ ಮಟ್ಟದಲ್ಲೇ ಕೇಂದ್ರೀ ಕೃತವಾಗಿರುತ್ತದೆ–ಅಲ್ಲದೆ ಸ್ಥೂಲ ಲೋಕಕ್ಕೆ ಸಂಬಂಧಪಟ್ಟ ಇಂದ್ರಿಯ ಸುಖಾಪೇಕ್ಷೆಯೇ ಆತನ ಜೀವಿತವನ್ನು ಬಹು ಹೆಚ್ಚಾಗಿ ಆಳುತ್ತಿರುವುದು.

ನಮ್ಮ ಜನಾಂಗದ ಸಾಧಾರಣ ಮನುಷ್ಯನು ಇನ್ನೂ ಹೆಚ್ಚಾಗಿ ರಾಗಭಾವನೆ ಗಳಲ್ಲೂ ಇಂದ್ರಿಯ ಸುಖಾನ್ವೇಷಣೆಯಲ್ಲೂ ಮಗ್ನನಾಗಿರುತ್ತಾನೆ. ಆದಾಗ್ಯೂ ಮೇಲ್ಮಟ್ಟದ ರಾಗಭಾವನೆಗಳು ಬೆಳೆಯುತ್ತಿರುವುದು ಕಾಣುತ್ತದೆ. ಆದಾಗ್ಯೂ ಆತನ ಜೀವಿತದಲ್ಲಿ ಎದ್ದು ಕಾಣುತ್ತಿರುವುದು, ಯಾವುದು ಧರ್ಮ-ಯಾವುದು ಉಚಿತ? ಎಂಬ ಪ್ರಶ್ನೆಯಲ್ಲ, ಯಾವುದು ಆತನ ಸುಖಕ್ಕೆ ಸಾಧನವಾಗಿದೆಯೋ ಅದು ಪ್ರಾಮುಖ್ಯವಾಗಿ ಆತನ ಜೀವಿತವನ್ನು ಆಳುತ್ತಾ ಮುನ್ನೆಡಸುತ್ತದೆ. ನಮ್ಮ ಜನಾಂಗದವರಲ್ಲಿ ಇನ್ನೂ ಹೆಚ್ಚಾಗಿ ಬೆಳೆದು ಸುಸಂಸ್ಕೃತರಾಗಿರುವವರಲ್ಲಿ ರಾಗ ಭಾವನೆಗಳ ಸ್ಥಾನಕ್ಕೆ ವಿವೇಚನೆಯು ಪ್ರವೇಶ ಮಾಡುತ್ತಿದೆ, ಎಂದರೆ ಪ್ರಜ್ಞೆ ಕೇಂದ್ರವು ಕಾಲಕ್ರಮದಲ್ಲಿ ಕಾಮದೇಹದ ಉನ್ನತ ಮಟ್ಟದಿಂದ ಮನೋದೇಹಕ್ಕೆ ಪರಿವರ್ತಿತವಾಗುತ್ತಿದೆ. ಹೀಗೆಯೇ ಮನುಷ್ಯನು ಬೆಳೆದಂತೆಲ್ಲ ಆತನ ಜೀವಿತದಲ್ಲಿ ಸ್ವಾರ್ಥೋದ್ದೇಶಕ್ಕೆ ಬದಲಾಗಿ ಧ್ಯೇಯ ಮತ್ತು ತತ್ವನಿಯಮವು ಪ್ರಾಮುಖ್ಯ ಸ್ಥಾನವನ್ನು ಪಡೆಯುತ್ತ ಬರುತ್ತದೆ.

ಹೀಗೆಯೇ ಮೇಲ್ಕಂಡ ಹಂತಗಳೆಲ್ಲ ಜೀವಾತ್ಮನು ಪ್ರಜ್ಞಾವತ್ತಾಗಿ ವ್ಯವಹರಿ ಸುವಂತೆ ಆಗುವುದು ಮತ್ತೊಂದು ಬೆಳವಣಿಗೆ ಮಟ್ಟವು, ಮೇಲ್ಮಟ್ಟದ ಜನಾಂಗಗಳಿಗೆ ಸೇರಿದ ಯಾರಾದರೂ ಸರಿಯೆ–ವಿದ್ಯಾವಂತನೂ ಸಂಸ್ಕೃತನೂ ಆಗಿದ್ದಲ್ಲಿ ಅಂಥವನಿಗೆ ಕಾಮಲೋಕದ ಮಟ್ಟದಲ್ಲಿ ಪ್ರಜ್ಞೆಯು ಪೂರ್ತ ಬೆಳೆದಿರುತ್ತದೆ. ಆದರೆ ಅದನ್ನು ಆ ಲೋಕದಲ್ಲಿ ಪ್ರಯೋಗ ಮಾಡಬೇಕಾದರೆ ಒಂದು ವಿಧವಾದ ಪ್ರಯತ್ನವು ಅವಶ್ಯಕ. ಇಂಥವರಲ್ಲಿ ಬಹು ಸಂಖ್ಯಾತರಿಗೆ ಕಾಮಲೋಕವೆಂಬುದು ಇದೆ—ಅದರಲ್ಲಿ ಪ್ರಜ್ಞಾವತ್ತಾಗಿ ಬಾಳಬಹುದು ಎಂಬ ಸಂಗತಿಯೇ ತಿಳಿದಿರುವುದಿಲ್ಲ. ಆದುದರಿಂದ ಅವರ ಪ್ರಜ್ಞೆಯು ಅವರ ಕಾಮದೇಹದ ಸುತ್ತಲೂ ಬೆಳೆದಿರುವ ಅಪ್ರಜ್ಞೆಯೆಂಬ ಚಿಪ್ಪಿನ ಆವರಣದೊಳಗೆ ಕೋಳಿ ಮರಿಯು ಮೊಟ್ಟೆಯ ಚಿಪ್ಪಿನೊಳಗೆ ಬೆಳೆಯು ತ್ತಿರುವಂತೆ ಸುಪ್ತಾವಸ್ಥೆಯಲ್ಲಿರುತ್ತದೆ. ಅಂತಹರು ನಿದ್ರಿಸುವಾಗ ಕಾಮಲೋಕದ ಚಟುವಟಿಕೆಗಳೊಂದೂ ಅವರಿಗೆ ಗೊತ್ತಾಗದಂತೆ, ಆ ಚಿಪ್ಪು ಕಾಮ ಲೋಕದ ವ್ಯವಹಾರದಿಂದ ಅವರನ್ನು ಪ್ರತ್ಯೇಕಿಸುತ್ತದೆ. ಒಂದೊಂದು ವಿಶೇಷ ಸಂದರ್ಭದಲ್ಲಿ ಹೊರಗಿನ ಬಲವತ್ತರವಾದ ತಾಡನವಾಗಲೀ ಅಥವ ಅವರದೇ ಆದ

ಪ್ರಬಲವಾದ ಅಪೇಕ್ಷೆಯೇ ಆಗಲೀ ಆ ಚಿಪ್ಪಿನಲ್ಲಿ ತಾತ್ಕಾಲಿಕವಾದ ಕಂಡಿಯನ್ನುಂ
ಮಾಡಿ ಆ ಲೋಕಕ್ಕೆ ಸಂಬಂಧಪಟ್ಟ ತಾಡನವು ಆ ಕಾಮದೇಹದ ಪ್ರಜ್ಞೆಯೊ
ಪ್ರವೇಶಿಸಬಹುದು. ಆದಾದಮೇಲೆ ಆ ಕಂಡಿಯು ಪುನಹ ಮುಚ್ಚಿಕೊಳ್ಳುತ್ತ
ಮೊದಲಿನಂತೆಯೇ ಅಂತಹನು ಅಪ್ರಜ್ಞೆಯ ಸ್ಥಿತಿಯಲ್ಲಿ ಮುಂದುವರಿಯುತ್ತಾ
ಈ ಚಿಪ್ಪನ್ನು ಒಡೆದು ಹಾಕುವುದಕ್ಕೆ ಅನೇಕ ಮಾರ್ಗಗಳಿವೆ.

ಮೊದಲನೆಯದಾಗಿ:—ಕಾಲಕ್ರಮದಲ್ಲಿ ನಿಧಾನವಾಗಿಯಾದರೂ ಖಚಿತವ
ಮುಂದುವರಿಯುವ ಸಂಸರಣ ನಿಯಮವು ಆ ಚಿಪ್ಪು ಸವೆದು ಹೋಗುವಂತೆ ಮ
ಆ ಮೂಲಕ ಮನುಷ್ಯನು ಹೊರಗಿನ ಕಾಮಲೋಕದ ವ್ಯವಹಾರಗಳಲ್ಲಿ ಪ್ರಜ
ವತ್ತಾಗಿ ಪಾಲ್ಗೊಳ್ಳುವಂತೆ ಮಾಡುತ್ತದೆ.

ಎರಡನೆಯದಾಗಿ:—ಮನುಷ್ಯನೇ ಸ್ವಂತ ತಿಳಿವಳಿಕೆಯಿಂದ ಸತತವ
ಪ್ರಯತ್ನ ಮಾಡಿ ಅನೇಕ ಜನ್ಮಗಳಿಂದ ಮುಂದುವರಿದುಕೊಂಡು ಬಂದಿ
ಆ ತಮೋಗುಣ ರೂಪವಾದ ಫರದೆಯನ್ನು ತೆಗೆದು ಹಾಕಬಹುದು. ಆದರೆ, ಅ
ವರೆಗೆ ಆ ಲೋಕ ಜೀವಿತವನ್ನು ಎದುರಿಸುವುದಕ್ಕೆ ಅತ್ಯಾವಶ್ಯಕವಾದ ಧೈ
ದಾರ್ಢ್ಯ ತಿಳಿವಳಿಕೆ ಮತ್ತು ನೀತಿನೈಪುಣ್ಯತೆಯಿಂದ ಕೂಡಿದ ನಡತೆ ಇವುಗಳ
ಬೆಳೆಸಿಕೊಳ್ಳದೆ ಇದ್ದ ಪಕ್ಷದಲ್ಲಿ ಅಂತಹನು ಎರಡು ವಿಧವಾದ ಅಪಾಯಗಳಿಗೆ ಗ
ಯಾಗಬೇಕಾಗುತ್ತದೆ. ಒಂದು ತನ್ನ ಶಕ್ತಿಗಳನ್ನು ದುರ್ವಿನಿಯೋಗ ಮಾಡುವ
ಮತ್ತು ಎರಡನೆಯದಾಗಿ ಆ ಲೋಕದ ಭಯಂಕರವಾದ ಘಟನೆಗಳನ್ನು ಎದುರಿಸ
ಅಸಮರ್ಥನಾಗುತ್ತಾನೆ.

ಮೂರನೆಯದಾಗಿ:—ಯಾವುದಾದರೂ ವಾಮವಿದ್ಯೆಗೆ ಸಂಬಂಧಪಟ್ಟ ಸಂ
ರಾದಿಗಳಿಂದ ಆ ಫರದೆಯಲ್ಲಿ ಕಂಡಿಬೀಳುವಂತೆ ಮಾಡಿಕೊಳ್ಳಬಹುದು. ಆದರೆ ಅ
ಪುನಹ ಮೊದಲಿನಂತೆ ಮುಚ್ಚಿಕೊಳ್ಳುವುದಿಲ್ಲ. ಆಗ ಮನುಷ್ಯನು ತುಂಬ ಅಪಾ
ಸ್ಥಿತಿಗೆ ಸಿಕ್ಕಿಕೊಳ್ಳುತ್ತಾನೆ. ಆ ಅಪಾಯ ಎಂಥದು ಎಂಬುದನ್ನು ಬ್ಲಾವಟ್ಸ್ಕಿ
ವರು ಮಂತ್ರ ವಿದ್ಯೆ ಮೂಲಕ ವಶಪಡಿಸಿಕೊಳ್ಳಲ್ಪಟ್ಟವನ ಜೀವಿತ ಎಂಬ ಕಥೆಯಲ್ಲಿ
ಅಲ್ಲದೆ ಬುಲ್‌ವರ್‌ಲಿಟ್ಟನ್ ಎಂಬುವವರು 'ಜ್ಞನೋನಿ' ಎಂಬ ಕಾದಂಬರಿಯಲ್ಲಿ
ಕಣ್ಣಿಗೆ ಕಟ್ಟಿದಂತೆ ವರ್ಣಿಸಿರುತ್ತಾರೆ.

ನಾಲ್ಕನೆಯದಾಗಿ:—ದಿವ್ಯ ದೃಷ್ಟಿ ಬೆಳೆಸಿಕೊಂಡಿರುವ ಒಬ್ಬ ಸ್ನೇಹಿತನಿ
ಆತನು ಸಂಬಂಧಪಟ್ಟ ಸಾಧಕನು ಶೀಲವಂತನೂ ಮತ್ತು ಆ ಲೋಕದ ಭಯೊ
ದಕವಾದ ಪರಿಸ್ಥಿತಿಗಳನ್ನು ಎದುರಿಸುವಷ್ಟು ಸಾಮರ್ಥ್ಯವುಳ್ಳವನೂ ಎಂಬ ಭರ
ಯನ್ನು ಹೊಂದಿದ್ದ ಪಕ್ಷದಲ್ಲಿ ಹೊರಗಿನಿಂದ ಆ ಪರದೆಯನ್ನು ಕಿತ್ತು ಹಾಕಿ ಆತನ

ಆ ಲೋಕದಲ್ಲಿ ಎಚ್ಚರಗೊಳ್ಳುವಂತೆ ಮಾಡಬಹುದು. ನಮ್ಮ ಗ್ರಂಥಗಳಲ್ಲಿ ಈ ವಿಚಾರವಾಗಿ ಯಾರು ಈ ರೀತಿ ಉಮೇದುವಾರನನ್ನು ಎಚ್ಚರಗೊಳ್ಳುವಂತೆ ಮಾಡು ತ್ತಾರೆಯೋ-ಅಂಥವರಿಗೆ ತುಂಬ ಜವಾಬ್ದಾರಿಯುತವಾದ ಕರ್ತವ್ಯವು ತಲೆಗೆ ಕಟ್ಟ ಲ್ಪಡುತ್ತದೆ, ಎಂದು ಬರೆದಿದೆ. ಆದುದರಿಂದಲೇ ಅನುಭವಿಯಾದ ಹಿರಿಯಸೋದರನು ಬಹುಕಾಲ ಉಮೇದುವಾರನೊಡನೆ ಅನ್ಯೋನ್ಯವಾಗಿ ಸಹ ಬಾಳ್ವೆನಡೆಸಿ ಆತನ ಸ್ವಭಾವವನ್ನು ಕರಾರುವಾಕ್ಕಾಗಿ ತಿಳಿದು ಆತನ ಯೋಗ್ಯತೆಯನ್ನು ಪತ್ತೆ ಹಚ್ಚದಿದ್ದರೆ ಅಂತಹ ಜವಾಬ್ದಾರಿಯನ್ನು ವಹಿಸುವುದಿಲ್ಲ. ಆದರೆ ಕಾಮಲೋಕ ದಲ್ಲಿ ಕೆಲಸ ಮಾಡಬೇಕಾದವರ ಸಂಖ್ಯೆ ಕಡಮೆಯಿರುವುದರಿಂದ ಪ್ರತಿಯೊಬ್ಬ ಉಮೇದುವಾರನೂ ಅಗತ್ಯವಾದ ಯೋಗ್ಯತೆಯನ್ನು ಮೈಗೂಡಿಸಿಕೊಂಡಕೂಡಲೇ ಆ ರೀತಿ ಎಚ್ಚರಗೊಳಿಸಲ್ಪಡುತ್ತಾನೆ. ಒಂದು ದಿನವಾದರೂ ತಡ ಮಾಡುವುದಿಲ್ಲ ವೆಂಬ ಭರವಸೆಯನ್ನು ಕೊಡುತ್ತೇವೆ. ಅಥವ ಆ ರೀತಿ ಸಿದ್ಧತೆಯನ್ನು ಪಡೆದಿದ್ದಾಗ್ಲೂ ತಮಗೆ ಕಾಮಲೋಕದಲ್ಲಿ ಅದೃಶ್ಯ ಸಹಾಯಕರಾಗಿ ಕೆಲಸ ಮಾಡುವ ಸುಯೋಗವು ಇನ್ನು ಲಭ್ಯವಾಗಿಲ್ಲವೆಂದು ಭಾವಿಸುವಂಥವರು ಮೇಲ್ಕಂಡ ಎರಡನೆಯ ಪದ್ಧತಿಯನ್ನು ಅನುಸರಿಸಬಹುದು. ಆದರೆ ಆ ರೀತಿ ಪ್ರಯತ್ನ ಪಡು ವುದಕ್ಕೆ ಮುಂಚೆ ಆ ಬಗ್ಗೆ ಆವಶ್ಯಕವಾದ ನೈತಿಕ ಯೋಗ್ಯತೆಯನ್ನು ಪೂರ್ತ ಪಡೆದಿರ ಬೇಕು-ಇಲ್ಲದಿದ್ದರೆ ಅಪಾಯವು ಕಾದಿದೆ.

ಈ ರೀತಿ ಪೂರ್ತ ಎಚ್ಚೆತ್ತು ಸ್ವಪ್ರಜ್ಞೆಯಿಂದ ಸೇವೆಸಲ್ಲಿಸುವುದಕ್ಕೆ ಮುಂಚಿತ ವಾಗಿ ಒಳ್ಳೆಯ ಕೆಲಸವನ್ನು ಮಾಡಲು ಅವಕಾಶವಿರುತ್ತದೆ. ಪ್ರತಿಯೊಬ್ಬನೂ ನಿದ್ರಿಸುವುದಕ್ಕೆ ಮುಂಚೆ ತಾನು ಯಾವುದಾದರೂ ಒಂದು ಸೇವಾಕಾರ್ಯವನ್ನು ಮಾಡ ಬೇಕೆಂದು ಸಂಕಲ್ಪ ಮಾಡಿ ಮಲಗಿಕೊಂಡರೆ ಸ್ಥೂಲ ದೇಹವನ್ನು ನಿದ್ರೆಯ ಮೂಲಕ ಬಿಟ್ಟಕೂಡಲೇ ಅದನ್ನು ಮಾಡಿ ಮುಗಿಸುವುದು ಖಚಿತ, ಅನಂತರ ಪುನಹ ಸುಪ್ತಾ ವಸ್ಥೆಗೆ ಒಳಗಾಗುತ್ತಾನೆ. ಒಂದೊಂದು ಸಂದರ್ಭದಲ್ಲಿ ಮಾಡಬೇಕೆಂದಿರುವ ಕೆಲಸವು ನಿದ್ರೆ ಕಾಲವನ್ನೆಲ್ಲ ತೆಗೆದುಕೊಳ್ಳಬಹುದು. ನಿದ್ರೆ ಕಾಲದಲ್ಲೇ ಏಕೆ-ಎಚ್ಚತ್ತಿ ರುವಾಗಲೂ ಕೂಡ ಅಗತ್ಯವಾದ ಯೋಚನೆಗಳನ್ನು ಸಹಾಯವು ಅಗತ್ಯವಾಗಿರುವ ವ್ಯಕ್ತಿಗೆ ಕಳುಹಿಸುತ್ತಿರಬಹುದು. ಆ ಮೂಲಕ ಅಗತ್ಯವಾದ ಸಹಾಯವು ಸಂಬಂಧ ಪಟ್ಟವನಿಗೆ ತಲುಪೇತಲುಪುತ್ತದೆ. ಪೂರ್ತ ಎಚ್ಚೆತ್ತು ಸಹಾಯಕನಾಗಿರುವವನಿಗೂ ಮೇಲ್ಕಂಡಂತೆ ಸ್ವಪ್ರಯತ್ನದಿಂದ ಒಳ್ಳೆಯ ಕೆಲಸವನ್ನು ಮಾಡಬೇಕೆಂದಿರುವವನಿಗೂ ಇರುವ ತಾರತಮ್ಯವೇನೆಂದರೆ, ಪೂರ್ತ ಎಚ್ಚತ್ತವನಿಗೆ ಘರದೆಯು ಪುನಹ ಮುಸುಕಿ ಕೊಳ್ಳುವುದಿಲ್ಲ. ಆದರೆ ಆ ರೀತಿ ಇನ್ನೂ ಎಚ್ಚರಗೊಳಿಸದೇ ಇರುವವನಿಗೆ ಮಾಡ ಬೇಕೆಂದಿದ್ದ ಕೆಲಸವು ಮುಗಿದ ಕೂಡಲೇ ಘರದೆಯು ಮುಚ್ಚಿಕೊಳ್ಳುತ್ತದೆ. ಪುನಹ ಸಂಕಲ್ಪ ಮಾಡಿ ಪ್ರಯತ್ನ ಪಡುವವರೆಗೆ ಅದು ಪುನಹ ತೆರೆಯುವುದಿಲ್ಲ-ಅಷ್ಟೇ.

ಅಧ್ಯಾಯ ೧೦

ಮೂರನೆಯ ಚೈತನ್ಯ ಉತ್ಸೃಷ್ಟಿಧಾರೆ

ಮಾನವನ ಆತ್ಮವು ರೂಪಗೊಳ್ಳುವುದಕ್ಕೆ ಮೊದಲನೆಯ ಮೂರ್ತಿಯಿಂದ ಮೂರನೆಯ ಉತ್ಸೃಷ್ಟಿ ಚೈತನ್ಯ ಧಾರೆಯು ಬಂದು ಸೇರಿಕೊಳ್ಳುವುದು ಆವಶ್ಯಕ. ಈ ಮೂರನೆಯ ಧಾರೆಯು ಕೆಳಕ್ಕಿಳಿಯುತ್ತಾ ಸುತ್ತು ಮುತ್ತಲಿನ ಪ್ರಕೃತಿಯೊಡನೆ–ಇತರೆ ಎರಡು ಸೃಷ್ಟಿ ಧಾರೆಗಳಂತೆ ಮಿಶ್ರವಾಗಿ ಮಬ್ಬಾಗುವುದಿಲ್ಲ. ಅದು ಪರಿಶುದ್ಧವಾದ ಸ್ವರೂಪದಲ್ಲೇ ಕೆಳಕ್ಕಿಳಿದು ಬಂದು ಬುದ್ಧಿ ಮಟ್ಟದಲ್ಲಿ ಹಾರಾಡು ತ್ತಿರುತ್ತದೆ, ಕಲ್ಪಾಂತರಗಳ ಹಿಂದೆಯೇ ಹೊರಹೊಮ್ಮಿದ ಎರಡನೆ ಚೈತನ್ಯ ಧಾರೆಯು 3 ಭೂತ ವರ್ಗಗಳ ಮೂಲಕ ಕೆಳಕ್ಕಿಳಿದು ಖನಿಜ, ಸಸ್ಯ ಮತ್ತು ಪಶು ವರ್ಗಗಳ ಮೂಲಕ ಹತ್ತಿಕೊಂಡು ಬಂದು ಪುಟನೆಗೆದು ಅರೂಪ ಮಟ್ಟಕ್ಕೆ ಹತ್ತುವ ವರೆಗೆ ಅದರೊಡನೆ ಮೂರನೆಯ ಚೈತನ್ಯ ಧಾರೆಯು ಒಂದಾಗುವುದಕ್ಕೆ ಸಾಧ್ಯವಿರು ವುದಿಲ್ಲ. ಈ ಪ್ರಯತ್ನವು ಪಶುವಿನ ಆತ್ಮದಿಂದಲೇ ಮೊದಲಾಗಬೇಕು. ಆ ರೀತಿ ಪಶುವಿನ ಆತ್ಮವು ಮೇಲಕ್ಕೆ ಪುಟನೆಗೆದು ಅರೂಪ ಮಟ್ಟವನ್ನು ತಲುಪಿದಾಗ-ಬುದ್ಧಿ ಮಟ್ಟದಲ್ಲಿ ಕಾದಿದ್ದ ಮೂರನೆಯ ಚೈತನ್ಯ ಧಾರೆಯು ಅದರೊಳಕ್ಕೆ ಇಳಿದು ಬಂದು ಸೇರಿಕೊಳ್ಳುತ್ತದೆ. ಪಶುವಿನ ಆತ್ಮವು ಕಾರಣ ದೇಹವಾಗಿ ರೂಪಗೊಳ್ಳುತ್ತದೆ. ಅದರೊಳಕ್ಕೆ ಆತ್ಮ, ಬುದ್ಧಿ, ಮನಸ್ಸೆಂಬ ಮೂರನೆ ಚೈತನ್ಯ ಧಾರೆಯು ಇಳಿದು ಅದರ ಆತ್ಮವಾಗಿ ವರ್ತಿಸುತ್ತದೆ. ಈ ರೀತಿ ಮನುಷ್ಯನ ಆತ್ಮವು ರೂಪಗೊಳ್ಳು ತ್ತದೆ, ಇದು-ಎಂದರೆ ಮಾನವ ಆತ್ಮವು ಯಾವಾಗಲೂ ದೈವಿಕತೆ ಕಡೆಗೆ ಊರ್ಧ್ವ ಮುಖವಾಗಿ ಹತ್ತುತ್ತಿರುತ್ತದೆಯೆಂದೂ–ಆದರೆ ಪಶುವಿನ ಆತ್ಮವು ಅಧೋ ಮುಖ ವಾಗಿ ಸರಿಯುತ್ತದೆ, ಎಂದೂ ಹೇಳುವುದುಂಟು. ಇದರ ಅರ್ಥ ಇಷ್ಟೇ, ಮಾನವನ ಆತ್ಮವು ಪಶುವಿನ ಆತ್ಮದಂತೆ ಹಿಂದಕ್ಕೆ ಸರಿದು ಸಮೂಹಾತ್ಮದೊಳಕ್ಕೆ ಸೇರಿಕೊಳ್ಳು ವುದಿಲ್ಲ, ಅದು ಹೆಚ್ಚು ಹೆಚ್ಚು ದೈವಿಕತೆಯ ಕಡೆಗೆ ಹಾತೊರೆಯುತ್ತಾ ಸಂಸರಣ ಹೊಂದುತ್ತಲೇ ಇರುತ್ತದೆ.

ಯಾರಾದರೂ ನಾಯಿಯಂತಹ ಸಾಕು ಪ್ರಾಣಿಗಳನ್ನು ಇಟ್ಟುಕೊಂಡು ಅವು ಗಳನ್ನು ಪ್ರೀತಿಸುತ್ತಿದ್ದರೆ, ಪಶುವಿನ ಆತ್ಮವು ಹೇಗೆ ಸ್ವಪ್ರಯತ್ನದಿಂದ ತನ್ನ ಧಣಿ ಯನ್ನು ಸಂತೋಷ ಪಡಿಸಲು ಎಂತಹ ತ್ಯಾಗ ಮಾಡುವುದಕ್ಕೂ ಹಿಂಜರಿಯುವುದಿಲ್ಲ ವೆಂಬಂಶವು ಅನುಭವಕ್ಕೆ ಬರುತ್ತದೆ. ಅಂತಹ ಸನ್ನಿವೇಶದಲ್ಲಿ ಪಶುವು ತನ್ನ

ಸ್ವಾಮಿಯ ಕಡೆಗೆ ಭಕ್ತಿ, ಪ್ರೇಮಗಳನ್ನು ಕಳುಹಿಸುತ್ತಿರುವುದೇ ಅಲ್ಲದೇ ತನ್ನ ಮನಸ್ಸಿನಿಂದ ಆತನ ಮನೋಗತವನ್ನು ತಿಳಿದುಕೊಳ್ಳಲು ಸತತವಾಗಿ ಪ್ರಯತ್ನ ಪಡುತ್ತಲೇ ಇರುತ್ತದೆ. ಇದರಿಂದ ಪಶುವಿನ ಗ್ರಹಣ ಶಕ್ತಿಯೂ ಪ್ರೇಮ ತ್ಯಾಗ ಗಳೂ ತುಂಬ ಅಭಿವೃದ್ಧಿಯಾಗುತ್ತಿರುತ್ತವೆ. ಈ ವಿಧವಾದ ಅಭಿವೃದ್ಧಿ ದಾಯಕ ವಾದ ಸನ್ನಿವೇಶದಲ್ಲಿ ಒಂದು ರಸನಿಮಿಷವು ಬಂದು-ಪಶುವು ತನ್ನ ಸರ್ವ ಶಕ್ತಿಯನ್ನೆಲ್ಲ ವಿನಿಯೋಗ ಮಾಡಿ ತನ್ನ ಸಮೂಹಾತ್ಮದ ಮಟ್ಟದಿಂದ ತುಂಬ ಮೇಲಕ್ಕೆ ಹಾತೊರೆದು ಹತ್ತುವುದಕ್ಕೆ ಪ್ರಯತ್ನ ಪಟ್ಟಾಗ ಮೇಲ್ಕಂಡಂತೆ ಕಾರಣ ದೇಹವು ಏರ್ಪಟ್ಟು ಅದರೊಳಕ್ಕೆ ಮೂರನೆಯ ಚೈತನ್ಯ ಧಾರೆಯು ಬಂದು ಸೇರಿಕೊಳ್ಳುತ್ತದೆ. ಅಲ್ಲಿಂದಾಚೆಗೆ ಆದರ ಪ್ರವೃತಿಯೆಲ್ಲವೂ ಊರ್ಧ್ವ ಮುಖವಾಗಿ ದೈವಿಕತೆಯ ಕಡೆಗೆ ಹರಿಯಲು ಪ್ರಾರಂಭವಾಗುತ್ತದೆ.

ಆತ್ಮಸತ್ವವು ದೈವಿಕವಾದುದು. ಇದು ಪುನಃ ಸಂಸರಣ ಹೊಂದಿ ದೈವಿಕತೆ ಯನ್ನು ಸೇರುತ್ತದೆಯೆಂದು ಹೇಳಿದಾಗ ಒಂದು ಪ್ರಶ್ನೆ ಏಳುತ್ತದೆ–ಏನೆಂದರೆ ದೈವಿಕತೆಯಿಂದ ಹೊರ ಹೊಮ್ಮಿ ಪುನಹ ದೈವಿಕತೆಯನ್ನು ಸೇರುವುದರಲ್ಲಿ ಏನು ಔಚಿತ್ಯವಿದೆ ? ಮಾನವನು ಏಕೆ ಅನಾವಶ್ಯಕವಾಗಿ ನೋವು, ಬೇನೆ, ಪರಿತಾಪಗಳಿಗೆ ಒಳಗಾಗಬೇಕು ? ಇದಕ್ಕೆ ಉತ್ತರವಿಷ್ಟೇ, ಪ್ರಶ್ನೆಯು ತಪ್ಪು ಅಭಿಃಪ್ರಾಯದ ಹಿನ್ನೆಲೆಯಿಂದ ಹೊರಟಿರುತ್ತದೆ. ಮಾನವನ ಆತ್ಮವು ದೈವಿಕತೆಯ ಮೂಲದಿಂದ ಹೊರಹೊಮ್ಮಿದಾಗ ಅದು ಪೂರ್ಣವೂ ಸರ್ವಜ್ಞವೂ ಆದ ಮಾನವಾತ್ಮವಾಗಿರುವು ದಿಲ್ಲ. ಆ ಪ್ರಾರಂಭ ಸ್ಥಿತಿಯಲ್ಲಿ ಬೀಜರೂಪವಾದ ಆತ್ಮಸತ್ವವಾಗಿ ಮಾತ್ರ ಇತ್ತು. (ಉದಾಹರಣೆಗೆ ತಂದೆ-ತಾಯಿ ಅಂಶವು ಗರ್ಭದಲ್ಲಿ ಪಿಂಡ ರೂಪದಲ್ಲಿ ಬೆಳೆದು ಅನಂತರ ಮಗುವಾಗಿ–ಬಾಲಕನಾಗಿ–ಪ್ರೌಢನಾಗಿ ಬೆಳೆದು ಮನುಷ್ಯನಾಗು ವಂತೆ ಮನುಷ್ಯನ ಆತ್ಮವು ಮೊದಲು ಬೀಜ ರೂಪದಲ್ಲಿತ್ತು, ಅದು ಬೆಳೆದುದೇವ ರಂತೆ ಆಗಬೇಕಾದರೆ ಸಂಸರಣವು ಆವಶ್ಯಕ—T.V.R.) ಹೀಗೆ ದೈವಾಂಶವಾದ ಆತ್ಮಸತ್ವವು (Monadic Essenee) ಬೀಜ ರೂಪವಾಗಿ ಈಶ್ವರನಿಂದ ಹೊರ ಹೊಮ್ಮಿ ಅನೇಕ ರೂಪಗಳಲ್ಲಿ ಸಂಸರಣ ಹೊಂದಿ ಕೊನೆಗೆ ಕೋಟ್ಯಂತರ ಮಹತ್ತರ ವಾದ ಸಿದ್ಧಪುರುಷರಾಗಿ ದೈವಿಕತೆಯನ್ನು ಪಡೆಯುತ್ತದೆ. ಇವರಲ್ಲಿ ಪ್ರತಿ ಯೊಬ್ಬನೂ ಬ್ರಹ್ಮಾಂಡಾಧಿಪತಿಯಾಗಿ ಬೆಳೆಯುವ ದೈವಿಕ ಶಕ್ತಿಯನ್ನು ಹೊಂದಿರುತ್ತಾನೆ.

ಈ ಪುಸ್ತಕದಲ್ಲಿ ಕೊಟ್ಟಿರುವ ಚಿತ್ರಗಳ ಮೂಲಕ ಈ ಅದ್ಭುತವಾದ ಮಾನವನ ಸಂಸರಣವನ್ನು ಓದುಗರಿಗೆ ಮನದಟ್ಟು ಮಾಡಬೇಕೆಂದಿರುತ್ತೇವೆ, ಮಾನವನು ಬೆಳೆದಂತೆಲ್ಲ ಆ ಬೆಳವಣಿಗೆಯು ಹೇಗೆ ಆತನ ತೇಜಸ್ಸಿನ ಬದಲಾವಣೆ ಮೂಲಕ

ವ್ಯಕ್ತವಾಗುತ್ತದೆ, ಎಂಬುದನ್ನು ಗಮನಿಸಬೇಕು. ಆತ್ಮಸತ್ವವು ವ್ಯಕ್ತಿತ್ವವನ್ನು ಪಡೆ
ದಾಗ ಉಂಟಾಗುವ ಅಭೂತ ಪೂರ್ವವಾದ ಪರಿವರ್ತನೆಗೆ ಸಂಬಂಧಪಟ್ಟಂತೆ ವಿವರಿಸಿ
ತಿಳಿಸಬೇಕಾದ ಒಂದು ಅಂಶವಿದೆ. ಈ ಆತ್ಮಸತ್ವದಲ್ಲಿ ಒಂದು, ಹಿಂದೆ ಇಲ್ಲದಂತಹ
ಬದಲಾವಣೆಯಾಗಿದೆ. ಅದೇನೆಂದರೆ ಅದು ತನ್ನ ಇದುವರೆಗಿನ ದೀರ್ಘ ಸಂಸರಣ
ದಲ್ಲಿ ಎಂದರೆ ಹಿಂದೆ ತಾನು ಚೇತನಗೊಳಿಸಿದ ಭೂತವರ್ಗಗಳಲ್ಲೆಲ್ಲ ಆತ್ಮಸ್ವರೂಪ
ವಾಗಿದ್ದುಕೊಂಡು ಬಂದಿದೆ. ಆದರೆ ಈಗ ಎಂದರೆ ಮಾನವತೆಯ ಮಟ್ಟದಲ್ಲಿ ಇದು
ವರೆಗೂ ಎಲ್ಲರೂಪಗಳಚೇತನ ಸ್ವರೂಪವಾಗಿ ಕೆಲಸ ಮಾಡಿದ ಆತ್ಮವು, ಕಾರಣ
ದೇಹವಾಗಿ ಪರಿವರ್ತನೆ ಹೊಂದಿರುತ್ತದೆ. ಈ ಕಾರಣ ದೇಹವು ಅಂಡಾಕೃತಿಯ
ತೇಜಸ್ಸಿನ ರೂಪದಲ್ಲಿ ಕಂಗೊಳಿಸುತ್ತಾ ಅದಕ್ಕಿಂತಲೂ ವೈಭವಯುಕ್ತವಾದ
ಮೇಲಿನ ಆತ್ಮಕ್ಕೆ ದೇಹವಾಗಿ ಮಾನವನ ವ್ಯಕ್ತಿ ಆತ್ಮದ ಅಭಿವ್ಯಕ್ತತೆಗೆ ಅವಕಾಶ
ಮಾಡಿಕೊಟ್ಟಿರುತ್ತದೆ ಇದು ಗಮನಿಸಬೇಕಾದ ಅಂಶವಾಗಿರುತ್ತದೆ.

ಕೆಲವರು ಈ ಆತ್ಮಸತ್ವವು ಬಹು ದೀರ್ಘಸರಣಿಯಸಂಸರಣ ಹೊಂದಿದನಂತರ
ಮೂರನೆಯ ಸೃಷ್ಟಿ ಚೈತನ್ಯದ ಧಾರೆಗೆ ಕಾರಣ ದೇಹವಾಗಿ ಪರಿವರ್ತಿತವಾಯಿತಲ್ಲ !
ಅದು ಹೊಂದುವಷ್ಟು ಯೋಗ್ಯವಾದ ಗುರಿಯು ಇದೇನೇ ? ಎಂಬುದಾಗಿ ಸಂಶಯ
ಪಡಬಹುದು-ಇಂತಹ ದೀರ್ಘಕಾಲ ನಡೆದ ಬದಲಾವಣೆಗಳ ಸರಣಿಯ ಪ್ರತಿಫಲವಾಗಿ
ಪೂರ್ವಸಿದ್ಧತೆಯನ್ನು ಪಡೆಯುವುದರ ಮೂಲಕವೇ ಆತ್ಮಸತ್ವವು ಅತ್ಯಂತ
ಮೇಲ್ಮಟ್ಟದ ಶಿವಚೈತನ್ಯಾಂಶಕ್ಕೆ ಕಾರಣ ದೇಹವಾಗಿ ಆಶ್ರಯ ಕೊಡುವ ಸುಯೋಗ
ವನ್ನು ಪಡೆಯಿತು. ಈ ವಿಧವಾದ ಸಂಸರಣವು ನಡೆಯದೇ ಹೋಗಿದ್ದರೆ ಮಾನವನ
ಅಮರತ್ವಸ್ವರೂಪವಾದ ವ್ಯಕ್ತಿತ್ವವು ಅಸ್ತಿತ್ವಕ್ಕೆ ಬರುತ್ತಿರಲಿಲ್ಲ. ಮಾನವನ ಹಂತದ
ಹಿಂದಿನ ದೀರ್ಘ ಸಂಸರಣದ ಸಾರವೆಲ್ಲವೂ ಮಾನವನ ಕಾರಣ ದೇಹದಲ್ಲಿ ಗರ್ಭೀ
ಕೃತವಾಗಿರುತ್ತದೆ. ಅಲ್ಲದೆ ಮೇಲ್ಮಟ್ಟದ ತ್ರಿಪಟಯು ದೇಶ ಕಾಲಗಳಿಗೆ ಅತೀತ
ವಾದ ನಿತ್ಯತ್ವದ ಮಟ್ಟವನ್ನು ತಲುಪಿರುತ್ತದೆ. ಇದು ಆದುದು ದೈವಿಕತೆಯನ್ನು
ಮಾಂಸಮಯವಾದ ಸ್ಥೂಲ ದೇಹದ ಮಟ್ಟಕ್ಕೆ ಇಳಿಸಿದುದರಿಂದ ಅಲ್ಲ, ಮಾನವತೆ
ಯನ್ನು ದೈವಿಕತೆಗೆ ಏರಿಸಿದುದ್ದರಿಂದ. ಹಿಂದಿನ ದೀರ್ಘ ಸರಣಿಯ ಸಂಸರಣವಿಲ್ಲದಿ
ದ್ದರೆ ಈಯಂತಿಮ ಘಟ್ಟದ ಸಿದ್ಧಿಯು ಲಭಿಸುತ್ತಿರಲಿಲ್ಲ. ಮಾನವನು ಪರಿಪೂರ್ಣತೆ
ಯನ್ನು ಪಡೆಯುವ ಅವಕಾಶದ ಮಟ್ಟಕ್ಕೆ ಬಂದು ಆ ಮೂಲಕ ಈಶ್ವರನ ಪ್ರೇಮ
ಧಾರೆಗೆ ಪಾತ್ರನಾದುದರಿಂದಲೂ ಮಾನವನು ಆ ಪ್ರೇಮವನ್ನು ಜವಾಬು ರೂಪದಲ್ಲಿ
ಅರ್ಪಿಸಲು ಯೋಗ್ಯತೆಯನ್ನು ಪಡೆದಿರುವುದರಿಂದಲೂ ಈಶ್ವರನ ಪರಿಪೂರ್ಣತೆಯೂ
ಕೂಡ ಆ ಮೂಲಕ ಇನ್ನೂ ಮೇಲಿನ ಮಟ್ಟಕ್ಕೆ ಹತ್ತಿದಂತೆ ಆಯಿತು.

ನಾಲ್ಕನೆಯ ಚಿತ್ರದ ಕೇವಲ ಬಲಭಾಗದಲ್ಲಿರುವ ರೇಖಾ ಪಟ್ಟಿಯು ಮಾನವನ
ಬಹು ಮುಂದಿನ ಆಧ್ಯಾತ್ಮಿಕ ಬೆಳವಣಿಗೆಯನ್ನು ಪ್ರತಿನಿಧಿಸುತ್ತದೆ. ಈ ಯಂತಿಸ್ಥಿ

ನಲ್ಲಿ ಕಾರಣ ದೇಹವು ತುಂಬ ಬೆಳೆದು ಬುದ್ಧಿ ಮಟ್ಟದಲ್ಲಿ ಸ್ವಪ್ರಜ್ಞೆಯಿಂದ ವ್ಯವಹರಿಸಬಲ್ಲಂಥ ಯೋಗ ಮಾರ್ಗದಲ್ಲಿನ ಉನ್ನತ ಮಟ್ಟದ ದೀಕ್ಷೆಯನ್ನು ಪಡೆದಿರುವ ಮಾನವರು ಮಾತ್ರ ಇರಬಲ್ಲರು. (ಇಂತಹರು ಸ್ಥೂಲ ದೇಹವನ್ನು ಕಳಚಿ ಹಾಕಿದ ಮೇಲೆ ಅದಕ್ಕಿಂತಲೂ ಉನ್ನತ ಮಟ್ಟಕ್ಕೆ ತಮ್ಮ ಪ್ರಜ್ಞೆಯನ್ನು ಹತ್ತಿಸಬಲ್ಲರು.) ಇಂತಹ ಪ್ರಜ್ಞೆ ಕೇಂದ್ರವು (ಅತ್ಯಂತಅಗಲವಾದ ಮಧ್ಯೆ ಗೆರೆಯನ್ನು ನೋಡಿರಿ) ಹಿಂದಿನಂತೆ ಕೆಳಗಿನ ಮಟ್ಟಗಳಲ್ಲಿರುವುದಿಲ್ಲ, ಮನಸ್ಸಿನ ಮಟ್ಟಕ್ಕೂ ಬುದ್ಧಿ ಮಟ್ಟಕ್ಕೂ ಮಧ್ಯೆಯಿರುತ್ತದೆ. ಅಲ್ಲದೆ ಆತನ ಕಾರಣ ದೇಹವೂ ಮೇಲ್ಮಟ್ಟದ ಕಾಮದೇಹವೂ ಆಯಾ ದೇಹಗಳ ಕೆಳಭಾಗಕ್ಕಿಂತಲೂ ತುಂಬ ಹೆಚ್ಚಾಗಿ ಬೆಳೆದಿರುವುದು ಚೆನ್ನಾಗಿ ಕಾಣುತ್ತದೆ. ಆತನಿಗೆ ಸ್ಥೂಲ ದೇಹವು ನೆಪಮಾತ್ರಕ್ಕೆ ಎಂದರೆ ಸೇವೆಗೋಸ್ಕರ ಇದೆಯೇ ವಿನಾ ಅಲ್ಲಿಯ ಭೋಗ್ಯ ವಸ್ತುಗಳ ಮೇಲೆ ಅವನ ಯೋಚನೆಗಳಾಗಲೀ ಆಶೆಗಳಾಗಲೀ ಕೇಂದ್ರೀ ಕೃತವಾಗಿ ಸರ್ವಥಾ ಇಲ್ಲ. ಆತನನ್ನು ಸ್ಥೂಲ ಜನ್ಮಕ್ಕೆ ಕಟ್ಟುವಂತಹ ಕರ್ಮವನ್ನು ಆತನು ಬಹು ಹಿಂದೆಯೇ ಮುಗಿಸಿರುತ್ತಾನೆ. ಆದಾಗ್ಯೂ ಸ್ಥೂಲ ಮತ್ತು ಕಾಮದೇಹಗಳನ್ನು ಇನ್ನೂ ಇಟ್ಟುಕೊಂಡಿರುವ ಉದ್ದೇಶವು ಅವುಗಳ ಮೂಲಕ ಸೇವೆಸಲ್ಲಿಸುವ ಸಲುವಾಗಿಯೂ ಮತ್ತು ಮೇಲಿನ ಲೋಕಗಳ ಅನುಗ್ರಹ ಶಕ್ತಿಯನ್ನು ಕೆಳಗಿನ ಲೋಕಗಳಿಗೆ ತರುವುದಕ್ಕೆ ತಕ್ಕನಾಲೆಗಳಂತೆ ಬಳಸುವಸಲುವಾಗಿಯೂ ಮಾತ್ರ. ಏಕೆಂದರೆ ಕೆಲವು ದೈವಿಕ ಶಕ್ತಿಗಳಿರುತ್ತವೆ. ಇವುಗಳನ್ನು ಕೆಳಕ್ಕೆ ಸಾಗಿಸಲು ಸಾಕಾದಷ್ಟು ಪವಿತ್ರವಾದ ನಾಲೆಗಳು ಬೇಕು. ಇಂತಹ ಬೆಳೆದಯೋಗಿಯ ಸ್ಥೂಲ ಮತ್ತು ಕಾಮದೇಹಗಳು ತುಂಬ ಪರಿಶುದ್ಧವಾಗಿರುವ ಪ್ರಯುಕ್ತ—ಅವುಗಳು ಅಂತಹ ನಾಲೆಗಳಾಗಬಲ್ಲುವು, ಮತ್ತು ಆ ಮೂಲಕ ಇಳಿದು ಬರುವ ಶಕ್ತಿಗಳಿಂದ ಕೆಳಗಿನ ಲೋಕಗಳ ಜನರಿಗೆ ತುಂಬ ಪ್ರಯೋಜನವಾಗುವುದು.

ಈ ಕಾರಣ ದೇಹವು ಹೊಸದಾಗಿ ರೂಪಗೊಂಡಾಗ ಅದು ಗಾಜಿನಂತೆ ಪಾರದರ್ಶಕ ಸ್ವಭಾವದಿಂದ ಅಂಡಾ ಕೃತಿಯಲ್ಲಿ ಕಂಗೊಳಿಸುತ್ತದೆ. ಇದರ ಮಟ್ಟದ ಎಂದರೆ ಅರೂಪತತ್ವ ಮಟ್ಟದ ದಿವ್ಯ ದೃಷ್ಟಿಗೆ ಮಾತ್ರ ಇದುಗೋಚರವಾಗುತ್ತದೆ. ಈ ಪ್ರಾರಂಭ ಸ್ಥಿತಿಯಲ್ಲಿ ಅದರಲ್ಲಿ ಯಾವ ಬಣ್ಣಗಳೂ ಕಾಣುವುದಿಲ್ಲ. ಸ್ವಚ್ಛವಾದ ಸ್ಫಟಿಕದಂತೆ ಪ್ರಕಾಶಿಸುತ್ತದೆ—ಏಕೆಂದರೆ ಅದರ ಮೂಲಕ ವ್ಯಕ್ತವಾಗಿರುವ ದೈವಿಕ ಚೈತನ್ಯವು ಆ ಮಟ್ಟದ ಹೊರಗಿನ ತಾಡನಗಳಿಗೆ ಓಗೊಡುವುದನ್ನು ಕಲಿತಿಲ್ಲ. ಆದಾಗ್ಯೂ ಅದರ ಹೊರಮೈಯ್ಯಿಯ ಮೇಲೆ ಅಲ್ಪ-ಸ್ವಲ್ಪ ಬಣ್ಣದ ಛಾಯೆ ಕಂಡು ಬರುತ್ತದೆ. ಇದು ಒಳಗಿರುವ ದೈವಿಕ ಚೈತನ್ಯಕ್ಕೆ ಸಂಬಂಧಪಟ್ಟುದ್ದಲ್ಲ. ಯಾವ ಸಮೂಹಾತ್ಮದಿಂದ ಈ ಕಾರಣ ದೇಹವು ಬೇರ್ಪಟ್ಟು ರೂಪಗೊಂಡಿತೋ, ಆ ಸಮೂಹಾತ್ಮದಲ್ಲೇ ಬೆಳೆದು ಬಂದ ಕೆಲವು ಗುಣಗಳ ಪ್ರತೀಕ. ಈ ಗುಣಗಳಿಗೆ ಸಂಬಂಧಪಟ್ಟ ತಾಡನಗಳನ್ನು ಈಗಾಗಲೇ ಕಾರಣ ದೇಹವು ಒಳಗಿರುವ ಚೈತನ್ಯಕ್ಕೆ

ಕಳುಹಿಸುವುದಕ್ಕೆ ಪ್ರಾರಂಭಿಸಿರುತ್ತದೆ. ಆದುದರಿಂದಲೇ ಈ ಸ್ಪಂದಗಳಿಗೆ ಸಂಬಂಧ ಪಟ್ಟ ಅಸಕು-ಮುಸಕಾದ ಬಣ್ಣವು ಸ್ವಲ್ಪ ಪುಟ್ಟಿಗೆ ಗೋಚರವಾಗುತ್ತದೆ. 5–ನೆಯ ಚಿತ್ರವನ್ನು ಗಮನಿಸಿರಿ. ಇದು ಕಾರಣ ದೇಹವು ರೂಪಗೊಂಡ ಪ್ರಾರಂಭ ಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಇದು ಒಬ್ಬ ಕಾಡು ಮನಷ್ಯನ ಕಾರಣ ದೇಹವೆಂದು ಭಾವಿಸಬಹುದು. ಈ ಚಿತ್ರದ ಎಡಗಡೆ ಕಾಣುವ ಬೂದು ಬಣ್ಣವು ಮನುಷ್ಯನ ಕಾರಣ ದೇಹಕ್ಕೆ ಸಂಬಂಧಪಟ್ಟುದಲ್ಲ, ಇದು ಈ ರೂಪವನ್ನು ಚಿತ್ರಿಸಿದ ಚಿತ್ರಗಾರನು ಕಾರಣ ದೇಹಕ್ಕೆ ಅಂಡಾ ಕೃತಿಯು ಎದ್ದು ಕಾಣುವಂತೆ ಸೇರಿಸಿರುವ ಬಣ್ಣ ಮಾತ್ರ.

ಆದರೆ ಈ ಪ್ರಾರಂಭ ಸ್ಥಿತಿಯಲ್ಲಿ ಮನುಷ್ಯನಿಗೆ ಹೊರಗಿನ ತಾಡನಗಳನ್ನು ಅರಿತುಕೊಳ್ಳುವುದಕ್ಕಾಗಲೀ ಅವುಗಳಿಗೆ ತಕ್ಕ ಜವಾಬುಗಳನ್ನು ಕೊಡುವುದಕ್ಕಾಗಲೀ ತಕ್ಕಷ್ಟು ಪ್ರಜ್ಞೆ ಬೆಳೆದಿರುವುದಿಲ್ಲ. ಏಕೆಂದರೆ ಈ ರೀತಿ ಪ್ರಜ್ಞೆಯು ಬೆಳೆಯುವ ವಿಧಾನವು ಹೊರಗಿನ ತಾಡನಗಳಿಗೆ ಜವಾಬು ಕೊಡುವುದರ ಮೂಲಕ. ಆದರೆ ಈ ಕಾರ್ಯವು ಸ್ಥೂಲ ಲೋಕದ ಮಟ್ಟದಲ್ಲಿ ಮೊದಲು ಪ್ರಾರಂಭವಾಗಬೇಕು. ಆದುದರಿಂದ ಅಂತರಾತ್ಮನು ತನ್ನ ಒಂದು ಕಿರಣವನ್ನು ಕೆಳಗಿನ ಲೋಕಗಳಿಗೆ ಕಳುಹಿಸುವುದರ ಮೂಲಕ ಜನ್ಮವೆತ್ತ ಬೇಕಾಗುತ್ತದೆ. ಆ ಮೂಲಕ ಅನುಭವವನ್ನು ಸಂಗ್ರಹಿಸಿ ಗುಣ ವಿಶೇಷಗಳನ್ನು ಬೆಳೆಸಿಕೊಂಡು ಆ ಫಲಿತಾಂಶವನ್ನು ಮರಣಾನಂತರ ಸ್ಥಿತಿಯಲ್ಲಿ ತನ್ನ ಸ್ವಭಾವಕ್ಕೆ ಸೇರಿಸಿಕೊಳ್ಳಬೇಕಾಗುತ್ತದೆ. ಇದು ಹಣಗಾರನು ತನ್ನಲ್ಲಿರುವ ಹಣವನ್ನು ಒಂದು ಉದ್ಯಮದಲ್ಲಿ ಬಂಡವಾಳವಾಗಿ ಹಾಕುವ ಪ್ರವೃತ್ತಿಗೆ ಹೋಲುತ್ತದೆ. ಏಕೆಂದರೆ ಅಂತರಾತ್ಮನು ಬಂಡವಾಳಸ್ಥನಂತೆ-ಬಂಡವಾಳದ ಜೊತೆಗೆ ಸ್ವಲ್ಪ ಲಾಭವನ್ನೂ ಕೂಡ ನಿರೀಕ್ಷಿಸುತ್ತಾನೆ. ಸಾಧಾರಣವಾಗಿ ಆತನ ನಿರೀಕ್ಷಣೆಯಂತೆ ಅವೆರಡೂ ಲಭಿಸುತ್ತವೆ. ಆದರೆ ಕೆಲವು ವಿಶೇಷ ಸಂದರ್ಭಗಳಲ್ಲಿ ಲಾಭ-ನಷ್ಟಗಳೆರಡೂ ಪ್ರಾಪ್ತವಾಗುತ್ತವೆ, ಎಂದರೆ ಅಂತರಾತ್ಮನು ಹಾಕಿದ ಬಂಡವಾಳ ರೂಪವಾದ ತನ್ನ ಪ್ರಕೃತಿ ಯಂಶದಲ್ಲಿ ಸ್ವಲ್ಪ ಭಾಗವು ಕಾಮ ಪ್ರಕೃತಿಯಲ್ಲಿ ಸಿಲುಕಿಕೊಂಡು ನಷ್ಟವಾಗಿ ಹೋಗುತ್ತದೆ. ಇದಕ್ಕೆ ಸಂಬಂಧಪಟ್ಟ ವಿವರಣೆಯನ್ನು ಇಲ್ಲಿ ಕೊಡಲು ಸಾಧ್ಯವಿಲ್ಲ, 'ಕಾಮಲೋಕ' ವೆಂಬ ಪುಸ್ತಕವನ್ನು ನೋಡಿರಿ.

ಈ ಸಂದರ್ಭದಲ್ಲಿ ಪುನರ್ಜನ್ಮ ಸಿದ್ಧಾಂತದ ಬಗ್ಗೆ ಇರುವ ವಾದಗಳನ್ನೆಲ್ಲ ಮುಂದಿಡಲು ನಾನು ಸಿದ್ಧನಾಗಿಲ್ಲ. ಎರಡನೆಯ ಕೈಪಿಡಿ ಗ್ರಂಥದಲ್ಲಿ ಈ ಸಿದ್ಧಾಂತವನ್ನು ಸವಿಸ್ತಾರವಾಗಿ ವಿವರಿಸಿದೆ. ಈ ಪುಸ್ತಕದಲ್ಲಿ ಅದಕ್ಕೆ ಸಂಬಂಧಪಟ್ಟ ವಿದ್ಯಮಾನಗಳನ್ನು ಮಾತ್ರ ಬರೆಯುತ್ತೇನೆ. ಏಕೆಂದರೆ ಆ ಮಟ್ಟಕ್ಕೆ ಆವಶ್ಯಕವಾದ ದಿವ್ಯ ದೃಷ್ಟಿಯನ್ನು ಬೆಳೆಸಿಕೊಂಡಿರುವವರಿಗೆ ಪುನರ್ಜನ್ಮವಿರುವುದು ಸಾಕ್ಷಾತ್ ಅನುಭವಕ್ಕೆ ಬಂದಿರುತ್ತದೆ.

ತೃಷ್ಣೆ:—ಅಥವ ಸಜೀವವಾಗಿ ಬಾಳಬೇಕೆಂಬ ಅಭಿಲಾಷೆಯು ಅಂತರಾತ್ಮನನ್ನು ಜನ್ಮವೆತ್ತುವಂತೆ ಪ್ರೇರೇವಿಸುತ್ತದೆ. ಆತನು ಪ್ರಕೃತಿಯೊಳಕ್ಕೆ ಧುಮುಕಿ ಸ್ವಾರ್ಥವನ್ನು ಬಲಪಡಿಸಿಕೊಂಡು 7-ನೆಯ ಚಿತ್ರದಲ್ಲಿರುವಂತೆ ದಿವ್ಯ ದೃಷ್ಟಿಯುಳ್ಳವನ ಕಣ್ಣಿಗೆ ಅಸಹ್ಯಕರವಾಗಿ ಕಾಣುತ್ತಾನೆ. ಆದರೆ ಕ್ರಮೇಣ ಉನ್ನತ ಮಟ್ಟದ ಬೆಳವಣಿಗೆಗೆ ಅವಕಾಶವಿದೆಯೆಂದು ಮನದಟ್ಟು ಮಾಡಿಕೊಳ್ಳುತ್ತಾನೆ. ಆಗ ಪ್ರಾರಂಭದಲ್ಲಿ ಒಂದು ಪ್ರಜ್ಞೆ ಕೇಂದ್ರವನ್ನು ಕಟ್ಟುವುದಕ್ಕೆ ಸ್ವಾರ್ಥತೆಯು ಆವಶ್ಯಕವಾಗಿದ್ದರೂ ಮುಂದೆ ಆ ಉನ್ನತ ಮಟ್ಟದ ಬೆಳವಣಿಗೆಗೆ ಅದು ಅಡಚಣೆಯನ್ನು ತಂದೊಡ್ಡುತ್ತದೆಯೆಂದು ಅರ್ಥ ಮಾಡಿಕೊಂಡು ಅದನ್ನು ಕಿತ್ತು ಬಿಸಾಡುತ್ತಾನೆ. ಸಿಮೆಂಟ್ ಚಾವಣಿಯನ್ನು ಹಾಕಲು ಸಾರುವೆಯು ಮೊದಲು ಹೇಗೆ ಅತ್ಯಾವಶ್ಯಕವೋ ಹಾಗೆ ಮನುಷ್ಯನಲ್ಲಿ ಒಂದು ಪ್ರಜ್ಞೆ ಕೇಂದ್ರವನ್ನು ಸ್ಥಿರ ಪಡಿಸಲು ಸ್ವಾರ್ಥತೆಯು ಅವಶ್ಯಕ. ಮನೆಯನ್ನು ಕಟ್ಟಿದ ಮೇಲೆ ಅದನ್ನು ತೆಗೆದುಹಾಕುತ್ತಾರೆ. ಹಾಗೆ ಅಂತರಾತ್ಮನು ಸಂಸರಣದ ಮುಂದುವರಿದ ಅಂತಸ್ತಿನಲ್ಲಿ ಸ್ವಾರ್ಥತೆಯನ್ನು ಮೂಲೋತ್ಪಾಟನೆ ಮಾಡುತ್ತಾನೆ.) 7–10 ಮತ್ತು 23 ಈ ಚಿತ್ರಗಳ ಉದಾಹರಣೆಗಳನ್ನು ವ್ಯಾಸಂಗ ಮಾಡಿದರೆ ಕೇವಲ ರಾಗದ್ವೇಷಗಳಿಗೆ ವಶವಾಗಿದ್ದ 7ನೆಯ ಚಿತ್ರದ ಆತನ ಕಾಮ ದೇಹದ ಅಂತಸ್ತಿನಿಂದ ಹೇಗೆ ಆತನು ಸಂಸರಣ ಹೊಂದುತ್ತಾ ಸಾಧಾರಣ ಮನುಷ್ಯನ ಅಂತಸ್ತಿಗೆ ಬಂದು (10ನೆಯ ಚಿತ್ರ ನೋಡಿರಿ) ಅಲ್ಲಿಂದ ಕೇವಲ ಉನ್ನತ ಭಾವನೆಗಳನ್ನೇ ವ್ಯಕ್ತ ಪಡಿಸುವಂತಹ 23ನೆಯ ಚಿತ್ರದ ಅಂತಸ್ತಿಗೆ ಕ್ರಮೇಣ ಸಂಸರಣ ಹೊಂದಿ ಬೆಳೆಯುತ್ತಾನೆಂಬುದು ಸ್ಪಷ್ಟ ಪಡುತ್ತದೆ. ಈ ರೀತಿಯಾದ ಆತನ ದೀರ್ಘ ಸಂಸರಣವನ್ನು ಉದಾಹರಣೆಗಳ ಮೂಲಕ ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡೋಣ.

ಅಧ್ಯಾಯ ೧೧

ಮಾನವನು ಹೇಗೆ ಬೆಳೆಯುತ್ತಾನೆ?

ಅಂತರಾತ್ಮನು ಮೊದಲು ತನ್ನ ಅಂಶವನ್ನು ರೂಪಲೋಕಕ್ಕೆ ಇಳಿಸುತ್ತಾನೆ. ಆ ಕೂಡಲೇ ಮನೋದೇಹ ಬೀಜದ ಸುತ್ತಲೂ ಆತನ ಸ್ವಭಾವವಕ್ಕೆ ತಕ್ಕ ಪ್ರಕೃತಿಯು ಆಕರ್ಷಿತವಾಗಿ ಹೊದಿಕೆಯಾಗಿ ಏರ್ಪಡುವುದು. ಅದರ ಮೂಲಕ ಆತನು ಆ ಮಟ್ಟಕ್ಕೆ ತಕ್ಕಂತೆ ಅಭಿವ್ಯಕನಾಗುತ್ತಾನೆ.

ಏಕೆಂದರೆ ಪ್ರತಿಯೊಂದು ಕೆಳಗಿನ ಮಟ್ಟಕ್ಕೆ ಇಳಿದಂತೆಲ್ಲ ಆತನ ದಿವ್ಯ ಶಕ್ತಿಗಳಿಗೆ ಪರಿಮಿತಿಯು ಹೆಚ್ಚುತ್ತಾ ಬರುತ್ತದೆ. ಆದುದರಿಂದ ಕೆಳಗಿನ ಮಟ್ಟಗಳಲ್ಲಿನ ಆತನ ಅಭಿವ್ಯಕ್ತತೆಯು ಎಂದಿಗೂ ಸ್ರಮರ್ಪಕವಾಗಿರಲಾರದು. ಮೂರು ಪರಿಮಾಣಗಳುಳ್ಳ ವಸ್ತುವು ಚಿತ್ರದಲ್ಲಿ ಎರಡು ಪರಿಮಾಣಗಳ ಮೂಲಕ ಪ್ರತಿನಿಧಿಸಲ್ಪಡುವಂತೆ ಆತನ ಕೆಳಗಿನ ಮಟ್ಟದ ಅಭಿವ್ಯಕ್ತತೆಯು ಆತನ ಸಹಜ ಸ್ಥಿಯನ್ನು ಪ್ರತಿನಿಧಿಸಲಾರದು, ಆದರೆ ಆತನ ಗುಣಗಳನ್ನು ಸೂಚಿಸುವಂತೆ ಮಾತ್ರ ಇರುತ್ತದೆ. ಹೀಗೆ ಅರೂಪಲೋಕದ ಮಟ್ಟದಲ್ಲಿ ಆತನಲ್ಲಿ ಸಹಜವಾಗಿರುವ ಗುಣ ವಿಶೇಷಗಳು ಕೆಳಗಿನ ಮಟ್ಟಗಳಲ್ಲಿ ಎಂದಿಗೂ ಸಮರ್ಪಕವಾಗಿ ವ್ಯಕ್ತವಾಗುವುದಕ್ಕೆ ಸಾಧ್ಯವಿಲ್ಲ. ಕೆಳಗಿನ ಮಟ್ಟದ ಪ್ರಕೃತಿಯು ಸ್ಪಂದಿಸುವ ವೇಗಗತಿಯು ತುಂಬ ಮಂದವಾಗಿರುವ ಪ್ರಯುಕ್ತ ಮೇಲಿನ ಉನ್ನತ ಮಟ್ಟದ ಶೃತಿಗೆ ಓಗೊಡಲಾರದು. ಆದರೆ ಅದೇ ಶೃತಿಯು ಕೆಳಗಿನ ಮಟ್ಟದ ಸ್ಥಾಯಿಯಲ್ಲಿ ಎಷ್ಟರ ಮಟ್ಟಿಗೆ ವ್ಯಕ್ತವಾಗಬಲ್ಲುದೋ ಅಷ್ಟಾಗುತ್ತದೆ.

ಹೀಗೆ ಒಂದು ಗುಣವನ್ನು ವ್ಯಕ್ತಪಡಿಸುವಂಥ ಬಣ್ಣವು ಕಾರಣ ದೇಹ–ರೂಪ ದೇಹ ಮತ್ತು ಕಾಮದೇಹಗಳಲ್ಲೆಲ್ಲ ಅಭಿವ್ಯಕ್ತವಾಗುತ್ತದೆ. ಆದರೆ ಆ ಬಣ್ಣವು ಕಾರಣ ದೇಹದಲ್ಲಿ ನಾಜೋಕಾಗಿಯೂ ಪ್ರಕಾಶಮಾನವಾಗಿಯೂ ಇರುವಷ್ಟು ಕೆಳಗಿನ ಮಟ್ಟದ ದೇಹಗಳಲ್ಲಿರುವುದಿಲ್ಲ. ಇವುಗಳಿಗೆ ಇರುವ ನೈಜವಾದ ವ್ಯತ್ಯಾಸವು ದೇಹಗಳನ್ನು ದಿವ್ಯ ದೃಷ್ಟಿಯಿಂದನೋಡುವವರಿಗೆ ಕಾಣುವಷ್ಟು ಸ್ಪಷ್ಟವಾಗಿ ಈ ಪುಸ್ತಕದಲ್ಲಿ ಕೊಟ್ಟಿರುವ ಚಿತ್ರಗಳಲ್ಲಿ ಅಷ್ಟಾಗಿ ಕಾಣುವುದಿಲ್ಲ. ನಮ್ಮ ಸ್ಥೂಲ ದೃಷ್ಟಿಗೆ ಒಂದು ಹಂತಕ್ಕೂ ಮತ್ತೊಂದು ಹಂತಕ್ಕೂ ಚಿತ್ರಗಳಲ್ಲಿ ಸೂಚಿಸಿರುವಂತೆ ವ್ಯತ್ಯಾಸವು ಸ್ಥೂಲವಾಗಿ ಮಾತ್ರ ಕಂಡು ಬರುತ್ತದೆ. ಈ ಸ್ಥೂಲ ಲೋಕವನ್ನು

ಬಿಟ್ಟು ಇದಕ್ಕಿಂತ ಒಂದು ಹಂತ ಮೇಲಿರುವ ಕಾಮಲೋಕದಲ್ಲಿ ವ್ಯಕ್ತವಾಗುವ ಬಣ್ಣ ಗಳಲ್ಲಿನ ವ್ಯತ್ಯಾಸವನ್ನು ಸ್ಥೂಲ ದೃಷ್ಟಿಯಿಂದ ಊಹಿಸುವುದಕ್ಕೂ ಸಾಧ್ಯವಿಲ್ಲ- ಅದು ಅಷ್ಟು ಅದ್ಭುತವಾದ ರೀತಿಯಲ್ಲಿ ಉತ್ತಮವಾಗಿರುತ್ತದೆ. ಕಾಮಲೋಕದ ಕೆಳಗಿನ ಮಟ್ಟದ ಪ್ರಕೃತಿಯ ಮೂಲಕ ವ್ಯಕ್ತವಾಗುವ ಬಣ್ಣಗಳು ಮಬ್ಬಾಗಿಯೂ ಒರಟಾಗಿಯೂ ಇರುತ್ತವೆ. ಆದರೆ ಮೇಲಿನ ಮಟ್ಟದ ಬಣ್ಣಗಳಿಗೆ ಹೋಲಿಸಿದಾಗ ಹಾಗೆ ತೋರುತ್ತವೆ—ಆದರೆ ಅವೇನೇ ಸ್ಥೂಲ ಲೋಕದ ಬಣ್ಣಗಳಿಗಿಂತ ಎಷ್ಟೋ ಪ್ರಕಾಶ ಮಾನವಾಗಿರುತ್ತವೆ.

ಮೇಲಿನ ಮಟ್ಟಗಳ ಪ್ರಕೃತಿ ತತ್ವಗಳು ಘನವೂ—ಉದಾರವೂ ಆದ ಗುಣ ಗಳನ್ನೂ—ಭಾವನೆಗಳನ್ನೂ ವ್ಯಕ್ತಪಡಿಸಬಲ್ಲುವು. ಆದರೆ ಮೇಲಕ್ಕೆ ಹತ್ತಿದಂತೆಲ್ಲ ಅವು ಕೆಳಗಿನ ಮಟ್ಟದ ಗುಣ ವಿಶೇಷಗಳನ್ನು ವ್ಯಕ್ತಪಡಿಸಲಾರವು, ನೋಡುವುದಕ್ಕೆ ತುಂಬ ಅಸಹ್ಯಕರವಾದ ರೀತಿಯಲ್ಲಿ ಕಾಮದೇಹದಲ್ಲಿ ಕಾಣಿಸಿಕೊಳ್ಳುವ ಇಂದ್ರಿಯ ಲಂಪಟತ್ವವು ಮನೋದೇಹ ಪ್ರಕೃತಿಯಲ್ಲಿ ಅಭಿವ್ಯಕ್ತವಾಗಲಾರದು. ಇದನ್ನು ಕೇಳಿದವರಿಗೆ ಆಶ್ಚರ್ಯವಾಗಬಹುದು–ಏಕೆಂದರೆ ಮನುಷ್ಯನಿಗೆ ಇಂದ್ರಿಯ ಸುಖಕ್ಕೆ ಸಂಬಂಧಪಟ್ಟ ಕೆಟ್ಟ ಯೋಚನೆಯು ಬರುವುದಿಲ್ಲವೇ ?—ಎಂದು. ಆದರೆ ವಾಸ್ತವ ವಾಗಿಯೂ ಅಂತಹ ಕೆಟ್ಟ ಯೋಚನೆಯೂ ಮತ್ತು ಅದಕ್ಕೆ ಸಂಬಂಧಪಟ್ಟ ರಸ ಭಾವನೆಯೂ ಎರಡೂ ಕಾಮದೇಹದ ಪ್ರಕೃತಿಯಲ್ಲಿ ಮಾತ್ರ ವ್ಯಕ್ತವಾಗುತ್ತವೆ. ಅಂತಹ ಯೋಚನೆಯು ರೂಪಲೋಕದ ಮಟ್ಟದಲ್ಲಿ ವ್ಯಕ್ತವಾಗಲು ಸಾಧ್ಯವಿಲ್ಲ. ಆದರೆ ಅದು ಮನೋದೇಹದಲ್ಲಿ ಆ ವಿಧವಾದ ಯೋಚನೆಗೆ ಸಂಬಂಧಪಟ್ಟ ಸ್ವಾರ್ಥತೆ- ಸ್ವಾಭಿಮಾನ ಮತ್ತು ವಂಚನೆ ಇವುಗಳಿಗೆ ಸಂಬಂಧಪಟ್ಟ ಬಣ್ಣಗಳನ್ನು ಸಾಂದ್ರ ಗೊಳಿಸುತ್ತದೆ. ಆದರೆ ಇಂತಹ ಯೋಚನೆಗಳಿಗೆ ಸಂಬಂಧಪಟ್ಟ ಬಣ್ಣಗಳು ವೈಭವ ಯುಕ್ತವಾದಂಥ ಕಾರಣದೇಹದಲ್ಲಿ ವ್ಯಕ್ತವಾಗುವುದಕ್ಕೆ ಸಾಧ್ಯವೇ ಇಲ್ಲ. ಆದರೆ ವಿಷಯಲಂಪಟತ್ವದಲ್ಲೇ ಮನುಷ್ಯನು ಒಂದೇ ಸಮನೆ ಮುಂದುವರಿಯುವುದಾದರೆ ಅಂತಹ ಮನುಷ್ಯನ ಕಾರಣದೇಹದ ಮಟ್ಟದಲ್ಲಿ—ಇದು ಸತ್ಯಕ್ಕೆ ಕೆಳಗಿನ ಎಲ್ಲಾ ಲೋಕ ತತ್ವಗಳಿಗಿಂತಲೂ ಹತ್ತಿರವಾಗಿದೆ—ಆ ದೋಷಕ್ಕೆ ವಿರೋಧವಾದ ಸದ್ಗುಣ ಗಳ ಪ್ರಕಾಶವು ಮಬ್ಬಾಗುತ್ತ ಬರುತ್ತದೆ.

ಮಾನವನ ತೇಜಸ್ಸಿನಲ್ಲಿ ಬಣ್ಣಗಳನ್ನು ಪ್ರಚೋದನೆ ಮಾಡುವಂತಹ ಕಾರಣ ಗಳು ಹೊರಗಿನ ಲೋಕಕ್ಕೆ ಸಂಬಂಧಪಟ್ಟವುಗಳು, ಮನುಷ್ಯನಿಗೆ ಹೊರಗಿನ ಘಟನೆಯ ಪ್ರಯುಕ್ತ ಏನೋ ಒಂದು ಉದ್ವೇಗವು ಮೂಡುತ್ತದೆ. ಅದು ಕಾಮ ದೇಹದಲ್ಲಿ ಕಾಣಿಸಿಕೊಳ್ಳುತ್ತದೆ. ಅಂತಹ ಉದ್ವೇಗವು ಆತನ ಸ್ವಭಾವವನ್ನು ಆಳು

ತ್ತಿರುವವರೆಗೂ-ಅದಕ್ಕೆ ಸಂಬಂಧಪಟ್ಟ ಸ್ಪಂದದ ಬಣ್ಣವು ಎದ್ದು ಕಾಣುತ್ತಿರುತ್ತದೆ. ಇದನ್ನು ಇಷ್ಟರಲ್ಲೇ ಉದಾಹರಣೆ ಮೂಲಕ ವಿವರಿಸಿ ತೋರಿಸಲಾಗುವುದು. ಸ್ವಲ್ಪಹೊತ್ತಾದ ಮೇಲೆ ಆ ಭಾವನೆಯು ಇಳಿದು ಹೋಗುತ್ತದೆ-ಮತ್ತು ಅದಕ್ಕೆ ಸಂಬಂಧಪಟ್ಟ ಬಣ್ಣವೂ ಕೂಡ ತಗ್ಗಿಹೋಗುತ್ತದೆ. ಆದರೆ ಅದರ ಶೇಷ ಸ್ವಲ್ಪ ಇದ್ದೇ ಇರುತ್ತದೆ. ಕಾಮದೇಹದ ಪ್ರಕೃತಿಯ ಸ್ವಲ್ಪ ಭಾಗವು ಆ ಮಟ್ಟದಲ್ಲಿ ಸ್ಪಂದಿಸುತ್ತಲೇ ಇರುತ್ತದೆ. ಪುನಃ ಅಂತಹ ಭಾವನೆಯು ಉಜ್ವಲವಾದಾಗ ಅಂತಹ ಪ್ರವೃತಿಯನ್ನು ಬಲಪಡಿಸುತ್ತದೆ.

ಬಹು ಸಂಖ್ಯಾತ ಮನುಷ್ಯರಲ್ಲಿ ಉದಾಹರಣೆಗಾಗಿ-ಒಂದು ಸ್ವಲ್ಪ ಸಿಡುಕು ಸ್ವಭಾವವು ಇದ್ದೇ ಇರುತ್ತದೆ. ಇದು ಕಾಮದೇಹದಲ್ಲಿ ರಕ್ತವರ್ಣದ ಮೋಡದಂತೆ ಕಾಣಿಸಿಕೊಳ್ಳುತ್ತದೆ. ಯಾವ ಸಂದರ್ಭದಲ್ಲಾದರೂ ಅದು ಸಿಡಿದೆದ್ದಾಗ ಇಡೀ ಕಾಮದೇಹವೆಲ್ಲ ರಕ್ತವರ್ಣ-ರಂಜಿತವಾಗುತ್ತದೆ. ಸ್ವಲ್ಪ ಕಾಲಾನಂತರ ಆ ಉದ್ವೇಗವು ಇಳಿದು ಹೋಗಿ, ಆ ಸಂಬಂಧವಾದ ಬಣ್ಣವೂ ಬಾಡಿಹೋಗುತ್ತದೆ. ಆದರೆ ಅದರ ಶೇಷವು ಇದ್ದೇ ಇರುತ್ತದೆ-ಎಂದರೆ ಹಿಂದಿನ ಆ ವಿಧವಾಗಿ ಸ್ಪಂದಿಸುವಂತಹ ಪ್ರಕೃತಿಗೆ ಮೇಲ್ಕಂಡ ಉದ್ವೇಗದಿಂದ ಮತ್ತಷ್ಟು ಉತ್ತೇಜನ ದೊರೆತು ಅದು ಸ್ವಲ್ಪ ಇನ್ನೂ ವಿಸ್ತರಿಸುತ್ತದೆ. ಅಲ್ಲದೆ ಆ ವಿಧವಾದ ಉದ್ವೇಗಕ್ಕೆ ಒಳಗಾಗುವ ತೀವ್ರತೆಯು ಹೆಚ್ಚಾಗುತ್ತದೆ, ಇದೇ ವಿಧವಾದ ಪರಿಣಾಮವು ಒಳ್ಳೆಯದಕ್ಕೂ ಕೂಡ ಉಂಟಾಗುತ್ತದೆ. ಇದರಿಂದ ನೀತಿಯ ನಿಯಮವು ಪ್ರಕೃತಿಯಲ್ಲೂ ಕೂಡ ಹೇಗೆ ಪುನರಾವರ್ತನೆಯಾಗುತ್ತದೆಂಬ ತತ್ವವು ಚೆನ್ನಾಗಿ ಮನದಟ್ಟಾಗುತ್ತದೆ-ಏನೆಂದರೆ, ಯಾವುದಾದರೂ ಒಂದು ಉದ್ವೇಗಕ್ಕೆ ನಾವು ಒಳಗಾದಾಗಲೆಲ್ಲ ಮುಂದೆ ಅಂತಹ ಉದ್ವೇಗವನ್ನು ತಡೆಯುವುದು, ಕಷ್ಟತರವಾಗುತ್ತದೆ. ಆತ್ಮ ಸಂಯಮಕ್ಕೆ ಸಂಬಂಧಪಟ್ಟ ಪ್ರಯತ್ನವು ಜಯಪ್ರದವಾದಾಗಲೆಲ್ಲ ಮುಂದೆ ಅಂತಹ ಉದ್ವೇಗಗಳನ್ನು ಗೆಲ್ಲುವುದು ಸುಲಭವಾಗುತ್ತದೆ. (ಉದಾಹರಣೆಗಾಗಿ ಕೋಪೋದ್ರೇಕದ ಸನ್ನಿವೇಶದಲ್ಲಿ ನಾವು ಕೋಪಬಾರದಂತೆ ತಡೆದುಕೊಂಡರೆ ಮುಂದೆ ಅಂತಹ ಸನ್ನಿವೇಶಗಳನ್ನು ಗೆಲ್ಲುವುದು ತುಂಬ ಸುಲಭವಾಗುತ್ತದೆ—T.V.R.).

ಕಾಮದೇಹದಲ್ಲಿ ಸಾಧಾರಣವಾಗಿ ಸದಾ ಕಾಣಿಸಿಕೊಳ್ಳುವ ಬಣ್ಣಗಳ ಪಟ್ಟೆಗಳು ಆ-ಮನುಷ್ಯನು ಅಂತಹ ಬಣ್ಣಗಳು ಯಾವ ಭಾವನೆ ಮತ್ತು ಉದ್ವೇಗಗಳಿಗೆ ಸಂಕೇತಗಳಾಗಿವೆಯೋ-ಅಂತಹ ಸ್ವಭಾವಕ್ಕೆ ಸಾಮಾನ್ಯವಾಗಿ ಸಿಕ್ಕಿಕೊಂಡಿರುತ್ತಾನೆಂದು ಅರ್ಥ. ಇಂತಹ ಸ್ಥಿರವಾಗಿ ಮುಂದುವರಿಯುವಂತಹ ಸ್ಪಂದಗಳು ಆ ಸಂಬಂಧವಾದ ಮನೋದೇಹದಲ್ಲೂ ಕೂಡ ಕಾಲಾನುಗುಣ್ಯವಾಗಿ ಅಂತಹ ಸ್ಪಂದಗಳನ್ನು ಎಬ್ಬಿಸಬಹುದು. ಆದರೆ ಅಂತಹ ಉನ್ನತ ಮಟ್ಟದ ಪ್ರಕೃತಿಯಲ್ಲಿ ಅಂತಹವು

ವ್ಯಕ್ತವಾಗುವುದಕ್ಕೆ ಸಾಧ್ಯವಿದ್ದರೆ ಮಾತ್ರ—ಹಾಗೆ ವ್ಯಕ್ತವಾಗುತ್ತವೆ. ಈ ಭೂಲೋಕದ ಜೀವಿತದಲ್ಲಿ ನಾವು ಬೆಳೆಸಿಕೊಳ್ಳುವಂತಹ ಒಳ್ಳೆಯ ಗುಣಗಳೂ ಕೂಡ ಮೇಲ್ಕಂಡ ನಿಯಮವನ್ನು ಅನುಸರಿಸಿಯೇ ಕಾರಣ ದೇಹದಲ್ಲೂ ಕೂಡ ಅಭಿವ್ಯಕ್ತವಾಗಬಲ್ಲುವು. ಈ ವಿಧಾನವು ಸಮಶ್ರುತಿ ನ್ಯಾಯವನ್ನು ಹೋಲುತ್ತದೆ.

ಹೀಗೆ ಮನುಷ್ಯನು ತನ್ನ ಅನೇಕ ಜನ್ಮಗಳ ಮೂಲಕ ಕೆಲವು ಒಳ್ಳೆಯವು-ಕೆಲವು ಕೆಟ್ಟುವು ಆದ ಅನೇಕ ಗುಣಗಳನ್ನು ಬೆಳೆಸಿಕೊಳ್ಳುತ್ತಾನೆ-ಅವುಗಳಲ್ಲಿ ಒಳ್ಳೆಯವು ಮಾತ್ರ ಆತನ ಕಾರಣ ದೇಹದಲ್ಲಿ ಶೇಖರವಾಗುತ್ತ ಮುಂದುವರಿದು ಕೊಂಡು ಬರುತ್ತವೆ. ಆದರೆ ಕೆಟ್ಟುವು ಕೆಳಗಿನ ಆಯಾ ಮಟ್ಟದ ದೇಹಗಳ ಮೂಲಕ ಮಾತ್ರ ವ್ಯಕ್ತವಾಗಬಲ್ಲುವು. ಇಂತಹ ರಾಗಭಾವನೆಗಳು ತಾತ್ಕಾಲಿಕ ವಾದುವುಗಳು. ದೈವಿಕವಾದ ಕಟ್ಟುನಿಟ್ಟಾದ ನ್ಯಾಯನಿಯಮದ ಪ್ರಕಾರ ಪ್ರತಿ ಯೊಬ್ಬ ಮನುಷ್ಯನೂ ತಾನು ಮಾಡಿದ ಒಳ್ಳೆಯ ಅಥವ ಕೆಟ್ಟ ಕರ್ಮಗಳಿಗನುಸಾರ ವಾಗಿ ಸುಖ-ಅಥವ ದುಃಖ ರೂಪವಾದ ಫಲಗಳನ್ನು ಅನುಭವಿಸುತ್ತಾನೆ. ಆದರೆ ಕೆಟ್ಟ ಗುಣಗಳು ಕೆಳಗಿನ ಮಟ್ಟದ ಪ್ರಕೃತಿಯಲ್ಲಿ ಮಾತ್ರ ವ್ಯಕ್ತವಾಗಬಲ್ಲುವು—ಅವು ಗಳಿಗೆ ಅನುರೂಪವಾದ ಸಮಶ್ರುತಿ ಸ್ಪಂದಗಳು ಕಾರಣ ದೇಹದಲ್ಲಿ ಹುಟ್ಟುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಅವುಗಳ ಫಲಿತಾಂಶಗಳನ್ನು ಮನುಷ್ಯನು ತನ್ನ ಕಾಮ ದೇಹ ಮತ್ತು ಸ್ಥೂಲ ದೇಹಗಳಿಗೆ ಸಂಬಂಧಪಟ್ಟ ಜೀವನದಲ್ಲಿ ಮಾತ್ರ ಈ ಜನ್ಮ ದಲ್ಲೋ ಮುಂದಿನ ಜನ್ಮದಲ್ಲೋ ಅನುಭವಿಸುತ್ತಾನೆ.

ಒಳ್ಳೆಯದು--ಕೆಲಸವಾಗಲೀ ಯೋಚನೆಯಾಗಲೀ ಕೆಳಗಿನ ಲೋಕಗಳಲ್ಲೂ ಕೂಡ ತನ್ನ ಫಲಿತಾಂಶವನ್ನು ವ್ಯಕ್ತ ಪಡಿಸುತ್ತದೆ-ಮತ್ತು ಇದರ ಜೊತೆಗೆ ಜನ್ಮ-ಜನ್ಮಕ್ಕೂ ಮುಂದುವರಿದುಕೊಂಡು ಬರುವ ಕಾರಣ ದೇಹದ ಸ್ವಭಾವದಲ್ಲಿ ನಿತ್ಯ ವಾಗಿ ಸೇರಿಕೊಳ್ಳುತ್ತದೆ. ಎಲ್ಲ ವಿಧವಾದ ಪ್ರವೃತ್ತಿಗಳೂ ಕೆಳಗಿನ ಜೀವಿತದಲ್ಲಿ ವ್ಯಕ್ತವಾದರೂ ಒಳ್ಳೆಯವು ಮಾತ್ರ ಕಾರಣ ದೇಹದ ಸ್ವಭಾವದಲ್ಲಿ ಶೇಖರವಾಗಿ ಸತತವಾಗಿ ಮುಂದುವರಿಯುವ ಮೂಲಕ ನಿಜವಾದ ಮನುಷ್ಯನಿಗೆ ಶಾಶ್ವತ ಪ್ರಯೋಜನವನ್ನು ತಂದು ಕೊಡುತ್ತವೆ, ಕೆಟ್ಟುದು ಆತನನ್ನು ಜನ್ಮ ಜನ್ಮಕ್ಕೂ ಕೆಳಗಿನ ಮಟ್ಟಗಳಲ್ಲಿ ಅನುಸರಿಸಿಕೊಂಡು ಬಂದು ಆತನು ಅಂತಹ ಸ್ವಭಾವವನ್ನು ಮೇರ್ತಗೆದ್ದು ತನ್ನ ದೇಹ ಸ್ವಭಾವದಿಂದ ಅದನ್ನು ಮೂಲೋತ್ಪಾಟನ ಮಾಡುವ ವರೆಗೂ ಆತನಿಗೆ ತೊಂದರೆ ಕೊಡುತ್ತದೆ. ಹೀಗೆ ಮನುಷ್ಯನು ಕ್ರಮೇಣ ಹೊರಗಿ ನಿಂದ ಒಂದು ಪ್ರಚೋದನೆ ಮಾಡುವ ಯಾವ ವಿಧವಾದ ರಾಗ ದ್ವೇಷಗಳಿಗೂ ಒಳಗಾಗದೆ ತನ್ನ ಅಂತರಾತ್ಮನ ಒಳಗಿನ ಸತ್ಪ್ರೇರೇಪಣೆಗಳಿಗೆ ಮಾತ್ರ ಓಗೊಡುತ್ತಾ ಜೀವಿಸುವಂತೆ ಉತ್ತಮನಾಗುತ್ತಾನೆ.

ಅಧ್ಯಾಯ ೧೨

ಮಾನವನ ದೇಹಗಳು ನಮಗೆ ತೋರಿಸುವುದೇನು ?

ಈ ರೀತಿ ಪಾಠವನ್ನು ಕಲಿಯುವುದಕ್ಕೆ ತುಂಬ ಕಾಲ ಬೇಕಾಗುತ್ತದೆ ಸಂಸರಣದ ಪ್ರಾರಂಭ ದೆಸೆಯಲ್ಲಿರುವ—ಕಾಡು ಮನುಷ್ಯನ ಕೆಳಗಿನ ಮಟ್ಟದ ದೇಹ ಗಳು ಅಷ್ಟು ಸಮರ್ಪಕವಾಗಿರುವುದಿಲ್ಲ. ಆಗತಾನೇ ಮಾನವ ಮಟ್ಟಕ್ಕೆ ಬಂದಿರುವ ಜೀವಾತ್ಮನ ದೇಹಗಳನ್ನು ಇಲ್ಲಿ ಉದಾಹರಿಸುತ್ತಿಲ್ಲ, ಏಕೆಂದರೆ ಅವುಗಳಲ್ಲಿ ಉದಾಹರಿಸಬೇಕಾದಂಶವು ಅಷ್ಟಾಗಿ ಇರುವುದಿಲ್ಲ. ಆದರೆ 5ನೆಯ ಚಿತ್ರದಲ್ಲಿ ಕಾರಣ ದೇಹವೂ, 6ನೆಯ ಚಿತ್ರದಲ್ಲಿನ ರೂಪದೇಹವೂ ಮತ್ತು 7ನೆಯ ಚಿತ್ರದಲ್ಲಿ ಕಾಮದೇಹವೂ ಉದಾಹರಿಸುವುದಕ್ಕೆ ತಕ್ಕ ಸಾಮಗ್ರಿಗಳನ್ನೊಳಗೊಂಡ ಕಾಡು ಮನುಷ್ಯನವು ಆಗಿವೆ.

ಈ ದೇಹಗಳೆಲ್ಲವೂ ಒಂದೇ ಪ್ರದೇಶದಲ್ಲಿದ್ದು ಪರಸ್ಪರ ಓತಪ್ರೋತವಾ ಸೇರಿಕೊಂಡಿವೆಯೆಂಬುದನ್ನು ತಿಳಿದುಕೊಳ್ಳಬೇಕು. ಒಬ್ಬ ಕಾಡು ಮನುಷ್ಯನನ್ನ ನಾವು ದಿವ್ಯ ದೃಷ್ಟಿಯಿಂದ ನೋಡುವುದಾದರೆ–ಆತನ ಸ್ಥೂಲ ದೇಹದ ಸುತ್ತಲೂ ಪ್ರಕಾಶ ಮಾನವಾದ ತೇಜಸ್ಸು ಅಂಡಾಕೃತಿಯಲ್ಲಿ ಪ್ರಸರಿಸಿರುವುದನ್ನೂ–ಆ ತೇಜಸ್ಸು 5—6—7ನೆಯ ಚಿತ್ರಗಳಲ್ಲಿರುವ ಆತನ ಕಾರಣ ದೇಹ, ರೂಪದೇಹ ಮತ್ತು ಕಾಮದೇಹಗಳ ಸ್ವರೂಪವನ್ನು ಆಯಾ ಮಟ್ಟದ ದಿವ್ಯ ದೃಷ್ಟಿಗೆ ಪ್ರದರ್ಶಿ ಸುತ್ತದೆ–ಯೆಂಬುದನ್ನೂ ಗಮನಿಸತಕ್ಕದ್ದು. ನಮ್ಮ ಕಾಮಲೋಕದ ದೃಷ್ಟಿಗೆ ಆತನ ಕಾಮದೇಹವು ಮಾತ್ರ ಗೋಚರವಾಗುತ್ತದೆ. ಆಗ ಆತನು ಆ ಕಾಲದಲ್ಲಿ ಎಂತಹ ರಾಗಭಾವನೆಗಳನ್ನು ಉದ್ವೇಗಗಳನ್ನೂ ಅನುಭವಿಸುತ್ತಿರುವನೆಂಬುದೂ ಅಲ್ಲದೆ ಇವುಗಳಲ್ಲಿ ಯಾವುದಕ್ಕೆ ಆತನು ಪದೆಪದೇ ಒಳಗಾಗುವ ಸ್ವಭಾವದವನು–ಎಂಬುದೂ ಗೊತ್ತಾಗುತ್ತದೆ. ಇದು ಆಶೆಗಳ ಕ್ಷೇತ್ರವು-ಅಲ್ಲದೆ ಆತನು ಅನುಭವಿಸುತ್ತಿರುವ ಪ್ರತಿಯೊಂದು ರಾಗಭಾವನೆಯನ್ನೂ ಅದು ಕನ್ನಡಿಯಂತೆ ಪ್ರತಿಬಿಂಬಿಸುತ್ತದೆ-ಇದರ ಜೊತೆಗೆ ವ್ಯಕ್ತಿಗೆ ಸಂಬಂಧಪಟ್ಟ ಪ್ರತಿಯೊಂದು ಯೋಚನೆಯೂ ಕೂಡ ಈ ಪ್ರಕೃ ಯಲ್ಲಿ ಅಭಿವ್ಯಕ್ತವಾಗುತ್ತದೆ. ಮನುಷ್ಯರು ತಮ್ಮ ಕೆಟ್ಟ ಬಯಕೆಗಳಿಂದಲೂ ಅಸೂಯಾ ಭಾವನೆಗಳಿಂದಲೂ ಕೃತಕವಾದ ಸಂಕಲ್ಪ ರೂಪಗಳನ್ನು ನಿರ್ಮಿಸುತ್ತಾರೆ ಈ ರೂಪಗಳಿಗೆ ತಕ್ಕ ಪ್ರಕೃತಿಯು ಈ ಕ್ಷೇತ್ರದಿಂದಲೇ ಒದಗುತ್ತದೆ. ಹೀಗೆಯೇ ಮಾನವರ ಶುಭದಾಯಕವಾದ ಬಯಕೆಗಳೂ ಪ್ರೇಮ-ಕೃತಜ್ಞತೆ ಭಾವನೆಗಳೂ ಈ ಪ್ರಕೃತಿಯಿಂದಲೇ ರೂಪಗೊಳ್ಳುತ್ತವೆ.

ಈ ವಿಧವಾದ ರೂಪಗಳು ಬಹುಕಾಲ ಬಾಳುವುದಿಲ್ಲ. ಅವುಗಳ ಬಣ್ಣಗಳೂ, ಪ್ರಕಾಶ-ಸ್ಪಂದಗತಿಗಳೂ ಬದಲಾಗುತ್ತಲೇ ಇರುತ್ತವೆ. ಕೋಪವು ಸಿಡಿದರೆ ಕಾಮ ದೇಹದ ಮೈಮೇಲೆಲ್ಲ ಕಪ್ಪು ಮೋಡದಂತಹ ಹಿನ್ನೆಲೆಯ ಮೇಲೆ ರಕ್ತವರ್ಣದ ಮಚ್ಚೆಗಳು ಉತ್ಪತ್ತಿಯಾಗುತ್ತವೆ, ಥಟ್ಟನೆ ಉದಯವಾಗುವ ಭಯವು ಶರೀರವನ್ನೆಲ್ಲ ಬೂದು ಬಣ್ಣದ ತೆರೆಯಿಂದ ಆಚ್ಛಾದಿಸುತ್ತದೆ, ಹಾಗಲ್ಲದೆ ಸಮಾಧಾನಕರವಾದ ಕೆಲವು ಘಳಿಗೆಗಳಲ್ಲಿ ಇಂತಹ ಚಂಚಲ ಪ್ರವೃತ್ತಿಯುಳ್ಳ ಕಾಮದೇಹವೂ ಕೂಡ ಸ್ಥಬ್ಧ ವಾಗಿರುವುದನ್ನೂ ಆಗ ಕೆಲವು ಗೊತ್ತಾದ ಬಣ್ಣದ ಪಟ್ಟೆಗಳು ಬದಲಾಗದೆ ಮುಂದು ವರಿಯುವುದನ್ನೂ ಕಾಣಬಹುದು. ಅಂತಹ ಘಳಿಗೆಯಲ್ಲಿದ್ದ ಕಾಮದೇಹದ ಸ್ಥಿತಿಯನ್ನೇ ನಮ್ಮ 7ನೆಯ ಚಿತ್ರವು ಪ್ರದರ್ಶಿಸುತ್ತದೆ, ಇದರಿಂದ ಆ ಮನುಷ್ಯನ ಸ್ವಭಾವದ ವಿಷಯವಾಗಿ ಬೇಕಾದಷ್ಟು ಸಂಗತಿ ದೊರೆಯುತ್ತದೆ.

ನಮ್ಮ ಮಾನಸಿಕ ದೃಷ್ಟಿಗೆ 6ನೆಯ ಚಿತ್ರದಲ್ಲಿನ ಕಾಡು ಮನುಷ್ಯನ ರೂಪ ದೇಹವು ಗೋಚರವಾಗುತ್ತದೆ. ಈ ಮನೋದೇಹಕ್ಕೂ—7ನೆಯ ಚಿತ್ರದಲ್ಲಿನ ಕಾಮದೇಹಕ್ಕೂ ಬಣ್ಣಗಳ ಪ್ರದರ್ಶನದಲ್ಲಿ ವ್ಯತ್ಯಾಸವಿರುವುದಿಲ್ಲ. ಆದರೆ ಮನೋ ದೇಹದಲ್ಲಿ ಮನುಷ್ಯನು ಬೆಳೆಸಿಕೊಳ್ಳಲು ಸಾಧ್ಯವಾಗಿರುವಂತಹ, ಮಾನಸಿಕ ಮತ್ತು ಆಧ್ಯಾತ್ಮಿಕ ಪ್ರಗತಿಗಳು ಕಂಡುಬರುತ್ತವೆ—ಸಧ್ಯದ ಕಾಡು ಮನುಷ್ಯನ ಬೆಳವಣಿಗೆ ಮಟ್ಟದಲ್ಲಿ ಈ ಭಾಗಗಳು ಕಂಡುಬರುವುದು ಕೇವಲ ಕಡಿಮೆ—ಆದರೆ ಮನುಷ್ಯನು ಬೆಳೆದಂತೆಲ್ಲ, ಆ ಸಂಬಂಧವಾದ ಪ್ರಗತಿಯ ಚಿಹ್ನೆಗಳನ್ನು ಮನೋದೇಹದಲ್ಲಿ ಕಾಣ ಬಹುದು. ಈ ಮನೋದೇಹದ ಪರಿಸ್ಥಿತಿಯಿಂದ–ಮನುಷ್ಯನು ಎಂತಹನು ? ಈತನು ತನ್ನ ಸಧ್ಯದ ಜನ್ಮಕ್ಕೆ ಸಂಬಂಧಪಟ್ಟ ಜೀವಿತವನ್ನು ಯಾವ ರೀತಿ ವಿನಿಯೋಗ ಮಾಡಿಕೊಂಡಿರುತ್ತಾನೆ ?—ಎಂಬಂಶಗಳನ್ನು ಗೊತ್ತು ಹಚ್ಚಬಹುದು.

ಆದರೆ ನಮಗೆ ಕಾರಣ ದೇಹದ ಮಟ್ಟದ ದಿವ್ಯ ದೃಷ್ಟಿಯನ್ನು ಬೆಳೆಸಿಕೊಳ್ಳುವ ಸುಯೋಗವಿದ್ದ ಪಕ್ಷದಲ್ಲಿ 5ನೆಯ ಚಿತ್ರದಲ್ಲಿನ–ಆತನ ಕಾರಣ ದೇಹವು ನಮಗೆ ಗೋಚರವಾಗುವುದು. ಈ ಕಾರಣ ದೇಹದ ಪರಿಸ್ಥಿತಿಯಿಂದ ಈ ಜೀವಾತ್ಮನು ಮಾನವ ಜನ್ಮಕ್ಕೆ ಪ್ರವೇಶಿಸಿದಲಾಗಾಯ್ತು ವಿಮರ್ಶೆ ಮಾಡುವ ಕಾಲದವರೆಗೆ ದೈವೀಕತೆ ಕಡೆಗೆ ಹೋಗುವ ಮಾರ್ಗದಲ್ಲಿ ಎಷ್ಟು ಪ್ರಗತಿಯನ್ನು ಸಾಧಿಸಿರುತ್ತಾನೆ-ಎಂಬಂಶವು ಗೊತ್ತಾಗುವುದು. ಸುಶಿಕ್ಷಿತನಾಗಿ ಕಾರಣ ದೇಹದ ಮಟ್ಟದವರೆಗೆ ದಿವ್ಯ ದೃಷ್ಟಿಯನ್ನು ಬೆಳೆಸಿಕೊಂಡಿರುವಂಥ, ಪರಿಶೋಧಕನ ಕಣ್ಣಿಗೆ–ಎಂದರೆ ಆತನು ಯಾವ ಮಟ್ಟಕ್ಕೆ ಬೇಕಾದರೂ ತನ್ನ ದೃಷ್ಟಿಯನ್ನು ಹೊರಳಿಸಬಲ್ಲಂಥ ಚಾಕಚಕ್ಯತೆ ಯುಳ್ಳವನ ಎದುರಿಗೆ-ವಿಮರ್ಶೆಗೆ ವಿಷಯವಾದ ಮನುಷ್ಯನ ಇಡೀ ಜೀವಿತವೆಲ್ಲವು ತೆರೆದ ಪುಸ್ತಕದಂತೆ ಪರಿಣಮಿಸುತ್ತದೆ. ಏಕೆಂದರೆ ಮೇಲ್ಮಟ್ಟದ ಲೋಕಗಳಲ್ಲಿ

ಯಾರೂ ಕೂಡ ತನ್ನ ಸಹಜ ಸ್ಥಿತಿಯನ್ನು ಮರೆ ಮಾಚುವುದಕ್ಕೆ ಸಾಧ್ಯವಿಲ್ಲ, ಪ್ರತಿ ಯೊಬ್ಬನೂ ತನ್ನ ನೈಜಸ್ಥಿತಿಯಲ್ಲಿ ನಿಷ್ಪಕ್ಷಪಾತ ದೃಷ್ಟಿಯುಳ್ಳ ಪರಿಶೀಲಕನಿಗೆ ಕಾಣಿಸಿಕೊಳ್ಳುತ್ತಾನೆ.

ನಿಷ್ಪಕ್ಷಪಾತ ದೃಷ್ಟಿ—ಎಂದು ಹೇಳಿದೆ, ಈ ಯೋಗ್ಯತೆಯು ಪರಿಶೀಲಕನಿಗೆ ತುಂಬ ಆವಶ್ಯಕ—ಏಕೆಂದರೆ ಪ್ರತಿಯೊಬ್ಬನೂ ಇತರರನ್ನು ತನ್ನ ದೃಷ್ಟಿಕೋಣದ ಮಾಧ್ಯಮದಿಂದಲೇ ನೋಡುತ್ತಾನೆ. ಈ ರೀತಿ ನೋಡುವುದು ಬಣ್ಣದ ಕನ್ನಡಕಗಳ ಮೂಲಕ ಯಾವುದಾದರೂ ಪ್ರಕೃತಿ ಸನ್ನಿವೇಶವನ್ನು ನೋಡಿದಂತೆ ಆಗುತ್ತದೆ. ಈ ವಿಧವಾದ ವ್ಯಕ್ತಿ ಸಂಬಂಧವಾದ ಮನೋಭಾವನೆಯನ್ನು ಒತ್ತಟ್ಟಿಗಿಟ್ಟು ಯಥಾವ ತ್ತಾಗಿ ಪರಿಶೀಲಿಸುವುದನ್ನು ಕಲಿಯುವವರೆಗೆ ಪರಿಶೋಧಕನು ತನ್ನ ಸ್ವಭಾವವನ್ನೇ ಇದಿರಿಟ್ಟು ನೋಡಿದಂತೆ ಆಗುತ್ತದೆ. (ಕಾಮಾಲೆ ರೋಗ ಬಂದಿರುವ ಮನುಷ್ಯನಿಗೆ ಪದಾರ್ಥಗಳೆಲ್ಲವೂ ಹಳದಿ ಬಣ್ಣದಲ್ಲಿ ಕಂಡುಬರುತ್ತವೆ—ಏಕೆಂದರೆ ವಸ್ತುಗಳಲ್ಲಿ ಆ ಬಣ್ಣವಿಲ್ಲದಿದ್ದಾಗ್ಯೂ—ಆತನ ಕಣ್ಣಿನಲ್ಲಿ ಆ ಬಣ್ಣವಿರುತ್ತದೆ—T.V.R.) ಆದರೆ ಪರಿಶೋಧಕನು ಪ್ರಯತ್ನ ಪೂರ್ವಕವಾಗಿ ವಿಜ್ಞಾನ ದೃಷ್ಟಿಯನ್ನು ಬೆಳೆಸಿಕೊಂಡು ಪರಿಶೋಧನೆಗಳನ್ನು ಪರಿಷ್ಕಾರವಾಗಿಯೂ ಕರಾರುವಾಕ್ಕಾಗಿಯೂ ನಡೆಸುವುದನ್ನು ಕಲಿಯಬೇಕು.

ಅಧ್ಯಾಯ ೧೩

ಬಣ್ಣಗಳು ಮತ್ತು ಅವುಗಳ ಅರ್ಥ

ನಾವು ಈ ಚಿತ್ರಗಳಿಗೆ ಸಂಬಂಧಪಟ್ಟ ಶರೀರಗಳ ಪರಿಸ್ಥಿತಿಗಳನ್ನು ವಿವರವಾಗಿ ವ್ಯಾಸಂಗ ಮಾಡುವುದಕ್ಕೆ ಮೊದಲು ಅವುಗಳಲ್ಲಿ ಕಂಡು ಬರುವ ವಿಧವಿಧವಾದ ಸೂಕ್ಷ್ಮ ಪ್ರಭೇದಗಳನ್ನು ಈ ಪುಸ್ತಕದ ಮುಖ ಪತ್ರದಲ್ಲಿ ಕೊಟ್ಟಿರುವಂತೆ ಮನ ವಟ್ಟು ಮಾಡಿಕೊಳ್ಳಬೇಕು. ಹಾಗೆ ಬಣ್ಣಗಳು ಮಿಶ್ರವಾಗುವಭೇದಗಳು ಲೆಖ್ಖವಿಲ್ಲ ದಷ್ಟು ಆಗಬಹುದು—ಆದರೆ ನಾನು ಪ್ರತಿಯೊಂದು ಪ್ರಭೇದಕ್ಕೂ ಕರಾರುವಾಕ್ಕಾದ ಹೆಸರನ್ನೇ ಕೊಡಲು ಪ್ರಯತ್ನಪಟ್ಟಿರುತ್ತೇನೆ. ಮಾನವ ಸ್ವಭಾವಕ್ಕೆ ಸಂಬಂಧಪಟ್ಟ ರಾಗ ಭಾವನೆಗಳು ಪರಿಶುದ್ಧವಾದ—ಎಂದರೆ ಇತರೆ ವಿಧವಾದ ಭಾವನೆಗಳ ಮಿಶ್ರ ವಿಲ್ಲದೆ ಅಭಿವ್ಯಕ್ತವಾಗುವುದು ಅಪರೂಪ. ಆದುದರಿಂದ ಮಧ್ಯೆ ಬರುವಪ್ರಭೇದ ಗಳನ್ನು ಗೊತ್ತುಹಚ್ಚಿ—ಅವುಗಳಲ್ಲಿ ಯಾವಯಾವ ಅಂಶಗಳು ಸೇರಿಕೊಂಡಿ ರುತ್ತವೆಯೋ ಅಂತಹ ಅಂಶಗಳಿಗೂ ಅನ್ವಯವಾಗುವಂತಹ ಹೆಸರುಗಳನ್ನು ಕೊಡ ಬೇಕಾಗುತ್ತದೆ.

ಕೋಪವು-ಉದಾಹರಣೆಗಾಗಿ ರಕ್ತವರ್ಣದಲ್ಲೂ ಮತ್ತು ಪ್ರೇಮವು—ಸಾಂದ್ರ ವಾದ ಕೆಂಪು ಮತ್ತು ಗುಲಾಬಿ ರಂಗಿನಲ್ಲೂ ಪ್ರತಿನಿಧಿಸಲ್ಪಟ್ಟಿರುತ್ತವೆ, ಆದರೆ ಕೋಪವೂ-ಪ್ರೇಮವೂ ಅನೇಕ ಸಂದರ್ಭಗಳಲ್ಲಿ ಆಳವಾದ ಸ್ವಾರ್ಥಭಾವನೆಯಿಂದ ಮಿಶ್ರವಾಗಿರುತ್ತವೆ. ಆದುದರಿಂದ ಈ ಭಾವನೆಗಳನ್ನು ಪ್ರತಿನಿಧಿಸುವ ಬಣ್ಣಗಳು ಸ್ವಾರ್ಥಕ್ಕೆ ಸಂಬಂಧಪಟ್ಟ ಕಂದು-ಬೂದು ಬಣ್ಣ ಛಾಯೆಯಿಂದ ಮಬ್ಬಾಗದೆ ಇರಲಾರವು, ಅಥವ ಅವೆರಡೂ ಕೂಡ ಅಹಂಭಾವದಿಂದ ಕೂಡಿರಬಹುದು—ಆಗ ತ್ತಲೆ ಬಣ್ಣದ ಛಾಯೆಯೂ ಕೂಡ ಅವುಗಳಿಗೆ ಮಿಶ್ರವಾಗುತ್ತದೆ. ಇಂತಹ ಮಿಶ್ರಣಗಳ ಉದಾಹರಣೆಗಳೂ ನಮ್ಮ ಪರಿಶೋಧನೆಯನ್ನು ಮುಂದುವರಿಸುವ ಮಾರ್ಗದಲ್ಲಿ ಹೇರಳವಾಗಿ ದೊರೆಯುತ್ತವೆ. ಆದರೆ ನಮ್ಮ ಪ್ರಥಮ ಪ್ರಯತ್ನವು ಸರಳವಾದ ಬಣ್ಣಗಳ ಮಾದರಿಗಳನ್ನು ತಿಳಿದುಕೊಂಡು ಅವುಗಳ ಅರ್ಥವನ್ನು ಗ್ರಹಿ ಸುವುದೇ ಆಗಿದೆ, ಕೇವಲ ಬಳಕೆಯಾದ ಕೆಲವು ಬಣ್ಣಗಳ ಪಟ್ಟಿಯನ್ನು ಈ ಕೆಳಗೆ ಕಂಡಂತೆ ಕೊಟ್ಟಿರುತ್ತೇವೆ.

ಕಪ್ಪು :—ಮಂಧವಾದ ಕಪ್ಪು ಮೋಡಗಳಂತಹ ಛಾಯೆಯು ಕಾಮದೇಹದಲ್ಲಿ ದ್ದರೆ, ದ್ವೇಷಾಸೂಯೆಗಳನ್ನು ತೋರಿಸುತ್ತದೆ. ಒಬ್ಬ ಮನುಷ್ಯನು ದುರಾದೃಷ್ಟವ

ಶಾತ್ ಕೋಪೋದ್ವೇಗಕ್ಕೆ ಒಳಗಾದ ಪಕ್ಷದಲ್ಲಿ ಆತನ ತೇಜಸ್ಸಿನಲ್ಲಿ ದ್ವೇಷದ ಸಂಕಲ್ಪ ರೂಪಗಳು ತೇಲಾಡುತ್ತಿರುವುದನ್ನು ನೋಡಬಹುದು. ಅವು ವಿಷಪೂರಿತವಾದ ಸುರಳಿಗಳ ಆಕಾರದಲ್ಲಿ ಕಾಣಿಸಿಕೊಳ್ಳುತ್ತವೆ.

ಕೆಂಪು :—ಆಳವಾದ ಕೆಂಪಿನ ಹೊಳಪುಗಳು ಸಾಧಾರಣವಾಗಿ ಕಪ್ಪು ಹಿನ್ನೆಲೆಯ ಮೇಲೆ ಕಾಣಿಸಿಕೊಂಡರೆ—ಕೋಪವನ್ನು ಸೂಚಿಸುತ್ತವೆ, ಇಂತಹ ಹೊಳಪುಗಳ ಕೆಂಪು ಬಣ್ಣವು ಕಂದು ಮಿಶ್ರವಾಗಿದ್ದರೆ ಆ ಕೋಪದ ಹಿಂದೆ ಸ್ವಾರ್ಥತೆ ಯಿದೆಯೆಂದು ಅರ್ಥ ಮಾಡಿಕೊಳ್ಳಬೇಕು, ಹಾಗಲ್ಲದೆ ಕೋಪವು ಇತರರ—ರಕ್ಷಣೆ ಬಗ್ಗೆ ಉದಯವಾಗಿದ್ದರೆ (Noble Indignation) ಅಂಥದು ತೇಜಸ್ಸಿನ ಸಾಧಾರಣ ಹಿನ್ನೆಲೆಯಲ್ಲೇ ಕೆಂಪಿನ ಹೊಳಪುಗಳಂತೆ ಕಾಣಿಸಿಕೊಳ್ಳುತ್ತದೆ.

ಕಂದು ಮಿಶ್ರವಾದ ಕೆಂಪು—ಇದನ್ನು ಸುಲಭವಾಗಿ ವಿವರಿಸಲು ಸಾಧ್ಯವಿಲ್ಲ, ಇಂದ್ರಿಯ ಚಾಪಲ್ಯವನ್ನು ಸೂಚಿಸುತ್ತದೆ.

ಕಂದು :—ಮಸಕಾದ ಕಂದು ಬಣ್ಣ—ತುಕ್ಕು ಹಿಡಿದಸ್ಥಿತಿಯ ಬಣ್ಣ— ಇದು ಅತ್ಯಾಶೆ. ಇದು ಸಮಾಂತರವುಳ್ಳ ಅಡ್ಡಗೆರೆಗಳಂತೆ ಕಾಮದೇಹದ ಸುತ್ತಲೂ ವ್ಯಾಪಿಸಿರುವ ಶಲಾಖೆಗಳಂತೆ ಕಾಣಿಸಿಕೊಳ್ಳುತ್ತದೆ. ಬೂದು ಮಿಶ್ರವಾದ ಕಂದು ಬಣ್ಣ—ಸ್ವಾರ್ಥತೆ, ಇದು ಸಾಮಾನ್ಯವಾಗಿ ಎಲ್ಲರ ಕಾಮದೇಹಗಳಲ್ಲೂ ಕಂಡು ಬರುತ್ತದೆ.

ಹಸರು ಮಿಶ್ರ ಕಂದು ಬಣ್ಣ :—ಇದರ ಮೇಲೆ ಸಾಂದ್ರ ಕೆಂಪು ಬಣ್ಣದ ಹೊಳಪುಗಳು—ಹೊಟ್ಟೆಕಿಚ್ಚನ್ನು ಸೂಚಿಸುತ್ತವೆ. ಸಾಧಾರಣ ಮನುಷ್ಯನು ಒಬ್ಬ ಹೆಂಗಸನ್ನು ಮದುವೆಯಾಗಬೇಕೆಂಬ ದೃಷ್ಟಿಯಿಂದ ಪ್ರೀತಿಸುತ್ತಿರುವ ಸನ್ನಿವೇಶದಲ್ಲಿ ಆತನ ಕಾಮದೇಹದಲ್ಲಿ ಈ ಬಣ್ಣವು ಯಥೇಚ್ಛವಾಗಿರುತ್ತದೆ.

ಬೂದು-ಬಣ್ಣ :—ಸೀಸ ಬಣ್ಣ ಮಿಶ್ರವಾದ ಬೂದು ಬಣ್ಣವು—ಆಳವಾದ ಖಿನ್ನತೆಯನ್ನು ಸೂಚಿಸುತ್ತದೆ. ಈ ಸ್ವಭಾವವು ಎದ್ದು ಕಾಣುತ್ತಿದ್ದರೆ ಅಂಥವರು ನೋಡುವುದಕ್ಕೆ ತುಂಬ ನಿರುತ್ಸಾಹಕರವಾಗಿ ಶೋಚನೀಯವಾದ ಸ್ಥಿತಿಯಲ್ಲಿರುತ್ತಾರೆ. ಈಬಣ್ಣವು ಸಹ ದುರಾಶೆಯಂತೆ ಸಮಾನಾಂತರವುಳ್ಳ ಅಡ್ಡ ಗೆರೆಗಳಂತಿರುವ ಶಲಾಖೆಗಳಿಂದ ಸುತ್ತುವರಿದಂತೆ ಕಾಣುತ್ತದೆ—ಇಂತಹ ಕಾಮ ದೇಹದ ವ್ಯಕ್ತಿಯು ಬೋನಿನೊಳಗೆ ಸಿಕ್ಕಿಕೊಂಡಿರುವಂತೆ ಕಾಣುತ್ತಾನೆ.

ನೀಲಿ ಛಾಯೆಯ ಸೀಸವರ್ಣ :—ತುಂಬ ಅಸಹ್ಯಕರವಾದ 'ಭಯ' ವನ್ನು ಸೂಚಿಸುವ ಬಣ್ಣ.

ಕಡು ಕೆಂಪು :—ಇದು ಪ್ರೇಮವನ್ನು ಸೂಚಿಸುತ್ತದೆ. ಇದು ಸಾಮಾನ್ಯ ಮನುಷ್ಯರ ಕಾಮದೇಹಗಳಲ್ಲೆಲ್ಲ ದಿವ್ಯವಾಗಿ ಕಂಗೊಳಿಸುತ್ತಿರುತ್ತದೆ. ಇದು ಸ್ವಾಭಾವಿಕವಾಗಿ ಪ್ರೇಮದ ಸ್ವಭಾವಕ್ಕನುಗುಣವಾಗಿ ಅನೇಕ ಪ್ರಭೇದಗಳನ್ನೊಳ ಗೊಂಡಿದೆ. ಈ ಬಣ್ಣವು ಸ್ವಾರ್ಥತೆಯನ್ನು ಸೂಚಿಸುವ ಕಂದು ಬಣ್ಣ ಮಿಶ್ರವಾಗಿ ತುಂಬ ಮಂಕಾಗಿ ಕಾಣಬಹುದು, ಇಂತಹ ಪ್ರೇಮವುಳ್ಳ ಮನುಷ್ಯನು ತನ್ನ ಪ್ರೀತಿ ಪಾತ್ರಳಿಂದ ಎಷ್ಟು ಪ್ರತಿಫಲವು ದೊರೆಯುತ್ತದೆ—ಎಂಬುದನ್ನೇ ನಿರೀಕ್ಷಿಸುತ್ತಿರು ತ್ತಾನೆ. ಹಾಗಲ್ಲದೇ ಪ್ರೀತಿಪಾತ್ರಳ ಮೇಲೆ ಪ್ರೇಮವನ್ನು ವರ್ಷಿಸುತ್ತಾ-ಸ್ವಲ್ಪವೂ ಪ್ರತಿಫಲವನ್ನು ನಿರೀಕ್ಷಿಸದೇ ಪ್ರೀತಿಪಾತ್ರಳ ಸಲುವಾಗಿ ಎಂತಹ ತ್ಯಾಗವನ್ನಾದರೂ ಮಾಡುವಂಥವನ ಪ್ರೇಮವು ಶುಭ್ರವಾದ ಗುಲಾಬಿ ಬಣ್ಣದಲ್ಲಿ ಕಂಗೊಳಿಸುತ್ತಿರು ತ್ತದೆ. ಈ ಬಣ್ಣವು ಹೆಚ್ಚು ಮನೋಹರವಾದ ರೀತಿಯಲ್ಲಿ ಪ್ರಕಾಶಿಸುತ್ತಾ-ನೇರಲೆ ಬಣ್ಣದಿಂದ ಮಿಳಿತವಾಗಿದ್ದರೆ, ಅಂತಹದು ಮಾನವ ಕೋಟಿಯ ಹಿತದಸಲುವಾಗಿ ಹೊರ ಹೊಮ್ಮುವಂಥ ಆಧ್ಯಾತ್ಮಿಕ ಪ್ರೇಮವೆಂಬುದಾಗಿ ಭಾವಿಸಬೇಕು. ಇಂತಹ ಉನ್ನತ ಮಟ್ಟದ ಪ್ರೇಮದ ಅಭಿವ್ಯಕ್ತತೆಯಲ್ಲಿ ಲೆಖ್ಖವಿಲ್ಲದಷ್ಟು ಪ್ರಭೇದಗಳಿರ ಬಹುದು. ಅಲ್ಲದೆ ಪ್ರೇಮವು ಅಸೂಯೆಯಿಂದಾಗಲೀ ಅಹಂಭಾವದಿಂದಾಗಲೀ ಕೂಡಿರಬಹುದು.

ಕಿತ್ತಲೆ ಹಣ್ಣಿನ ಬಣ್ಣ :—ಇದು ಮಹತ್ವಕಾಂಕ್ಷೆ—ಅಥವ ಅಹಂಭಾವವನ್ನು ಸೂಚಿಸುತ್ತದೆ. ಈ ಯೆರಡು ನೀಚಗುಣಗಳಿಗೆ ತಕ್ಕಂತೆ ಇದು ಅನೇಕ ಪ್ರಭೇದಗಳ ನ್ನೊಳಗೊಂಡಿರಬಹುದು, ಸಿಡುಕುತನದ ಜೊತೆಗೆ ಸಾಮಾನ್ಯವಾಗಿ ಅಹಂಭಾವವು ಸೇರಿಕೊಂಡೇ ಇರುತ್ತದೆ.

ಹಳದಿ :—ಇದು ಒಳ್ಳೆಯ ಬಣ್ಣ, ಮಾನಸಿಕ ಬೆಳವಣಿಗೆಯನ್ನು ಸೂಚಿಸು ತ್ತದೆ. ಇತರೆ ಬಣ್ಣಗಳ ಮಿಶ್ರಣಗಳಿಂದ ಇದನ್ನು ಅರ್ಥ ಮಾಡಿಕೊಳ್ಳಲು ತುಂಬ ತೊಡಕಾಗುತ್ತದೆ. ಸ್ವಾರ್ಥವಾದ ಉದ್ದೇಶಗಳಿಗಾಗಿ ವಿಚಾರ ಶಕ್ತಿಯು ವಿನಿಯೋಗ ವಾದರೆ—ಬಣ್ಣವು ಮಬ್ಬಾಗುತ್ತದೆ. ಆದರೆ ಮಾನಸಿಕ ಶಕ್ತಿಯು ಪರಾರ್ಥ ಭಾವನೆಯಿಂದ ಕೂಡಿದ ಮೇಲ್ಮಟ್ಟದ ಉದ್ದೇಶಗಳಿಗಾಗಿ ವಿನಿಯೊಗವಾದರೆ ಬಣ್ಣವು ಸ್ವರ್ಣಮಯವಾದ ಕಾಂತಿಯಿಂದಲೂ—ನಿಂಬೆ ಹಣ್ಣಿನ ದಿವ್ಯ ಕಾಂತಿಯಿಂದಲೂ ಪ್ರಕಾಶಿಸುತ್ತಾ ತುಂಬ ರಮ್ಯವಾಗಿ ಕಾಣಿಸಿಕೊಳ್ಳುತ್ತದೆ.

ಹಸರು :—ಇದಕ್ಕಿರುವಷ್ಟು ಪ್ರಭೇದಗಳು ಬೇರೆ ಬಣ್ಣಗಳಲ್ಲಿಲ್ಲ. ಪ್ರತಿ ಯೊಂದು ಸಂದರ್ಭದಲ್ಲೂ ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ ತುಂಬ ವಿವೇಚನೆಬೇಕು—ಇದು ಅಭಿವ್ಯಕ್ತವಾಗುವ ಬಹುಸಂಖ್ಯಾತ ಸಂದರ್ಭಗಳಲ್ಲಿ ಇತರರೊಡನೆ ಹೊಂದಾಣಿಕೆಯಿಂದ ನಡೆದುಕೊಳ್ಳುವ ಮನೋಭಾವವನ್ನು ತೋರಿಸು

ತ್ತದೆ. ಆದರೆ ಇದು ಮೊದ-ಮೊದಲು ಸ್ವಾರ್ಥ-ಮತ್ತು ವಂಚನೆಯನ್ನೂ ಕ್ರಮೇಣ ಕೊನೆಗೆ ಇದು ಒಳ್ಳೆಯ ಉದ್ದೇಶದಿಂದ ಅಭಿವ್ಯಕ್ತವಾಗುವ ಸಹಾನುಭೂತಿಯನ್ನೂ ವ್ಯಕ್ತಪಡಿಸುತ್ತದೆ.

ಬೂದುಮಿಶ್ರ-ಹಸುರು :—ಈ ಮಿಶ್ರ ಬಣ್ಣವು ಕುಯುಕ್ತಿ ಮತ್ತು ವಂಚನೆಯನ್ನು ವ್ಯಕ್ತಪಡಿಸುತ್ತದೆ. ಇದು ಹೆಚ್ಚಾಗಿ ಕಾಡು ಮನುಷ್ಯರುಗಳ ಕಾಮದೇಹಗಳಲ್ಲಿ ಎದ್ದು ಕಾಣುತ್ತದೆ. ಆದರೆ, ನಾಗರೀಕರೆಂದೆನ್ನಿಸಿಕೊಂಡಿರುವ ಜನರ ಕಾಮದೇಹಗಳಲ್ಲೂ ಇಲ್ಲದೇ ಇಲ್ಲ. ಮನುಷ್ಯನು ಸಂಸರಣದಲ್ಲಿ ಮುಂದುವರಿದಂತೆಲ್ಲ ಈ ಬಣ್ಣವು ಪಚ್ಚೆ- ಹಸರುನಿಂತೆ ಉತ್ತಮವಾಗುತ್ತ ಹೋಗುತ್ತದೆ. ಆಗಲೂ ಕೂಡ ಸಮಯ ಸ್ಫೂರ್ತಿ ಹೊಂದಾಣಿಕೆ, ಜಾಣತನ, ಇವುಗಳನ್ನು ವ್ಯಕ್ತಪಡಿಸುತ್ತದೆ. ಆದರೆ ಉದ್ದೇಶದಲ್ಲಿ ಕೆಟ್ಟುದು ಇರುವುದಿಲ್ಲ-ಎಲ್ಲರಿಗೂ ಅವರವರಿಗೆ ತಕ್ಕಂತೆ ವರ್ತಿಸುವ ವಿವೇಚನೆಯನ್ನು ವ್ಯಕ್ತಪಡಿಸುತ್ತದೆ, ಮೊದ-ಮೊದಲು ಅವರಿಗೆ ಸಂತೋಷವನ್ನುಂಟು ಮಾಡಿ ಅವರ ಅನುರಾಗ ಅಥವ ಮೆಚ್ಚುಗೆಯನ್ನು ಪಡೆಯುವ ಉದ್ದೇಶವಿದ್ದು-ಮನುಷ್ಯನು ಬೆಳೆಯುತ್ತ ಬಂದಂತೆಲ್ಲ-ಇತರರನ್ನು ಅರ್ಥ ಮಾಡಿಕೊಳ್ಳುವ ಉದ್ದೇಶದಿಂದಲೂ ಅವರಿಗೆ ಉಚಿತವಾದ ಸಹಾಯವನ್ನು ನೀಡುವ ಉದ್ದೇಶದಿಂದಲೂ ಆ ರೀತಿ ಸಮಯೋಚಿತವಾಗಿ ನಡೆಯುತ್ತಾನೆ. ಕಟ್ಟಕಡೆಯಲ್ಲಿ ದಿವ್ಯವಾದ ತೆಳುವಾದಹಸರು-ಕಾಂತಿಯುಕ್ತವಾದ ನೀಲಿ ಮಿಶ್ರವಾದ ಹಸುರು-ಸಂಧ್ಯಾ ಕಾಲದಲ್ಲಿ ಪಶ್ಚಿಮದಿಗಂತದಲ್ಲಿರುವಂಥದು ಆಗಿ ಬದಲಾವಣೆ ಹೊಂದುತ್ತದೆ. ಈ ಉನ್ನತ ಮಟ್ಟದಲ್ಲಿ ಮಾನವನ ಉದಾರವಾದ ಗುಣಗಳು ವ್ಯಕ್ತವಾಗುತ್ತವೆ. ಆಗ ಸಂಪೂರ್ಣ ಸಹಾನುಭೂತಿ-ಮತ್ತು ಅನ್ಯೋನ್ಯಭಾವದಿಂದ ಪರಮಕರುಣೆ ರೂಪವಾದ ಭಾವನೆಗಳೂ ತುಂಬ ಹೊಂದಾಣಿಕೆ ರೀತಿಯಲ್ಲಿ ವ್ಯಕ್ತವಾಗುತ್ತವೆ. ಇಂತಹ ಬೆಳವಣಿಗೆಯ ಪ್ರಾರಂಭ ದೆಸೆಯಲ್ಲಿ ಸೇಬಿನ ಹಸರು ಇದ್ದರೆ-ಸಹಾನುಭೂತಿಯು ತುಂಬ ವೀರ್ಯವತ್ತಾಗಿ ಕೆಲಸ ಮಾಡುತ್ತಿದೆಯೆಂದು ತಿಳಿಯಬೇಕಾಗುತ್ತದೆ.

ನೀಲಿ :—ಸಾಂದ್ರವಾದ ಅಪ್ಪಟ ನೀಲಿ ಬಣ್ಣವು ಭಕ್ತಿಯನ್ನು ತೋರಿಸುತ್ತದೆ. ಆದರೆ ಇದು ಕೂಡ ಭಾವನೆಯ-ಮಾದರಿಯನ್ನು ಅನುಸರಿಸಿ ಎಂದರೆ-ಅದರ ಪರಿಶುದ್ಧತೆ-ಸಂಕುಚಿತ ಭಾವನೆ, ಸ್ವಾರ್ಥತೆ ಮತ್ತು ಘನತೆಗಳಿಗನುಗುಣವಾಗಿ ಅನೇಕ ರೂಪಗಳನ್ನು ತಾಳುತ್ತದೆ. ಅಲ್ಲದೆ ಮೇಲೆ ಹೇಳಿದಂತಹ ಭಾವನೆಗಳಿಗೆ ಸಂಬಂಧಪಟ್ಟಂತೆ ಇತರೆ ಬಣ್ಣಗಳಿಂದ ಮಿಶ್ರವಾಗಬಹುದು-ಎಂದರೆ ಬಣ್ಣವು ಒಂದು ಕೊನೆಯಲ್ಲಿ ಸಾಂದ್ರವಾದ ನೀಲಿ ಮತ್ತೊಂದು ಕೊನೆಯಲ್ಲಿ ಸಾಂದ್ರವಾದ ಊದಾ—ಈ ಯೆರಡು ಅಂತಸ್ತು ಮಧ್ಯೆ ಯಾವ ಮಾದರಿಯದಾದರೂ ಆಗಿರಬಹುದು—ಅಥವ ಪ್ರಕೃತಿಯ ವಿದ್ಯಮಾನಗಳಾದ ಸಿಡಿಲು, ಗುಡುಗು, ಇವುಗಳ ಹಿಂದಿನ ದೇವತೆ

ಗಳನ್ನು ಪೂಜಿಸುವಂತಹ ಕಾಡು ಮನುಷ್ಯನಲ್ಲಿ ಕಂಡು ಬರಬಹುದಾದ ಮಾಸಲಾದ ಭೂದು ಬಣ್ಣ ಮಿಶ್ರವಾದ ನೀಲಿಯಾಗಿರಬಹುದು. ಪ್ರೇಮ, ಭಯ, ವಂಚನೆ, ಅಹಂಭಾವಗಳಿಗೆ ಸಂಬಂಧವಾದ ಬಣ್ಣಗಳಿಂದ ಮಿಶ್ರವಾದ ನೀಲಿಯಾಗಿರಬಹುದು- ಹೀಗೆ ನಾನಾವಿಧವಾದ ಭಕ್ತಿಯ ಪ್ರಭೇದಗಳಿರುತ್ತವೆ.

ತೆಳುವಾದ ನೀಲಿ–ಅಥವ ದಟ್ಟವಾದ ನೀಲಿ ಬಣ್ಣಗಳೂ ಉನ್ನತ ಮಟ್ಟದ ಆಧ್ಯಾತ್ಮಿಕಧ್ಯೇಯಕ್ಕಾಗಿ ಸಮರ್ಪಣೆಯಾದ ಭಕ್ತಿಯನ್ನೂ–ಹಾಗೆಯೇ ಹಸುರು ಮಿಶ್ರವಾದ ನೀಲಿಯು ಮೇಲ್ಮಟ್ಟದ ಆಧ್ಯಾತ್ಮಿಕ ಮನೋಭಾವನೆಯನ್ನೂ ಪ್ರತಿನಿಧಿ ಸುತ್ತವೆ–ಇಂತಹ ಸಂದರ್ಭಗಳಲ್ಲಿ ಆ ಹಿನ್ನೆಲೆಯ ಮೇಲೆ ಪ್ರಕಾಶಿಸುವಂಥ ಸ್ವರ್ಣ ವರ್ಣದ ನಕ್ಷತ್ರಗಳು ಉನ್ನತ ಮಟ್ಟದ ಉತ್ಕಾಂಕ್ಷೆಗಳನ್ನು ಪ್ರತಿಸಿದಿಸುತ್ತವೆ.

ಈ ರೀತಿ ಭಾವನೆಗಳನ್ನು ವ್ಯಕ್ತಪಡಿಸುವ ಮೇಲ್ಕಂಡ ಬಣ್ಣಗಳಲ್ಲಿ ಎಷ್ಟು ಅಸಂಖ್ಯಾತ ಪ್ರಭೇದಗಳಿರುತ್ತವೆಯೆಂಬಂಶವನ್ನು ಊಹಿಸಬಹುದು-ಇಷ್ಟು ಪ್ರಭೇಧ ಗಳಿರುವುದರಿಂದಲೇ–ತೋರಿ ಹಾರತಕ್ಕಕ್ಷಣಿಕವಾದ ಭಾವನೆಗಳು ಮೊದಲ್ಗೊಂಡು ಶೀಲಸ್ವಭಾವದಲ್ಲಿನ ಮಾದರಿಗಳ ಸರಣಿಯಲ್ಲಿ ಕೇವಲ ಸೂಕ್ಷ್ಮ ತಾರತಮ್ಯಗಳನ್ನೂ ಸಹ ಕರಾರುವಾಕ್ಕಾಗಿ ವ್ಯಕ್ತಪಡಿಸಲು ಸಾಧ್ಯವಾಗಬಲ್ಲುದು. ಒಂದು ಕಾಮದೇಹದ ಪರಿಸ್ಥಿತಿಯಿಂದ ಆ ಮನುಷ್ಯನ ಶೀಲಸ್ವಭಾವದ ಬೆಲೆಯನ್ನು ನಿರ್ದಿಷ್ಟವಾಗಿ ಗೊತ್ತು ಹಚ್ಚಬೇಕಾದರೆ—ಅದರ ಒಟ್ಟಿನ ಪ್ರಕಾಶತೆ-ಅದರ ಅಂಚು ನಿರ್ದಿಷ್ಟವಾಗಿ ಏರ್ಪಟ್ಟಿ ದೆಯೇ — ಇಲ್ಲವೇ-ಆ ದೇಹದಲ್ಲಿನ ಬಣ್ಣಗಳ ಪಟ್ಟಿಗಳು – ಎಂದರೆ ಭಾವನೆಗಳಿಗೆ ಸಂಬಂಧಪಟ್ಟ ಶಕ್ತಿ ವಿಶೇಷಗಳು-ಎಷ್ಟು ಪ್ರಕಾಶಮಾನವಾಗಿವೆ, ಅಥವ ಮಬ್ಬಾಗಿವೆ, ಈ ಯಂಶಗಳನ್ನೆಲ್ಲ ಸಮಗ್ರವಾಗಿಯೂ ಕರಾರುವಾಕ್ಕಾಗಿಯೂ ಪರ್ಯಾಲೋಚಿಸ ಬೇಕಾಗುತ್ತದೆ.

ಹೀಗೆಯೇ ಮನುಷ್ಯನಲ್ಲಿ ದಿವ್ಯ ದೃಷ್ಟಿ ಬೆಳೆಯುವಂತಹ ಅಥವ ಬೆಳೆದಿರು ವಂತಹ ಚಿಹ್ನೆಗಳನ್ನು ಸಹ ಮನುಷ್ಯನ ತೇಜಸ್ಸನ್ನು ಪರಿಶೀಲಿಸುವುದರಿಂದ ಗೊತ್ತು ಹಚ್ಚಬಹುದು. ಆದರೆ ಅಂತಹ ಚಿಹ್ನೆಗಳು ಮನುಷ್ಯನ ಸ್ಥೂಲ ಕಣ್ಣಿಗೆ ಗೋಚರ ವಾಗುವಂತಹ ಸೂರ್ಯ ರಶ್ಮಿಗೆ ಸಂಬಂಧಪಟ್ಟ ಏಳು ಬಣ್ಣಗಳಿಗೆ ಅತೀತವಾದ ಸ್ಪಂದ ಗಳ ಮೂಲಕ ಅಭಿವ್ಯಕ್ತವಾಗುತ್ತವೆ. ಉದಾಬಣ್ಣಕ್ಕಿಂತಲೂ ಅತೀತವಾದ ಸ್ಪಂದಗಳಲ್ಲಿ ವ್ಯಕ್ತವಾಗಬಹುದಾದುವು—ಉನ್ನತ ಮಟ್ಟದ ಸಿದ್ಧಿಗಳನ್ನೂ ಕೆಂಪು ಬಣ್ಣಕ್ಕಿಂತಲೂ ಮಂದಗತಿಯಲ್ಲಿ ಚಲಿಸುವ ಚಿಹ್ನೆಗಳು ವಾಮಮಾರ್ಗಕ್ಕೆ ಸಂಬಂಧ ಪಟ್ಟ ಕೆಳಗಿನ ಮಟ್ಟದ ಸಿದ್ಧಿಗಳನ್ನೂ ಸೂಚಿಸುತ್ತವೆ— ಯೋಗ ಮಾರ್ಗಕ್ಕೆ ಕರೆದು ಕೊಂಡು ಹೋಗುವಂತಹ ಬೆಳವಣಿಗೆಯನ್ನು ಮೇಲೆ ನಮೂದಿಸಿರುವ ಸ್ವಚ್ಛವಾದ

ಬಣ್ಣಗಳಿಂದಲೇ ಅಲ್ಲದೇ—ದೇಹಗಳ ಎದ್ದು ಕಾಣುವ ಶೋಭಾಯಮಾನವಾದ ಕಾಂತಿ—ನಿರ್ದಿಷ್ಟವಾಗಿಯೂ ಪರಿಷ್ಕಾರವಾಗಿಯೂ ಏರ್ಪಟ್ಟಿರುವ ಅಂಚಿನಗೆರೆ ಮತ್ತು ವಿಸ್ತರಿಸಲ್ಪಟ್ಟ ಪರಿಮಾಣ ಅಥವ ಗಾತ್ರ—ಇವುಗಳಿಂದ ಗೊತ್ತು ಹಚ್ಚಬಹುದು.

———

ಅಧ್ಯಾಯ ೧೪

ಪ್ರತಿರೂಪ

ಈ ಪುಸ್ತಕದಲ್ಲಿ ಕೊಟ್ಟಿರುವ ಚಿತ್ರಗಳಿಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ಅನ್ವಯುವಾಗುವ ಒಂದು ಅಂಶವನ್ನು ಪರ್ಯಾಲೋಚಿದನಂತರ ಅವುಗಳನ್ನು ಒಂದಾದ ಮೇಲೊಂದನ್ನು ತೆಗೆದುಕೊಂಡು ವಿಮರ್ಶೆ ಮಾಡೋಣ. ಪ್ರತಿಯೊಂದು ಚಿತ್ರದ ಅಂಡಾಕೃತಿಯ ತೇಜಸ್ಸಿನೊಳಗೆ ಸ್ಥೂಲ ದೇಹವನ್ನು ಸೂಚಿಸುವಂತಹ ಅದರ ಅಂಚಿನ ಗೆರೆಯನ್ನು ಎಳೆದಿದೆ–ಇದರಿಂದ ಈ ಮೋಡದಂತಹ ತೇಜಸ್ಸು ಅದರ ಪರಿಧಿಗಿಂತಲೂ ಎಷ್ಟು ವ್ಯಾಪಕವಾಗಿ ಪ್ರಸರಿಸಿದೆ-ಯೆಂಬಂಶವನ್ನು ಗೊತ್ತು ಮಾಡಿಕೊಳ್ಳುವುದಕ್ಕೆ ಸಹಾಯವಾಗುತ್ತದೆ. ಸ್ಥೂಲ ದೇಹಕ್ಕೆ ಸಂಬಂಧಪಟ್ಟ ರೇಖೆಯು ಅದಕ್ಕೂ-ಕಾಮ ಅಥವ ಮನೋದೇಹಕ್ಕೂ ಗಾತ್ರದಲ್ಲಿರುವ ತಾರತಮ್ಯವನ್ನು ತೋರಿಸುವ ಸಲುವಾಗಿ ಮಾತ್ರ ಬರೆಯಲ್ಪಟ್ಟದೆಯೇ ವಿನಾ-ಸ್ಥೂಲ ದೇಹದ ರೂಪವನ್ನು ಕರಾರುವಾಕ್ಕಾಗಿ ಪ್ರತಿನಿಧಿಸುವುದಕ್ಕೆ ಅಲ್ಲ-ಎಂಬಂಶವನ್ನು ಓದುಗರು ಮನವರಿಕೆ ಮಾಡಿಕೊಳ್ಳಬೇಕು. ಅಲ್ಲದೆ ಈ ಚಿತ್ರಗಳಲ್ಲಿ ಉದಾಹರಿಸಿರುವ ಕಾಮದೇಹ ವಾಗಲೀ ಮನೋದೇಹವಾಗಲೀ ಅದರಂತೆಯೇ ಗುರುತು ಹಿಡಿಯುವುದಕ್ಕೆ ಸಾಧ್ಯ ವಿಲ್ಲದಷ್ಟು ಅಸ್ಪಷ್ಟವಾಗಿ ಚಿತ್ರಿಸಿಲ್ಲ. ಪ್ರತಿಯೊಂದು ಕಾಮದೇಹ ಮತ್ತು ಇತರೆ ಮೇಲ್ಮಟ್ಟದ ದೇಹಗಳನ್ನು ದಿವ್ಯ ದೃಷ್ಟಿಗೆ ಗೋಚರವಾಗುವಂತಹ ವಾಸ್ತವ ರೂಪ ಗಳಲ್ಲಿ ಚಿತ್ರಿಸಿದೆ. ಇಂತಹ ಎರಡು ಪರಿಮಾಣಗಳುಳ್ಳ ಕಾಗದದ ಮೇಲೆ ಚಿತ್ರಿಸು ವಂತಹ ಉದಾಹರಣೆಗಳಲ್ಲಿ ಆಯಾ ಲೋಕಕ್ಕೆ ಸಂಬಂಧಪಟ್ಟ ಆ ದೇಹದ ಸಮಗ್ರ ವಾದ ಸ್ವರೂಪವನ್ನೆಲ್ಲ ಚಿತ್ರಿಸುವುದಕ್ಕೆ ಸಾಧ್ಯವಿಲ್ಲ—ಮಾನವನ ಸಂಸರಣವನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳುವ ದೃಷ್ಟಿಯಿಂದ ಮಾತ್ರ ಈ ಚಿತ್ರಗಳಲ್ಲಿನ ಬಣ್ಣಗಳ ಪಟ್ಟಿಗಳನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ರೂಪಿಸಿದೆ. ಆದುದರಿಂದಲೇ ಮೇಲ್ಪಟ್ಟದ ದೇಹಗಳಿಗೆ ಸಂಬಂಧಪಟ್ಟ ಕೆಲವು ಲಕ್ಷಣಗಳನ್ನು ಉದ್ದೇಶಪೂರ್ವಕ ವಾಗಿಯೇ ಬಿಟ್ಟಿದೆ. ಅಥವ ಅಂಥವುಗಳಿಗೆ ಗೌಣ ಸ್ಥಾನವನ್ನು ಕೊಟ್ಟಿದೆ, ಉದಾಹರಣೆ ಗಾಗಿ ಯೋಗಸಿದ್ಧಿಗಳಿಗೆ ಸಂಬಂಧಪಟ್ಟಂತೆ ಮತ್ತು ಕೆಲವು ಸಂದರ್ಭಗಳಲ್ಲಿ ಎದ್ದು ಕಾಣುವಂಥ ಎಲ್ಲ ದೇಹಗಳಲ್ಲೂ ಇರುವ ಏಳು ಚಕ್ರಗಳು, ಅಥವ ಶಕ್ತಿ ಕೇಂದ್ರಗಳು, ಇವುಗಳನ್ನು ಪ್ರತಿನಿಧಿಸುವ ಪ್ರಯತ್ನವನ್ನೇ ಮಾಡಿಲ್ಲ. ಅಲ್ಲದೆ ಈ ವಿವಿಧ ಬಣ್ಣ ಗಳೆಲ್ಲವನ್ನೂ ಕ್ಷೀರಸ್ಫಟಿಕ (ಬಿಳುಪಾದ) ಕಾಂತಿಯಲ್ಲಿ ತೋರಿಸುವ ಪ್ರತಿಯೊಂದು ದೇಹದ ಮೇಲ್ಮಯ್ಯ ಪೊರೆಯನ್ನು ಸಹ ಚಿತ್ರಿಸಿಲ್ಲ. ಅಲ್ಲದೆ ಪ್ರತಿಯೊಬ್ಬ ಮಾನವನ

ದೇಹವನ್ನು ಆತನ ಸಂಕಲ್ಪ ರೂಪಗಳ ಫರದೆಯು ಮುಸುಕಿರುತ್ತದೆ. ಅದನ್ನೂ ಮತ್ತು ಅವರ ಪ್ರಕೃತಿಯು ಸ್ಥೂಲ ದೇಹದ ರೂಪದಲ್ಲೇ ವ್ಯವಸ್ಥಿತವಾಗಿ ಜೋಡಿಸಲ್ಪಟ್ಟಿದೆ.—ಇವನ್ನು ಚಿತ್ರಗಳಲ್ಲಿ ತೋರಿಸಿಲ್ಲ. ಈ ಕೊನೆಯದಾದ ಅಂಶಕ್ಕೆ ಅವಶ್ಯಕವಾದ ವಿವರಣೆಯನ್ನು ಕೆಲವು ಮಾತುಗಳಲ್ಲಿ ಬರೆಯಬೇಕಾಗಿದೆ.

ನಮ್ಮ ನೆರೆಯವನನ್ನು ದಿವ್ಯ ದೃಷ್ಟಿಯಿಂದ ಆತನು ಎಚ್ಚತ್ತಿರುವಾಗ ನೋಡಿದರೆ—ಆತನು ಸ್ಥೂಲ ದೃಷ್ಟಿಗೆ ಕಾಣುವಂತೆಯೇ ಕಾಣುತ್ತಾನೆ. ಆದರೆ ಆತನು ತನ್ನ ದೇಹದ ಸುತ್ತಲೂ ಪ್ರಕಾಶ ಮಾನವಾದ ತೇಜಸ್ಸಿನಿಂದ ಆವೃತನಾಗಿರುವಂತೆ ಕಾಣತ್ತಾನೆ. ಆ ತೇಜಸ್ಸನ್ನು ಗಮನವಿಟ್ಟು ಪರಿಶೀಲಿಸಿದರೆ ಅದರೊಳಗೆ ವಿಧವಿಧವಾದ ಬಣ್ಣಗಳು ತಾಂಡವವಾಡುತ್ತಿರುವುದು ಗೋಚರವಾಗುತ್ತದೆ. ದಿವ್ಯ ದೃಷ್ಟಿಗೆ ಆತನ ಸ್ಥೂಲ ರೂಪವು ಹೇಗೆ ಕಾಣಿಸಿಕೊಳ್ಳುತ್ತದೆ ? ಎಂಬ ಪ್ರಶ್ನೆ ಏಳಬಹುದು. ಇದಕ್ಕೆ ಉತ್ತರ-ನಮಗೆ ದಿವ್ಯ ದೃಷ್ಟಿಗೆ ಕಾಣುವುದು ಆತನ ಸ್ಥೂಲ ರೂಪವಲ್ಲ-ಕಾಮದೇಹದ ಪ್ರಕೃತಿಯಲ್ಲಿರುವ ಅದರ ಪ್ರತಿರೂಪವು. ಮನುಷ್ಯನು ನಿದ್ರೆಯ ಮೂಲಕವಾಗಲೀ ಸಾವಿನ ಮೂಲಕವಾಗಲೀ ಈ ಸ್ಥೂಲ ದೇಹವನ್ನು ಬಿಟ್ಟಾಗಲೂ ಕೂಡ ಆ ಪ್ರತಿರೂಪವು ಅಚ್ಚಳಿಯದೇ ಮುಂದುವರಿಯುತ್ತದೆ. ಇದು ಹೇಗೆ ಸಾಧ್ಯ-ವೆಂಬಂಶವನ್ನು ವಿಮರ್ಶೆ ಮಾಡೋಣ.

2ನೆಯ ಚಿತ್ರದಲ್ಲಿ ಕಾಮಲೋಕದ ಪ್ರಕೃತಿಯೂ ಕೂಡ ಸ್ಥೂಲ ಲೋಕದಂತೆಯೇ ಏಳು ವಿಧವಾದ ಸಾಂದ್ರತೆಯಲ್ಲಿರುವುದನ್ನು ಮನಗಂಡಿರುತ್ತೇವೆ. ಬರಿಯ ಹೋಲಿಕೆ ದೃಷ್ಟಿಯಿಂದಲೇ ಅಲ್ಲ-ಪ್ರತಿಯೊಂದು ಸ್ಥೂಲ ಮಟ್ಟದ ಸಾಂದ್ರತೆಯ ಪ್ರಕೃತಿಯೂ ಕಾಮಲೋಕದ ಅದರ ಪ್ರತಿ ರೂಪದಂತಿರುವ ಸಾಂದ್ರತೆ ಮಟ್ಟದ ಪ್ರಕೃತಿಯನ್ನು ಆಕರ್ಷಿಸುತ್ತದೆ, ಉದಾಹರಣೆಗಾಗಿ, ಸ್ಥೂಲ ಲೋಕದ ಘನ ಮಟ್ಟದ ಪ್ರತಿಯೊಂದು ಕಣದೊಳಕ್ಕೆ ಕಾಮಲೋಕದ 'ಘನ' ಮಟ್ಟದ ಪ್ರಕೃತಿ ಕಣಗಳು ವ್ಯಾಪಕವಾಗಿ ಹಾಸುಹೊಕ್ಕಿನಂತೆ ಸೇರಿಕೊಳ್ಳುತ್ತವೆ. ಕಾಮಲೋಕದ ತತ್ವಕ್ಕೆ 'ಘನ' ಎಂಬ ವಿಶೇಷಣವನ್ನು ಕೊಡುವುದು ತುಂಬ ಅಸಂಗತ-ಆದಾಗ್ಗೂ ವಾಸ್ತವ ಸ್ಥಿತಿ ಅದೇನೇ-(ಎಂದರೆ ಮೇಲಿನಮಟ್ಟದ ಕಾಮಲೋಕದ ಪ್ರಕೃತಿ ಸಾಂದ್ರತೆಗಳಿಗೆ ಹೋಲಿಸಿದರೆ ಆ ಕೇವಲ ಕೆಳಗಿನ ಮಟ್ಟದ ಪ್ರಕೃತಿಯು ಸ್ಥೂಲ ಮಟ್ಟದ ಘನ ಪ್ರಕೃತಿಯಂತೆಯೇ ವರ್ತಿಸುತ್ತದೆ. ಹೀಗೆಯೇ ಪ್ರತಿಯೊಂದು ಸ್ಥೂಲ ಲೋಕದ ದ್ರವ ಕಣದೊಳಕ್ಕೆ ಕಾಮಲೋಕದ 'ದ್ರವ' ಮಟ್ಟದ ಕಣಗಳು ವ್ಯಾಪಕವಾಗಿ ಸೇರಿಕೊಳ್ಳುತ್ತವೆ. ಈ ಪ್ರತಿ ರೂಪಗಳು ಸಾಧಾರಣವಾಗಿ ಪ್ರತ್ಯೇಕವಾಗುವುದಿಲ್ಲ.

ಮನುಷ್ಯನು ಜನ್ಮ ತೆಗೆದುಕೊಳ್ಳಲು ಕೆಳಕ್ಕಿಳಿದಾಗ ಆತನು ಹಾದು ಬರುವ ಲೋಕಗಳ ಪ್ರಕೃತಿ ಕಣಗಳನ್ನು ತನ್ನ ಸುತ್ತಲೂ ಆಕರ್ಷಿಸುತ್ತಾನೆ. ಈ ರೀತಿ ಆಕರ್ಷಿತವಾದ ಮನೋಲೋಕ-ಮತ್ತು ಕಾಮಲೋಕಗಳಿಗೆ ಸಂಬಂಧಪಟ್ಟ ಪ್ರಕೃತಿ ಕಣಗಳು ಆತನ ಕಾರಣ ದೇಹದ ಅಂಡಾ ಕೃತಿಯಂತೆ ರೂಪಗೊಳ್ಳುತ್ತವೆ. ಸಧ್ಯದಲ್ಲೇ ಆತನಿಗೆ ಒಂದು ಸಣ್ಣ ಸ್ಥೂಲ ದೇಹವೂ ಲಭ್ಯವಾಗುತ್ತದೆ-ಕೂಡಲೇ ಅದರ ಆಕರ್ಷಣೆಯು ಮೇಲಿನ ಎರಡು ದೇಹಗಳ ಮೇಲೆ ಪ್ರಭಾವ ಬೀರುವುದಕ್ಕೆ ಪ್ರಾರಂಭಿಸು ತ್ತದೆ-ಮೇಲಿನ ಮಟ್ಟದ ತೀವ್ರ ಸ್ಪಂದಗತಿಯುಳ್ಳ ಸೂಕ್ಷ್ಮ ಪ್ರಕೃತಿ ಕಣಗಳು ಕೂಡಲೇ ಅದರ ಆಕರ್ಷಣೆಗೆ ಒಳಗಾಗುವುದಿಲ್ಲ-ಆದರೆ ಮಗುವಿನ ದೇಹವು ಬೆಳೆದ್ಕು ದೊಡ್ಡದಾದಂತೆಲ್ಲ ಅದರ ಪ್ರಭಾವವು ಹೆಚ್ಚುತ್ತಾ ಹೋಗುವುದು-ಬಾಲಕನು ಪ್ರೌಢ ನಾಗಿ ಬೆಳೆದಾಗ-ಮನೋದೇಹ ಮತ್ತು ಕಾಮದೇಹದ ಪ್ರಕೃತಿ ತತ್ವಗಳಲ್ಲಿ ಶೇಕಡ 90 ಭಾಗಗಳಷ್ಟನ್ನು ಸ್ಥೂಲ ದೇಹವು ತನ್ನ ಪರಿಧಿಯೊಳಗೆ ಸೇರಿಸಿಕೊಳ್ಳಲು ಸಮರ್ಥವಾಗುತ್ತದೆ. ಇದರಿಂದ ಮೊದಲು ಆಕರ್ಷಿತವಾದ ಮೇಲಿನ ಮಟ್ಟದ ಪ್ರಕೃತಿ ಕಣಗಳೇ ಕೊನೆಯವರಿಗೂ ಅದೇ ಪ್ರದೇಶದಲ್ಲಿರುತ್ತವೆಯೆಂದು ಅರ್ಥವಿಲ್ಲ. ಪ್ರತಿಯೊಂದು ಸೂಕ್ಷ್ಮ ಪ್ರಕೃತಿ ಕಣವೂ ತೀವ್ರವಾಗಿ ಚಲಿಸುತ್ತಲೇ ಇರುತ್ತದೆ-ಒಳಕ್ಕೂ-ಹೊರಕ್ಕೂ ಸತತವಾಗಿ ಚಲಿಸುತ್ತಾ ಹರಿದಾಡುತ್ತಿರುತ್ತದೆ. ಆದರೆ ಒಟ್ಟಿನಲ್ಲಿ ಆ ಭಾಗದಲ್ಲಿರಬೇಕಾದ ಕಣಗಳ ಮೊತ್ತದಲ್ಲಿ ವ್ಯತ್ಯಾಸವಾಗುವುದಿಲ್ಲ. ಆದುದರಿಂದ ದಿವ್ಯ ದೃಷ್ಟಿಯಿಂದ ನಮ್ಮ ಸ್ನೇಹಿತನನ್ನು ನೋಡಿದಾಗ ಕೇವಲ ಸ್ಥೂಲ ರೂಪದಂಥ ಘನೀಭೂತವಾದ ಸ್ಥೂಲ ರೂಪ ಮತ್ತು ಅದರ ಸುತ್ತಲೂ ಅಂಡಾಕೃತಿಯಲ್ಲಿರುವ ಪಾರದರ್ಶಕ ಸ್ವಭಾವವುಳ್ಳ ತೇಜಸ್ಸು-ಆ ಘನೀಭೂತವಾದ ರೂಪದಲ್ಲಿ ಮನುಷ್ಯನ ಪ್ರತಿಯೊಂದು ಮುಖಲಕ್ಷಣವೂ ಪ್ರತಿ ಬಿಂಬಿಸಲ್ಪಟ್ಟಿರುವುದರಿಂದ ಆತನನ್ನು ಕೂಡಲೇ ಗುರ್ತಿಸುವುದಕ್ಕೆ ಸಾಧ್ಯವಾಗುತ್ತದೆ.

ಇಷ್ಟೇ ಅಲ್ಲ. ಅಭ್ಯಾಸಬಲದ ನಿಯಮದ ಪ್ರಕಾರ ಕಾಮದೇಹ ಮತ್ತು ಮನೋದೇಹ ಪ್ರಕೃತಿಯ ಕಣಗಳು ಆ ರೂಪಕ್ಕೆ ಹೊಂದಿಕೊಂಡು ಇರುವುದರಿಂದ ಆ ಸ್ಥೂಲ ದೇಹವು ನಾಶವಾಗಿ ಹೋದ ಮೇಲೂ ಕೂಡ ಆ ಘನೀಭೂತವಾದ ಆಯಾ ಮಟ್ಟದ ರೂಪವು ಮುಂದುವರಿಯುತ್ತದೆ. ಆದುದರಿಂದ ಮನುಷ್ಯನನ್ನು ಸಾವಿನ ಅನಂತರವೂ ಸುಲಭವಾಗಿ ಗುರ್ತಿಸಬಹುದು-ತಾತ್ಕಾಲಿಕವಾಗಿ ಮುಖ ಭಾವದಲ್ಲಿ ಬದಲಾವಣೆಗಳುಂಟಾಗಬಹುದು-ಏಕೆಂದರೆ ತಾತ್ಕಾಲಿಕವಾದ ಯೋಚನೆಗಳ ಪ್ರಭಾವದಿಂದ ಸೂಕ್ಷ್ಮ ಪ್ರಕೃತಿ ಕಣಗಳು ಕೂಡಲೇ ಅದಕ್ಕನುಗುಣವಾಗಿ ಒಗ್ಗೊಡುತ್ತವೆ. ಆದರೆ ಅಂತಹ ಯೋಚನೆಯ ಪ್ರಭಾವವು ತಗ್ಗಿದ ಕೂಡಲೇ ಪ್ರತಿ ರೂಪವು ಮೊದಲಿನಂತೆ ಕಾಣಿಸಿಕೊಳ್ಳುತ್ತದೆ.

ಆದರೆ ಒಂದೇ ಸಮನೆ ಮುಂದುವರಿಯುವ ಯೋಜನಾ ಶಕ್ತಿಯ ಪ್ರಭಾವವು ಕ್ರಮೇಣ ಪ್ರತಿ ರೂಪದಲ್ಲಿ ಅದಕ್ಕನುಗುಣವಾದ ಬದಲಾವಣೆಗಳನ್ನು ಏರ್ಪಡಿಸುವುದುಂಟು-ಏಕೆಂದರೆ, ಸ್ಥೂಲ ದೇಹದಲ್ಲಿ ಅಂಗ ಊನತೆ ಹೊಂದಿದ್ದವನೂ, ಅಶಕ್ತನೂ, ಬೆನ್ನು ಬಾಗಿರುವವನೂ ಅಥವ ಮುಖಚರ್ಮದಲ್ಲಿ ಸುಕ್ಕುಗಳುಳ್ಳವನೂ-ಸತ್ತಮೇಲೆ ತಾನು ಹಾಗೆಯೇ ದೌರ್ಬಲ್ಯ-ಅಥವ ವಿಕಾರಸ್ಥಿತಿಯಲ್ಲಿರಲು ಯಾರೂ ಸಮ್ಮತಿಸುವುದಿಲ್ಲ. ಸತ್ತಕೂಡಲೇ ಕಾಮದೇಹದ ಪ್ರತಿ ರೂಪವು ಸ್ಥೂಲ ದೇಹದ ಸ್ಖಾಲಿತ್ಯಗಳನ್ನೆಲ್ಲ ಹೊಂದಿದ್ದಾಗ್ಯೂ ಆತನ ಸ್ವಂತ ಯೋಜನೆಯು ಆತನಿಗೆ ತಿಳಿಯದಂತೆಯೇ ಆತನನ್ನು ಕ್ರಮೇಣ ಪೂರ್ವವಯಸ್ಸಿನ ದೃಢತೆಯನ್ನು ವ್ಯಕ್ತಪಡಿಸುವ ರೂಪಕ್ಕೆ ಬದಲಾಯಿಸುತ್ತದೆ. ಆದುದರಿಂದಲೇವೃದ್ಧನು ಸತ್ತಮೇಲೆ ತನ್ನ ಬಂಧುಗಳಿಗೆ ತೋರಿಸಿಕೊಳ್ಳುವ ಆತನ ಪ್ರೇತ ರೂಪವು ಪ್ರಾಯದಲ್ಲಿದ್ದಂತೆ ಕಾಣಿಸಿಕೊಳ್ಳುತ್ತದೆ.

ಇದೂ ಅಲ್ಲದೆ ಸತ್ತವನ ಸ್ನೇಹಿತರೂ-ಬಂಧುಗಳೂ ಪರಿಚಿತರೂ ಆತನನ್ನು ಸ್ಮರಿಸಿಕೊಂಡಾಗಲೆಲ್ಲ ಆರೂಪವನ್ನೇ ಚಿಂತಿಸುತ್ತಾರೆ. ಅಂತಹ ಯೋಚನೆ ಶಕ್ತಿಯು ತಾತ್ಕಾಲಿಕವಾದುದಾದರೂ- ಒಟ್ಟಿನಲ್ಲಿ ಅಷ್ಟೊಂದು ಜನರ ಸಂಕಲ್ಪ ಶಕ್ತಿಯೆಲ್ಲ ಶೇಖರವಾಗಿ ತುಂಬ ಪರಿಣಾಮಕಾರಿಯಾಗಿವರ್ತಿಸುತ್ತದೆ.

ಇದರಿಂದೆಲ್ಲ ಓದುಗಾರನು ತಿಳಿದುಕೊಳ್ಳಬೇಕಾದುದೇನೆಂದರೆ ಯಾರಾದರೂ ಒಬ್ಬನ ಕಾಮದೇಹವನ್ನು ಪರಿಶೀಲಿಸಿದಾಗ ಈ ಪುಸ್ತಕದ ಉದಾರಣೆಗಳಲ್ಲಿ ಕೊಟ್ಟಿರುವುದಕ್ಕಿಂತಲೂ ಹೆಚ್ಚಾಗಿ ಗಮನಿಸಬೇಕಾದ ಅಂಶಗಳು ಅನೇಕ ವಿರುತ್ತವೆಯೆಂಬುದನ್ನೂ, ಅಲ್ಲದೆ ಆ ಕಾಮದೇಹದ ತೇಜಸ್ಸಿನ ಮಧ್ಯೆ ಘನೀಭೂತವಾಗಿ ಮುಂದುವರಿಯುವ ಸ್ಥೂಲ ದೇಹದ ಪ್ರತಿ ರೂಪವು ಎಲ್ಲ ಲಕ್ಷಣಗಳ ಮಧ್ಯದಲ್ಲೂ ಎದ್ದು ಕಾಣುವಂಥದು, ಎಂಬುದನ್ನೂ ಗಮನಿಸತಕ್ಕದ್ದು.

ಅನೇಕರಿಗೆ ದಿವ್ಯ ದೃಷ್ಟಿಯು ಕಾಮಲೋಕದ ಹಂತಗಳ ಪ್ರಕೃತಿಯನ್ನೆಲ್ಲ ನೋಡುವಷ್ಟು ಬೆಳೆದಿರುವುದಿಲ್ಲ. ಅಂಥವರಿಗೆ ಮನುಷ್ಯನ ಕಾಮದೇಹದ ಪ್ರತಿ ರೂಪವೇ ಎದ್ದು ಕಾಣತಕ್ಕದ್ದು-ಮೊದಮೊದಲು ದಿವ್ಯ ದೃಷ್ಟಿಯು ಕಾಮಲೋಕದ ಪ್ರಕೃತಿಯ ಸ್ಥೂಲ ಭಾಗಗಳನ್ನು ಮಾತ್ರ ನೋಡಬಲ್ಲುದು. ಆದುದರಿಂದ ಸ್ಥೂಲ ದೇಹಕ್ಕೆ ಸಂಬಂಧಪಟ್ಟ ಘನ ಪ್ರಕೃತಿಯ ಪ್ರತಿ ರೂಪದ ಅಂತಸ್ತಿನ ಸಾಮಗ್ರಿಗಳೇ ಕಾಮದೇಹದ ಪ್ರತಿ ರೂಪದಲ್ಲಿ ಶೇಖರವಾಗಿರುವುದು. ಆದುದರಿಂದ ದಿವ್ಯ ದೃಷ್ಟಿಯನ್ನು ಬೆಳೆಸಿಕೊಳ್ಳುವ ಪ್ರಾರಂಭ ದೆಸೆಯಲ್ಲಿ ಪರಿಶೀಲಿಕನು ಕಾಮದೇಹದ ಪ್ರತಿ ರೂಪವನ್ನು ಮಾತ್ರ ಚೆನ್ನಾಗಿ ನೋಡಬಲ್ಲನು. ಅದರ ಸುತ್ತು ಮುತ್ತಲಿನ ಇನ್ನೂ ಸೂಕ್ಷ್ಮವಾದ ಕಾಮಲೋಕದ ಪ್ರಕೃತಿಯು ಆತನಿಗೆ ಬಹುಶಃ ಮಬ್ಬಾಗಿ ಕಾಣಿಸು

ತ್ತದೆ. ಆತನು ಸ್ವಲ್ಪ ಪ್ರಯತ್ನಪಟ್ಟು ದೃಷ್ಟಿಯನ್ನು ತೀವ್ರಗೊಳಿಸುವ ಪಕ್ಷದಲ್ಲಿ, (ಎಂದರೆ ನಾವು ಸ್ಥೂಲ ಲೋಕದಲ್ಲಿ ನಮ್ಮ ಕಣ್ಣನ್ನು ನೆಟ್ಟು ಪ್ರಯತ್ನಪಟ್ಟು ನೋಡುವಂತೆ)-ಅದರ ಸುತ್ತಲೂ ಇರುವ ತೇಜಸ್ಸಿನ ಬಣ್ಣಗಳು ಕಾಣುತ್ತ ಬರುತ್ತವೆ. ಏಕೆಂದರೆ ಅಂತಹ ಪ್ರಯತ್ನಕ್ಕೆ ಸಂಬಂದಪಟ್ಟ ಶ್ರಮದಿಂದ ಆತನ ದೃಷ್ಟಿಯು ಮೇಲಿನ ಮಟ್ಟದ ಸ್ಪಂದಗತಿಗೆ ಏರುತ್ತದೆ-ಆಗ ಹೆಚ್ಚು ಹೆಚ್ಚು ಭಾಗವು ಗೋಚರವಾಗುತ್ತಾ ಬರುತ್ತದೆ-ಈ ಕ್ಷೇತ್ರದಲ್ಲಿ ಸುಶಿಕ್ಷಿತನಾದ ವಿದ್ಯಾರ್ಥಿಯು ತನ್ನ ದಿವ್ಯ ದೃಷ್ಟಿಯನ್ನು ಎಲ್ಲ ಉಪಲೋಕಗಳಿಗೂ ಅನ್ವಯವಾಗುವಂತೆ ಪ್ರಯೋಗ ಮಾಡಬಹುದು ಅಥವಾ ಯಾವುದಾದರೂ ಒಂದರಲ್ಲಿ ಕೇಂದ್ರೀಕರಿಸಬಹುದು-ಆ ರೀತಿ ಶಿಕ್ಷಣ ಕೊಡಲ್ಪಡುತ್ತದೆ.

ಮನುಷ್ಯನು ಕಾಮದೇಹದಲ್ಲಿ ವ್ಯವಹರಿಸುವಾಗ ಆತನಿಗೆ ಉಡುಪು ಏನಾದರೂ ಇರುತ್ತದೆಯೇ-ಹಾಗಿದ್ದಲ್ಲಿ ಅದನ್ನು ಆತನು ಹೇಗೆ ಪಡೆಯುತ್ತಾನೆ-ಎಂಬ ಪ್ರಶ್ನೆ ಏಳುತ್ತದೆ. ಈ ಸೂಕ್ಷ್ಮ ಪ್ರಕೃತಿಯು ಸಂಕಲ್ಪ ಶಕ್ತಿಗೆ ಕೂಡಲೇ ಒಗೊಡುತ್ತಾದುದರಿಂದ, ಮನುಷ್ಯನು ತನಗೆ ಇಷ್ಟ ಬಂದ ರೀತಿಯಲ್ಲಿ ಉಡುಪನ್ನು ಧರಿಸಬಹುದು, ಆತನ ಮನಸ್ಸು ಬೇರೆ ಕೆಲಸದಲ್ಲಿ ತೊಡಗಿದ್ದಾಗ ಆತನು ಸಾಮಾನ್ಯವಾಗಿ ದಿನವಹಿಧರಿಸುವ ಉಡುಪಿನಲ್ಲೇ ಕಂಡು ಬರುತ್ತಾನೆ-ನನಗೆ ಪರಿಚಿತನಾದ ಒಬ್ಬ ಸ್ನೇಹಿತನಿದ್ದನು-ನಾನು ಆತನನ್ನು ನೋಡಿದಾಗಲೆಲ್ಲ ಸಾಯಂಕಾಲದಲ್ಲಿ ಬಳಸುವ ಉಡುಪಿನಲ್ಲೇ ಇರುತ್ತಿದ್ದನು. ಮತ್ತೊಬ್ಬರು ಯಾವಾಗಲೂ ಬೌದ್ಧ ಭಿಕ್ಷುವಿನ ಹಳದಿ ಉಡುಪನ್ನು ಧರಿಸುತ್ತಿದ್ದರು. ಇದಕ್ಕೆ ಕಾರಣ ಅವರು ಉದ್ದೇಶ ಪೂರ್ವಕವಾಗಿ ಮೊದಮೊದಲು ಅದನ್ನು ರೂಪಿಸಿಕೊಳ್ಳುತ್ತಿದ್ದರು-ಅನಂತರ ಅದೇ ಅಭ್ಯಾಸವಾಗಿಬಿಟ್ಟಿತು.

ಮನೋದೇಹದಲ್ಲೂ ಕೂಡ ಮಾನವನ ಸ್ಥೂಲ ದೇಹದ ಪ್ರತಿರೂಪವಿರುತ್ತದೆ. ಸ್ವರ್ಗ ಜೀವನದ ಅಂತ್ಯದವರೆಗೂ ತನ್ನ ಸ್ಥೂಲ ದೇಹದ ರೂಪವನ್ನು ಬಹುಮಟ್ಟಿಗೆ ಮುಂದುವರಿಸಿಕೊಂಡು ಹೋಗುವುದಲ್ಲದೇ-ಕಳೆದ ಜನ್ಮದ ನೆನಪೂ ಹ ಆತನಿಗೆ ಇರುತ್ತದೆ. ಕಾರಣದೇಹಕ್ಕೂ ಒಂದು ಮಾನವ ರೂಪವಿದೆ. ಇದು ಯಾವ ಒಂದು ಜನ್ಮಕ್ಕೂ ಸಂಬಂಧಪಟ್ಟುದಲ್ಲ. ಆದರೆ ಇವುಗಳಲ್ಲೆಲ್ಲ ಅತ್ಯಂತ ಉನ್ನತ ಭಾವಾನ್ವಿತವಾದರೂಪವು ಅದು-ಅದು ಒಂದು ದಿವ್ಯ ರೂಪ (Ago eidies) ಆ ರೂಪದ ಮೂಲಕ ನಿಜವಾದ ಅಂತರಾತ್ಮನು ಅಭಿವ್ಯಕ್ತನಾಗುತ್ತಾನೆ.

ಆದರೆ ಆ ಉನ್ನತ ಮಟ್ಟದ ಪರಿಸ್ಥಿತಿಗಳು ನಮ್ಮ ಗ್ರಹಣ ಶಕ್ತಿಗೆ ಮೀರಿ ದಷ್ಟು ಗಹನವಾದುವು.

ಅಧ್ಯಾಯ ೧೫

ಕಾಡು ಮನುಷ್ಯ

13ನೆಯ ಅಧ್ಯಾಯದಲ್ಲಿ ಕೊಟ್ಟಿರುವ ತಿಳಿವಳಿಕೆ ದೃಷ್ಟಿಯಿಂದ (6ನೆಯ ಚಿತ್ರ ನೋಡಿ) ನಮ್ಮ ಕಾಡು ಮನುಷ್ಯನ ಮನೋ ದೇಹವನ್ನು ವಿಮರ್ಶೆ ಮಾಡಿದರೆ ಕೆಲವು ಲಕ್ಷಣಗಳು ಕೂಡಲೇ ಗೊತ್ತಾಗುತ್ತವೆ. ಒಟ್ಟಿನಲ್ಲಿ ಇದು ಬೆಳವಣಿಗೆಯಲ್ಲಿ ತುಂಬ ಹಿಂದಿದ್ದಾಗ್ಯೂ ಸ್ವಲ್ಪ ಪ್ರಗತಿಯನ್ನು ಆಗಲೇ ಸಾಧಿಸಿರುತ್ತದೆ. ತಲೆಯ ಮೇಲ್ಗಡೆ ಇರುವ ಮಬ್ಬಾದ ಹಳದಿ ಪಟ್ಟಿಯು ಸ್ವಲ್ಪ ಯೋಚನಾ ಶಕ್ತಿಯನ್ನು ಬೆಳೆಸಿಕೊಂಡಿರುವುದನ್ನು ತೋರಿಸುತ್ತದೆ. ಆದರೆ ಅದು ಮಾಸಲು-ಮಾಸಲಿನಂತೆ ಕಾಂತಿಹೀನವಾಗಿರುವುದರಿಂದ ಅದು ಸ್ವಾರ್ಥೋದ್ದೇಶ ದಿಂದ ಕೂಡಿರುತ್ತದೆ.—ಎಂಬುದು ತಿಳಿಯಬರುತ್ತದೆ. ಅದರ ಪಕ್ಕದಲ್ಲಿ ರುವ ನೀಲಿ ಬಣ್ಣವು ಬೂದು ಮಿಶ್ರವಾಗಿರುವುದರಿಂದ ಭೂತಗಣಗಳನ್ನು ಉಪಾಸನೆ ಮಾಡುವ ಭಯದಿಂದ ಕೂಡಿದ ಭಕ್ತಿಯನ್ನು ಪ್ರದರ್ಶಿಸುತ್ತದೆ–ಅಲ್ಲದೆ ಸ್ವಾರ್ಥೋದ್ದೇಶದಿಂದ ಕೂಡಿದುದೂ ಆಗಿದೆ. ಹಾಗೆಯೇ ಮಣ್ಣಿನ ಬಣ್ಣ ಮಿಶ್ರ ದಿಂದ ಗುಲಾಬಿ ಬಣ್ಣವು ಆಗ ತಾನೇ ಉದಯವಾಗಿರುವ ಪ್ರೇಮವನ್ನು ಸೂಚಿಸು ತ್ತದೆ—ಅಲ್ಲದೆ ಇದು ಕೂಡ ಸ್ವಾರ್ಥಾಭಿಲಾಷೆಯಿಂದ ಕೂಡಿದ್ದು–ಎಂದು ಒತ್ತಿ ಹೇಳ ಬೇಕಾಗಿಲ್ಲ. ಆತನ ಎದೆ ಮಟ್ಟದಲ್ಲಿರುವ ಮಬ್ಬಾದ ಕಿತ್ತಲೆ ಬಣ್ಣವು ಕೇವಲ ಕಡಿಮೆ ದರ್ಜೆ ಅಹಂ ಭಾವವನ್ನು ಸೂಚಿಸುತ್ತದೆ. ಹಾಗೆಯೇ ರಕ್ತ ಕೆಂಪಿನ ಪಟ್ಟಿಯು ಆತನ ಕೋಪದ ಪ್ರವೃತ್ತಿಯನ್ನು ತೋರಿಸುತ್ತದೆ. ಸ್ವಲ್ಪ ಕಾರಣ ಸಿಕ್ಕಿದರೂ ಸಾಕು ಸಿಡಿದು ಬೀಳುವಂತಹ ಸ್ವಭಾವದ್ದು—ತೇಜಸ್ಸಿನ ಬಹು ಭಾಗವನ್ನೆಲ್ಲ ಆಕ್ರಮಿಸಿರುವ ಮಣ್ಣಿನ ಬಣ್ಣ ಮಿಶ್ರವಾದ ಹಸುರು–ವಂಚನೆ-ದ್ರೋಹ ಮತ್ತು ದುರಾಶೆ--ಇವುಗಳನ್ನು ತೋರಿಸುತ್ತದೆ. ಕೇವಲ ಕೆಳಗೆ ಇರುವ ಮಂಕಾದ ಮಣ್ಣಿನ ಬಣ್ಣವು ಆತನ ಎಲ್ಲ ಕೆಲಸಗಳು ಸ್ವಾರ್ಥತೆಯಿಂದ ಪ್ರೇರೇಪಣೆಯಾಗತಕ್ಕವು-ಎಂಬುದನ್ನೂ ಮಾನ್ಯವಾದ ಸದ್ಗುಣದ ಅಭಾವವನ್ನೂ ಸೂಚಿಸುತ್ತದೆ.

ಇಂತಹ ಮೇಲ್ಮಟ್ಟದ ಗುಣವು ಆತನಲ್ಲಿ ಕಾಣದೇ ಇರುವುದರಿಂದಲೇ ಆತನ ಕಾಮದೇಹವು (7ನೆಯ ಚಿತ್ರವನ್ನು ನೋಡಿ) ಕೋಚು ಕೋಚಾಗಿ-ಇರುತ್ತದೆ. ಈ ಕಾಮದೇಹದ ಬಹುಭಾಗವು ಅದೇ ಕಾರಣದಿಂದಲೇ-ಇಂದ್ರಿಯ ಚಾಪಲ್ಯವನ್ನು





VI

ಸೂಚಿಸುವ ಕಂದು ಮಿಶ್ರವಾದ ಕೆಂಪು ಬಣ್ಣದಿಂದ ಮುಚ್ಚಲ್ಪಟ್ಟಿದೆ. ಇದಕ್ಕೆ ಸುಬಂಧ ಪಟ್ಟ ಕಂದು ಬಣ್ಣದ ಉರಿಗೆಂಪನ್ನು ಚಿತ್ರಸಲು ಸಾಧ್ಯವಿಲ್ಲ-ಆದರೆ ಅದು ಬೆಳೆದ ಕೆಲವು ಮನುಷ್ಯರಲ್ಲಿ ಹೊರತಾಗಿ ಉಳಿದವರಲ್ಲೆಲ್ಲ ಸಾಮಾನ್ಯವಾಗಿ ಎದ್ದು ಕಾಣು ತ್ತದೆ.

ವಂಚನೆ–ಸ್ವಾರ್ಥತೆ–ದುರಾಶೆ–ಇವುಗಳನ್ನು ಸೂಚಿಸುವ ಬಣ್ಣಗಳು ಎದ್ದು ಕಾಣುತ್ತವೆ. ಅಲ್ಲದೆ ಕೋಪವನ್ನು ಸೂಚಿಸುವ ಕೆಂಪು ಮಚ್ಚೆಗಳು ಅಲ್ಲಲ್ಲಿ ಹೇರಳ ವಾಗಿವೆ. ಪ್ರೇಮವು ಕಾಣುವುದೇ ಇಲ್ಲ–ಭಕ್ತಿ ಮತ್ತು ಯೋಚನಾ ಶಕ್ತಿಗಳೂ ಕೇವಲ ಕೆಳಗಿನ ಮಟ್ಟದುವು.

ಮತ್ತೊಂದು ಎದ್ದು ಕಾಣುವ ಲಕ್ಷಣವೇನೆಂದರೆ-ಕಾಮದೇಹವು ಕೋಚು-ಕೋಚಾಗಿರುವುದು-ಅಲ್ಲದೆ ಅದರ ಹೊರಮೈಯ್ಯಿ ಕೇವಲ ಕಾಂತಿಹೀನವಾಗಿ ಮಬ್ಬಾಗಿ ಕಾಣುವ ಪರಿಸ್ಥಿತಿ. ಅಲ್ಲದೆ ಬಣ್ಣದ ಪಟ್ಟಿಗಳು ಒಂದಕ್ಕೊಂದು ಕಲೆಸಿ ಕೊಂಡಂತೆ ಇವೆ, ಪರಿಷ್ಕಾರವಾಗಿ ವಿಂಗಡವಾಗಿಲ್ಲ. ಈ ಯಂತಸ್ತಿಗಿಂತ ಮುಂದು ವರಿದ ಮಾನವ ದೇಹಗಳ ಮಾದರಿಗಳನ್ನು ವಿಮರ್ಶೆ ಮಾಡುವ ಸಂದರ್ಭದಲ್ಲಿ-ಈ ಬಣ್ಣಗಳ ಪರಿಸ್ಥಿತಿಯು ಹೆಚ್ಚು-ಹೆಚ್ಚು ಪರಿಷ್ಕಾರವಾಗಿ ವಿಂಗಡವಾಗಿರುವಿಕೆಯನ್ನು ನೋಡುತ್ತೇವೆ. ಸಾಧಾರಣವಾಗಿ ಬಣ್ಣಗಳು ಒಂದಕ್ಕೊಂದು ಸೇರಿಕೊಂಡಂತೆ ಕಂಡುಬಂದರೂ ಸಾಮಾನ್ಯ ಮನುಷ್ಯನ ದೇಹದಲ್ಲಿ ಅವುಗಳು ಗೊತ್ತಾದ ಅಂಚುಳ್ಳ ಪಟ್ಟಿಗಳಂತೆ ವಿಂಗಡವಾಗಿರುವುದನ್ನು ನೋಡಬಹುದು, ಆದರೆ ಕಾಡು ಮನು ಷ್ಯನು ಸಾಮಾನ್ಯವಾಗಿ ಥಟ್ಟನೆ ಸಿಡಿದೇಳುವಂತಹ ಕೆಟ್ಟ ಪ್ರವೃತ್ತಿಗಳಿಗೆ ತುತ್ತಾಗಿರು ತ್ತಾನೆ.—ಅವುಗಳನ್ನು ತಡೆದು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂಬ ಹಂಬಲವೂ ಈತನಲ್ಲಿರುವುದಿಲ್ಲ ನೋಡುವುದಕ್ಕೆ ತುಂಬ ಅಸಹ್ಯಕರವಾದ ವ್ಯಕ್ತಿ, ಆದರೇನು ನಾವೆಲ್ಲರೂ ಈ ಯಂತಸ್ತಿನಮೂಲಕವೇ ಹಾದು ಬಂದಿರುತ್ತೇವೆ–ಮತ್ತು ಆ ಮೂಲಕ ಪಡೆದ ಅನುಭವದಿಂದ ನಾವು ಅದಕ್ಕಿಂತ ಉತ್ತಮವೂ ಮತ್ತು ಪ್ರ ಬುದ್ಧವೂ ಆದ ಪರಿಸ್ಥಿತಿಯನ್ನು ತಲುಪಲು ಸಾಧ್ಯವಾಯಿತು.

ನೀಗ್ರೊ ಜನರಲ್ಲಿ ಕೇವಲ ಕಡಿಮೆ ಮಟ್ಟದ ಜನರೂ ಮತ್ತು ಮೂರನೆಯ ಜನಾಂಗಕ್ಕೆ ಸೇರಿದ ಅಲ್ಪ ಸ್ವಲ್ಪ ಜನರೂ ಈ ಕೆಳಗಿನ ಬೆಳವಣಿಗೆ ಮಟ್ಟದಲ್ಲಿರು ತ್ತಾರೆ. ಉಳಿದ ಕಾಡು ಮನುಷ್ಯರು ಎಂದರೆ-ಜೂಲು-ಮೋರಿಸ್-ಮತ್ತು ದಕ್ಷಿಣ ಸಾಗರದ ದ್ವೀಪವಾಸಿಗಳೂ ಈ ದರ್ಜೆಗಿಂತ ಎಷ್ಟೋ ಮುಂದುವರಿದು ನಮ್ಮ ಈ ನೆಯ ಚಿತ್ರ ಮತ್ತು 10ನೆಯ ಚಿತ್ರಗಳ ಮಾದರಿಗಳಿಗೆ ಮಧ್ಯವರ್ತಿಗಳಂತೆ ಇರು ತ್ತಾರೆ.

ಈ ಚಿತ್ರಗಳಲ್ಲಿ ಕಂಡು ಬರುವ ಮೇಲ್ಮಟ್ಟದ ದೇಹಗಳ ಪ್ರಕೃತಿ ಕಣಗಳು ತುಂಬ ತೀವ್ರಗತಿಯಲ್ಲಿ ಚಲಿಸುತ್ತಿರುತ್ತವೆ ಯೆಂಬಂಶವನ್ನು ಮರೆಯಬಾರದು. ಕೆಲವು ಸಂದರ್ಭಗಳಲ್ಲಿ ಮಾತ್ರ ಈ ದೇಹಗಳು ಸ್ಪಷ್ಟವಾಗಿ ಅಂಚು ಕಟ್ಟಿಕೊಂಡಿರುವುದಲ್ಲದೇ ಅವುಗಳಲ್ಲಿ ಕಂಡುಬರುವ ಬಣ್ಣದ ಪಟ್ಟೆಗಳೂ ಕೂಡ ಪ್ರತ್ಯೇಕವಾದ ಎಲ್ಲೆಗೆರೆಗಳನ್ನು ಹೊಂದಿ ವಿಂಗಡವಾಗಿರುತ್ತವೆ. ಆದರೆ ಬಹು ಸಂಖ್ಯಾತ ದೇಹಗಳಲ್ಲಿ ಬಣ್ಣಗಳು ಒಂದಕ್ಕೊಂದು ಮಿಶ್ರವಾಗಿ ಸೇರಿಕೊಂಡಂತೆಯೂ ಒಂದರ ಮೇಲೊಂದು ಅಲೆಗಳಂತೆ ಚಲಿಸುತ್ತಿರುವಂತೆಯೂ ಅವ್ಯವಸ್ಥಿತವಾಗಿ ಕಂಡುಬರುತ್ತವೆ. ವಾಸ್ತವವಾಗಿಯೂ ಪ್ರಕಾಶಮಾನವಾದ ಬಣ್ಣಗಳಿಂದ ಕೂಡಿದ ಮೇಲ್ಮಯ್ಯಿ–ಕುದಿಯುತ್ತಿರುವ ನೀರಿನ ಮೇಲ್ಭಾಗವನ್ನು ಹೋಲುತ್ತದೆ. ಕುದಿಯುತ್ತಿರುವ ನೀರಿನಲ್ಲಿ ಮೇಲೆ ಕಾಣಬರುವ ಬಿಂದುಗಳು ಯಾವಾಗಲೂ ಮೇಲ್ಭಾಗದಲ್ಲೇ ಇರುವುದಿಲ್ಲ-ನೀರು ಥಳ-ಮಳಕುದಿಯುತ್ತಿರುವುದರಿಂದ ಮೇಲಿನ ಬಿಂದುಗಳು ಕೆಳಕ್ಕೂ ಕೆಳಗಿನ ಹನಿಗಳು ಮೇಲಕ್ಕೂ ಬಂದು ಹೋಗುತ್ತಿರುತ್ತವೆ. ಆದುದರಿಂದ ಬಣ್ಣದ ಪಟ್ಟೆಗಳು ನಮ್ಮ ಚಿತ್ರಗಳಲ್ಲಿ ಕಾಣುವಂತೆ ಒಂದೇ ಸಮನೆ ವಿಂಗಡವಾಗಿರುವುದಿಲ್ಲ. ಆದಾಗ್ಯೂ ಚಿತ್ರದಲ್ಲಿ ಪ್ರತಿನಿಧಿಸಿರುವಂತಹ ಪರಿಸ್ಥಿತಿಗೆ ಬರುವ ಪ್ರವೃತ್ತಿಯು ಅವುಗಳಿಗಿರುತ್ತದೆ ಅಲ್ಲದೆ ಗುಲಾಬಿ (ಪ್ರೇಮ) ನೀಲಿ (ಭಕ್ತಿ) ಮತ್ತು ಹಳದಿ-ಬಣ್ಣದ ಪಟ್ಟೆ ಯಾವಾಗಲೂ ಚಿತ್ರದಲ್ಲಿರುವಂತೆ ತೇಜಸ್ಸಿನ ಮೇಲ್ಭಾಗದಲ್ಲೇ ಕಂಡುಬರುತ್ತವೆ-ಎಂದರೆ ಸ್ಥೂಲ ದೇಹದ ತಲೆಯ ಹತ್ತಿರ ಇರುತ್ತವೆ-ಆದರೆ ಸ್ವಾರ್ಥತೆ–ದುರಾಶೆ–ಮೋಸ-ದ್ವೇಷ—ಇಂತಹ ನೀಚ ಗುಣಗಳನ್ನು ಪ್ರತಿನಿಧಿಸತಕ್ಕಂಥ ಬಣ್ಣಗಳು ಯಾವಾಗಲೂ ಕೆಳಭಾಗದಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ಇಂದ್ರಿಯ ಚಾಪಲ್ಯವನ್ನು ಸೂಚಿಸುವಂತಹ ಬಣ್ಣವು ಈ ಎರಡು ಭಾಗಗಳ ಮಧ್ಯೆ ಇರುತ್ತದೆ.

ಬಣ್ಣಗಳಂತೆ ನಮ್ಮ ಕಣ್ಣಿಗೆ ಕಾಣುವುದು-ಒಂದು ಗೊತ್ತಾದ ವೇಗಗತಿಯಲ್ಲಿ ಸ್ಪಂದಿಸುವ ಮನೋದೇಹ-ಅಥವ ಕಾಮದೇಹಗಳಲ್ಲಿನ ಗೊತ್ತಾದ ಸಾಂದ್ರತೆಯ ಅಂತಸ್ತಿನ ಪ್ರಕೃತಿ ತತ್ವವೇ ಆಗಿರುತ್ತದೆ. ಈ ಯಂತಸ್ತಿನ ಪ್ರಕೃಶಿ ತತ್ವವು ಆಯಾ ಸಾಂದ್ರತೆ ಮಟ್ಟದಲ್ಲಿ ಚಲಿಸುತ್ತದೆ.—(ಆದುದರಿಂದ-ನೀಚ ಭಾವನೆಗಳು ಸಾಂದ್ರವಾದ ಕೆಳಗಿನ ಮಟ್ಟದ ಪ್ರಕೃತಿಯ ಮಂದಗತಿಯಲ್ಲಿ ಚಲಿಸುವ ಸ್ಪಂದಗಳ ಮೂಲಕ ವ್ಯಕ್ತವಾಗಬಲ್ಲವು.—ಹಾಗೆಯೇ ಉನ್ನತ ಭಾವನೆಗಳೆಲ್ಲ ಎಂದರೆ ಭಕ್ತಿ-ಪ್ರೇಮ ವಿಚಾರಶಕ್ತಿ-ಉತ್ಕಾಂಕ್ಷೆಗಳು ಮೇಲ್ಭಾಗದ ಸೂಕ್ಷ್ಮ ಪ್ರಕೃತಿಯಲ್ಲಿ ಮಾತ್ರ ವ್ಯಕ್ತವಾಗಬಲ್ಲುವು.— T. V. R.) ಆದರೆ ಕೆಲವು ವಿಶೇಷ ಸಂದರ್ಭಗಳಲ್ಲಿ ಕಾಮದೇಹದ ಪ್ರಕೃತಿಯೆಲ್ಲವೂ ತಾತ್ಕಾಲಿಕವಾಗಿ ಒಂದು ಗೊತ್ತಾದ ಉದ್ವೇಗದ ಪ್ರಭಾವದಿಂದ ಅಲ್ಲೋಲ ಕಲ್ಲೋಲವಾಗಬಹುದು—ಆದರೆ ಆ ಪ್ರಭಾವವು ತಗ್ಗಿದ ಕೂಡಲೇ ಯಾವ ಪ್ರಕೃತಿ ಭಾಗವು ಆ ವಿಶೇಷ ಉದ್ವೇಗಕ್ಕೆ



VII

VI1

ಅನುಗುಣವಾದ ಸ್ಪಂದ ಮಟ್ಟವುಳ್ಳದ್ದೋ ಅದು ವಿನಾ ಉಳಿದ ಭಾಗಗಳೆಲ್ಲ ತಮ್ಮ ಸಾಮಾನ್ಯ ಪರಿಸ್ಥಿತಿಯ ವೇಗ ಮಿತಿ ಮಟ್ಟಗಳಿಗೆ ಹಿಂದಿರುಗುತ್ತವೆ.

ಸ್ವಾಭಾವಿಕವಾಗಿ ಪ್ರತಿಯೊಬ್ಬನೂ ತನ್ನದೇ ಆದ ವೈಯಕ್ತಿಕ ಗುಣ ವೈಶಿಷ್ಟ್ಯತೆಯುಳ್ಳವನು. ಯಾರಿಬ್ಬರ ಸ್ವಭಾವವೂ ಒಂದೇ ವಿಧವಾಗಿರುವುದಿಲ್ಲ. ಆದರೆ ಪ್ರತಿಯೊಂದು ಚಿತ್ರವೂ ಆಯಾ ಬೆಳವಣಿಗೆ ಮಟ್ಟದ ಮನುಷ್ಯ ಮಾದರಿಯನ್ನು ಪ್ರತಿನಿಧಿಸುತ್ತದೆ. ಅಲ್ಲದೆ ಆಯಾ ವ್ಯಕ್ತಿಯ ಸ್ವಭಾವಕ್ಕೆ ತಕ್ಕಂತೆ ಬಣ್ಣಗಳು ಅಂಡಾಕೃತಿಯ ತೇಜಸ್ಸಿನ ಭಾಗಗಳಲ್ಲಿರುವಂತೆ ಚಿತ್ರಿಸಲ್ಪಟ್ಟಿರುತ್ತವೆ.

ಅಧ್ಯಾಯ ೧೬

ಸಾಧಾರಣ ಮನುಷ್ಯ

ಈಗ ಕಾಡು ಮನುಷ್ಯನ ಮಟ್ಟದಿಂದ ನಮ್ಮ ಜನಾಂಗಕ್ಕೆ ಸೇರಿದ ಸಾಧಾರಣ ಮನುಷ್ಯನು ಎಷ್ಟರ ಮಟ್ಟಿಗೆ ಬೆಳೆದಿರುತ್ತಾನೆ-ಆ ಬೆಳವಣಿಗೆಯು ಆತನ ಸೂಕ್ಷ್ಮ ದೇಹಗಳಲ್ಲಿ ಹೇಗೆ ವ್ಯಕ್ತವಾಗುತ್ತದೆ – ಯೆಂಬಂಶವನ್ನು ಪರಿಶೀಲಿಸೋಣ. ಈ ಪುಸ್ತಕವಲ್ಲಿ ಸಾಧಾರಣ ಮನುಷ್ಯನೆಂದರೆ ಥಿಯಾಸಫಿ-ಅಥವ ಆಧ್ಯಾತ್ಮ ವಿದ್ಯೆಯ ವಿದ್ಯಾರ್ಥಿ-ಸುಸಂಸ್ಕೃತನಾದ ಮನುಷ್ಯ-ಇಂತಹರಲ್ಲ-ಸಾಧಾರಣ ಮಧ್ಯವರ್ಗದ ಕೆಳಗಿನ ದರ್ಜೆ ಮನುಷ್ಯನನ್ನು ಕುರಿತು ವಿಮರ್ಶೆ ಮಾಡೋಣ-ಉದಾಹರಣೆಗಾಗಿ ಚಿಲ್ಲರೆ ವರ್ತಕ–ಗುಮಾಸ್ತ–ಅಂಚೆಯ ಜವಾನ-ಇಂತಹ ಮನುಷ್ಯ-ಬಹು ಒರಟಾದ ಅನಾಗರೀಕನಲ್ಲ-ಸಿಗರೇಟು ಮುಂತಾದ ಧೂಮಪಾನದ ಅಭ್ಯಾಸವುಳ್ಳ ಸಾಮಾನ್ಯ ಮನುಷ್ಯ—ಇಂತಹನ ಕಾರಣ ದೇಹವನ್ನು ನೋಡಿದರೆ (ನಮ್ಮ 8ನೆಯ ಚಿತ್ರವನ್ನು ನೋಡಿ) ಆತನ ಕಾರಣ ದೇಹದ ಗಾತ್ರವು ಸ್ವಲ್ಪ ಹಿಂದಿನ ಹಂತಕ್ಕಿಂತಲೂ ವಿಸ್ತರಿಸಿದೆ-ಇದಕ್ಕಿಂತಲೂ ಹೆಚ್ಚಾಗಿ ಒಳಗಿನ ಬಣ್ಣಗಳ ಸಂಪತ್ತು ಉತ್ತಮಗೊಂಡಿದೆ-ಎಂದರೆ ನಾಜೋಕಾದ ಬಣ್ಣವು ಎದ್ದು ಕಾಣುತ್ತದೆ-ಆದರೆ ಅದನ್ನು ಪೂರ್ತಿ ವ್ಯಾಪಿರುವಷ್ಟು ದೊಡ್ಡದಾಗಿಲ್ಲ. ಈ ದೈವೀ ಸಂಪತ್ತಿನ ಗುಣಗಳನ್ನು ಜೀವಾತ್ಮನು ತನ್ನ ನಿತ್ಯವಾದ ಗುಣಗಳನ್ನಾಗಿ ಪಡೆದಿರುತ್ತಾನೆ-ಅಲ್ಲದೇ ಕೆಳಗಿನ ಮಟ್ಟದ ಗುಣಗಳಿಗಿಂತ ಹೆಚ್ಚು ಉನ್ನತ ಮಟ್ಟದಲ್ಲಿ ಸ್ಪಂದಿಸುವಷ್ಟು ಘನತರವೂ ಪರಿಶುದ್ಧವೂ ಆದುವುಗಳು-ಅಲ್ಲದೆ ತತ್ವಚಿಂತನೆಗೆ ಸಂಬಂಧಪಟ್ಟ ಸ್ವಲ್ಪ ವಿಚಾರಶಕ್ತಿ-ವಾಸ್ತವವಾಗಿಯೂ ನಿಜವಾದ ಭಕ್ತಿ ಮತ್ತು ಸ್ವಾರ್ಥ ಪ್ರೇಮ-ಇವುಗಳೆಲ್ಲವೂ ಈಗಾಗಲೇ ಬೆಳೆದಿರುವುದು ಕಾಣುತ್ತದೆ. ಅಲ್ಲದೆ-ಅತ್ಯಂತ ಉನ್ನತ ಮಟ್ಟದ ಧ್ಯೇಯಕ್ಕೆ ಹಾತೊರೆಯುವ ಭಕ್ತಿ-ಔಪಾಸನೆಗೆ ಸಂಬಂಧಪಟ್ಟ ಊದಾ ಬಣ್ಣದ ಸಣ್ಣಗುರುತು, ಅಲ್ಲದೆ ಸಹಾನುಭೂತಿಯನ್ನು ವ್ಯಕ್ತ ಪಡಿಸುವಂತಹ ಸಣ್ಣ ಹಸುರು ಪಟ್ಟೆ-ಇವೂ ಸಹ ಇವೆ.

ನಮ್ಮ 9ನೆಯ ಚಿತ್ರದಲ್ಲಿರುವಂತೆ ಸಾಧಾರಣ ಮನುಷ್ಯನ ಮನೋದೇಹವನ್ನು ಪರಿಶೀಲಿಸಿದರೆ ಕಾಡು ಮನುಷ್ಯನಿಗಿಂತಲೂ ಬಹುದೂರ ಮುಂದುವರಿದ ಪ್ರಗತಿಯು ಗೋಚರಿಸುವುದು. ಆತನಿಗಿಂತಲೂ ಹೆಚ್ಚಾದ ವಿಮರ್ಶಾಶಕ್ತಿ-ಪ್ರೇಮ ಮತ್ತು ಭಕ್ತಿ-ಗಳು ಕಂಡುಬರುವುದಲ್ಲದೆ-ಇವುಗಳ ಗುಣದಲ್ಲೂ ತುಂಬ ಹೆಚ್ಚಾದ




VIII



IX.

IX.i



|X|

ಪ್ರಗತಿ ಕಾಣುತ್ತದೆ. ಆದಾಗ್ಯೂ ಇವು ಸಮರ್ಪಕವಾದ ರೀತಿಯಲ್ಲಿ ಪರಿಶುದ್ಧವಾಗಿಲ್ಲದಿದ್ದಾಗ್ಯೂ 6ನೆಯ ಚಿತ್ರಕ್ಕೆ ಸಂಬಂಧಪಟ್ಟ ಈ ಮಾದರಿ ಬಣ್ಣಗಳಿಗಿಂತ ತುಂಬ ನಾಜೋಕಾಗಿವೆ-ಅಹಂಭಾವದ ಪರಿಮಾಣವು ಹಿಂದಿನಂತೆಯೇ ಹೆಚ್ಚಾಗಿದೆ-ಆದಾಗ್ಯೂ ಅದು ಅಷ್ಟು ನೀಚವಾದುದಲ್ಲ-ಈಗಿನ ಅಂತಸ್ತಿನಲ್ಲಿ ಮನುಷ್ಯನು ತನ್ನ ಸದ್ಗುಣಗಳ ವಿಷಯವಾಗಿ ಅಹಂಭಾವವನ್ನು ವ್ಯಕ್ತಪಡಿಸುತ್ತಾನೆ-ಕಾಡು ಮನುಷ್ಯನಂತೆ-ಪಶುಸ್ವಭಾವದ ಶಕ್ತಿ-ಅಥವ ಕ್ರೌರ್ಯದ ಹೆಚ್ಚುಗಾರಿಕೆಯಿಂದ ಅಲ್ಲ. ಇನ್ನೂ ಕೋಪಕ್ಕೆ ಸಂಬಂಧಪಟ್ಟ ರಕ್ತ ವರ್ಣದ ಕೆಂಪ್ರಭಾಯೆಯು ಮುಂದುವರಿದಕೊಂಡು ಬಂದಿದೆ–ಆದರೆ ಅದು ತೇಜಸ್ಸಿನಲ್ಲಿ ಕೆಳಗಿನ ಸ್ಥಾನವನ್ನು ಪಡೆದಿರುತ್ತದೆ—ಇದರಿಂದ ಮನೋದೇಹದ ಪ್ರಕೃತಿಯೇ ಉತ್ತಮದರ್ಜೆಯದೆಂಬುದು ಗೊತ್ತಾಗುತ್ತದೆ. ಅಲ್ಲದೆ ಕಾಡು ಮನುಷ್ಯರಲ್ಲಿ (ಸ್ವಾರ್ಥತೆ-ವಂಚನೆ–ದುರಾಶೆ) ಇವುಗಳನ್ನು ತೋರಿಸುವ ಹಸರು ಬಣ್ಣದ ಪಟ್ಟೆಯು ಕೇವಲ ಸಾಂದ್ರವಾದ ಕೆಳಗಿನ ಮಟ್ಟದ ಪ್ರಕೃತಿ ತತ್ವದಲ್ಲಿ ವ್ಯಕ್ತವಾಗಿ–ಅದೇ ಕಾಲದಲ್ಲಿ ಆತನ ಕೋಪವು ಮೇಲ್ಭಾಗಲ್ಲಿತ್ತು-ಈಗ ಸಾಧಾರಣ ಮನುಷ್ಯನ ತೇಜಸ್ಸನ್ನು (9ನೆಯ ಚಿತ್ರ) ನೋಡಿದರೆ-ಹಸರು ಮೇಲಕ್ಕೆ ಹೋಗಿದೆ-ಕೋಪವು ಕೆಳಕ್ಕೆ ಇಳಿದಿದೆ. ಇದರಿಂದ ಈ ಸಾಧಾರಣ ಮನುಷ್ಯನ ಉನ್ನತ ಮಟ್ಟದ ಹಸರು ಇತರರೊಡನೆ ಹೊಂದಿಕೊಳ್ಳುವ ಸ್ವಭಾವವನ್ನು ತೋರಿಸುತ್ತದೆ–ಮೊದಲಿನಂತೆ ಮೋಸದ ಗುರ್ತಾಗಿಲ್ಲ. ಹೀಗೆಯೇ ಕಂದು ಬಣ್ಣದ ಛಾಯೆಯು ಇನ್ನೂ ಹೆಚ್ಚು ಸ್ಥಳವನ್ನು ಆಕ್ರಮಿಸಿರುವುದು ಕಾಣುತ್ತದೆ-ಆದಾಗ್ಯೂ ಹಿಂದಿನಕ್ಕಿಂತಲೂ ಒಂದು ದರ್ಜೆ ತಗ್ಗಿದೆ.

10ನೆಯ ಚಿತ್ರವು ಸಾಧಾರಣ ಮನುಷ್ಯನ ಕಾಮದೇಹವನ್ನು ಪ್ರತಿನಿಧಿಸುತ್ತದೆ. ಈ ಕಾಮದೇಹವು 9ನೆಯ ಚಿತ್ರದ ಮನೋದೇಹವನ್ನು ಹೋಲುತ್ತಾ ಒಂದು ದರ್ಜೆ ಕೆಳಗಿನ ಮಟ್ಟದಲ್ಲಿದೆ. ಆದುದರಿಂದಲೇ ಇದರ ಬಣ್ಣಗಳು ಮನೋದೇಹವಷ್ಟು ನಾಜೋಕಾಗಿಲ್ಲ. ಅಲ್ಲದೆ ಮನೋದೇಹದ ಉನ್ನತ ಮಟ್ಟದಲ್ಲಿ ವ್ಯಕ್ತವಾಗಲು ಸಾಧ್ಯವಿಲ್ಲದ ಕೆಲವು ಉದ್ವೇಗಗಳೂ ಈ ದೇಹದಲ್ಲಿ ಕಂಡು ಬರುತ್ತವೆ. ಆದಾಗ್ಯೂ 7ನೆಯ ಚಿತ್ರಕ್ಕಿಂತಲೂ ತುಂಬ ಉತ್ತಮವಾದ ಅಂತಸ್ತಿನಲ್ಲಿದೆ. ಇಂದ್ರಿಯ ಚಾಪಲ್ಯವು ತಗ್ಗಿದೆ–ಆದಾಗ್ಯೂ ಅದೇ ಹೆಚ್ಚಾದ ಪ್ರಾಮುಖ್ಯ ಸ್ಥಾನವನ್ನು ಪಡೆದಿರುವುದು ದುರಾದೃಷ್ಟವೇ ಸರಿ. ಆದಾಗ್ಯೂ ಈ ಪಟ್ಟೆಯು (ಕಂದುಮಿಶ್ರ ಕೆಂಪು ಪಟ್ಟೆ) ಕಾಡುಮನುಷ್ಯನದಕ್ಕಿಂತಲೂ ಕಡಿಮೆ ದೌರ್ಜನ್ಯಕಾರಕವಾದ ಮತ್ತು ಅಷ್ಟು ಹೆಚ್ಚು ಪ್ರಬಲವಾಗಿ ಆತನನ್ನು ಆಳುವುದಿಲ್ಲ. ಹೀಗೆಯೇ ಸ್ವಾರ್ತತೆಯೂ ಮೋಸ ಬುದ್ಧಿಯೂ ಇನ್ನೂ ಇವೆ. ಹಸುರು ಸೂಚಿಸಿರುವ ವಂಚನೆಯು ಇತರರೊಡನೆ ಹೊಂದಿಕೊಂಡು ನಡೆಯುವಂಥ ಉತ್ತಮ ದರ್ಜೆ ಬುದ್ಧಿಯಾಗಿ ಪರಿಣಮಿಸಿದೆ.

ಈ ಚಿತ್ರವೂ ಹಿಂದಿನ ಚಿತ್ರದಂತೆಯೇ ಮನುಷ್ಯನ ಸರಾಸರಿ ಸಮಾಧಾನ ಸ್ಥಿತಿಯನ್ನು ತೋರಿಸುತ್ತದೆ–ಸಾಧಾರಣ ಮನುಷ್ಯನ ಕಾಮದೇಹವು ಸಮಾಧಾನ ಸ್ಥಿತಿಯಲ್ಲಿರುವುದೇ ಅಪರೂಪ. ಅದು ಯಾವುದಾದರೂ ಒಂದು ಉದ್ವೇಗ ಅಥವ ಆವೇಶಕ್ಕೆ ಒಳಗಾಗಿರುವ ಕಾಲವೇ ಹೆಚ್ಚು-ಆದುದರಿಂದ ಆತನು ಯಾವುದಾದರೂ ಒಂದು ಪ್ರಬಲವಾದ ಉದ್ವೇಗ ಅಥವ ಆವೇಶಕ್ಕೆ ಒಳಗಾಗಿದ್ದಾಗಿನ ಪರಿಸ್ಥಿತಿಯನ್ನೂ ಸಹ ನಮ್ಮ ಗಮನಕ್ಕೆ ತೆಗೆದುಕೊಳ್ಳದೇ ಹೋದರೆ -ಆತನ ಯೋಗ್ಯತೆಯನ್ನು ಸರಿಯಾಗಿ ಬೆಲೆಕಟ್ಟಿದಂತೆ ಆಗುವುದಿಲ್ಲ. ಮನುಷ್ಯನಿಗೆ ಸಂಬಂಧಪಟ್ಟ ಕೆಲವು ಮನೋಭಾವನೆಗಳಿರುತ್ತವೆ. ಇವು ಆತನ ಕಾಮದೇಹವನ್ನು ಗಮನಾರ್ಹವಾದಂತಹ ರೀತಿಯಲ್ಲಿ ಬದಲಾಯಿಸಬಲ್ಲುವು-ಇವುಗಳಿಗೆ ಸಂಬಂಧಪಟ್ಟ ಪರಿಣಾಮಗಳನ್ನು ಮುಂದಿನ ಕೆಲವು ಚಿತ್ರಗಳ ಮೂಲಕ ಉದಾಹರಿಸಲಾಗುವುದು.



XI

ಅಧ್ಯಾಯ ೧೭

ಥಟ್ಟನೆ ಎದ್ದು ಮನುಷ್ಯನನ್ನು ಆಳುವಂತಹ ಭಾವನೆಗಳು

ಇವುಗಳಲ್ಲಿ ಕೆಲವು ಕಾಮದೇಹವಲ್ಲಿ ತುಂಬ ಪರಿಣಾಮಕಾರಿಯಾದಬದಲಾವಣೆಗಳನ್ನುಂಟುಮಾಡುತ್ತವೆ–ಇಂತಹ ಪರಿಣಾಮಗಳನ್ನು ಬಹು ಜಾಗರೂಕತೆಯಿಂದ ವಿಮರ್ಶೆ ಮಾಡಬೇಕಾಗಿದೆ. ಈ ಪುಸ್ತಕದಲ್ಲಿ ಕೊಟ್ಟಿರುವ ಚಿತ್ರಗಳೂ ಉಹಾಕಲ್ಪಿತಗಳಲ್ಲ–ದಿನಚರಿ ಜೀವಿತದಿಂದ ಆರಿಸಿಕೊಂಡುವುಗಳು. ಯಾವ ವಿಧವಾದ ಭಾವನೆಗಳಿಗೊಳಗಾದರೆ ಮನುಷ್ಯನ ಕಾಮದೇಹವು ಯಾವ ಯಾವ ರೂಪಗಳನ್ನು ತಾಳಬಹುದು ಎಂಬ ಊಹೆಯ-ಆಧಾರದ ಮೇಲೆ ಈ ಚಿತ್ರಗಳನ್ನು ರಚಿಸಿಲ್ಲ. ಈ ಕೆಳಗೆ ವಿವರಿಸಿರುವಂತೆ ಅಂತಹ ಭಾವನೆಗಳಿಗೆ ಮನುಷ್ಯರು ಒಳಗಾದಾಗ ಅವರ ಕಾಮದೇಹಗಳ ಮೇಲೆ ವಾಸ್ತವವಾಗಿಯೂ ಆದ ಬದಲಾವಣೆಗಳನ್ನು ಕರಾರುವಾಕ್ಕಾಗಿ ಪ್ರತಿನಿಧಿಸುವಂತೆ ಈ ಚಿತ್ರಗಳನ್ನು ರಚಿಸಿದೆ. ಉದಾಹರಣೆಗಾಗಿ 11ನೆಯ ಚಿತ್ರವನ್ನು ಗಮನಿಸಿದರೆ ಒಬ್ಬ ತಾಯಿಯು ತನ್ನ ಮಗುವನ್ನು ಪ್ರೇಮದಿಂದ ಅಪ್ಪಿಕೊಂಡು ಮುತ್ತುಗಳನ್ನು ಇಡುತ್ತಿದ್ದಾಗ ಆಕೆಯ ಕಾಮದೇಹದಲ್ಲಿ ವಾಸ್ತವವಾಗಿಯೂ ಆದ ಬದಲಾವಣೆಯನ್ನು ಅದರಲ್ಲಿ ಪ್ರತಿನಿಧಿಸಿದೆ. ಪ್ರೇಮೋದ್ರೇಕವಾದ ಆ ಘಳಿಗೆಯಲ್ಲಿ ಆಕೆಯ ಕಾಮದೇಹವು ಬಲವಾದ ಉದ್ವೇಗಕ್ಕೊಳಗಾಗಿ ಸಾಧಾರಣ ಪರಿಸ್ಥಿತಿಯ ಬಣ್ಣಗಳೆಲ್ಲವೂ ಗುಲಾಬಿ ಬಣ್ಣದಿಂದ ಮುಚ್ಚಿಹೋಗುವಂತೆ-ಪರಿವರ್ತನೆಗೊಂಡಿತು. ಈ ಉದಾಹರಣೆಯಲ್ಲೂ ಮತ್ತು ಸಾಧಾರಣ ಬೆಳವಣಿಗೆ ಮಟ್ಟದ ಮನುಷ್ಯನ ಇತರೆ ದೇಹಗಳನ್ನು ಪ್ರತಿನಿಧಿಸುವಾಗಲೂ ಕೂಡ ಆತನ ಸಾಧಾರಣ ಸ್ಥಿತಿಯನ್ನು ಪ್ರತಿನಿಧಿಸುವ 10ನೆಯ ಚಿತ್ರವನ್ನು ಹಿನ್ನೆಲೆಯಾಗಿಟ್ಟುಕೊಳ್ಳಬೇಕು. ಈ ಥಟ್ಟನೆ ಎದ್ದ ಪ್ರೇಮ ಭಾವನೆಯ ಪ್ರತಿಫಲವಾಗಿ ಉಂಟಾದ ಬದಲಾವಣೆಗಳಲ್ಲಿ ನಾಲ್ಕನ್ನು ಮುಖ್ಯವಾಗಿ ಗಮನಿಸತಕ್ಕುದ್ದು. (1) ತುಂಬ ಪ್ರಕಾಶಮಾನವಾಗಿ ಎದ್ದುಕಾಣುವ ಸಣ್ಣ ಸಣ್ಣ ಬಣ್ಣದ ವೃತ್ತಗಳು ಪರಿಷ್ಕಾರವಾಗಿ ಅಂಚುಕಟ್ಟಿಕೊಂಡು ಕಂಗೊಳಿಸುತ್ತವೆ. ಇವುಗಳಲ್ಲಿ ಪ್ರತಿಯೊಂದೂ ಒತ್ತಾದ ಪ್ರೇಮದ ಸಂಕಲ್ಪರೂಪವು. ಇವು ಕಾಮದೇಹದ ಪ್ರಕೃತಿಯಲ್ಲಿ ರೂಪಗೊಂಡು ಮಗುವಿನ ಮೇಲೇ ವರ್ಷಿಸಲ್ಪಡುವುದಕ್ಕೆ ಸಿದ್ಧವಾಗಿವೆ. 'ಸಂಕಲ್ಪರೂಪಗಳು' ಎಂಬ ಪುಸ್ತಕದಲ್ಲಿ ಈ ಸಾಂದ್ರವಾದ ಪ್ರೇಮ ಸಂಕಲ್ಪರೂಪದ ಚಿತ್ರವನ್ನು ಕೊಟ್ಟಿರುತ್ತದೆ-ಆದರೆ ಅಲ್ಲಿ ತನ್ನ ಗುರಿಯ ಕಡೆಗೆ ಧಾವಿಸಿ ಹೋಗು

ತ್ತಿರುವಾಗ ಅದರ ರೂಪದಲ್ಲಿ ಸ್ವಲ್ಪ ವ್ಯತ್ಯಾಸ ಕಾಣುತ್ತದೆ. ಅದೇನೆಂದರೆ ಅಲ್ಲಿ ಅದು ಸುರುಳಿಯ ಹಾಗೆ ಕಾಣದೆ-ಮೂರ್ತಿಯನ್ನು ಚಾಚಿಕೊಂಡಿರುವ ಕೊಳವೆಯ ರೂಪವನ್ನು ತೆಗೆದುಕೊಂಡಿದೆ. ಇಂತಹ ಚಲನಾತ್ಮಕವಾದ ರೂಪಗಳನ್ನು ಚಿತ್ರಿಸುವುದು ಕಷ್ಟ, ಆದರೆ ಅವುಗಳ ರೂಪಗಳು ನೋಡುವುದಕ್ಕೆ ತುಂಬ ರಮ್ಯವಾಗಿ ಕಂಡು ಬರುತ್ತವೆ.

(2) ಕಾಮದೇಹದ ಮೈಮೇಲೆಲ್ಲ ಅಡ್ಡಲಾಗಿ ಸ್ಪಂದಿಸುವ ಗುಲಾಬಿ ಬಣ್ಣದ ಗೆರೆಗಳಿರುತ್ತವೆ-ಸಂಕಲ್ಪ ರೂಪಗಳನ್ನು ಚಿತ್ರಿಸುವುದಕ್ಕಿಂತಲೂ ಈ ಚಲನಾತ್ಮಕವಾದ ಪ್ರವಾಹಗಳನ್ನು ಪ್ರತಿನಿಧಿಸುವುದು ತುಂಬ ಕಷ್ಟ-ಆದಾಗ್ಯೂ ಚಿತ್ರಗಾರನು ಆದಷ್ಟು ಚೆನ್ನಾಗಿ ಚಿತ್ರಿಸಿರುತ್ತಾನೆ.

(3) ಕಾಮದೇಹವನ್ನೆಲ್ಲ ಗುಲಾಬಿ ಬಣ್ಣದ ತೆಳುವಾದ ಪೊರೆಯು ಆಚ್ಛಾದಿಸಿರುತ್ತದೆ-ಆದಾಗ್ಯೂ ಈ ಪೊರೆಯು ಗಾಜಿನಂತೆ ಪಾರದರ್ಶಕ ಸ್ವಭಾವವುಳ್ಳದಾದ್ದರಿಂದ ಹಿನ್ನೆಲೆಯ ಬಣ್ಣವು ಆ ಗಾಜಿನಂತಿರುವ ಪೊರೆಯ ಮೂಲಕ ಮಸಕು-ಮಸಕಾಗಿ ಕಾಣುತ್ತದೆ.

(4) ಒಳಗಿನಿಂದ ಹೊರಕ್ಕೆ ಚಿಮ್ಮುತ್ತಿರುವ ಗುಲಾಬಿ ರಂಗಿನ ಗುಂಗರು ಕೂದಲಿನಂತಹ ರೂಪಗಳು ಅಲ್ಲಲ್ಲಿ ತೇಲುತ್ತಿರುವುವಲ್ಲದೆ ಅವು ಕಾಮದೇಹದ ಮೇಲ್ಮೈಯನ್ನೆಲ್ಲ ವ್ಯಾಪಕವಾಗಿ ಮುಚ್ಚಿ ಇತರೆ ಬಣ್ಣಗಳಿಗೂ ಶೋಭಾಯಮಾನವಾದ ತಮ್ಮ ಛಾಯೆಯನ್ನು ಮಿಶ್ರ ಮಾಡಿರುವುದನ್ನು ಕಾಣಬಹುದು.

ಕಾಮದೇಹಕ್ಕೆ ಸಂಬಂಧಪಟ್ಟ ಇಂತಹ ಸಿಡಿಮದ್ದಿನ ಜ್ವಾಲೆಯಂತಹ ಪ್ರದರ್ಶನವು ತಾತ್ಕಾಲಿಕ-ಎಂದರೆ ಕೆಲವೇ ಕ್ಷಣಗಳ ಕಾಲ ಇರುತ್ತದೆ–ಅನಂತರ ಕಾಮದೇಹವು ತನ್ನ ಸಾಧಾರಣ ಪರಿಸ್ಥಿತಿಗೆ ಹಿಂತಿರುಗುತ್ತದೆ. ಆದಾಗ್ಯೂ ಪ್ರತಿಯೊಂದು ಬಾರಿ ಇಂತಹ ಭಾವನೆಯು ಸಿಡಿದೆದ್ದಾಗಲೂ ಮೇಲ್ಭಾಗದಲ್ಲಿರುವ ಗುಲಾಬಿ ರಂಗಿನ ಪಟ್ಟಿಗೆ ಸ್ವಲ್ಪ ತನ್ನ ಕಾಣಿಕೆಯನ್ನು ಸೇರಿಸಿ ಅದನ್ನು ವಿಸ್ತರಿಸುತ್ತದೆ–ಅಲ್ಲದೆ ಅಂತಹ ಪ್ರೇಮ ಪ್ರವೃತ್ತಿಯು ಪುನಹ ಸುಲಭವಾಗಿ ವ್ಯಕ್ತವಾಗುವಂತೆ ಉತ್ತೇಜನ ಕೊಡುತ್ತದೆ–ಕೇವಲ ಕ್ಷಣಕಾಲ ಮಾತ್ರ ಅಂತಹ ಭಾವನೆಗಳು ಬಂದು ಹೋದಾಗ್ಯೂ ಒಟ್ಟಿನಲ್ಲಿ ಆ ವಿಧವಾದ ಪ್ರವೃತ್ತಿಯು ಬಲಗೊಳ್ಳುತ್ತಾ ಬಂದು ಸುತ್ತಲೂ ಇರುವವರ ಮೇಲೆಲ್ಲ ಪ್ರೇಮಾನಂದಗಳನ್ನು ಹೊರಚಿಮ್ಮುವಂತೆ ಮಾಡುತ್ತದೆ.

ಹಾರ್ದಿಕವಾದ ಪ್ರೇಮ ಸ್ವಭಾವವುಳ್ಳವರು ಒಬ್ಬರಿಗೊಬ್ಬರು ಪರಸ್ಪರ ಪ್ರೇಮಪೂರಿತವಾದ ಸಂಕಲ್ಪ ರೂಪವನ್ನು ಕಳುಹಿಸುವುದರ ಮೂಲಕ–ವಾಸ್ತವ



XII

XII

ವಾಗಿಯೂ ತಮ್ಮ ಒಂದು ಅಂಶವನ್ನು ತ್ಯಾಗ ಮಾಡುತ್ತಾರೆಂಬುದನ್ನು ತಿಳಿದು ಹರ್ಷಿಸುತ್ತಾರೆ. ವಾಸ್ತವವಾಗಿಯೂ ಆ ರೀತಿ ಪ್ರೇಮವಾಹಿನಿಯನ್ನು ಕಳುಹಿಸುವವನ ಕಾಮದೇಹದ ಮೇಲ್ಮಟ್ಟದ ಪ್ರಕೃತಿಯ ಅಂಶವು ಪ್ರೇಮಪಾತ್ರನ ದೇಹಕ್ಕೆ ಹೋಗಿ ಸೇರಿಕೊಳ್ಳುತ್ತದೆ–ಅಲ್ಲದೇ ಆತನಲ್ಲೂ ಸಹ ಅದೇ ವಿಧವಾದ ಭಾವನೆಯನ್ನು ಹುಟ್ಟಿಸುತ್ತದೆ. ಆದರೆ-(ಆ ರೀತಿ ಅಂತಹ ಪ್ರೇಮವಾಹಿನಿಯು ಹರಿದು ಬರುವ ಸಮಯದಲ್ಲಿ ಪ್ರೀತಿಪಾತ್ರನು ಬೇರೆ ವಿಧವಾದ ಪ್ರವೃತ್ತಿಯಲ್ಲಿ ಮುಳುಗಿ ಹೋಗಿದ್ದ ಪಕ್ಷದಲ್ಲಿ ಮಾತ್ರ ಹಾಗಾಗುವುದಿಲ್ಲ.) ಇದರಿಂದ ಪ್ರೇಮವು ಮರು ಪ್ರೇಮವನ್ನು ಪ್ರಚೋದನೆ ಮಾಡುತ್ತದೆ–ಆದುದರಿಂದ ಒಬ್ಬನು ಹಾರ್ದಿಕವಾಗಿ ಮತ್ತೊಬ್ಬ ವ್ಯಕ್ತಿಯನ್ನು ಪ್ರೀತಿಸುತ್ತಿದ್ದರೆ-ಆ ವ್ಯಕ್ತಿಯು ಮೊದಲಿಗಿಂತಲೂ ಉತ್ತಮ ಮನುಷ್ಯನಾಗಿ ಕ್ರಮೇಣ ಪರಿವರ್ತನೆ ಹೊಂದುವುದು ಖಚಿತ.

ಭಕ್ತಿ :– ನೀಲಿ ಬಣ್ಣವೆಂಬ ವ್ಯತ್ಯಾಸವನ್ನು ಬಿಟ್ಟರೆ ಈ 12ನೆಯ ಚಿತ್ರವು 11ನೆಯ ಚಿತ್ರದಂತೆಯೇ ಇರುತ್ತದೆ. ಒಬ್ಬ ಕ್ರೈಸ್ತ ಮತದ ಸನ್ಯಾಸಿನಿಯು ಧ್ಯಾನಾಸಕ್ತಳಾಗಿದ್ದಾಗ-ಒಂದು ಭಕ್ತಿ ಭಾವನೆಯು ಥಟ್ಟನೆ ಆಕೆಯಲ್ಲಿ ಪುಳುಕಿತವಾಯಿತು, 11ನೆಯ ಚಿತ್ರದ ಸಂಬಂಧದಲ್ಲಿ ಪ್ರೇಮಾವಿರ್ಭಾವದ ನಾಲ್ಕು ಲಕ್ಷಣಗಳು ಇಲ್ಲೂ ಕಂಡೂಬರುತ್ತವೆ :—1) ಸರ್‍ರನೆ ತಿರುಗುತ್ತಿರುವ ಪ್ರಕಾಶಮಾನವಾದ ಸುಳಿಗಳು 2) ವೇಗವಾಗಿ ಚಲಿಸುತ್ತಿರುವ ಅಡ್ಡಗೆರೆಗಳಂತಹ ಪ್ರೇಮವಾಹಿನಿಗಳು 3) ಮೇಲಿನ ಗಾಜಿನಂತಹ ಪೂರೆ ಮತ್ತು 4) ಗುಂಗುರು ಕೂದಲಿನಂತಹ ರೂಪಗಳು-ಇವುಗಳೂ ಕೂಡ ಪ್ರೇಮ ಭಾವನೆಗೆ ಬದಲಾಗಿ ಭಕ್ತಿ ಭಾವನೆಯನ್ನು ಇಟ್ಟುಕೊಂಡರೆ–ಅದೇ ಅರ್ಥವನ್ನು ಕೊಡುತ್ತವೆ.

ಇಂತಹ ಹೃತ್ಪೂರ್ವಕವಾದ ಭಕ್ತಿ ಭಾವನೆಯು ಪುಳುಕಿತವಾಗುವುದು ಬಹು ಅಪರೂಪ–ಇಂತಹ ಸಾಂದ್ರವವಾದ ಪ್ರೇಮಕ್ಕಿಂತಲೂ ಅಪರೂಪ. ಬಹುಶಃ (ಜಗದಾಂಬೆ) ಮೇರಿಮಾತೆಯ ಚಿತ್ರದ ಮುಂದೆ ಕುಳಿತುಕೊಂಡು ಆರಾಧಿಸುವ ಸಮಯದಲ್ಲಿ ಇಂತಹ ಭಕ್ತಿ ಭಾವನೆಯು ಪುಳುಕಿತವಾಗಬಹುದು–ಆದರೆ ಇಷ್ಟು ಪರಿಷ್ಕಾರವಾದ ಅಂಚುಕಟ್ಟು ಮೊದಲಾದ ರೂಪಗಳು ಏರ್ಪಟ್ಟಿರುವುದಿಲ್ಲ- ಮೋಡದಂತಹ ಕೋಚ–ಕೋಚಾದ ನೀಲಿ ಬಣ್ಣದ ರೂಪಗಳು ಕಾಣಿಸಿಕೊಳ್ಳಬಹುದು.

ಇಂತಹ ಸಾಂದ್ರ ನೀಲಿ ಬಣ್ಣದ ಮೋಡಗಳೇ (ಇಲ್ಲಿ ನೀಲಿಯು ಬಹು ಸಾಂದ್ರವಾಗಿ ಹೊಗೆಯ ಮೋಡಗಳಂತೆ ಕಾಣುತ್ತದೆ) ಚರ್ಚಿನಲ್ಲಿ ಸಮಾವೇಶಗೊಂಡು ಪ್ರಾರ್ಥನೆ ಮಾಡುತ್ತಿರುವವರ ತಲೆಗಳ ಮೇಲೆ ಹಾರಾಡುತ್ತಿರುತ್ತವೆ.

ಆದರೆ ಇಂತಹ ನೀಲಿಯ ಬಣ್ಣದ ಮೋಡಗಳೂ ಕೂಡ ಉಡುಗೆ-ತೊಡಿಗೆಗಳ ನವೀನತೆಯಲ್ಲಿಯೇ ಆಸಕ್ತರಾದ ಜನರುಗಳೂ ತಮ್ಮ (ಹ್ಯಾಟ್) ಟೋಪಿಗಳ ವೈವಿಧ್ಯತೆಗಳನ್ನೇ ಪರಸ್ಪರ ಗಮನಿಸುತ್ತಿರುವ ಹೆಂಗಸರುಗಳೂ ಪ್ರಾರ್ಥಿಸುತ್ತಿರುವ ಹೊಸ ಮಾದರಿ ಚರ್ಚುಗಳಲ್ಲಿ ಕಂಡುಬರುವುದಿಲ್ಲ. ಆದರೆ ಅನಕ್ಷರಸ್ಥರಾದರೂ-ಮತ್ತು ಹಾಡುವುದಕ್ಕೆ ಸರಿಯಾಗಿ ಬಾರದಿದ್ದರೂ ಕೂಡ ಭಕ್ತಿ ಭಾವನೆಯಿಂದ ಪುಳಕಿತರಾದ ಗ್ರಾಮಾಂತರದ ಚರ್ಚುಗಳಲ್ಲಿ ನೈಜವಾದ ಭಕ್ತಿ ಭಾವನೆಯನ್ನು ವ್ಯಕ್ತಪಡಿಸುವಂತಹ ನೀಲಿ ಮೋಡಗಳನ್ನು ಕಾಣಬಹುದು, ಆದರೆ ಇಂತಹ ಭಕ್ತಿ ಭಾವನೆಯು ಜ್ಞಾನದ ಹಿನ್ನೆಲೆಯಿಂದ ಹೊರಹೊಮ್ಮಿದ್ದ ಸಂದರ್ಭಗಳಲ್ಲಿ ಈ ನೀಲಿ ಮೋಡಗಳು ಸ್ವರ್ಣವರ್ಣದ ಪ್ರಕಾಶದಿಂದ ಕಂಗೊಳಿಸುತ್ತವೆ. ಇಂತಹ ಜ್ಞಾನ ಸಂಕೇತವಾದ ಸ್ವರ್ಣವರ್ಣದ ತೇಜಸ್ಸು ಮೇಲ್ಕಂಡ ಪ್ರದೇಶಗಳಲ್ಲಿ ಕಂಡುಬಾರದೆ ಇದ್ದಾಗ್ಯೂ ಭಕ್ತಿಯು ಸಹಜ ವಾದುದರಿಂದ ಭಕ್ತರಿಗೆ ಪ್ರಗತಿ ದಾಯಕವಾದ ಪ್ರಯೋಜನವನ್ನುಂಟು ಮಾಡುವುದರಲ್ಲಿ ಸಂಶಯವಿಲ್ಲ.

ಅನೇಕ ಸಂದರ್ಭಗಳಲ್ಲಿ ಭಕ್ತಿಭಾವನೆಯು ಅಸ್ಪಷ್ಟ ಮತ್ತು ಮೋಡದಂತಹ ಕೋಚು ಕೋಚಾದ ರೂಪಗಳಲ್ಲೇ ವ್ಯಕ್ತವಾಗುತ್ತದೆ-ಆದರೆ 12ನೆಯ ಚಿತ್ರದಲ್ಲಿ ರುವಂತಹ ನಿರ್ದಿಷ್ಟ ಮಾದರಿಯು ತುಂಬ ವಿರಳ, ಈ ರೀತಿ ಧ್ಯಾನಾಸಕ್ತ ವಾಗಿರುವ ಕಾಮದೇಹದಿಂದ ಗೋಪುರದಂತ ರೂಪಗಳು ಮೇಲಕ್ಕೆ ಹಾರಿ ಹೋಗು ತ್ತವೆ. ಇಂತಹ ಮಾದರಿ ರೂಪವೊಂದನ್ನು ಸಂಕಲ್ಪ ರೂಪಗಳು ಎಂಬ ಗ್ರಂಥ ದಲ್ಲಿ ಉದಾಹರಿಸಿದೆ-ಆಗ ಮೇಲಿನ ಲೋಕಗಳಿಂದ ಅವುಗಳಿಗೆ ಜವಾಬಾಗಿ ಅನು ಗ್ರಹಶಕ್ತಿಯು ವರ್ಷಿಸಲ್ಪಡುವುದನ್ನು ಅಲ್ಲಿ ನೋಡಬಹುದು.

ಕಡುಕೋಪ :—13ನೆಯ ಚಿತ್ರವು ಈ ಪುಸ್ತಕದಲ್ಲಿ ಕೊಟ್ಟಿರುವ ಎಲ್ಲ ಚಿತ್ರಗಳಿಗಿಂತಲೂ ಎದ್ದುಕಾಣುವಂಥದು-ಯಾವ ವಿಧವಾದ ವಿವರಣೆಯನ್ನು ಒಂದು ವೇಳೆ ಕೊಡದೆ ಇದ್ದಾಗ್ಯೂ ಇಂತಹ ಕೋಪದ ಉದ್ವೇಗಕ್ಕೆ ಒಳಗಾಗುವುದು ಎಂತಹ ಕೆಟ್ಟುದು ಮತ್ತು ತಿಳಿಗೇಡಿತನವೆಂಬ ಬಗ್ಗೆ ಎಚ್ಚರಿಕೆಕೊಡುವಷ್ಟು ಭೀಕರ ವಾಗಿದೆ. ಹಿಂದಿನ ಸಂದರ್ಭಗಳಂತೆಯೇ ಸಾಧಾರಣ ಸ್ಥಿತಿಯ ಹಿನ್ನೆಲೆಯು ಈ ಕೋಪೋದ್ರೇಕಕ್ಕೆ ಸಂಬಂಧಪಟ್ಟ ಭೀಕರವಾದ ಬಣ್ಣಗಳಿಂದ ಮುಚ್ಚಿಹೋಗಿರು ತ್ತದೆ-ಆದರೆ ಈ ಸಂದರ್ಭದಲ್ಲಿ ಎದ್ದುಕಾಣುವ ಪ್ರಬಲವಾದ ಯೋಚನೆಗಳು ದ್ವೇಷ ಮಾತ್ಸರ್ಯಗಳಿಂದ ಪ್ರಚೋದಿತವಾಗಿವೆ. ಮೊದಲಿನಂತೆಯೇ ಅವು ಸುರಳಿಗಳಂತೆ ಅಭಿವ್ಯಕ್ತವಾಗಿ-ಸಿಡಿಲಿನಂತಹ ಕಪ್ಪು ಮೋಡಗಳಿಂದಲೂ ಕೆಂಪು ವರ್ಣದ ಈಟಿಗಳಂತಿ ರುವಮೊನೆಯಾದ ರೂಪಗಳಿಂದಲೂ ಭಯಂಕರವಾದ ದ್ವೇಷ ಭಾವನೆಯು ಕಾರು ತ್ತಿದೆ. ಈ ಮೊನೆಯಾದ ರೂಪಗಳ ಮೂಲಕ ಹತೋಟಿ ತಪ್ಪಿದ ಕೋಪಜ್ವಾಲೆಯು ಮಿಂಚಿನ ಶಲಾಖೆಗಳಂತೆ ಹೊರಹೊಮ್ಮುತ್ತಿದೆ.



XIII

XIII



XIV

ಅತಿ ಭಯಂಕರವಾದ ದೃಶ್ಯ ! ಇದನ್ನು ವಿವರವಾಗಿ ಅರ್ಥಮಾಡಿಕೊಂಡಂತೆಲ್ಲ ಭೀಕರತೆಯು ಹೆಚ್ಚುತ್ತಾ ಹೋಗುತ್ತದೆ. ಏಕೆಂದರೆ ಈ ರೂಪವು ಆತ್ಮಸಂಯಮವನ್ನು ಪೂರ್ತ ಕಳೆದುಕೊಂಡು ಕೊಲೆ ಮೊದಲಾದ ಪೈಶಾಚಿಕ ಕೃತ್ಯಗಳನ್ನು ಮಾಡುವುದಕ್ಕೆ ಹಿಂಜರಿಯದಂತಹ ಆವೇಶ ಸ್ವಭಾವದ ಮನುಷ್ಯನನ್ನು ತೋರಿಸುತ್ತದೆ. ಇಂತಹ ಸ್ವಾಧೀನ ತಪ್ಪಿದ ಮನುಷ್ಯನು ಒಂದು ಕ್ಷಣದಲ್ಲಿ ಕೋಪದ ಪರವಶತೆಯಲ್ಲಿ ಮಾಡಬಹುದಾದ ಘೋರಕೃತ್ಯಕ್ಕೆ ತಕ್ಕ ಪ್ರಾಯಶ್ಚಿತ್ತವನ್ನು ಜೀವಾವಧಿ ಪ್ರಯತ್ನಪಟ್ಟರೂ ಮಾಡಲು ಸಾಧ್ಯವಾಗುವುದಿಲ್ಲ. ಒಂದು ವೇಳೆ ಸಂಪ್ರದಾಯ ಮತ್ತು ನೆರೆಯವರ ಅಭಿಃಪ್ರಾಯಕ್ಕೆ ಹೆದರಿ ಅಂತಹ ಘೋರ ಕೃತ್ಯವನ್ನು ಆತನು ಮಾಡದೆ ತಟಸ್ಥನಾದಾಗ್ಯೂ ಆತನ ಕಾಮದೇಹದಿಂದ ಬಹಿರ್ಗತವಾದ ಭಯಂಕರ ಸಂಕಲ್ಪ ರೂಪಗಳು ನೆರೆಯವರ ಕಾಮದೇಹಗಳ ಮೇಲೆ ಧಾಳಿ ಮಾಡಿ-ಅಷ್ಟೇ ವಿನಾಶಕರವಾದ ಪರಿಣಾಮಗಳನ್ನುಂಟು ಮಾಡುತ್ತವೆ.

ಈ ರೀತಿ ಇತರರ ಮೇಲ್ಮೆಗೆ ಅಪಾಯಕರವಾದ ಪರಿಸ್ಥಿತಿಯಲ್ಲಿರುವುದಲ್ಲದೆ ತನ್ನ ರಕ್ಷಣೆ ತಾನು ಮಾಡಿಕೊಳ್ಳುವ ಸ್ಥಿತಿಯಲ್ಲೂ ಇಲ್ಲ. ಆತನ ಕಾಮದೇಹವು ಆತನ ಹತೋಟಿ ತಪ್ಪಿಸಿಕೊಂಡು ಅದರೊಳಗೆ ಸೇರಿಕೊಂಡಿರುವ ಕಾಮಭೂತದ ಸತ್ವಕ್ಕೆ ಪೂರ್ತ ವಶವಾಗಿರುತ್ತಾನೆ-ಇಂತಹ ಸಂದರ್ಭಗಳಲ್ಲಿ ಅಂತಹ ಭಯಂಕರವಾದ ಕ್ರೂರ ಸ್ವಭಾವವುಳ್ಳ ಪ್ರೇತಾತ್ಮವಾಗಲೀ ಅಥವ ವಾಮ ವಿದ್ಯೆಗೆ ಸಂಬಂಧಪಟ್ಟ ಕೃತಕ ಭೂತವಾಗಲಿ ಆ ದೇಹವನ್ನು ಆಕ್ರಮಿಸಿ ಆ ಮೂಲಕ ಅಕ್ಷಮ್ಯವಾದ ಘೋರ ಕೃತ್ಯಗಳನ್ನು ಮಾಡಿಸಬಹುದು—ಆದುದರಿಂದ ಆತನು ಇತರರ ಮೇಲ್ಮೆಗೆ ಅಪಾಯಕಾರಿಯಾಗಿರುವುದಲ್ಲದೇ ತಾನೇ ಅಪಾಯಕ್ಕೆ ಈಡಾಗುವ ಸ್ಥಿತಿಯಲ್ಲಿರುತ್ತಾನೆ.

ಇಲ್ಲಿ ಉದಾಹರಿಸಿರುವ ಚಿತ್ರವು ಕೇವಲ ಅಪರೂಪವಾದುದು—ಮತ್ತು ಇಂತಹ ಉದ್ರೇಕ ಸ್ಥಿತಿಯು ಕೆಲವು ನಿಮಿಷಗಳ ಕಾಲಕ್ಕಿಂತ ಹೆಚ್ಚು ಮುಂದುವರಿಯುವುದಿಲ್ಲ. ಆದರೆ ಕೋಪಕ್ಕೆ ಒಳಗಾಗುವವರೆಲ್ಲರೂ ಇಂತಹ ಕೆಟ್ಟ ಲಕ್ಷಣಗಳನ್ನು ವ್ಯಕ್ತಪಡಿಸುವುದು ವಾಸ್ತವ, ಜನರಿಗೆ ಈ ವಿಷಯವಾದ ತಿಳಿವಳಿಕೆಯು ಮನದಟ್ಟಾಗಿ ತಾವು ಕೋಪಕ್ಕೊಳಗಾದಾಗ ಇತರರ (ದಿವ್ಯದೃಷ್ಟಿಯುವರ) ಕಣ್ಣಿಗೆ ಹೇಗೆ ಕಂಡುಬರುತ್ತಾರೆಂಬದು ಖಚಿತವಾದಾಗ ಕೋಪಕ್ಕೆ ಒಳಗಾಗದಂತೆ ಜಾಗರೂಕವಾಗಿರುತ್ತಾರೆಂದು ನಂಬಲಾಗಿದೆ.

ಈ ಪ್ರಬಲವಾದ ಉದ್ವೇಗವು ಇಳಿದುಹೋಗುತ್ತದೆ-ಆದರೆ ಅದು ತನ್ನ ಮಚ್ಚೆಯನ್ನು ಶರೀರದ ಮೇಲೆ ಒತ್ತದೆ-ಬಿಡುವುದಿಲ್ಲ. ಸಾಧಾರಣ ಮನುಷ್ಯನ ಕಾಮ

ದೇಹದಲ್ಲಿ ಕೋಪವನ್ನು ತೋರಿಸುವ ರಕ್ತ ವರ್ಣದ ಪಟ್ಟೆಯು ಇದ್ದೇ ಇರುತ್ತದೆ. ಆತನು ಪ್ರತಿಸಾರಿ ಕೋಪಗೊಂಡಾಗಲೂ ಆ ಪ್ರಕೃತಿಯ ಪ್ರಾಬಲ್ಯವು ಹೆಚ್ಚುತ್ತಾ ಬರುತ್ತದೆ. ಅನಂತರ ಅಂತಹ ಒಂದು ನೆಪ ಸಿಕ್ಕಿದ ಕೂಡಲೇ ಮನುಷ್ಯನು ಅಂತಹ ನೀಚವಾದ ಉದ್ವೇಗಕ್ಕೆ ಸುಲಭವಾಗಿ ಜಾರಿ ಬೀಳುತ್ತಾನೆ.

ಇಂತಹ ಉದ್ವೇಗವು ತಾತ್ಕಾಲಿಕವಾದಾಗ್ಯೂ ಅದರ ಚಿತ್ರವು (ಪ್ರಕೃತಿಯ ಅಳಿಸಲಾರದ ದಫ್ತರದಲ್ಲಿ) ಶಾಶ್ವತವಾಗಿ ಮುಂದುವರಿಯುತ್ತದೆ-ಅಲ್ಲದೆ ಅಂತಹ ಉದ್ವೇಗ ಕಾಲದಲ್ಲಿ ನಡೆದುಹೋದ ಘಟನೆಗಳ ಪರಿಣಾಮಗಳು ಚಾಚೂ ವ್ಯತ್ಯಾಸ ವಿಲ್ಲದಂತೆ ಮನುಷ್ಯನ ಕರ್ಮಕ್ಕೆ ಬಂದು ಸೇರಿಕೊಳ್ಳುತ್ತವೆ.

ಭಯ :—ಭಯದ ಪರಿಣಾಮವೂ ಕೂಡ ಕಾಮದೇಹದ ಮೇಲೆ ತನ್ನ ಪ್ರತಿ ಕ್ರಿಯೆಗಳನ್ನುಂಟು ಮಾಡುತ್ತದೆ. ಥಟ್ಟನೆ ಏಳುವ ಭಯೋತ್ಪಾದಕ ಭಾವನೆಯು ಕಾಮ ಶರೀರವೆಲ್ಲವನ್ನೂ ಒಂದು ವಿಲಕ್ಷಣವಾದ ಬೂದು ಬಣ್ಣದ ಅಡ್ಡಗೆರೆಗಳಿಂದ ಸುತ್ತುವರಿಯುವಂತೆ ಮಾಡುತ್ತದೆ. ಈ ಶೋಚನೀಯ ಸ್ಥಿತಿಯನ್ನು ಕರಾರು ವಾಕ್ಕಾಗಿ ಚಿತ್ರದ ಮೂಲಕ ಪ್ರದರ್ಶಿಸಲು ಸಾಧ್ಯವಿಲ್ಲ. 15ನೆಯ ಚಿತ್ರವು ಸಾಧ್ಯವಾದಷ್ಟು ಆ ಸ್ಥಿತಿಯನ್ನು ತೋರಿಸುತ್ತದೆ. ಆದರೆ ಆ ಸಮಯದಲ್ಲಿ ಹೇಗೆ ದೇಹದಿಂದ ಎಲ್ಲ ಬೆಳಕೂ ಮಾಯವಾಗಿ ಕತ್ತಲೆ ಕವಿದಂತೆ ಆಗುತ್ತದೆ-ಎಂಬ ಪರಿಸ್ಥಿತಿಯನ್ನು ಕಾಗದದ ಮೇಲೆ ಪ್ರತಿನಿಧಿಸಿ ತೋರಿಸಲು ಸಾಧ್ಯವಿಲ್ಲ. ಅಲ್ಲದೆ ಆ ಬೂದು ಬಣ್ಣವು ಹೇಗೆ ಶೋಚನೀಯವಾದಂತಹ ಕಂಪನ ಸ್ಥಿತಿಯನ್ನುಂಟು ಮಾಡುತ್ತದೆ-ಎಂಬುದನ್ನು ಆ ಚಿತ್ರದಿಂದ ಸ್ವಲ್ಪ ಮಟ್ಟಿಗೆ ತಿಳಿದುಕೊಳ್ಳಬಹುದು.

ಇಂತಹ ಭಯೋತ್ಪಾದಕವಾದ ಪರಿಸ್ಥಿತಿಯು ಕೂಡ ಸಾಧಾರಣವಾಗಿ ಕೂಡಲೇ ಕೊನೆಗೊಳ್ಳುತ್ತದೆ. ಹಾಗಲ್ಲದೇ ಸದಾ ಭಯಪಡತಕ್ಕ ಸ್ವಭಾವವೂ ಕೂಡ ಇದೇ ಲಕ್ಷಣವುಳ್ಳ ಬೇರೆ ರೀತಿಯಲ್ಲಿ ತೋರಿಸಿಕೊಳ್ಳುತ್ತದೆ-ಆದರೆ-ಅದಕ್ಕೆ ಸಂಬಂಧಪಟ್ಟ ಬೂದು ಬಣ್ಣ ಮತ್ತು ಕಂಪನದ ಲಕ್ಷಣಗಳು ಈ ಭಾವನೆಗೆ ಎಡ ಬಿಡದೆ ಅಂಟಿಕೊಂಡಿರುತ್ತವೆ.

ಅಧ್ಯಾಯ ೧೪

ದೀರ್ಘಕಾಲ ಮುಂದುವರಿಯುವ ಪರಿಸ್ಥಿತಿಗಳು

ಇದುವರೆಗೆ ತಾತ್ಕಾಲಿಕವಾಗಿ ಆವಿರ್ಭವಿಸಿ ಇಳಿದು ಹೋಗುವ ರಸ ಭಾವನೆಗಳ ವಿಷಯವಾಗಿ-ಅವುಗಳ ಪರಿಣಾಮವು ಜೀವಾತ್ಮನ ಹೊರಗಿನ ಹೊದಿಕೆಗಳ ಮೇಲೆ ಹೇಗೆ ಆಗುತ್ತದೆಯೆಂಬಂಶವನ್ನು ಉದಾಹರಣೆ ಚಿತ್ರಗಳ ಮೂಲಕ ವಿವರಿಸಿ ತಿಳಿಸಲು ಪ್ರಯತ್ನಿಸಿರುತ್ತೇವೆ. ಅದೇ ಕಾಲದಲ್ಲಿ ಒಳಗಿನ ಜೀವಾತ್ಮನ ಪ್ರಗತಿಗೆ ಕೊಡುವ ಉತ್ತೇಜನ ರೂಪವಾದ ಫಲಿತಾಂಶಗಳೂ ಅಥವ ಅಡಚಣೆಗಳೂ ಇದ್ದೇ ಇರುತ್ತವೆ. ಈಗ ಕೆಲವು ಮಾದರಿ ಶೀಲ ಸ್ವಭಾವಗಳು ಹೇಗೆ ರೂಪಗೊಳ್ಳುತ್ತವೆ ಮತ್ತು ಅವು ಹೇಗೆ ಎಷ್ಟರ ಮಟ್ಟಿಗೆ ಜೀವಾತ್ಮನ ಪ್ರಗತಿಯನ್ನೂ ಹಿಂದು ಮುಂದು ಮಾಡಬಲ್ಲವು-ಎಂಬ ವಿಷಯವನ್ನು ಕುರಿತು ಪ್ರಸ್ತಾಪಿಸ ಬೇಕಾಗಿದೆ.

ಅನೇಕರ ಜೀವಿತದಲ್ಲಿ ಪರಿಣಾಮಕಾರಿಯಾದ ಬದಲಾವಣೆಗಳನ್ನುಂಟು ಮಾಡುವಂತಹ ಒಂದು ವಿಧವಾದ ಪ್ರಭಾವವಿರುತ್ತದೆ, ಮೇಲ್ಕಂಡ ಎರಡಕ್ಕೂ ಅದು ಭಿನ್ನವಾಗಿರುತ್ತದೆ. ಈ ಪ್ರಭಾವವು ಥಟ್ಟನೆಸಂಭವಿಸುತ್ತದೆ. ಅಲ್ಲದೆ ಅನೇಕ ಸಂದರ್ಭಗಳಲ್ಲಿ ಜೀವಿತದ ಅಂತ್ಯದವರೆಗೂ ಮುಂದುವರಿಯುವಂಥದಲ್ಲ, ಅಲ್ಲದೆ ಮೇಲ್ಕಂಡ ತಾತ್ಕಾಲಿಕ ರಸಭಾವನೆಗಳಷ್ಟು ಕ್ಷಣಿಕವಾದುದೂ ಅಲ್ಲ. ಹೀಗಿದ್ದಾಗ್ಗೂ ತಮ್ಮ 8-9 ಮತ್ತು 10ನೆಯ ಚಿತ್ರಗಳಮೂಲಕ ಪ್ರತಿನಿಧಿಸಿರುವಂತಹ ಮನುಷ್ಯರ ಜೀವಿತದಲ್ಲಿ ಅಂತಹ ಪ್ರಭಾವವು ಒಂದು ಪ್ರಾಮುಖ್ಯವಾದ ಘಟನೆಯು ವಾಸ್ತವಿಕವಾಗಿಯೂ ಅದೇನೇ ಅಂತಹ ಜೀವಿತದಲ್ಲೆಲ್ಲ ಪ್ರಶಂಸನೀಯವಾದ ರೀತಿಯಲ್ಲಿ ಆತನನ್ನು ಮೇಲಿನ ಮಟ್ಟಕ್ಕೆ ಕರೆದುಕೊಂಡು ಹೋಗಿ ಆ ಉನ್ನತಮಟ್ಟದ ಜೀವಿತದಲ್ಲಿನ ಅಭಿರುಚಿಯನ್ನು ಹುಟ್ಟಿಸಿದ್ದು. ಇದನ್ನು ಬಿಟ್ಟರೆ ಆತನ ಜೀವಿತವೆಲ್ಲವೂ-ಸ್ವಾರ್ಥತೆ ಮಾಲಿನ್ಯ ಮಾಡಿದ್ದೇ ಮಾಡುವಸ್ವಭಾವ ಇವುಗಳಿಂದ ಕೂಡಿ ನೀರಸವಾಗಿರುತ್ತದೆ.

ಯಾವಾಗ ಮನುಷ್ಯನು ತಾನು ಮದುವೆ ಮಾಡಿಕೊಳ್ಳ ಬೇಕೆಂಬ ದೃಷ್ಟಿಯಿಂದ ಒಬ್ಬ ಹೆಣ್ಣುಮಗಳನ್ನು ಪ್ರೀತಿಸುವ ಹವ್ಯಾಸಕ್ಕೆ ಬೀಳುತ್ತಾನೆಯೋ ಆ ಸಂದರ್ಭದಲ್ಲಿ ಆತನನ್ನು ಥಟ್ಟನೆ ಮೇಲಕ್ಕೆತ್ತಿ ಉದ್ಧರಿಸುವ ಒಂದು ಪ್ರಭಾವವು ಬೀಳುತ್ತದೆ. ಸಾಮಾನ್ಯ ಮನುಷ್ಯನಿಗೆ ಇಂತಹ ಕಾಲದಲ್ಲಿ ಸಂಭವಿಸುವ ಉದ್ಧಾರ

ಶಕ್ತಿಯು ಹೇಗೆ ಪ್ರಭಾವಯುತವಾಗಿ ಕೆಲಸ ಮಾಡುತ್ತದೆಂಬಂಶವು ಸಂಸರಣ ಪಥದಲ್ಲಿ ಮುಂದುವರಿದು ಸುಸಂಕೃತರಾಗಿ ವಿಶಾಲವೂ-ಉನ್ನತವೂ ಆದ ಜೀವಿತ ವನ್ನು ನಡೆಸುವಂತಹ ನಮ್ಮಂತಹ ಜೀವಾತ್ಮರುಗಳಿಗೆ ಅರ್ಥವಾಗದೆ ಇರಬಹುದು. ಏಕೆಂದರೆ ಇಂತಹ ಸಾಧಾರಣ ಮನುಷ್ಯನ ಜೀವಿತವು ತನ್ನ ಯೋಗಕ್ಷೇಮದಲ್ಲೇ ಆಸಕ್ತಿಯನ್ನು ವಹಿಸಿ ತನ್ನ ಚಿಕ್ಕ ಪ್ರಪಂಚದಲ್ಲೇ ವಾಸಿಸುತ್ತ ಕೇವಲ ಅಲ್ಪವೂ-ನೀಚವೂ ಆದ ಪ್ರವೃತ್ತಿಗಳಿಂದ ಕಲುಷಿತವಾಗಿರುತ್ತದೆ. ಇಂತಹ ಕಡಿಮೆ ಮಟ್ಟದ ಬೆಳವಣಿಗೆ ಅಂತಸ್ತುಸ್ನು ನಾವೂ ಕೂಡ ಬಹು ದೀರ್ಘಕಾಲದ ಹಿಂದೆಯೇ ಹಾದು ಬಂದಿರುತ್ತೇವೆ–ಆದುದರಿಂದ ನಾವು ನಮ್ಮ ದೃಷ್ಟಿಯನ್ನು ಸಹಾನುಭೂತಿ ಹಿಂದಕ್ಕೆ ತಿರುಗಿಸಿ ಆ ಹಿಂದಿನ ಕಡಮೆ ಅಂತಸ್ತಿನಲ್ಲಿರುವ ಮನುಷ್ಯನಿಗೆ ಮದುವೆಯಂತಹ ಘಟನೆಯು ಎಂತಹ ಉತ್ತೇಜಕರವಾದ ಪ್ರಗತಿಯನ್ನು ಸಾಧಿಸಿ ಕೊಟ್ಟಿತು ಎಂಬಂಶವನ್ನು ಮನದಟ್ಟು ಮಾಡಿಕೊಳ್ಳಲು ಕಷ್ಟವಾಗಬಹುದು. ಏಕೆಂದರೆ ಕಲೆ–ಸಂಗೀತ–ವಿಜ್ಞಾನ ಮತ್ತು ತತ್ವಶಾಸ್ತ್ರ ಇವುಗಳಿಗೆ ಸಂಬಂಧಪಟ್ಟ ವಿಶಾಲವೂ ಉನ್ನತವೂ ಆದ ಇಡೀ ಜಗತ್ತಿಗೇ ಸಂಬಂಧಪಟ್ಟ ಪರಹಿತಕಾರ್ಯದಲ್ಲಿ ಅಭಿರುಚಿಯನ್ನು ತೋರಿಸುವುದು ನಮಗೆ ಅಭ್ಯಾಸವಾಗಿ ಬಿಟ್ಟಿದೆ. (ಆದರೂ ಪ್ರಯತ್ನ ಪಟ್ಟರೆ ಸಾಮಾನ್ಯ ಜೀವಾತ್ಮನ ಮೇಲೆ ಮದುವೆಯಂತಹ ಘಟನೆ ಯಿಂದಾಗುವಂಥ ಮಹತ್ತಾದ ಪರಿಣಾಮವನ್ನು ಅರಿತು ಕೊಳ್ಳಲು ಸಾಧ್ಯ. ಸೋ॥ ಲೆಡ್ಬಿಟರ್‌ರಂತಹ ಮುಂದುವರಿದ ಹಿರಿಯರೇ ಹಿಂದುಳಿದ ಮನುಷ್ಯನ ವಿಷಯ ವಾಗಿ ಇಷ್ಟು ಸಹಾನುಭೂತಿಯನ್ನು ತೋರಿಸುವಾಗ ನಮಗೆ ಏಕೆ ಅಸಾಧ್ಯ? ಸೋ॥ ಶ್ರೀರಾಂರವರು ಒಂದು ಸನ್ನಿವೇಶದಲ್ಲಿ ‹‹ನೀನು ಸಾಕಿರುವ ಬೆಕ್ಕಿನಂತಹ ಪ್ರಾಣಿಗೇನು ನಿಸ್ವಾರ್ಥ ಪ್ರೇಮದಿಂದ ಪಡೆದುಕೋ ಸಾಕು. ಆಧ್ಯಾತ್ಮಿಕ ಪ್ರಗತಿ ಮುಂದುವರಿಯು ವುದರಲ್ಲಿ ಸಂಶಯವಿಲ್ಲ ಎಂದು ಹೇಳಿದ್ದು ನನಗೆ ನೆನಪುಬರುತ್ತದೆ. TVR) ಇಂತಹ ಕಿರಿಯರಾದ ಮನುಷ್ಯರಲ್ಲೂ ಸಹ ಭಗವದಂಶವು ಬೀಜ ರೂಪವಾಗಿದೆ, ಆದುದರಿಂದ ಅದು ಸಮಯ ಬಂದಾಗ ಅದು ಸ್ವಾರ್ಥತ್ಯಾಗ ರೂಪವಾದ ಸೇವಾಕಾರ್ಯಗಳ ಮೂಲಕ ಪ್ರಕಾಶಿಸದೇ ಇರಲಾರದು. ಆದಾಗ್ಯೂ ಆ ಸಮಯವು ಕಳೆದ ನಂತರ ಸಾಧಾರಣವಾದ ಕೆಳಗಿನ ಮಟ್ಟದ ಜೀವಿತಕ್ಕೆ ಅಂತಹ ಬಾಲಜೀವಾತ್ಮರುಗಳು ಇಳಿದು ಬಿಡುವುದು ಸ್ವಾಭಾವಿಕವೇ ಆಗಿದೆ.

ಇಂತಹ ಸಂಕುಚಿತವಾದ ಮತ್ತು ಪರಿಮಿತಿಯುಳ್ಳ ಸಾಧಾರಣ ಮನುಷ್ಯ ಜೀವಿತದೊಳಕ್ಕೆ ಒಂದು ಪ್ರಕಾಶಮಾನವಾದ ಕಿರಣವು ಮೇಲಿಂದ ಇಳಿದು ಬರುತ್ತದೆ. ಅದಕ್ಕೆ ಜವಾಬು ರೂಪದಲ್ಲಿ ದೇಹಾತ್ಮವು ವಿಜೃಂಭಿಸಿ ತಾನೂ ಬೆಳಗುತ್ತದೆ. ಅಂತಹ ಘಟನೆಯು ಕೊನೆಗೊಂಡ ಕೂಡಲೇ ಮಾನವನು ಅಂತಹ ಬೆಳಕನ್ನು ಕಳೆದುಕೊಂಡು ಪುನಹ ಸಾಧಾರಣವಾದ ಕತ್ತಲಿನ ಜೀವಿತಕ್ಕೆ ಇಳಿದು ಬರುವುದು ವಾಸ್ತವವೇ. ಆದರೆ



XV

ಆ ಘಂಟೆಯಿಂದುಂಟಾದ ಮೇಲ್ಮಟ್ಟದ ಅನುಭವವನ್ನು ಆತನಿಂದ ಯಾರು ತಾನೇ ಕಿತ್ತುಕೊಳ್ಳಲು ಸಾಧ್ಯ ? ಜೀವಿತದಲ್ಲಿ ಒಂದು ಘಟ್ಟವನ್ನು ಹತ್ತಿ—ಸ್ವಲ್ಪ ಕಾಲ— ಅದು ದೀರ್ಘವೋ-ಹ್ರಸ್ವವೋ ಆಗಿರಲಿ—ಉಂಟಾದ ಉನ್ನತಮಟ್ಟದ ಅನುಭವದ ಸನ್ನಿವೇಶಧಲ್ಲಿ "ನಾನು" ಎಂಬುದು ಸಿಂಹಾಸನವನ್ನು ಬಿಟ್ಟು ಕೆಳಕ್ಕಿಳಿದು ಮತ್ತೊಬ್ಬ ವ್ಯಕ್ತಿಯನ್ನು ಆ ಸ್ಥಳದಲ್ಲಿ ಕೂಡಿಸುವಂತಹ ಪರಾರ್ಥ ಭಾವನೆಯು ಆತನನ್ನು ಆಳಿತಲ್ಲ! ಹೀಗೆ ಆತನ ಅದುವರೆಗಿನ ಹಿಂದಿನ ಸಂಸರಣದಲ್ಲೇ ಕಲಿಯದೇ ಇದ್ದ ಉನ್ನತ ಮಟ್ಟದ ಪಾಠವನ್ನು ಕಲಿಯುವಂತೆ ಆಯಿತು, ಅದು ಮುಖ್ಯ. ಈ ರೀತಿ ಕಲಿತ ಪ್ರಥಮ ಪಾಠವು ಆತನ ಜೀವನದಲ್ಲೆಲ್ಲ ಹಾಸುಕ್ಕಿ ಹೊಕ್ಕಿನಂತೆ ಪ್ರಭಾವವನ್ನು ಬೀರುವಂತೆ ಆಗಿ ನಿತ್ಯಾನುಷ್ಠಾನಕ್ಕೆ ಬರಬೇಕಾದರೆ ಬಹುದೀರ್ಘಕಾಲ ಹಿಡಿಯುತ್ತದೆ. ಆದಾಗ್ಯೂ ತಾತ್ಕಾಲಿಕವಾಗಿ ಆದರೂ ಅಂತರಾತ್ಮನ ಕಣ್ಣು ತೆರೆಯಿತು ಮತ್ತು ಆ ಮೂಲಕ ಕಾಮದೇಹದ ಮೇಲೆ ಉಂಟಾದ ಸತ್ಪರಿಣಾಮವು ಗಮನಾರ್ಹವಾದುದು (ಸಾಮಾನ್ಯವಾಗಿ ನಮ್ಮ ವೇದಗಳಲ್ಲಿ ಹೇಳಿರುವಂತೆ ‹‹ಮಾತಾಪೂರ್ವರೂಪಂ-ಪಿತಾ ಉತ್ತರ ರೂಪಃ-ಪ್ರಜಾಸಂಧಿ" ಎಂದು ಹೇಳುವ ನಿಯಮವನ್ನು ನಾವು ಅರ್ಥಮಾಡಿ ಕೊಂಡರೆ ಸೋ।। ಲೆಡ್ಬೀಟರ್‌ರವರು ಇಲ್ಲಿ ವರ್ಣಿಸಿರುವ ವಿವಾಹಕ್ಕೆ ಸಂಬಂಧಪಟ್ಟ ಆಧ್ಯಾತ್ಮಿಕ ಪ್ರಗತಿಯು ನಮಗೆ ಅರ್ಥವಾಗದೆ ಇರದು. ಸಾಧಾರಣವಾಗಿ ಪ್ರತಿ ಯೊಬ್ಬ ವ್ಯಕ್ತಿಯೂ ಪ್ರೌಢ ವಯಸ್ಸಿಗೆ ಬಂದು ಮದುವೆಯಾಗುವವರೆಗೆ ತನ್ನ ಸುಖ—ಸಂತೋಷಗಳ ಚಿಂತನೆಯಲ್ಲೇ ಮುಳುಗಿ ಹೋಗಿರುತ್ತಾನೆ. ಆತನು ಮದುವೆಮಾಡಿಕೊಂಡ ಕೂಡಲೇ ತನ್ನ ಹೆಂಡತಿಯ ಕ್ಷೇಮ ಚಿಂತನೆಯನ್ನು ಯೋಚಿಸಲು ಆರಂಭಿಸುತ್ತಾನೆ. ಆಕೆಗೆ ಎಂತಹ ಉಡುಗೆತೊಡಿಗೆ (ಆಭರಣ)ಗಳು ಬೇಕು ಅವುಗಳನ್ನು ಸಂಪಾದಿಸಿ ಆಕೆಗೆ ಸಂತೋಷವನ್ನುಂಟುಮಾಡಬೇಕೆಂಬ ಮನೋಭಾವನೆ ತಿಳಿಯುತ್ತ ಬರುತ್ತದೆ. ಎಂದರೆ ಸ್ವಾರ್ಥ ತಗ್ಗಿ ಪರಾರ್ಥ ಚಿಂತನೆಯು ಹೃತ್ಪೂರ್ವಕವಾಗಿ ಪ್ರಾರಂಭವಾಗುತ್ತದೆ. ಬಹುಶ: ನಮ್ಮ ಹಿಂದೂ ಸಂಪ್ರ ದಾಯದ ಪರಿಸ್ಥಿತಿಗಿಂತಲೂ ಪಾಶ್ಚಾತ್ಯ ದೇಶಗಳ ಸಂಪ್ರದಾಯದಲ್ಲಿ ಹೆಂಗಸರನ್ನು ಉತ್ತಮ ದರ್ಜೆಯಲ್ಲಿ ಕಾಣುವ ಮನೋಭಾವನೆಯು ಎದ್ದು ಕಾಣುತ್ತದೆ. ಆದುದರಿಂದಲೇ ಅವರಲ್ಲಿ ಈ ಘಟನೆಗೆ ಪ್ರಣಯತೆ ಎಂದರೆ ಪ್ರೀತಿಯೊಳಕ್ಕೆ ಮುಮುಕುವುದು—ಎಂಬ ಅರ್ಥ ಬರುವ ಮಾತುಗಳು ಪ್ರಯೋಗದಲ್ಲಿವೆ. 'Falling in Love"—T.V.R.)

ಈ ಪೇಮ ಭಾವನೆಯು ಎಷ್ಟರಮಟ್ಟಿಗೆ ಮನುಷ್ಯನ ಕಾಮ ದೇಹವನ್ನು ಬದಲಾಯಿಸಿದೆಯೆಂದರೆ-ತ್ಯಾಗರೂಪವಾದ ಪ್ರೇಮಭಾವನೆಯಿಂದ ಪುಳಕಿತವಾದ 15ನೆಯ ಚಿತ್ರದ ಕಾಮದೇಹಕ್ಕೂ ಆತನ ಸಾಮಾನ್ಯಸ್ಥಿತಿಯಲ್ಲಿರುವ 10ನೆಯ ಕಾಮದೇಹಕ್ಕೂ ಸಂಬಂಧವೇ ಇಲ್ಲದಂತೆ ತೋರುತ್ತದೆ. ಇವೆರಡೂ ಒಬ್ಬ

ಮನುಷ್ಯನ ಕಾಮದೇಹಗಳೆಂದರೆ ಯಾರೂ ನಂಬುವಂತಿಲ್ಲ. ಅಷ್ಟರ ಮಟ್ಟಿನ ವ್ಯತ್ಯಾಸವಿದೆ. ಉತ್ತಮಗೊಂಡ ಕಾಮದೇಹದಲ್ಲಿ (ಚಿತ್ರ 15) ಸ್ವಾರ್ಥತೆ-ವಂಚನೆ ಮತ್ತು ದುರಾಶೆ ಇವುಗಳು ಪೂರ್ತ ಮಾಯವಾಗಿ ಮತ್ತೆ ಕೆಲವು ಒಳ್ಳೆಯ ಭಾವನೆಗಳು ಎದ್ದು ಕಾಣುತ್ತಿವೆ. ಅಲ್ಲದೆ ಅವುಗಳ ಸ್ಥಾನಮಾನಗಳು ಪೂರ್ತ ಬದಲಾಯಿಸಿವೆ. ಕೆಳಗಿನ ತುದಿಯು ಇಂದ್ರಿಯ ಸುಖಕ್ಕೆ ಸಂಬಂಧಪಟ್ಟ ಕಂದು ಮಿಶ್ರವಾದ ಕೆಂಪು ಬಣ್ಣದಿಂದ ಮುಚ್ಚಲ್ಪಟ್ಟಿದೆ. ಹೊಂದಾಣಿಕೆಗೆ ಸಂಬಂಧಪಟ್ಟ ಹಸುರಿಗೆ ಬದಲಾಗಿ ಕಂದು ಮಿಶ್ರಣದಿಂದ ಹಸುರುಪಟ್ಟೆ. ಕೆಂಪಿನ ಈಟಿಗಳಂತಹ ಗುರುತುಗಳಿಂದ ಅಸೂಯೆ ಗುಣವನ್ನು ಸೂಚಿಸುತ್ತದೆ. ಈ ಅಸಾಧುವಾದ ಬದಲಾವಣೆಗಳಿಗೆ ಪ್ರತಿಯಾಗಿ ದೇದೀಪ್ಯಮಾನವಾದ ದಿವ್ಯ ಗುಲಾಬಿರಂಗು (ಪ್ರೇಮ) ಈ ಅಂಡಾಕೃತಿಯ ಅರ್ಧಕ್ಕಿಂತ ಹೆಚ್ಚು ಪ್ರದೇಶವನ್ನೆಲ್ಲ ಆಕ್ರಮಿಸಿರುತ್ತದೆ. ಇದೇ ತತ್ಕಾಲದಲ್ಲಿ ಬಹು ಪ್ರಾಮುಖ್ಯವಾಗಿ ಪ್ರಕಾಶಿಸುತ್ತಾ ಇಡೀ ಕಾಮದೇಹವನ್ನೆಲ್ಲ ತನ್ನ ಬೆಳಕಿನಿಂದ ಥಳಿ ಥಳಿಸುವಂತೆ ಮಾಡಿರುತ್ತದೆ. ಇವರ ಪ್ರಭಾವದಿಂದ ಸಾಧಾರಣವಾಗಿರುತ್ತಿದ್ದ ಮಣ್ಣಿನ ಕಂದುಬಣ್ಣವು ಮಾಯವಾಗಿ ಹೋಗಿದೆ. ಅಲ್ಲದೆ ಈ ವಿಧವಾದ ಬಣ್ಣಗಳ ಪಟ್ಟೆಗಳೆಲ್ಲವೂ ಪರಿಷ್ಕಾರವಾದ ರೀತಿಯಲ್ಲಿ ಅಂಚುಕಟ್ಟಿಕೊಂಡು ವಿಂಗಡವಾಗಿವೆ. ಇದರಿಂದ ಜೀವಿತವೆಲ್ಲ ಬಹುಮುಖವಾಗಿ ಪ್ರಚೋದನೆಯಾಗಿ ಚೇತನಗೊಂಡಿದೆಯೆಂಬುದು ಎದ್ದು ಕಾಣುತ್ತದೆ.

ಭಕ್ತಿಭಾವನೆಯನ್ನು ಸೂಚಿಸುವ ನೀಲಿಯ ಬಣ್ಣವೂ ಕೂಡ ತುಂಬ ಉತ್ತಮಗೊಂಡಿರುವುದನ್ನು ಕಾಣಬಹುದು. ಇದರ ಸ್ವಭಾವವು ಎಷ್ಟರಮಟ್ಟಿಗೆ ಉತ್ತಮಗೊಂಡಿದೆಯೆಂದರೆ-ಒಂದು ಉನ್ನತಮಟ್ಟದ ಸ್ವಾರ್ಥರಹಿತವಾದ ಧ್ಯೇಯಕ್ಕೆ ಓಗೊಡುವಂತಹ ಸಾಂದ್ರತೆಯುಳ್ಳದಿದ್ದರೂ ತೆಳುವಾದ ನೇರಳೆ ಬಣ್ಣದ ಅಂಚು ಅಂಡಾಕೃತಿಯ ಅತ್ಯುನ್ನತಮಟ್ಟದಲ್ಲಿ ಕಾಣಿಸಿಕೊಂಡಿದೆ. ವಿಚಾರಶಕ್ತಿ ಸೂಚಕವಾದ ಹಳದಿಯೂ ಕೂಡ ತಾತ್ಕಾಲಿಕವಾಗಿ ಮಾಯವಾಗಿದೆ.

ಇಂತಹ ಅದ್ಭುತವಾದ ಬೆಳವಣಿಗೆ ಸೂಚಕವಾದ ಮಟ್ಟವನ್ನು ತಲುಪಿದ ಮೇಲೆ 10ನೆಯ ಚಿತ್ರದ ಸಾಮಾನ್ಯ ಮಟ್ಟಕ್ಕೆ ಮನುಷ್ಯನು ಇಳಿಯುತ್ತಾನೆಯೇ-ಎಂಬ ಸಂಶಯವು ತಲೆದೋರಬಹುದು. ಆದಾಗ್ಯೂ ಬಹುಮಟ್ಟಿಗೆ ಅನೇಕರು ಆ ರೀತಿಯೇ ಸಾಮಾನ್ಯಕ್ಕೆ ಇಳಿದುಬಿಡುವುದು ಅನಿವಾರ್ಯ. ಆದರೆ ಗುಲಾಬಿ ಬಣ್ಣವು ಮೊದಲಿಗಿಂತಲೂ ಹೆಚ್ಚು ಪ್ರಕಾಶಮಾನವಾಗಿ ವೃದ್ಧಿಹೊಂದುತ್ತದೆ. ಪ್ರಣಯ ಸಂಬಂಧದಿಂದ ಜೀವಾತ್ಮನಿಗೆ ಪ್ರಗತಿದಾಯಕವಾದ ಒಂದು ಹೆಜ್ಜೆಯನ್ನು ಮುಂದಕ್ಕೆ ಇಟ್ಟಂತೆ ಆಯಿತು. ಇದರ ಜೊತೆಗೆ ಇಂದ್ರಿಯ ಚಾಪಲ್ಯಕ್ಕೆ ಸಂಬಂಧಪಟ್ಟ ಕೆಲವು ಕೆಟ್ಟ ಗುಣಗಳೂ ಬಂದು ಸೇರಿಕೊಳ್ಳುತ್ತವೆ.



XVI

ಆದರೆ ಮಕ್ಕಳಲ್ಲಿ ತಮಗಿಂತ ದೊಡ್ಡವರ ವಿಷಯವಾಗಿ ಏಳುವ ಸ್ವಾರ್ಥರಹಿತ ವಾದ ಪ್ರಬಲವಾದ ಪ್ರೇಮದ ಅಲೆಗಳು ಆ ಸಣ್ಣ ದೇಹಾಂತರ್ಗತವಾದ ಜೀವರು ಗಳಿಗೆ ತುಂಬ ಪ್ರಗತಿದಾಯಕವಾದುವುಗಳು—ಏಕೆಂದರೆ ವಿಷಯ ಸುಖಕ್ಕೆ ಸಂಬಂಧಪಟ್ಟ ಸ್ವಾರ್ಥವು ಅವುಗಳಲ್ಲಿ ಲವಲೇಶವೂ ಇರುವುದಿಲ್ಲ, ಇಂತಹ ಭಾವನೆಗಳು ಪರಿಶುದ್ಧ ವಾಗಿದ್ದಾಗ್ಯೂ ತಾತ್ಕಾಲಿಕವಾದುವುಗಳು-ಆದಾಗ್ಯೂ ಮುಂದಿನ ಪ್ರಗತಿ ದೃಷ್ಟಿಯಿಂದ ಪೂರ್ವಸಿದ್ಧತೆ ರೂಪವಾದ ಬದಲಾವಣೆಗಳಿಂದ ಸಂಬಂಧಪಟ್ಟ ಕಾಮದೇಹಗಳನ್ನು ಒದಗೊಳಿಸುತ್ತವೆ. ವೃಕ್ಷದಲ್ಲಿ ಆಗತಾನೇ ಮೂಡತಕ್ಕ ಮೊಗ್ಗುಗಳು ತತ್ಕಾಲದಲ್ಲಿ ನೋಡುವುದಕ್ಕೆ ಅಂದವಾಗಿ ಕಾಣುವುದಲ್ಲದೇ ಮುಂದಿನ ಫಲಕ್ಕೆ ಅನುರೂಪವಾದ ಪೂರ್ವ ಸಿದ್ಧತೆಗಳನ್ನು ಸೂಚಿಸುತ್ತವೆ, ಹೀಗೆ ಮಕ್ಕಳಲ್ಲಿನ ಪ್ರೇಮವಾಹಿನಿಗಳೂ ಕೂಡ ಮುಂದಿನ ಪರಿಪಕ್ವಸ್ಥಿತಿಗೆ ಪೂರ್ವಸಿದ್ಧತೆ ರೂಪದಲ್ಲಿರುತ್ತವೆ.

ಮುಂಗೋಪಿ ;—ಈಗ ಕೆಲವು ಶೀಲ ಸ್ವಭಾವಗಳು ಹೇಗೆ ಮನುಷ್ಯನ ದೇಹ ಗಳಲ್ಲಿ ಅಭಿವ್ಯಕ್ತವಾಗುತ್ತವೆ-ಯೆಂಬಂಶವನ್ನು ಪರಿಶೀಲಿಸೋಣ. ಮುಂಗೋಪಿಯ ಸ್ವಭಾವವು ಈ ಮಾದರಿಗೆ ತಕ್ಕ ಉಪಯುಕ್ತವಾದ ಉದಾಹರಣೆಯು, ಆತನ ಕಾಮ ದೇಹದಲ್ಲಿ ಎದ್ದುಕಾಣುವಷ್ಟು ವಿಶಾಲವಾದಕೆಂಪುಬಣ್ಣದ ಪಟ್ಟೆಯು ಕಂಡುಬರುತ್ತದೆ. (16ನೆಯ ಚಿತ್ರವನ್ನು ನೋಡಿ) ಆದರೆ ಈತನ ಕಾಮದೇಹದಲ್ಲಿನ ವಿಶೇಷ ಲಕ್ಷಣವೇ ನೆಂದರೆ—ಅದರ ಮೈಮೇಲೆಲ್ಲ ಕೆಂಪು ಚುಕ್ಕೆಗಳು ಎದ್ದಿರುತ್ತವೆ. ಇದಕ್ಕೆ ಕಾರಣ ವೇನೆಂದರೆ ಏನಾದರೂ ಸಣ್ಣ-ಸಣ್ಣ ಅಪ್ರಿಯವಾದ ವ್ಯತಾಸಗಳು ಸಂಭವಿಸಿದರೂ ಕೂಡ ಅವುಗಳ ವಿಷಯವಾಗಿ ಸಿಡಿಮಿಡಿಗುಟ್ಟುತ್ತಾನೆ-ಉದಾಹರಣೆಗಾಗಿ ಕಾಫಿ ಸ್ವಲ್ಪ ತಣ್ಣಗಿರಬಹುದು—ರೈಲುಗಾಡಿ ತಪ್ಪಬಹುದು, ಮಗು ಮಸಿಕುಡಿಕೆಯನ್ನು ಉರುಳಿಸಬಹುದು ಅಂತಹ ಸಂದರ್ಭಗಳಲ್ಲೆಲ್ಲ ಮನುಷ್ಯನು ತಾಳ್ಮೆ ಕಳಕೊಂಡು ಕೋಪಕ್ಕೆ ಸಂಬಂಧಪಟ್ಟ ಉದ್ಗಾರಗಳನ್ನು ಹಾಕುತ್ತಾನೆ-ಕಾಮದೇಹದ ಮೈಮೇಲೆ ಕಾಣಿಸಿಕೊಂಡಿರುವ ಆ ಕೆಂಪು ಮಚ್ಚೆಗಳು ಅಂತಹ ಸಿಡುಕುಗಳನ್ನು ಪ್ರತಿನಿಧಿಸುತ್ತವೆ. ಕೆಲವು ಸಂದರ್ಭಗಳಲ್ಲಿ ಅಂತಹ ಸಿಡುಕುತನಕ್ಕೆ ಕಾರಣವಾದಂಥವರ ಕಡೆಗೆ ಆ ಕೆಂಪು ಮಚ್ಚೆಗಳು ಹಾರಿಹೋಗುತ್ತವೆ-ಆದರೆ ಅನೇಕ ಸಂದರ್ಭಗಳಲ್ಲಿ ಅವು ಈ ಚಿತ್ರದಲ್ಲಿ ತೋರಿಸಿರುವಂತೆ ಆತನ ಕಾಮದೇಹದ ಪ್ರಕೃತಿಯಲ್ಲಿ ತೇಲಾಡುತ್ತಿರುತ್ತವೆ. ಆದರೆ ಸ್ವಲ್ಪ ಹೊತ್ತಿನಲ್ಲಿ ಅವುಗಳು ಬಾಡಿಹೋಗುವುದುಂಟು—ಆದಾಗ್ಯೂ ಅವುಗಳ ಸ್ಥಾನದಲ್ಲಿ ಹೊಸಮಚ್ಚೆಗಳು ರೂಪಗೊಂಡು ಸೇರಿಕೊಳ್ಳುತ್ತವೆ—ಏಕೆಂದರೆ ಸಿಡುಕು ಸ್ವಭಾವದ ಮನುಷ್ಯನಿಗೆ ಸಿಡುಕುಗೊಳ್ಳತಕ್ಕ ಸಂದರ್ಭಗಳು ಆಗಾಗ ಸಂಭವಿಸುತ್ತಲೇ ಇರುತ್ತವೆ.

ಜಿಪುಣ :-ಮತ್ತೊಂದು ಅಪರೂಪವಾಗಿ ಕಣ್ಣಿಗೆ ಬೀಳತಕ್ಕ ದೃಶ್ಯವು 17ನೆಯ ಚಿತ್ರದಲ್ಲಿ ಪ್ರತಿನಿಧಿಸಿರುವ ಜಿಪುಣನ ಕಾಮದೇಹವು. ಇದು ಸಾಧಾರಣ ಮನುಷ್ಯನ ಕಾಮದೇಹಕ್ಕಿಂತಲೂ ಭಿನ್ನವಾಗಿದೆ-ಏಕೆಂದರೆ ಭಕ್ತಿಯ ಸೂಚನೆಯೇ ಇದರಲ್ಲಿರುವುದಿಲ್ಲ, ಅಲ್ಲದೆ ಸಾಧಾರಣವಾಗಿರುವಷ್ಟು ಪ್ರೇಮ ಭಾವನೆಯೂ ಇಲ್ಲ, ಅತ್ಯಾಶೆ, ಸ್ವಾರ್ಥತೆ, ಮೋಸ ಕುಯುಕ್ತಿ-ಇವೆಲ್ಲವೂ ತುಂಬ ಹೆಚ್ಚಾಗಿವೆ-ಆದರೆ ಇಂದ್ರಿಯ ಚಾಪಲ್ಯವೂ ಸಹ ತೀರ ಕಡಿಮೆ ಮಟ್ಟದಲ್ಲಿದೆ. ಎಲ್ಲಕ್ಕಿಂತಲೂ ಎದ್ದು ಕಾಣುವ ಲಕ್ಷಣವೇನೆಂದರೆ-ಕಂದು ಬಣ್ಣದ ಪಟ್ಟೆಗಳು ಕಾಮದೇಹವನ್ನು ಸುತ್ತುವರಿದು ಮನುಷ್ಯನು ಬೋನಿನಲ್ಲಿ ಕೂಡಲ್ಪಟ್ಟ ಹಾಗೆ ಕಾಣುತ್ತಾನೆ, ಈ ಗೆರೆಗಳು ತುಂಬ ಸಾಂದ್ರವಾದ ಕಂದು ಬಣ್ಣದುವು-ಮೇಲ್ಭಾಗದಲ್ಲಿ ಸರಿಯಾಗಿ ಅಂಟುಕಟ್ಟಿಕೊಂಡಿವೆ-ಕೆಳಗೆ ಮೋಡಗಳಂತೆ ಅದೇ ಬಣ್ಣವು ಪ್ರಸರಿಸಿದೆ. ಈ ಚಿತ್ರವು ಪಕ್ಕಾ ಜಿಪುಣತೆಯನ್ನು ಪ್ರದರ್ಶಿಸುತ್ತದೆ-ಇಂತಹ ಮಾದರಿಯು ದೊರೆಯುವುದು ಅಪರೂಪ. ಅನೇಕ ಜಿಪುಣ ಸ್ವಭಾವದವರು ಇರುತ್ತಾರೆ-ಆದರೆ ಈತನಷ್ಟು ಅದರಲ್ಲಿ ಮುಳುಗಿ ಹೋಗಿರುವುದಿಲ್ಲ. ಸಾಮಾನ್ಯವಾಗಿ ಅಂತಹ ಕಾಮದೇಹಗಳಲ್ಲಿ ಅತ್ಯಾಶೆಯನ್ನು ತೋರಿಸುವ ಕಂದು ಬಣ್ಣವಿದ್ದು ಅಂಡಾಕೃತಿಯ ಮೇಲ್ಭಾಗದಲ್ಲಿ ಮಾತ್ರ ಒಂದೆರಡು ಅಡ್ಡಗೆರೆಗಳಿರುತ್ತವೆ-ಇಷ್ಟು ವ್ಯಾಪಕವಾಗಿ ಕಾಮದೇಹದ ಮೈಯ್ಯನ್ನೆಲ್ಲ ಆವರಿಸಿರುವುದಿಲ್ಲ. ಈತನು ಪ್ರಪಂಚವನ್ನೆಲ್ಲ ದೂರತಳ್ಳಿ ತನ್ನದೇ ಆದ ಪ್ರಪಂಚದಲ್ಲಿ ವಾಸ ಮಾಡುವುದರಿಂದ ಹೊರಗಿನಿಂದ ಯಾರ ಪ್ರಭಾವವೂ ಇಂತಹನ ಮೇಲೆ ಪರಿಣಾಮವನ್ನು ಬೀರಲು ಸಾಧ್ಯವಿಲ್ಲ. ಬಹುಶಃ ಪ್ರಾಪಂಚಿಕವಾದ ಪ್ರೇರೇಪಣೆಗಳಿಂದ ಈತನು ಪಾರಾಗಿರುತಾನೆ ಯಾದಾಗ್ಯೂ ತನ್ನ ಸ್ನೇಹಿತರ ಸಹಾನುಭೂತಿ ಪ್ರೇಮ ಭಾವನೆಗಳಿಗೆ ಈತನ ಸ್ವಭಾವವು ಒಗೊಡದ ಕಲ್ಲಿನ ಸ್ಥಿತಿಯಲ್ಲಿರುತ್ತದೆ. ಈ ಬಂಧಕರವಾದ ಬೋನಿನೊಳಗೆ ಈತನು ಸಿಕ್ಕಿಕೊಂಡಿರುವುದರಿಂದ ಹೊರಗಿನಿಂದ ಒಳಕ್ಕೂ ಒಳಗಿಂದ ಹೊರಕ್ಕೂ ಯಾವ ಭಾವನೆಯ ತರಂಗಗಳೂ ಹಾಯಲಾರವು. ತನ್ನ ಸ್ವಂತ ಯೋಚನೆಯಲ್ಲೇ ಈತನು ಮುಳುಗಿ ಹೋಗಿರುವ ಪ್ರಯುಕ್ತ ಯಾರಿಗೂ ಯಾವ ವಿಧವಾದ ಉಪಕಾರವನ್ನೂ ಮಾಡುವುದಿಲ್ಲ. ಮತ್ತು ಇಂತಹ ಪರಿಸ್ಥಿತಿ ಇರುವವರೆಗೆ, ಈತನಿಗೆ ಆಧ್ಯಾತ್ಮಿಕ ಪ್ರಗತಿಯು ಕನಸಿನ ಪ್ರಾಯವಾದುದು. ದುರಾಶೆಯೆಂಬ ಪಿಶಾಚಿಯು ಈತನನ್ನು ಪೂರ್ತಿ ವಶಪಡಿಸಿಕೊಂಡಿರುವುದರಿಂದ ಅದನ್ನು ಕಳಚಿ ಹಾಕಲು ಆತನು ತುಂಬ ಶ್ರಮಿಸಬೇಕಾಗುವುದು.

ಅಳುವಾಗ ದುಃಖಕ್ಕೆ ಒಳಗಾಗಿರುವುದು.

17ನೆಯ ಚಿತ್ರಕ್ಕೂ ಈ ಚಿತ್ರಕ್ಕೂ(18)ಅನೇಕ ವಿಧವಾದ ಹೋಲಿಕೆಯಿರುತ್ತದೆ ಇಲ್ಲಿ ಕಂದು ಬಣ್ಣದ ಪಟ್ಟೆಗಳಿಗೆ ಬದಲಾಗಿ ಬೂದು ಬಣ್ಣದ ಗೆರೆಗಳು ಸುತ್ತುವರಿದಿವೆ



XVII

XVII



XVIII

ನೋಡುವುದಕ್ಕೆ ತುಂಬ ಶೋಚನೀಯ ಸ್ಥಿತಿ. ಸಾಮಾನ್ಯ ಮನುಷ್ಯರಲ್ಲಿರಬಹುದಾದ ಗುಣಗಳೆಲ್ಲವೂ ಈ ಕಾಮದೇಹವನ್ನು ಆವರಿಸಿರುವ ಗೋಳಿನ ಪಟ್ಟಿಗಳ ಹಿನ್ನೆಲೆಯಲ್ಲಿರುತ್ತವೆ, ಈ ಚಿತ್ರವು ಕೇವಲ ಆಳವಾದ ದುಃಖದಲ್ಲಿ ಮುಳುಗಿರುವ ಮನುಷ್ಯನನ್ನು ಪ್ರತಿಬಿಂಬಿಸುತ್ತದೆ. ಈ ಪರಿಸ್ಥಿತಿಯಲ್ಲಿ ಜಿಪುಣನಂತೆಯೇ ಈತನೂ ಕೂಡ ಪ್ರಪಂಚದ ಸಂಬಂಧವನ್ನು ಕಳೆದುಕೊಂಡು ಏಕಾಂಗಿಯಾಗಿರುತ್ತಾನೆ. ಆದುದರಿಂದ ಸ್ವಾಭಾವಿಕವಾದ ಸಾಧಾರಣ ಕಾಮ ದೇಹದ ಸ್ಥಿತಿಗೂ ಈ ಶೋಚನೀಯವಾದ ಪರಮಾವಧಿ ಸ್ಥಿತಿಗೂ ಮಧ್ಯೆ ಎಷ್ಟೋ ಅಂತಸ್ತುಗಳಿರುತ್ತವೆ. ಒಬ್ಬನಿಗೆ ಕೆಲವೇ ಪಟ್ಟಿಗಳಿರಬಹುದು. ಅವೂ ಕೂಡ ಇಷ್ಟು ದಟ್ಟವಾಗಿಲ್ಲದೇ ಇರಬಹುದು. ಅಥವಾ ಇನ್ನೂ ಕಡಮೆ ಅಂತಸ್ತಿನ ದುಃಖದಲ್ಲಿ ಬೂದು ಬಣ್ಣದ ಮೋಡಗಳು ಈ ರೀತಿ ಪಟ್ಟಿಗಳಂತೆ ಜೋಡಿಸಿಕೊಳ್ಳದೇ ಹಾರಾಡುತ್ತಿರಬಹುದು.

ಆದಾಗ್ಯೂ ಅನೇಕರು ಇಂತಹ ಶೋಚನೀಯಸ್ಥಿತಿಗೆ ಒಳಗಾಗಿ ನಿರಾಶಾ ಭಾವನೆಯೆಂಬ ಕವಿಯಲ್ಪಟ್ಟ ಮೋಡದ ಆವರಣದೊಳಗೆ ಸೇರಿಕೊಂಡು ಜೀವಿತವು ಅಸಹನೀಯವಾದ ದುಃಖದಿಂದ ಕೂಡಿದೆಯೆಂಬ ಮನೋಭಾವನೆಗೆ ಸಿಕ್ಕಿಕೊಳ್ಳುವವರು ಇರುತ್ತಾರೆ. ಈ ರೀತಿ ಮಾಡುವವರು ತಮ್ಮ ಪುರೋಭಿವೃದ್ಧಿಗೇ ಹಾನಿ ತಂದುಕೊಳ್ಳುವುವಲ್ಲದೇ-ಏಕೆಂದರೆ ಅಂತಹ ಖಿನ್ನ ಸ್ಥಿತಿಯಲ್ಲಿ ಅನೇಕ ಸದವಕಾಶಗಳನ್ನೂ ಕಳೆದುಕೊಳ್ಳುತ್ತಾರೆ, ಸುತ್ತುಮುತ್ತಲಿನ ಪ್ರದೇಶಗಳಲ್ಲಿರುವ ಇತರರಿಗೂ ಕೂಡ ಅನಾವಶ್ಯಕವಾದ ಕೇಡುಂಟು ಮಾಡುತ್ತಾರೆ. ಖಿನ್ನತೆಗಿಂತಲೂ ಹೆಚ್ಚು ವ್ಯಾಪಕವಾಗಿ ಹಬ್ಬುವಂತಹ ಸಾಂಕ್ರಾಮಿಕ ಜಾಡ್ಯವಿಲ್ಲ. ಮೇಲ್ಕಂಡಂತೆ ಖಿನ್ನತೆಯೊಳಕ್ಕೆ ಮುಳುಗಿರುವ ಕಾಮದೇಹವು ಸತ್ತವನದಾಗಿರಬಹುದು. ಅಥವಾ ಇನ್ನೂ ಸ್ಥೂಲ ಲೋಕದಲ್ಲಿ ಬದುಕಿರುವವನದಾಗಬಹುದು. ಅಂತೂ ಅದರಿಂದ ಉಂಟಾಗತಕ್ಕಂತಹ ಕೆಟ್ಟ ಪರಿಣಾಮವೇನೋ ಒಂದೇ ವಿಧಾನವಾದುದು. ಈ ರೀತಿ ಖಿನ್ನತೆಗೊಳಗಾಗುವಂಥವನು ಸಮಾಜಕ್ಕೆ ದೊಡ್ಡ ಅಪಾಯದಂತೆ ಇರುತ್ತಾನೆ. ಏಕೆಂದರೆ ಚಿಂತೆ-ಅತಿಶ್ರಮ-ನರದೌರ್ಬಲ್ಯವನ್ನುಂಟು ಮಾಡುವಂತಹ ಪರಿಸ್ಥಿತಿಯುಳ್ಳ ಈ ಕಾಲದಲ್ಲಿ ಈ ಗೋಳಿನ ಮನೋಭಾವನೆಯಿಂದುತ್ಪತ್ತಿಯಾಗುವ ಪರಿಣಾಮವನ್ನು ಅನೇಕರು ತಡೆಯುವ ಸ್ಥಿತಿಯಲ್ಲಿರುವುದಿಲ್ಲ.

ಆ ರೀತಿ ಅಂತಹ ದುಷ್ಟಪರಿಣಾಮವನ್ನು ಎದುರಿಸಬಲ್ಲಂಥವರು ಯಾರೆಂದರೆ-ಮಾನವ ಜೀವಿತೋದ್ದೇಶವನ್ನು ತಿಳಿದುಕೊಂಡು ತನಗೆ ಒದಗಬಹುದಾದ ವಿಪತ್ತುಗಳನ್ನು ತಾತ್ವಿಕ ದೃಷ್ಟಿಯಿಂದ ಎಂದರೆ ಹಿಂದಿನ ಸಾಲವನ್ನು ತೀರಿಸುತ್ತಿದ್ದೇವೆ, ಇದಕ್ಕೆ ಏಕೆ ನಾವು ಕೊರಗಬೇಕು. ಸಮಾಧಾನವಾಗಿ ಅನುಭವಿಸೋಣ-ಎಂಬ ಮನೋಭಾವನೆಯಿಂದ ನೋಡುವ ಅಭ್ಯಾಸವನ್ನು ಯಾರು ಬೆಳೆಸಿಕೊಂಡಿರುತ್ತಾರೆಯೋ

ಅಂತಹರು ಮಾತ್ರ ಅದರಿಂದ ದೂರವಿರಬಲ್ಲರು. ಏಕೆಂದರೆ ತಮ್ಮ ನಿಜ ಸ್ವರೂಪವನ್ನ ಪರಮಾತ್ಮನಂತೆಯೇ ಆನಂದಮಯವಾದುದು ಎಂದು ಮನದಟ್ಟುಮಾಡಿಕೊಂಡಿರುವವರು ಮಾತ್ರ ಎಂತಹ ನಿರಾಶಾಜನಕವಾದ ಪರಿಸ್ಥಿತಿಯ ಮಧ್ಯದಲ್ಲೂ ಕೂಡ ಪ್ರಶಾಂತರಾಗಿದ್ದುಕೊಂಡು ಇತರರಿಗೆ ಅಗತ್ಯವಾದ ಸಹಾಯವನ್ನುಂಟು ಮಾಡುವುದರಲ್ಲಿ ಸಂತೋಷಪಡುತ್ತಾರೆ. ನಮ್ಮಗಳ ಸೌಭಾಗ್ಯವೋ ಎಂಬಂತೆ ಶುಭ ಮತ್ತು ಶ್ರೇಯಸ್ಕರವಾದ ಪ್ರಭಾವಗಳನ್ನೂ ಕೂಡ ಕೆಟ್ಟುವುಗಳಂತೆಯೇ ಪ್ರಸಾರ ಮಾಡುವುದು ಸುಲಭಸಾಧ್ಯವಾದುದು. ಯಾರು ವಿವೇಕಿಗಳಾಗಿ ಸದಾ ಸಂತೋಷದ ಮನೋಭಾವನೆಯನ್ನು ಬೆಳೆಸಿಕೊಂಡಿರುತ್ತಾರೆಯೋ ಅಂತಹರು ಶಾಂತ್ಯಾನಂದಗಳಿಗೆ ಕೇಂದ್ರ ಸ್ಥಾನವಾಗಿರುತ್ತಾರೆ. ಏಕೆಂದರೆ ಪರಮಾತ್ಮನು ಸಚ್ಚಿದಾನಂದ ಸ್ವರೂಪನು ಹೇಗೆ ಸೂರ್ಯನು ಸದಾ ಶಾಖ-ಬೆಳಕುಗಳನ್ನು ಹೊರ ಚಿಮ್ಮುತ್ತಿರುತ್ತಾನೆಯೋ ಹಾಗೆ ಮೇಲ್ಕಂಡ ಮನುಷ್ಯನು ಪರಮಾತ್ಮನ ಶಾಂತ್ಯಾನಂದಗಳಿಗೆ ನಾಲೆಯಾಗಿ ಸುಖ ನೆಮ್ಮದಿ ಭಾವನೆಗಳನ್ನು ಪ್ರಸರಿಸಲು ಅನುವಾಗುತ್ತಾನೆ. ಈ ಪ್ರಪಂಚವು ಸಾಮಾನ್ಯವಾಗಿ ದುಃಖದಿಂದ ತುಂಬಿದೆ. ಆದುದರಿಂದ ಈ ತತ್ವವನ್ನು ಅರ್ಥಮಾಡಿಕೊಂಡಿರುವ ನಾವೆಲ್ಲರೂ ಆ ದುಃಖದ ಮೋಡಗಳನ್ನು ಚದುರಿಸಿ ಅವುಗಳೊಳಗೆ ಹೂತು ಹೋಗಿರುವಂಥ ಆರ್ತರಿಗೆ (ದುಃಖಿಗಳಿಗೆ) ಪರಮಾತ್ಮನ ಪ್ರೇಮ ಸ್ವರೂಪವಾದ ಬೆಳಕು ದೊರೆಯುವಂತೆ ಸಹಾಯ ಮಾಡೋಣ.

ಭಕ್ತ

ಈ ವಿಶೇಷ ಸ್ವಭಾವಗಳ ಮಾದರಿಗಳನ್ನು ಕುರಿತು ಬರೆಯಬೇಕಾದ ನಮ್ಮ ವಿವರಣೆಯನ್ನು ಮುಗಿಸುವುದಕ್ಕೆ ಮುಂಚೆ ಎರಡು ವಿಶೇಷ ಶೀಲ ಸ್ವಭಾವಗಳನ್ನು ಹೋಲಿಕೆ ದೃಷ್ಟಿಯಿಂದ ವಿಮರ್ಶೆ ಮಾಡುವುದರ ಮೂಲಕ ಎಷ್ಟೋ ಪಾಠಗಳನ್ನು ಕಲಿಯುವುದಿದೆ. ಇವುಗಳಲ್ಲಿ 19ನೆಯ ಚಿತ್ರವು-ಭಕ್ತಿ ಸ್ವಭಾವ ಪ್ರಾಮುಖ್ಯವಾಗುಳ್ಳ ಮನುಷ್ಯನದು. ಈತನ ಗುಣ ವಿಶೇಷಗಳನ್ನು ಈ ಕಾಮದೇಹದ ಬಣ್ಣಗಳಿಂದ ಅರ್ಥಮಾಡಿಕೊಳ್ಳಬಹುದು. ಅಂಡಾಕೃತಿಯ ಮೇಲ್ಭಾಗದಲ್ಲಿರುವ ಸ್ವಲ್ಪ ಊದಾ ಬಣ್ಣದ ಅಂಚಿನಿಂದ ಈತನು ಒಂದು ಉನ್ನತ ಧ್ಯೇಯಕ್ಕೆ ಓಗೊಡುವ ಸಂಸ್ಕಾರವುಳ್ಳವನು ಎಂದು ತಿಳಿಯಬರುತ್ತದೆ. ಈ ದೇಹದಲ್ಲಿನ ನೀಲಿಯ ಪಟ್ಟೆಯು ಈತನ ಪ್ರಾಮುಖ್ಯವಾದ ಭಕ್ತಿ ಭಾವನೆಯನ್ನು ವ್ಯಕ್ತಪಡಿಸುತ್ತದೆ. ಆದರೆ ಮೇಲ್ಭಾಗದಲ್ಲಿರುವ ಈ ಪಟ್ಟೆಯ ಮಧ್ಯೆ ಸ್ವಲ್ಪ ಭಾಗ ಮಾತ್ರ ತೆಳುವಾಗಿದ್ದು ಇದು ಆತನ ನಿಷ್ಕಾಮ ಭಕ್ತಿಯನ್ನು ತೋರಿಸುತ್ತದೆ. ಆದರೆ ಆ ಕಡೆ-ಈ ಕಡೆ ಹೆಚ್ಚಾಗಿರುವ ಸಾಂದ್ರವಾದ ನೀಲಿಯು ಆತನ ಸ್ವಂತಕ್ಕಾಗಿ ವರಗಳನ್ನು ಬೇಡುವ



XIX



XX

XX

ಸ್ವಾರ್ಥಭಾವನೆ ಮಿಶ್ರವಾಗಿರುವುದನ್ನು ತೋರಿಸುತ್ತದೆ. ಈ ಚಿತ್ರದ ಎಡಭಾಗ ದಲ್ಲಿರುವ ಅಲ್ಪ ಸ್ವಲ್ಪ ಹಳದಿ ಬಣ್ಣದ ಮಚ್ಚೆಯು ಆತನಿಗಿರುವ ವಿಚಾರ ಶಕ್ತಿ ಅತ್ಯಲ್ಪವಾದುದು ಅದು ಆತನ ಭಕ್ತಿ ಭಾವನೆಯನ್ನೇ ಸದ್ವಿನಿಯೋಗ ಮಾಡುವಷ್ಟು ಸಮರ್ಥವಾಗಿಲ್ಲ. ಅಲ್ಲದೆ ಮೂಢಾಚಾರಗಳಿಗೆ ಬೀಳದಂತೆ ಆತನನ್ನು ರಕ್ಷಿಸಲೂ ಆರದು, ಎಂಬಂಶವನ್ನು ವ್ಯಕ್ತಪಡಿಸುತ್ತದೆ. ಪ್ರೇಮವೂ ಕೂಡ ಸಾಕಾದಷ್ಟಿದೆ. ಹೊಂದಾಣಿಕೆ ಯನ್ನು ಸೂಚಿಸುವ ಹಸುರು ಬಣ್ಣವು ಅಷ್ಟು ಶುದ್ಧವಾಗಿಲ್ಲ, ಆದುದರಿಂದ ಹೊಂದಾ ಣಿಕೆಯು ಕೇವಲ ಕೆಳಗಿನ ಮಟ್ಟವಾದ ವಂಚನೆಗೂ ಇಳಿಯ ಬಲ್ಲದು ಅಲ್ಲದೆ ಇಂದ್ರಿಯ ಚಾಪಲ್ಯತೆಯು ಸರಾಸರಿ ಪರಿಮಾಣಕ್ಕಿಂತಲೂ ಹೆಚ್ಚಾಗಿದೆ. ಸ್ವಾರ್ಥತೆ ಮತ್ತು ವಂಚನೆ ಮನೋಭಾವನೆಯೂ ಕೂಡ ಎದ್ದು ಕಾಣುತ್ತವೆ. ಅತಿಯಾದ ಇಂದ್ರಿಯ ಚಾಪಲ್ಯ ಮತ್ತು ಭಕ್ತಿಯ ಆತಿ ರೇಖಭಾವನೆಗಳು ಸಾಮಾನ್ಯವಾಗಿ ಒಟ್ಟಿಗೆ ಇರುವ ಸಂಗ ತಿಯು ಗಮನಾರ್ಹವಾದ ಅಂಶವು. ಇದರಿಂದ ನಾವು ಕಲಿಯಬೇಕಾದ ಪಾಠವೇ ನೆಂದರೆ, ಮನುಷ್ಯರು ವಿವೇಚನೆಯಿಲ್ಲದೆ ತನ್ನ ಪ್ರಿಯವಾದ ರಾಗಭಾವನೆಗಳಿಗೆ ವಶವಾಗಿ ತನ್ನ ಜೀವತವನ್ನು ನಡೆಸುತ್ತಿದ್ದರೆ ಈ ವಿಧವಾದ ಕಾಮದೇಹದ ಪರಿ ಸ್ಥಿತಿಯು ಏರ್ಪಡುತ್ತದೆ, ಎಂದರೆ ಇಂತಹ ಮನುಷ್ಯನಿಗೆ ವಿಚಾರಶಕ್ತಿ ಕಡಿಮೆ ಯಾಗಿ ಆತನ ರಾಗ ಭಾವನೆಗಳೇ ಆತನನ್ನು ಆಳುತ್ತಿರುತ್ತವೆ. ಎಂಬಂಶವು ವ್ಯಕ್ತ ಪಡುತ್ತದೆ. ಇದರಿಂದಲೇನೇ ಈ ದೇಹದ ಬಣ್ಣಗಳೂ ಪರಿಷ್ಕಾರವಾಗಿ ವಿಂಗಡ ವಾಗಿಲ್ಲ ಮೋಡಗಳಂತೆ ಒಂದರೊಳಕ್ಕೊಂದು ಬೆರೆತುಕೊಂಡಂತೆ ಇವೆ. ಈ ಅಧ್ಯಾಯದಲ್ಲಿ ನಾವು ವಿವರಿಸುತ್ತಿರುವ ಸಾಮಾನ್ಯ ಮನುಷ್ಯರ ಮಾದರಿಗಳಲ್ಲಿ ಇದು ಭಕ್ತಿ ಪ್ರಧಾನವಾದ ಸ್ವಭಾವವುಳ್ಳ ಆದರೆ ವಿಚಾರದ ಪರನಲ್ಲದ ಮನುಷ್ಯನ ಕಾಮದೇಹದ ಮಾದರಿಯು, ಆದರೆ ಈ ಮಾರ್ಗದಲ್ಲೇ ಬೆಳೆದ ಮನುಷ್ಯನಿಗೆ ಭಕ್ತಿಭಾವನೆಯು ಪ್ರಧಾನವಾಗಿದ್ದರೂ ಕೂಡ ಅತನಿಗೆ ತಿಳಿವಳಿಕೆಯ ಮೂಲಕವಾಗಿ ಯೇ ಭಕ್ತಿಯು ಪ್ರಚೋದನೆಯಾಗುತ್ತದೆ, ಅಂತಹ ಬೆಳೆದ ಮನುಷ್ಯನ ಭಾವ ನೆಯು ಮೂಢಭಕ್ತಿಯಾಗುವುದಿಲ್ಲ.

ವಿಜ್ಞಾನಿ

19ನೆಯ ಚಿತ್ರಕ್ಕೂ 20ನೆಯ ಚಿತ್ರಕ್ಕೂ ಎಷ್ಟು ವ್ಯತ್ಯಾಸವಿದೆಯೆಂಬಂಶವು ನೋಡಿದ ಕೂಡಲೇ ಗೋಚರವಾಗುವಂತಿದೆ. 19ನೆಯ ಚಿತ್ರದಲ್ಲಿ ಪ್ರಾಮುಖ್ಯ ವಾಗಿ ಎದ್ದುಕಾಣುವ ಭಕ್ತಿ ಭಾವನೆ ಮತ್ತು ಇಂದ್ರಿಯ ಚಾಪಲ್ಯತೆ ಮತ್ತು ಅಲ್ಪ ಸ್ವಲ್ಪ ವಿಚಾರ ಶಕ್ತಿ ಇವುಗಳು ಕಂಡು ಬರುತ್ತವೆ, ಈ ಇಪ್ಪತ್ತನೆಯ ಚಿತ್ರದಲ್ಲಿ ಭಕ್ತಿಭಾವನೆಯು ಇಲ್ಲವೇ ಇಲ್ಲ ಸರಾಸರಿ ಪ್ರಮಾಣಕ್ಕಿಂತ ಕಡಿಮೆ ಇರುವ ಇಂದ್ರಿಯ ಚಾಪಲ್ಯತೆ, ಇದರ ಜೊತೆಗೆ ಅತಿ ಹೆಚ್ಚಾಗಿ ಬೆಳೆದಿರುವ ವಿಚಾರ

ಶಕ್ತಿಯು ಎದ್ದು ಕಾಣುತ್ತದೆ. ಪ್ರೇಮ ಮತ್ತು ಹೊಂದಾಣಿಕೆ ಮನೋಭಾವನೆಗಳು ಪರಿಮಾಣದಲ್ಲಾಗಲೀ ಗುಣದಲ್ಲಾಗಲೀ ಸಾಕಾದಷ್ಟು ಇಲ್ಲ. ಆದರೆ ಮನಸ್ಸು ತುಂಬ ಬೆಳೆದಿದೆ. ಇದೇ ಉಳಿದೆಲ್ಲ ಭಾವನೆಗಳ ಮೇಲೆ ತನ್ನ ಪ್ರಭಾವವನ್ನು ಗಮನಾರ್ಹವಾಗಿ ಬೀರಿದೆ. ಈ ಚಿತ್ರದಿಂದ ತಿಳಿದು ಬರುವುದೇನೆಂದರೆ ಮನುಷ್ಯನು ತುಂಬ ಬೆಳೆದಿದ್ದರೆ ಮೇಲ್ಕಂಡ ಗುಣಗಳನ್ನೆಲ್ಲಾ ಸಪ್ರಮಾಣದಲ್ಲಿ ಅಳವಡಿಸಿಕೊಳ್ಳುತ್ತಿದ್ದನು. ಅಲ್ಲದೆ ಸಧ್ಯದ ಸ್ಥಿತಿಯಲ್ಲಿ ಸ್ವಾರ್ಥಭಾವನೆಯು ತುಂಬ ಬೆಳೆದಿದೆ ಇದರ ಜೊತೆಗೆ ಹೊಟ್ಟೆ ಕಿಚ್ಚಿನ ಸ್ವಭಾವವೂ ಇದೆ. ಆದರೆ ಈ ಮನುಷ್ಯನ ಎದ್ದು ಕಾಣುವಂತಹ ಲಕ್ಷಣವು ಸ್ವರ್ಣವರ್ಣದಲ್ಲಿ ಪ್ರಕಾಶಿಸುವ ಆತನ ವಿಚಾರ ಶಕ್ತಿಯು ಈತನು ಯಾವುದನ್ನೂ ವಿಚಾರ ಮಾಡದೆ ನಂಬುವುದಿಲ್ಲ. ವಿಚಾರ ಪ್ರವೃತ್ತಿಯೇ ಆತನ ತಿಳುವಳಿಕೆಗೆ ಮುಖ್ಯ ಸಾಧನವಾಗಿದೆ. ಈ ಹಳದಿಯ ಮಧ್ಯೆ ಎದ್ದು ಕಾಣುವ ಕಿತ್ತಲೇ ಹಣ್ಣಿನ ತ್ರಿಕೋಣವಿದೆ, ಇದು ಆತನಿಗೆ ಬೆಳೆದಿರುವ ಅಹಂಭಾವ ಮತ್ತು ಮಹತ್ವಾಕಾಂಕ್ಷೆಯನ್ನು ಸೂಚಿಸುತ್ತದೆ. ಆದಾಗ್ಗೂ ಹಳದಿಯು ಚಿನ್ನದಂತೆ ರಂಜಿಸುತ್ತಿರುವುದರಿಂದ ಈತನು ತನ್ನ ಮೇಧಾಶಕ್ತಿಯನ್ನು ನೀಚ ಸ್ವಾರ್ಥೋದ್ದೇಶಗಳಿಗೆ ವಿನಿಯೋಗ ಮಾಡುವವನಲ್ಲ, ಎಂಬಂಶವನ್ನು ಖಚಿತಪಡಿಸುವುದು.

ಈತನ ಮನಸ್ಸು ವಿಜ್ಞಾನ ದೃಷ್ಟಿಯಲ್ಲಿ ಬೆಳೆದಿರುವುದರಿಂದ ಎಲ್ಲ ಕೆಲಸಗಳನ್ನೂ ಸಕ್ರಮವಾಗಿ ಮಾಡುವ ಸ್ವಭಾವದವನು ಆಗಿರುತ್ತಾನೆ ಆದುದರಿಂದಲೇ ಈ ಕಾಮದೇಹದಲ್ಲಿನ ವಿಧವಿಧವಾದ ಬಣ್ಣದ ಪಟ್ಟಿಗಳು ಪರಿಷ್ಕಾರವಾಗಿ ಅಂಚು ಕಟ್ಟಿಕೊಂಡು ಒಂದಕ್ಕೊಂದು ಬೆರೆತು ಕೊಳ್ಳದೆ ಸ್ಪಷ್ಟವಾಗಿ ವಿಂಗಡವಾಗಿರುತ್ತವೆ. ಹಿಂದಿನ ಚಿತ್ರಕ್ಕೂ ಇದಕ್ಕೂ ಇರುವ ದೊಡ್ಡ ವ್ಯತ್ಯಾಸವೇ ಇದು.

19 ಮತ್ತು 20ನೆಯ ಚಿತ್ರಗಳಲ್ಲಿ ಉದಾಹರಿಸಲ್ಪಟ್ಟಿರುವ ದೇಹಗಳು ಪರಸ್ಪರ ಭಿನ್ನವಾಗಿದ್ದರೂ ಒಂದು ಗುಣ ಹೆಚ್ಚು–ಒಂದು ಗುಣ ಕಡಮೆ–ಹೀಗೆ ಸಮರಸವಾಗಿ ಬೆಳೆಯದೆ ಇರುವಂಥ ಎರಡು ಬೇರೆ ಬೇರೆ ಸ್ವಭಾವದ ಮಾದರಿಗಳನ್ನು ಪ್ರತಿನಿಧಿಸುತ್ತಿವೆ. ಪ್ರತಿಯೊಂದರಲ್ಲೂ ಸೌಲಭ್ಯಗಳೂ ಇವೆ. ಕೊರತೆಗಳೂ ಇವೆ. ಈಗ ಬೆಳೆದ ಮನುಷ್ಯನ ದೇಹಗಳ ಮಾದರಿಗಳನ್ನು ವಿಮರ್ಶೆ ಮಾಡೋಣ. ಈತನಲ್ಲಿ ಈ ಗುಣಗಳೆಲ್ಲವೂ ಹೆಚ್ಚಾಗಿಯೂ ಆದಾಗ್ಗೂ ಸಮರಸವಾಗಿಯೂ ಬೆಳೆದಿರುವುದನ್ನು ನೋಡಬಹುದು. ಆತನಲ್ಲಿ ಒಂದು ಗುಣ ಮತ್ತೊಂದು ಗುಣವನ್ನು ಪೋಷಿಸುತ್ತಾ-ಪರಸ್ಪರ ಬೆಂಬಲವಾಗಿರುವಿಕೆಯು ಕಾಣುತ್ತದೆ. ಹಿಂದಿನ ಚಿತ್ರಗಳಲ್ಲಿರುವಂತೆ ಒಂದು ಮತ್ತೊಂದಕ್ಕೆ ವಿರೋಧವಾಗಿಲ್ಲ.



XXI

ಅಧ್ಯಾಯ ೧೯

ಸಂಸ್ಕೃತಿಯುಳ್ಳ ಮಾನವ

(ಅಥವ ಬೆಳೆದ ಮನುಷ್ಯ)

ಈ ಶಬ್ದವು ಒಂದು ನಿರ್ದಿಷ್ಟವಾದ ಅರ್ಥವನ್ನು ಕೊಡುವುದಿಲ್ಲ, ಬೆಳವಣಿಗೆಯಲ್ಲಿ ಅನೇಕ ಅಂತಸ್ತುಗಳಿವೆ. ಅವುಗಳಲ್ಲಿ ಯಾವುದು ಎಂಬುದು ನಿರ್ದಿಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ಆದುದರಿಂದ ಈ ಸಂಧರ್ಭದಲ್ಲಿ ಈ ಶಬ್ದವನ್ನು ನಮ್ಮ ಸಂಸ್ಕೃತಿಯಲ್ಲಿನ ಮುಮುಕ್ಷು ಎಂಬ ಅರ್ಥದಲ್ಲಿ ಪ್ರಯೋಗವಾಗಿದೆ, ಎಂದರೆ ಯೋಗ ಪಥವನ್ನು ಪ್ರವೇಶಿಸಿರುವವನ ದೇಹಗಳನ್ನು ಇಲ್ಲಿ ಉದಾಹರಿಸಿಲ್ಲ. ಯಾರು ಈ ಲೊಕವು ಕೊಡುವ-ಅಧಿಕಾರ-ಐಶ್ವರ್ಯ-ಭೋಗ-ಕೀರ್ತಿ ಮೊದಲಾದ ಐಹಿಕ ಸುಖಗಳನ್ನು ಬಯಸದೆ, ಮಾನವ ಜೀವಿತಕ್ಕೆ ಸಂಬಂಧಪಟ್ಟ ಪರಮಾರ್ಥ-ಪರಮ ಪುರುಷಾರ್ಥದ ಕಡೆಗೆ ಹೃತ್ಪೂರ್ವಕವಾದ ಒಲವುಳ್ಳವನೋ ಅಂತಹನೇ ಮುಮುಕ್ಷು (ಎಂದರೆ ಪ್ರಪಂಚದ ಕಡೆಗೆ ಬೆನ್ನು ಮಾಡಿ ಈಶ್ವರ ಸಂಕಲ್ಪದ ಕಡೆಗೆ ಮುಖ ತಿರುಗಿಸಿರುವವನು-ಎಂದರ್ಥ T.V.R.). ಈತನ ಅಂತಸ್ತಿಗಿಂತಲೂ ಬೆಳೆದು ಯೋಗ ಪಥವನ್ನು ಪ್ರವೇಶಿಸಿರುವ ದೀಕ್ಷಿತರ ದೇಹಗಳಲ್ಲಿ ಹೆಚ್ಚು ವಿಸ್ತಾರವಾಗಿ ಪ್ರಸರಿಸಿ-ಹೆಚ್ಚು ವ್ಯವಸ್ಥಿತವಾಗಿ ಏರ್ಪಡಿಸಲ್ಪಟ್ಟ ಪ್ರಕಾಶಮಾನವಾದ ಬಣ್ಣಗಳ ಪಟ್ಟಿಗಳು ಕಂಗೊಳಿಸುತ್ತವೆ. ಆದರೆ ಇಲ್ಲಿ ಉದಾಹರಿಸಲ್ಪಟ್ಟ ದೇಹಗಳು. ಯಾರು ಇಹಲೋಕಕ್ಕೆ ಸಂಬಂಧಪಟ್ಟ ಉದ್ದೇಶಗಳನ್ನು ಬದಿಗೊತ್ತಿ ಒಂದು ಉನ್ನತ ಧ್ಯೇಯಕ್ಕೋಸುಗ ಬಾಳುತ್ತಿರುತ್ತಾನೆಯೋ ಅಂತಹವು. ಇಂತಹ ಮುಮುಕ್ಷುಗಳಲ್ಲಿ ಕೆಲವರು ಒಂದು ವಿಧವಾದ ಬೆಳೆವಣಿಗೆಯನ್ನು ಹೊಂದಿರಬಹುದು, ಮತ್ತೆ ಕೆಲವರು ಇನ್ನೂ ಬೇರೆ ವಿಧವಾಗಿ ಬೆಳೆದಿರಬಹುದು. ಆದರೆ ಇಲ್ಲಿ ಹೇಳಲ್ಪಟ್ಟಿರುವವನು ಸರಾಸರಿ ಅಂತಹ ಎಲ್ಲರನ್ನೂ ಪ್ರತಿನಿಧಿಸತಕ್ಕ ಸಮರಸವಾದ ಬೆಳವಣಿಗೆಯುಳ್ಳವನು, ಎಂದು ತಿಳಿದುಕೊಳ್ಳಬೇಕು.

ಈಗ 21ನೆಯ ಚಿತ್ರದಲ್ಲಿ ಉದಾಹರಿಸಿರುವ ಆತನ ಕಾರಣ ದೇಹವನ್ನು ವಿಮರ್ಶೆ ಮಾಡೋಣ. ಇದನ್ನು ಐದನೆಯ ಮತ್ತು ಎರಡನೆಯ ಚಿತ್ರಗಳೊಡನೆ ಹೋಲಿಸಿ ನೋಡಿದರೆ, ಮನುಷ್ಯನು ಎಷ್ಟರಮಟ್ಟಿಗೆ ಪ್ರಗತಿಯನ್ನು ಸಾಧಿಸಿರುತ್ತಾನೆ ಎಂಬಂಶವು ಎದ್ದು ಕಾಣುವುದು. ಪ್ರಕಾಶಮಾನವಾದ ದಿವ್ಯ ತೇಜಸ್ಸಿನ ಹಿನ್ನೆಲೆ

ಯಲ್ಲಿ ಎಂತಹ ಉನ್ನತ ಮಟ್ಟದ ಪ್ರೇಮ—ಭಕ್ತಿ—ಸಹಾನುಭೂತಿ—ಇವುಗಳಿಗೆ ಬೆಂಬಲ ಕೊಡುವಂಥ ಆಧ್ಯಾತ್ಮಿಕ ದೃಷ್ಟಿಯಿಂದ ಉತ್ತಮವಾದ ನಾಜೋಕಿನ ಮಟ್ಟಕ್ಕೆ ಏರಿದ ವಿಮರ್ಶಾತ್ಮಕ ಬುದ್ಧಿ ಮತ್ತು ದೈವಿಕತೆಯ ಕಡೆಗೆ ಸತತವಾಗಿ ಮುಂದುವರಿದು ಮೇಲಕ್ಕೇಳುತ್ತಿರುವ ಉತ್ಕಾಂಕ್ಷೆಗಳ ಕಿರಣಗಳು ಎದ್ದು ಕಾಣುತ್ತವೆ.

ಈ ದಿವ್ಯತೆಯನ್ನೆಲ್ಲ ಕಾಗದದ ಮೇಲೆ ತರುವುದು ಎಷ್ಟು ಅಸಾಧ್ಯವಾದುದು? ಆದಾಗ್ಯೂ ನಮ್ಮ ಚಿತ್ರಗಾರನು ಸಾಧ್ಯವಿಲ್ಲದ್ದನ್ನು ಸಾಧ್ಯವಾಗುವಂತೆ ಕೌಶಲ್ಯ ದಿಂದ ಚಿತ್ರಿಸಿ ನಮ್ಮ ಊಹೆಗೆ ನಿಲುಕುವಂತೆ ಸಹಾಯ ಮಾಡಿರುತ್ತಾನೆ. ಇದರ ಆಧಾರದ ಮೇಲೆ ನಾವು ನಮ್ಮ ಸಮರ್ಪಕವಾದ ಅಭಿಪ್ರಾಯವನ್ನು ಕಟ್ಟಿಕೊಳ್ಳ ಬಹುದು.

ಬೆಳೆದ ಮನುಷ್ಯನ ಅತ್ಯಂತ ಉನ್ನತಮಟ್ಟದ ಲಕ್ಷಣವನ್ನು ನಾವು ಗಮನಿ ಸದೆ ಇರಕೂಡದು. ಅದೇನೆಂದರೆ ಮೇಲ್ಮಟ್ಟದ ದಿವ್ಯ ಶಕ್ತಿಗಳಿಗೆ ಆತನೂ ಒಂದು ನೆಲೆಯಾಗಿರುತ್ತಾನೆ. ಆತನು ಸ್ವಾರ್ಥರಹಿತನಾಗಿ ಇತರರಿಗೆ ಸಹಾಯವನ್ನೆಸಗುವ ಮನೋಭಾವನೆಯನ್ನು ಬೆಳೆಸಿಕೊಂಡಿರುವುದರಿಂದ ದೈವಿಕ ಸ್ಥಿರತೆಗೆ ಸಂಬಂಧಪಟ್ಟ ಅನುಗ್ರಹ ಶಕ್ತಿಗಳು ಆತನ ಮೂಲಕ ಒಂದೇ ಸಮನೆ ಧಾರಾಪೂರ್ವಕವಾಗಿ ಇಳಿದು ಬಂದು ಯಾರು ಇನ್ನೂ ಅವುಗಳನ್ನು ನೇರವಾಗಿ ಪಡೆಯುವಷ್ಟು ಸಮರ್ಥ ರಾಗಿಲ್ಲವೋ ಅಂಥವರಿಗೆ ಹರಿದು ಹೋಗಿ ಮುಟ್ಟುತ್ತವೆ. ಈ ರೀತಿ ನಾಲ್ಕು ದಿಕ್ಕುಗಳಲ್ಲೂ ಅಂತಹ ಶಕ್ತಿಗಳು ಹರಿದು ಹೋಗುವುದನ್ನು ನೋಡಬಹುದು.

ಆತನ ಮೇಲ್ಭಾಗದಲ್ಲಿ ಎದ್ದು ಮೇಲ್ಮುಖವಾಗಿ ಹರಿಯುತ್ತಿರುವ ಉತ್ಕಾಂಕ್ಷ ಕಿರಣಗಳು ಆತನಿಗೆ ಕಿರೀಟ ಪ್ರಾಯವಾಗಿ ಆತನ ಗೌರವವನ್ನು ಹೆಚ್ಚಿಸುವಂತೆ ಶೋಭಾಯಮಾನವಾಗಿವೆ. ಈ ಮನುಷ್ಯನಿಗೆ ಸಂಬಂಧಪಟ್ಟ ಕೆಳಗಿನ ಮಟ್ಟದ ದೇಹಾತ್ಮವು ಎಂತಹ ಪ್ರವೃತ್ತಿಯಲ್ಲಿ ತೊಡಗಿದ್ದಾಗ್ಯೂ ಕೂಡ ಮೇಲ್ಕಂಡ ಕಿರಣ ಗಳು ಮೇಲ್ಮುಖವಾಗಿ ಚಿಮ್ಮುತ್ತಲೇ ಇರುತ್ತವೆ. ಏಕೆಂದರೆ ನಿಜವಾದ ಜೀವಾತ್ಮನು-ಎಂದರೆ ಅಂತರಾತ್ಮನು—ತನ್ನ ಮಟ್ಟದಲ್ಲಿ ಎಚ್ಚೆತ್ತು ಸ್ವಪ್ರಜ್ಞೆಯಿಂದ ವ್ಯವಹರಿಸುವುದಕ್ಕೆ ಪ್ರಾರಂಭಿಸಿ ತನಗೂ-ಪರಮಾತ್ಮನಿಗೂ ಇರುವ ನಿಕಟ ಸಂಬಂಧ ವನ್ನು ಸಾಕ್ಷಾತ್ಕರಿಸಿಕೊಂಡ ಲಾಗಾಯ್ತು ತನ್ನ ಮೂಲಕೇಂದ್ರದ ಕಡೆಗೇನೇ ತನ್ನ ಗಮನವನ್ನೆಲ್ಲಾ ಕೇಂದ್ರೀಕರಿಸಿ ನೋಡುತ್ತಿರುತ್ತಾನೆ. ಅದೇ ಕಾಲದಲ್ಲಿ ಆತನ ದೇಹಾತ್ಮದ ಮೂಲಕ ನಡೆಯುತ್ತಿರುವ ಚಟುವಟಿಕೆಗಳು ಮೇಲ್ಮುಖವಾಗಿ ನೆಟ್ಟ ಆತನ ದೃಷ್ಟಿಯನ್ನು ಕದಲಿಸಲಾರವು. ಏಕೆಂದರೆ ಎಂತಹ ಘನವಾದ ದೇಹಾತ್ಮವೂ



XXII

XXII

ಕೂಡ ಅಂತರಾತ್ಮನ ಅಭಿವ್ಯಕ್ತವಾದ ಕೇವಲ ಪರಿಮಿತಿಯುಳ್ಳ ಒಂದು ಅಂಶ ಮಾತ್ರ, ಮೇಲ್ಮಟ್ಟದ ಮನುಷ್ಯನು ಎಚ್ಚೆತ್ತು ತನ್ನ ಸುತ್ತಲಿನ ಮೇಲ್ಮಟ್ಟದ ಲೋಕಪರಿಸ್ಥಿತಿಯನ್ನು ಅರಿತುಕೊಂಡನೆಂದರೆ ಆತನ ಚಟುವಟಿಕೆಗಳಿಗೆ ಲಭ್ಯವಾಗು ವಂತಹ ಅವಕಾಶಗಳು ಊಹಿಸಲಾರದಷ್ಟು ಹೇರಳವಾಗಿ ದೊರೆಯುತ್ತವೆ. ಅವುಗಳ ಘನತೆಯನ್ನು ಈ ಕೆಳಮಟ್ಟದ, ಪರಿಮಿತಿಯುಳ್ಳ ಸ್ಥೂಲ ಜೀವಿತದಲ್ಲಿ ಊಹಿಸಲೂ ಕೂಡ ಸಾಧ್ಯವಾಗಲಾರದು. ಇಂತಹ ಮೇಲ್ಮುಖವಾದ ಆಧ್ಯಾತ್ಮಿಕ ಉತ್ಕಾಂಕ್ಷೆಗಳೇ ಮೇಲಿನ ದೈವಿಕ ಶಕ್ತಿಗೆ ನಾಲೆಯಾಗಿರುವುದು. ಅಲ್ಲದೆ ಈ ಉತ್ಕಾಂಕ್ಷೆ ಗಳು ಸರ್ವತೋಮುಖವಾಗಿಯೂ ಸದೃಢವಾಗಿಯೂ ಬೆಳೆದಂತೆಲ್ಲ ಹೆಚ್ಚು ಹೆಚ್ಚಾಗ ದೈವಿಕವಾದ ಅನುಗ್ರಹ ಶಕ್ತಿಗಳು ಕೆಳಕ್ಕೆ ಇಳಿದು ಸಹಾಯವಾಗುತ್ತದೆ,

ಆತನ ಮನೋದೇಹ

ಈ ರೀತಿ ಬೆಳೆದ ಮನುಷ್ಯನ ದೇಹಗಳ ವಿಮರ್ಶೆಗೆ ತೊಡಗಿದಾಗ ಆತನ ದೇಹಗಳೆಲ್ಲವೂ ತುಂಬ ನಾಜೋಕಾಗಿಕಟ್ಟಿದ ದಿವ್ಯತೆಯಿಂದ ಶೋಭಿಸುತ್ತಿರುವುವಲ್ಲದೆ ಅವುಗಳೆಲ್ಲವೂ ಪರಸ್ಪರ ಹೋಲುವಂತಹ ಲಕ್ಷಣಗಳಿಂದ ಕೂಡಿವೆ, ಅರೂಪ ಲೋಕದ ಮೇಲ್ಮಟ್ಟದ ಪ್ರಕೃತಿಗೂ ರೂಪಲೋಕದ ಕೆಳಮಟ್ಟದ ಪ್ರಕೃತಿಗೂ ಪರಸ್ಪರ ಇರುವ ತಾರತಮ್ಯವನ್ನು ಬದಿಗೊತ್ತಿ ನೋಡುವ ಪಕ್ಷದಲ್ಲಿ 22 ನೆಯ ಚಿತ್ರದಲ್ಲಿ ಕಾಣುವ ಆತನ ರೂಪ ದೇಹವು 21ನೆಯ ಚಿತ್ರದ ಅರೂಪ ದೇಹದ ಒಳಗಿನ ಮಟ್ಟದ ಸಕಲಂತೆ ಇರುತ್ತದೆ ಮತ್ತು ಆತನ 23ನೆಯ ಚಿತ್ರದ ಕಾಮ ದೇಹವು 22ನೆಯ ಚಿತ್ರದ ಮನೋ ದೇಹವನ್ನು ತುಂಬ ಹೋಲುತ್ತದೆ. ಆದರೆ ಈ ಮೂರು ಹಂತಗಳ ಪ್ರಕೃತಿಕಣಗಳು ಸ್ಪಂದಿಸುವ ವೇಗಗತಿಗಳಲ್ಲಿ ತುಂಬ ವ್ಯತ್ಯಾಸವಿದೆಯೆಂಬಂಶವನ್ನು ಮರೆಯಕೂಡದು.

ಮತ್ತೊಂದು ವಿಧವಾದ ಹೋಲಿಕೆಯೆಂದರೆ 6ನೆಯ ಚಿತ್ರದ ಕಾಡು ಮನು ಷ್ಯನ ಮನೋ ದೇಹವು 9 ನೆಯ ಚಿತ್ರದ ಸಾಮಾನ್ಯ ಮನುಷ್ಯನ ಮನೋ ದೇಹದ ಅಂತಸ್ತನ್ನು ಹಾದು 22ನೆಯ ಚಿತ್ರದ ನಿಸ್ವಾರ್ಥ ಮನುಷ್ಯನ ಹಂತಕ್ಕೆ ಹೇಗೆ ಅನುಸರಣದ ಮೂಲಕ ಪ್ರಗತಿಯನ್ನು ಸಾಧಿಸಿದೆಯೆಂಬುದೇ ಆಗಿದೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ಹಿಂದಿನ ಹಂತಗಳಿಗೆ ಸಂಬಂಧ ಪಟ್ಟಾಗ ಗರ್ವ ಕೋಪ ಮತ್ತು ಸ್ವಾರ್ಥತೆ ಇವು ಸಂಪೂರ್ಣವಾಗಿ ಈಗ ಮಾಯವಾಗಿವೆ ಮತ್ತು ಉಳಿದ ಬಣ್ಣಗಳು ವಿಸ್ತರಿಸಿ ಅಂಡಾಕೃತಿಯನ್ನೆಲ್ಲಾ ವ್ಯಾಪಿಸಿರುವುದೇ ಅಲ್ಲದೇ ನಾಜೋ

ಕಾಗಿ ಉತ್ತಮಗೊಂಡು ಸದಭಿಃಪ್ರಾಯವನ್ನುಂಟು ಮಾಡುವಂತಿವೆ, ಅವುಗಳಲ್ಲಿ ಪ್ರತಿಯೊಂದೂ ಸುಧಾರಣೆಗೊಂಡು ಸ್ವಾರ್ಥತೆಯು ಮಾಯವಾಗಿರುವುದನ್ನು ತೋರಿಸುತ್ತದೆ, ಇದರ ಜೊತೆಗೆ ಸ್ವರ್ಣವರ್ಣದ ನಕ್ಷತ್ರಾಂಕಿತವಾದ ಪರಿಶುದ್ಧ ಊದಾ ಬಣ್ಣವು ಉತ್ತಮ ದರ್ಜೆಯ ಗುಣಗಳನ್ನು ಹೊಸದಾಗಿ ಪಡೆದಿರುವ ಸಂಕೇತವಾಗಿರುತ್ತದೆ. ಕಾರಣ ದೇಹದ ಮಟ್ಟದಲ್ಲಿ ಹೊರಸೂಸಿ ಚಿಮ್ಮುತ್ತಿರುವ ಮೇಲ್ಮಟ್ಟದ ಅನುಗ್ರಹಶಕ್ತಿಯು ಮನೋದೇಹದ ಹಂತದಲ್ಲೂ ಕೂಡ ಸ್ವಲ್ಪ ಮಟ್ಟಿಗೆ ಪ್ರಸರಿಸುತ್ತಿದೆ. ಒಟ್ಟಿನಲ್ಲಿ ಅಭಿಃಪ್ರಾಯ ಕೊಡುವುದಾದರೆ ಇದು ಈಗಾಗಲೇ ಚೆನ್ನಾಗಿ ಬೆಳೆದು ಉತ್ತಮಗೊಂಡ ಮನೋದೇಹವು, ಅಲ್ಲದೆ ಮುಂದಿನ ಯೋಗ ಮಾರ್ಗದ ಪ್ರವೇಶದ ಕಾಲವು ಬಂದಾಗ ಇನ್ನೂ ತೀವ್ರವಾಗಿ ಪ್ರಗತಿಯನ್ನು ಸಾಧಿಸುವಂತಹ ಸಂಸ್ಕಾರದ ಚಿಹ್ನೆಗಳು ಇದರಲ್ಲಿ ಕಂಡುಬರುತ್ತವೆ.

ಆತನ ಕಾಮದೇಹ

23ನೆಯ ಚಿತ್ರದಲ್ಲಿನ ಕಾಮದೇಹವು ಹಿಂದಿನ ಚಿತ್ರದ ಮನೋದೇಹವನ್ನು ತುಂಬ ಹೋಲುವುದು, ಎದ್ದು ಕಾಣುತ್ತದೆ. ಮೇಲ್ಮಟ್ಟದ ಆತನ ಮನೋದೇಹವೇ ಕೆಳಗಿನ ಮಟ್ಟದ ಕಾಮಪ್ರಕೃತಿಯಲ್ಲಿ ಪ್ರತಿ ಬಿಂಬಿತವಾದಂತೆ ತೋರುತ್ತದೆ. ಇದರಿಂದ ನಾವು ತಿಳಿದುಕೊಳ್ಳಬೇಕಾದ ಅಂಶವೇನೆಂದರೆ, ಈತನು ತನ್ನ ರಾಗಭಾವನೆಗಳನ್ನು ಪೂರ್ತ ತನ್ನ ಮನಸ್ಸಿನ ಸ್ವಾಧೀನಕ್ಕೆ ತಂದಿರುತ್ತಾನೆಂಬುದೇ ಆಗಿದೆ. ಥಟ್ಟನೆ ಸಿಡಿದೇಳುವಂಥ ರಾಗದ್ವೇಷಗಳಿಗೆ ಒಳಗಾಗಿ ತನ್ನ ಸಮತ್ವವನ್ನು ಕಳೆದುಕೊಳ್ಳುವುದಿಲ್ಲವೆಂಬುದು ವ್ಯಕ್ತವಾಗುತ್ತದೆ. ಆದರೆ ಬಹು ಅಪರೂಪವಾಗಿ ಸಿಡುಕುತನ ಮತ್ತು ನಿಂದ್ಯವಾದಂತಹ ವಿಧವಿಧವಾದ ರಾಗ ಭಾವನೆಗಳಿಗೆ ಒಳಗಾಗುವುದರಲ್ಲಿ ಸಂಶಯವಿಲ್ಲ. ಆದರೆ ಅಂತಹ ನೀಚ ಪ್ರವೃತ್ತಿಗಳನ್ನು ಕೂಡಲೇ ತನ್ನ ಹತೋಟಿಗೆ ತೆಗೆದುಕೊಳ್ಳುವಷ್ಟು ಅರಿವನ್ನು ಬೆಳೆಸಿಕೊಂಡಿರುತ್ತಾನೆ. ಆದುದರಿಂದ ಮೇಲ್ಕಂಡ ನೀಚ ಪ್ರವೃತ್ತಿಗಳು ತಾತ್ಕಾಲಿಕವಾಗಿ ಆತನ ಕಾಮದೇಹವನ್ನು ಬದಲಾಯಿಸುವುದಾದರೂ ಅದರಲ್ಲಿ ಖಚಿತವಾದ ಮಾರ್ಪಾಡನ್ನುಂಟುಮಾಡಲಾರವು, ಏಕೆಂದರೆ ಅವುಗಳಿಗಿಂತಲೂ ಪ್ರಬಲವಾದ ರೀತಿಯಲ್ಲಿ ಸ್ಪಂದಿಸುತ್ತಿರುವ ಆತನ ಉನ್ನತ ಮಟ್ಟದ ಸುಗುಣಗಳನ್ನು ಆತನು ಈಗಾಗಲೇ ತನ್ನ ಸ್ವಭಾವದಲ್ಲಿ ಖಚಿತವಾಗಿ ಬೆಳೆಸಿಕೊಂಡಿರುತ್ತಾನೆ.

ಇದೇ ರೀತಿಯಲ್ಲಿ ಇನ್ನೂ ಉನ್ನತ ಮಟ್ಟದ ಬೆಳವಣಿಗೆ ಹಂತವನ್ನು ತಲುಪಿದಾಗ ಆತನ ಮನೋದೇಹವೂ ಕೂಡ ಆತನ ಕಾರಣ ದೇಹದ ಪ್ರತಿಬಿಂಬದಂತೆ ಆಗುತ್ತದೆ. ಏಕೆಂದರೆ ಸಾಧಕನು ತನ್ನ ಉನ್ನತಾತ್ಮದಿಂದ ಬರುವ ಸ್ಫೂರಣೆಗಳಿಗೆ



XXIII

XXIII

ಮಾತ್ರ ಓಗೊಟ್ಟು ಆದರಂತೆ ಮಾತ್ರ ತನ್ನ ಮನಸ್ಸು ಯೋಚಿಸುವಂತೆ ಮಾಡಿಕೊಳ್ಳುತ್ತಾನೆ.

ಈ ಚಿತ್ರದಲ್ಲಿ ಮನುಷ್ಯನ ವಿಮರ್ಶಾತ್ಮಕ ಬುದ್ಧಿಯನ್ನು ಸೂಚಿಸುವ ಸ್ವರ್ಣ ವರ್ಣದ ತೇಜಸ್ಸು ಒಂದು ಸ್ವಾರಸ್ಯವಾದ ಸಂಗತಿಯನ್ನು ನಮಗೆ ಬೋಧಿಸುತ್ತದೆ, ಈ ತೇಜಸ್ಸು ಯಾವಾಗಲೂ ತಲೆಯ ಮೇಲ್ಭಾಗದಲ್ಲಿ ಕಾಣಿಸಿಕೊಳ್ಳುತ್ತದೆ. ಅಲ್ಲದೇ ಕಾಮದೇಹದ ಬಣ್ಣಗಳಲ್ಲೆಲ್ಲ ಇದು ಎದ್ದುಕಾಣುವಂತಹ ಆಕರ್ಷಣೆಯನ್ನು ಹೊಂದಿದೆ-ಆದುದರಿಂದಲೇ ಒಬ್ಬ ಸಾಧುವಿನ ಚಿತ್ರವನ್ನು ಬರೆಯುವಾಗ ಈ ಪ್ರಭಾಮಂಡಲವು ಆತನ ತಲೆಯ ಸುತ್ತಲೂ ಪ್ರಸರಿಸಿರುವಂತೆ ಚಿತ್ರಿಸುವ ಸಂಪ್ರದಾಯವು ಜಾರಿಗೆ ಬಂದಿದೆ. ದಿವ್ಯದೃಷ್ಟಿಯು ಆಗತಾನೇ ಉನ್ಮೀಲನವಾಗಿರುವಂತಹನಿಗೆ ಕಾಮದೇಹದ ಈ ಸ್ವರ್ಣವರ್ಣವೇ ಮೊದಲು ಕಾಣುವುದು. ಅಲ್ಲದೇ ಸ್ಥೂಲ ದೃಷ್ಟಿಗೂ ಕೂಡ ಇದರ .ಪರಿಣಾಮವು ಗೋಚರವಾಗುವುದುಂಟು-ಉದಾಹರಣೆಗಾಗಿ ಒಬ್ಬ ಬೆಳೆದ ಮನುಷ್ಯನು ಭಾಷಣ ಮಾಡುತ್ತಿರುವಾಗ ಆತನ ಭೌದ್ಧಿಕ ಶಕ್ತಿಯು ಚಟುವಟಿಕೆಯಿಂದ ಕೆಲಸ ಮಾಡುವುದರಿಂದ ಆ ಸಂಬಂಧವಾದ ವರ್ಚಸ್ಸು ಆತನ ಮುಖದಲ್ಲೂ ಕೂಡ ಕಾಣಿಸಿಕೊಳ್ಳುವುದುಂಟು. ಇದಕ್ಕೆ ಕಾರಣ ಕಾಮದೇಹದಲ್ಲಿನ ಆ ಕಾಲದ ಬಿರುಸಾದ ಸ್ಪಂದಗಳು ಸ್ಥೂಲಮಟ್ಟದಲ್ಲೂ ಕೂಡ ತಮಗೆ ಅನುರೂಪವಾದ ಸ್ಪಂದಗಳನ್ನು ಎಬ್ಬಿಸುತ್ತವೆ. ಕ್ರಿಸ್ತದೇವನ ಪ್ರಭಾ ಮಂಡಲದಲ್ಲಿ ಸಣ್ಣ ಶಿಲುಬೆ ರೂಪವನ್ನು ಗುರ್ತಿಸಿರುವುದನ್ನು ಕೆಲವರು ಜ್ಞಾಪಿಸಿಕೊಳ್ಳಬಹುದು. ಇದೂ ಕೂಡ ಸತ್ಯದ ಆಧಾರದ ಮೇಲೆ-ಏರ್ಪಟ್ಟ ಚಿಹ್ನೆಯಾಗಿರುತ್ತದೆ-ಏಕೆಂದರೆ ಬಹು ಅಸಾಧಾರಣವಾದ ಬೆಳವಣಿಗೆಯುಳ್ಳ ಕೆಲವರು ಸಾಧು-ಸಂತರ ಪ್ರಭಾಮಂಡಲಗಳಲ್ಲಿ ವಿಧವಿಧವಾದ ರೇಖಾ ಚಿಹ್ನೆಗಳು ಅಭಿವ್ಯಕ್ತವಾಗಿರುವುದನ್ನು ಗುಪ್ತವಿಧ್ಯಾಪರಿಶೋಧಕರು ಕಂಡು ಹಿಡಿದಿದ್ದಾರೆ. ಈ ಚಿಹ್ನೆಗಳು (ರೇಖಾ ಗುರುತುಗಳು) ತುಂಬ ಉನ್ನತ ಮಟ್ಟದ ವಿಚಾರ ತರಂಗಗಳನ್ನು ಪ್ರತಿನಿಧಿಸುತ್ತವೆಯೆಂದು ತಿಳಿದುಬರುತ್ತದೆ. ‹ಸಂಕಲ್ಪ ರೂಪಗಳು' (Thought forms) ಎಂಬ ಗ್ರಂಥದಲ್ಲಿ ಇವುಗಳಲ್ಲಿ ಕೆಲವು ಉದಾಹರಿಸಲ್ಪಟ್ಟಿವೆ.

ಈ ದೇಹಗಳನ್ನು ಪರಸ್ಪರ ಹೋಲಿಸಿನೋಡುವುದರಿಂದ ಎರಡು ಮುಖ್ಯವಾದ ಸಂಗತಿಗಳು ಹೊರಬೀಳುತ್ತವೆ. ಒಂದನೆಯದು ಒಬ್ಬ ಮನುಷ್ಯನ ದೇಹಗಳಿಗೆ ಪರಸ್ಪರ ಇರುವ ಸಂಬಂಧ-ಎರಡನೆಯದು ಸಂಸರಣ ಪಥದಲ್ಲಿ ಮನುಷ್ಯನು ಸಾಧಿಸಿದ ಪ್ರಗತಿಯು ಆತನ ಕಾಮದೇಹದಲ್ಲಿ ಹೇಗೆ ಅಭಿವ್ಯಕ್ತವಾಗುತ್ತದೆಂಬುದು-ಏಕೆಂದರೆ ಈ ಕಾಮದೇಹಕ್ಕೆ ಸಂಬಂಧಪಟ್ಟ ದಿವ್ಯದೃಷ್ಟಿಯನ್ನು ಬೆಳೆಸಿಕೊಳ್ಳುವುದು ಮೊದಲನೆಯಹಂತ - ಆದುದರಿಂದ ಈ ಗ್ರಂಥದಲ್ಲಿನ 7-10 ಮತ್ತು 23ನೆಯ

ಅಧ್ಯಾಯ ೨೦

ಜೀವನ್ಮುಕ್ತಳ ಕಾರಣ ದೇಹ

ಯಾರಿಗೆ ಸ್ಥೂಲ ದೃಷ್ಟಿಗಿಂತ ಉನ್ನತ ಮಟ್ಟದ ದೃಷ್ಟಿಯಿಲ್ಲವೋ ಅಂಥ ವರಿಗೆ ಈ ಪುಸ್ತಕದಲ್ಲಿ ಕೊಟ್ಟಿರುವ ಚಿತ್ರಗಳು ಅವುಗಳಿಗೆ ಸಂಬಂಧಪಟ್ಟ ದೇಹಗಳ ಸ್ವಭಾವಗಳನ್ನು ಸ್ವಲ್ಪಮಟ್ಟಿಗಾದರೂ ತಿಳಿದುಕೊಳ್ಳುವುದಕ್ಕೆ ಸಹಾಯಕರವಾಗು ತ್ತವೆ ಎಂಬ ಉದ್ದೇಶದಿಂದಲೇ ಈ ಗ್ರಂಥವನ್ನು ಪ್ರಕಟಿಸಲಾಗಿದೆ. ಯಾರಿಗೆ ದಿವ್ಯ ದೃಷ್ಟಿಯಿದೆಯೋ ಅಂಥವರು ಚಿತ್ರಗಾರನ ಕೌಶಲ್ಯತೆ ಮತ್ತು ಶ್ರಮವನ್ನು ಮೆಚ್ಚುತ್ತಾ, ಕೆಳಮಟ್ಟದ ಸೂಕ್ಷ್ಮಲೋಕಗಳೂ ಸಹ ಚಿತ್ರಲೇಖಗಳ ಮೂಲಕ ಉದಾಹರಿಸಿ ಅವುಗಳನ್ನು ಸಮರ್ಪಕವಾಗಿ ತಿಳಿಸುವುದಕ್ಕೆ ಸಾಧ್ಯವಿಲ್ಲವೆಂಬ ಅಂಶ ವನ್ನು ಒಪ್ಪಿಕೊಳ್ಳುತ್ತಾರೆ. ಹೀಗಿರುವಾಗ ಮಾನವಾತೀತವಾದ ಜೀವನ್ಮುಕ್ತನ ಮೇಲ್ಮಟ್ಟದ ದೇಹಗಳನ್ನು ಕಾಗದದ ಮೇಲೆ ಪ್ರತಿನಿಧಿಸುವುದು ತೀರ ಅಸಾಧ್ಯವಾದ ಸಾಹಸವೆಂದು ನಿಸ್ಸಂದೇಹವಾಗಿ ಹೇಳಬಹುದು.

ಆತನ ಕಾರಣ ದೇಹದ ಗಾತ್ರವು ಅದ್ಭುತವಾದ ರೀತಿಯಲ್ಲಿ ವಿಸ್ತರಿಸಿರುವು ದಲ್ಲದೆ, ಅದರ ದೇದೀಪ್ಯಮಾನವಾದ ಸೊಬಗು ಮತ್ತು ಸೌಂದರ್ಯಗಳು ಊಹಿಸು ವುದಕ್ಕೂ ಸಾಧ್ಯವಿಲ್ಲದಷ್ಟು ದಿವ್ಯವಾಗಿರುತ್ತವೆ. ಅವುಗಳ ರೂಪ ಮತ್ತು ಬಣ್ಣ ಗಳ ತೇಜಸ್ಸನ್ನು ಮಾನವರ ಭಾಷೆಯಲ್ಲಿ ವರ್ಣಿಸಲು ಸಾಧ್ಯವಿಲ್ಲ. ಅಂತಹ ಅತ್ಯಂತ ಉನ್ನತ ಮಟ್ಟದ ಕಾರಣದೇಹದ ವಿಷಯವು ಆ ಬಗ್ಗೆ ಒಂದು ಪುಸ್ತಕವನ್ನೇ ಬರೆಯುವಷ್ಟು ಜಟಿಲವಾಗಿರುತ್ತದೆ.

ಇಷ್ಟರಮಟ್ಟಿಗೆ ಹೇಳಬಹುದು ; ಆತನ ಕಾರಣದೇಹವು ಸಾಧಾರಣ ಮನುಷ್ಯನದಕ್ಕಿಂತಲೂ ಬಹುದೂರ ವಿಸ್ತರಿಸಿರುವುದಲ್ಲದೇ ಅದರ ಬಣ್ಣಗಳೂ ಸಹ ಬೇರೆ ವಿಧವಾಗಿ ಜೋಡಿಸಲ್ಪಟ್ಟಿರುತ್ತವೆ. ಅದರಲ್ಲಿ ನಮ್ಮ ದೇಹದಲ್ಲಿರುವಂತೆ ತಿರು ಗುತ್ತಿರುವ ಸುಳಿಗಳಿರುವುದಿಲ್ಲ. ಒಂದು ಕೇಂದ್ರದ ಸುತ್ತಲೂ ಅನೇಕ ವೃತ್ತಗಳು ಒಂದಕ್ಕಿಂತ ಒಂದು ದೂರ ದೂರವಾಗಿ ವಿಸ್ತರಿಸಿರುವಂತಹ ವ್ಯವಸ್ಥೆಯಿರುತ್ತದೆ. ಕೇಂದ್ರದಿಂದ ಹೊರಹೊಮ್ಮಿಸುತ್ತಲೂ ಚಿಮ್ಮುತ್ತಿರುವ ಶಕ್ತಿ ವಿಶೇಷಗಳು ಪ್ರಕಾಶ ಮಾನವಾದ ತೇಜಸ್ಸಿನಿಂದ ಸರ್ವತೋಮುಖವಾಗಿ ಹರಿಯುತ್ತಿರುತ್ತವೆ.



ಜೀವನ್ಮುಕ್ತನು ಸೇರಿರುವ ಶಾಖೆಯ ಜ್ಞಾಯಮಾನಕ್ಕನುಗುಣವಾಗಿ ಬಣ್ಣಗಳ ಜೋಡಣೆಯ ವ್ಯವಸ್ಥೆಯು ಭಿನ್ನವಾಗುತ್ತದೆ. ಆದುದರಿಂದ ಈ ವೈಭವಯುಕ್ತವಾದ ತೇಜಸ್ಸುಗಳ ಮಾದರಿಗಳಲ್ಲಿ ಎದ್ದು ಕಾಣುವ ಭಿನ್ನತೆಗಳಿರುತ್ತವೆ. ಇವುಗಳನ್ನು ಚಿತ್ರಗಳ ಮೂಲಕ ಪ್ರತಿನಿಧಿಸುವುದು ತುಂಬ ಕಷ್ಟಸಾಧ್ಯವಾದ ಕೆಲಸವು. ಆದಾಗ್ಯೂ ಸಿಂಹಳ ದ್ವೀಪದ ಒಂದು ದೇವಸ್ಥಾನದ ಗೋಡೆಗಳ ಮೇಲೆ ಭಗವಾನ್ ಬುದ್ಧರ ತೇಜಸ್ಸನ್ನು (Aura) ಪ್ರತಿನಿಧಿಸಿದ್ದಾರೆ. ಆದರೆ ಬಣ್ಣಗಳ ಜೋಡಣೆ ಮತ್ತು ಬಣ್ಣಗಳ ಸ್ವರೂಪ ತುಂಬ ವಿಪರೀತವಾಗಿ ತಪ್ಪಾಗಿದ್ದಾಗ್ಯೂ -ಆಗತಾನೆ ಜೀವನ್ಮುಕ್ತಿ ಪದವಿಯನ್ನು ತಡೆದ ಮಹಾತ್ಮನ ತೇಜಸ್ಸಿಗೂ ಕೂಡ ಕುಂದುಂಟು ಮಾಡುವಂತೆ ಇದ್ದಾಗ್ಯೂ ಎಂದರೆ–ಇದು ಬಹು ಸ್ಥೂಲವಾಗಿ ಆ ತೇಜಸ್ಸನ್ನು ಪ್ರತಿನಿಧಿಸುವುದಾದರೂ ಭಗವಾನ್ ಬುದ್ಧರ ಶಾಖೆಗೆ ಸೇರಿದ ಜೀವಾನ್ಮುಕ್ತ ಮಹಾತ್ಮರ ತೇಜಸ್ಸಿನ (aura) ಮಾದರಿಯನ್ನು ಅದು ಕರಾರುವಾಕ್ಕಾಗಿ ಪ್ರತಿನಿಧಿಸುವುದು ಆಶ್ಚರ್ಯಕರವಾದ ಸಂಪ್ರದಾಯವಾಗಿದೆ.ಹೀಗೆಯೇ ಆರೋಗ್ಯಕ್ಕೆ ಸಂಬಂಧಪಟ್ಟ ತೇಜಸ್ಸನ್ನೂ ಸಹ ಕೆಲವು ಹಿಂದಿನ ಚಿತ್ರಗಳಲ್ಲಿ ಪ್ರತಿನಿಧಿಸಿರುವುದನ್ನು ಕಾಣಬಹುದು.

ಜೀವನ್ಮುಕ್ತ ಮಹಾತ್ಮರೊಬ್ಬರ ತೇಜಸ್ಸನ್ನು ಕರಾರುವಾಕ್ಕಾಗಿ ಕಾಗದದ ಮೇಲೆ ಪ್ರತಿನಿಧಿಸುವುದು ತುಂಬ ಅಸಾಧ್ಯ, ಆದುದರಿಂದ ಅಂತಹ ಮಹಾತ್ಮರ ನಾಲ್ಕನೆಯ ದೀಕ್ಷೆ ಪಡೆದಿರುವ ಒಬ್ಬ ಶಿಷ್ಯನ ತೇಜಸ್ಸನ್ನು ಚಿತ್ರದ ಮೂಲಕ ಪ್ರತಿನಿಧಿಸುವ ದ್ವಾರ, ಅದರ ಆಧಾರದ ಮೆಲೆ ಜೀವನ್ಮುಕ್ತ ಮಹಾತ್ಮನ ತೇಜಸ್ಸಿನ ಪ್ರಕಾಶ ಮತ್ತು ವಿಸ್ತೀರ್ಣ ಇವುಗಳನ್ನು ಸ್ವಲ್ಪ ಮಟ್ಟಿಗೆ ಊಹಿಸಿಕೊಳ್ಳಲು ಸಾಧ್ಯವಾಗುತ್ತದೆ. ಇಂತಹ ಪ್ರಯತ್ನವನ್ನು 24ನೆಯ ಚಿತ್ರದ ಮೂಲಕ ಮಾಡಿರುತ್ತೇವೆ, ಆದರೆ ನಾವು ಹೆಚ್ಚು ಶ್ರಮಪಟ್ಟು ಊಹಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಕಾರಣದೇಹಕ್ಕೆ ಸಂಬಂಧ ಪಟ್ಟಂತೆ ಎರಡು ಮುಖ್ಯಾಂಶಗಳನ್ನು ಗಮನಿಸಬೇಕಾಗುತ್ತದೆ. ಒಂದನೆಯದು ಇದುವರೆಗೆ ಉದಾಹರಿಸಿರುವ ತೇಜಸ್ಸುಗಳಲ್ಲಿರುವುದಕ್ಕಿಂತ ಬಣ್ಣಗಳು ತುಂಬ ನಾಜೋಕಾಗಿಯೂ ದಿವ್ಯವಾಗಿಯೂ ಇರುತ್ತವೆ. ಅಲ್ಲದೇ ಅವು ಹೆಚ್ಚು ಸಮಗ್ರವೂ ಮತ್ತು ಪ್ರಕಾಶಮಾನವೂ ಆಗಿರುತ್ತವೆ. ಬಣ್ಣಗಳಿಂದ ಕೂಡಿದ ಜ್ವಾಲೆಗಳ ಮೂಲಕ ಉದಾಹರಿಸಲು ಸಾಧ್ಯವಾಗುವುದಾದರೆ ಸ್ವಲ್ಪ ಮಟ್ಟಿಗೆ ಮೂಲವಸ್ತುಗಳನ್ನು ಕರಾರುವಾಕ್ಕಾಗಿ ಪ್ರತಿನಿಧಿಸಬಹುದಾಗಿತ್ತು. ಕಾಗದಗಳ ಮೇಲೆ ಚಿತ್ರಿಸುವ ಸಂದರ್ಭದಲ್ಲಿ ಪರಸ್ಪರ ವಿರೋಧವಾದ ಎರಡು ತೊಡಕುಗಳಲ್ಲಿ ಸಿಕ್ಕಿಕೊಳ್ಳುತ್ತೇವೆ. 1 ಬಣ್ಣದ ಸಾಂದ್ರತೆ ಮತ್ತು ಸಂಪತ್ತನ್ನು ಪ್ರತಿನಿಧಿಸಲು ಪ್ರಯತ್ನಪಟ್ಟರೆ–ಅದು ಮಂಕಾಗಿ ಕಾಣುತ್ತದೆ, ಅದರಲ್ಲಿನ ಪಾರದರ್ಶಕತೆ ಮತ್ತು ಹೊಳಪನ್ನು ಪ್ರತಿನಿಧಿಸಲು ಪ್ರಯತ್ನ ಪಟ್ಟಾಗ ನಾವು ಉಪಯೋಗ ಮಾಡುವ ಬಣ್ಣದ

ತೆಳುವು ಆ ಪ್ರಕಾಶದ ಸಂಪತ್ತನ್ನು ಮಂಕು ಮಾಡುತ್ತದೆ–ಹೀಗೆ ಉಭಯ ಸಂಕಟಕ್ಕೆ ಸಿಕ್ಕಿಕೊಳ್ಳುತ್ತೇವೆ.

ಹೀಗಿದ್ದಾಗ್ಯೂ ಈಗಾಗಲೇ ಬೇರೆಯವರ ಕಾರಣ ದೇಹಗಳನ್ನು ಎಂದರೆ ಅವುಗಳ ಪಾರದರ್ಶಕತೆಯನ್ನು ಪ್ರತಿನಿಧಿಸಲು ಪ್ರಯತ್ನ ಪಟ್ಟಿರುವುದರಿಂದ ಈಗ ಅರ್ಹಂತನ ಕಾರಣ ದೇಹಕ್ಕೆ ಸಂಬಂಧಪಟ್ಟ ಬಣ್ಣಗಳ ಸಾಂದ್ರತೆ, ಅವುಗಳ ಜೋಡಣೆ ಮತ್ತು ತೇಜಸ್ಸಿನ ವಿಸ್ತರಣೆಯಲ್ಲಿನ ತಾರತಮ್ಯವನ್ನು ಪ್ರತಿನಿಧಿಸುವುದಕ್ಕೆ ಪ್ರಯತ್ನ ಪಡಲಾಗಿದೆ. ಅರ್ಹಂತನ ತೇಜಸ್ಸಿನ ವಿಸ್ತರಣೆಯನ್ನು ಸರಿಯಾಗಿ ಈ ಪುಸ್ತಕದಲ್ಲಿ ಅಡಕವಾಗತಕ್ಕಂಥ ಚಿತ್ರದಲ್ಲಿ ಪ್ರತಿನಿಧಿಸಬೇಕಾದರೆ ಆ ವ್ಯಕ್ತಿಯ ಸ್ಥೂಲದೇಹದ ಪ್ರಮಾಣವನ್ನು ತುಂಬ ತಗ್ಗಿಸಿ ಚಿಕ್ಕದು ಮಾಡಬೇಕಾಗುತ್ತದೆ. ಇಲ್ಲದೆ ಇದ್ದರೆ ಆ ತೇಜಸ್ಸಿನ ವಿಸ್ತರಣೆಗೆ ಕೆಲವು ಗಜಗಳಷ್ಟು ವಿಸ್ತೀರ್ಣವುಳ್ಳ ದೊಡ್ಡ ಕಾಗದ ಬೇಕಾಗುತ್ತದೆ. ಆದುದರಿಂದ ಮೊದಲನೆಯ ವಿಧಾನವನ್ನು ಇಲ್ಲಿ ಕೈಗೊಂಡಿದೆ, ಆದಾಗ್ಯೂ ಮೂಲವಸ್ತುವಿನ ಸ್ವಸ್ವರೂಪವನ್ನು ಕರಾರುವಾಕ್ಕಾಗಿ ಊಹಿಸಿಕೊಳ್ಳುವುದು ತುಂಬ ಕಷ್ಟವಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ.

ಈ ಚಿತ್ರವನ್ನು ವಿಮರ್ಶೆ ಮಾಡುವಾಗ–ಅತ್ಯಂತ ಉನ್ನತ ಮಟ್ಟದ ವಿಮರ್ಶಾತ್ಮಕ ಬುದ್ಧಿ–ಪ್ರೇಮ-ಭಕ್ತಿ–ಸಹಾನುಭೂತಿ–ಮತ್ತು ಆಧ್ಯಾತ್ಮಿಕವಾದ ಐಕ್ಯ ಭಾವನೆ-ಇವುಗಳ ಅದ್ಭುತವಾದ ಬೆಳವಣಿಗೆಯು ಎದ್ದು ಕಾಣುತ್ತದೆ. ಮೇಲಿನ ಮಟ್ಟದ ದೈವಾನುಗ್ರಹಶಕ್ತಿಯು ಈ ವ್ಯಕ್ತಿಯ ಮೂಲಕ ಸರ್ವತೋಮುಖವಾಗಿ ಪ್ರವಹಿಸುತ್ತಿರುವುದನ್ನು ನೋಡಿದರೆ ಈತನು ಆ ದಿವ್ಯ ಶಕ್ತಿಗೆ ಸಂಪೂರ್ಣನಾಲೆಯಾಗಿರುವುದು ಕಂಡು ಬರುತ್ತದೆ. ಈ ತೇಜಸ್ಸಿನ ಬಿಳಿ ಕಿರಣಗಳ ಮೂಲಕ ಮಾತ್ರವಲ್ಲದೇ ಎಲ್ಲ ವಿಧವಾದ ಬಣ್ಣದ ಕಿರಣಗಳೂ ಕೂಡ ಈತನ ಮೂಲಕ ಹೊರಚಿಮ್ಮುತ್ತಿವೆ. ಇದರಿಂದ ಆತನ ಸಮೀಪಕ್ಕೆ ಯಾರ್ಯಾರು ಬರುತ್ತಾರೆಯೋ ಅಂತಹರಿಗೆಲ್ಲ ಎಲ್ಲ ವಿಧವಾದ ಸದ್ಗುಣಗಳೂ ವೀರ್ಯವತ್ತಾಗಿ ಬೆಳೆಯುವಂತೆ ಪ್ರಚೋದಿತವಾಗುತ್ತವೆ. ಆತನನ್ನು ಸಮೀಪಿಸುವುದಕ್ಕೆ ಮುಂಚೆ ಇದ್ದ ಪರಿಸ್ಥಿತಿಗಿಂತ–ಸಮೀಪಿಸಿದ ಮೇಲೆ ಒಂದು ದರ್ಜೆ ಉತ್ತಮಗೊಳ್ಳುವುದು ಖಚಿತವಾದ ಸಂಗತಿ. ಅಂತಹ ಅರ್ಹಂತನು ಸೂರ್ಯಬಿಂಬದಂತೆ ಎಲ್ಲರಮೇಲೂ ಒಂದೇ ಸಮನೆ ಪ್ರಕಾಶಿಸಿ ಪ್ರಯೋಜನವನ್ನುಂಟು ಮಾಡುತ್ತಾನೆ.-ಏಕೆಂದರೆ ಭಗವಂತನ ಸ್ವಭಾವವು ಆತನ ಮೂಲಕ ಅಭಿವ್ಯಕ್ತವಾಗಿದೆ.

ಈ ಕಾರಣ ದೇಪಕ್ಕೆ ಸಂಬಂಧಪಟ್ಟ ಮನೋದೇಹ ಕಾಮದೇಹಗಳು ತಮ್ಮದೇ ಆದ ಸ್ವಂತ ಲಕ್ಷಣಗಳನ್ನು ಹೊಂದಿಲ್ಲ-ಅವು ತಮ್ಮ-ತಮ್ಮ ಕೆಳಗಿನ ಮಟ್ಟಗಳಲ್ಲಿ

ಕಾರಣ ದೇಹದ ಪ್ರತಿಬಿಂಬಗಳಂತೆ ಇರುತ್ತವೆ. ಇವುಗಳ ಮಟ್ಟದ ಕಾಂತಿಯೂ ಸೊಬಗೂ ಮಾತುಗಳಲ್ಲಿ ವರ್ಣಿಸಲು ಸಾಧ್ಯವಿಲ್ಲದಷ್ಟು ದಿವ್ಯವಾಗಿರುತ್ತವೆ, (ಕಪ್ಪೆಚಿಪ್ಪಿನ ಒಳಭಾಗದಂತೆ-ವಿಧ ವಿಧವಾದ ಬಣ್ಣಗಳನ್ನು ಹೊರಚಿಮ್ಮುತ್ತವೆ).

ಈ ಸೂಕ್ಷ್ಮ ದೇಹಗಳ ವಿಮರ್ಶಾತ್ಮಕವಾದವ್ಯಾಸಂಗದಿಂದ ನಮಗೆ ಖಚಿತವಾಗುವುದೇನೆಂದರೆ, ಈ ಮೇಲ್ಮಟ್ಟದ ಸ್ವಭಾವವುಳ್ಳವನೇ ನಿಜವಾದ ಮನುಷ್ಯ, ಆ ತೇಜಸ್ಸಿನ ಮಧ್ಯೆ ಕಾಣುವ ಮಾಂಸಮಯ ಬಿಂಬವಲ್ಲ, ಎಂಬುದು. ಇದಕ್ಕೆ ನಮ್ಮ ಸಧ್ಯದ ಅಂಧ (ಕುರುಡು) ಸ್ಥಿತಿಯಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತೇವೆ. ವಾಸ್ತವವಾಗಿಯೂ ತ್ರಿಮೂರ್ತಿಗಳ ಅಂಶೀ ಭೂತವಾದ ನಿಜವಾದ ಮನುಷ್ಯನನ್ನು ನಾವು ನೋಡಲಾರೆವು. ಆದರೆ ನಮ್ಮ ದಿವ್ಯ ದೃಷ್ಟಿಯ ಹಂತವು ಹೆಚ್ಚಿದಂತೆಲ್ಲಾ ನಾವು ಆತನ ನೈಜವಾದ ದೈವಿಕ ಸ್ವಭಾವಕ್ಕೆ ಹತ್ತಿರ ಹತ್ತಿರ ಬರುತ್ತೇವೆ. ಈಗಿನ ಸಧ್ಯದ ಬೆಳವಣಿಗೆ ಸ್ಥಿತಿಯಲ್ಲಿ ಆತನ ಕಾರಣ ದೇಹವು ಮಾತ್ರ ಆದಾಗ್ಯೂ ಆ ಮೂಲಕ ಆತನ ದೈವಿಕ ಸ್ವಭಾವವು ಅಭಿವ್ಯಕ್ತವಾಗುವಷ್ಟು ನಮಗೆ ತಿಳಿಯಬರುತ್ತದೆ, ಇನ್ನೂ ಕೆಳಗಿನ ಮಟ್ಟದ ರೂಪ ದೇಹವನ್ನು ನೋಡಿದಾಗ ಆತನ ನಿಜ ಸ್ವರೂಪದಲ್ಲಿ ಅದು ವ್ಯಕ್ತಪಡಿಸುವಷ್ಟು ಮಾತ್ರ ಗೋಚರವಾಗುತ್ತದೆ. ಇನ್ನೂ ಕೆಳಕ್ಕೆ ಇಳಿದು ಆತನ ಕಾಮ ದೇಹವನ್ನು ನೋಡಿದಾಗ, ಮತ್ತೊಂದು ಪರದೆ ಆತನ ಮೇಲೆ ಬಿದ್ದಂತೆ ಆಗಿ ಆತನ ಕೆಳಗಿನ ಮಟ್ಟದ ಸ್ವಭಾವವು ಮಾತ್ರ ಗೋಚರವಾಗುತ್ತದೆ. ಈ ಸ್ಥೂಲ ಮಟ್ಟದಲ್ಲಾದರೋ ಆತನ ಸ್ವಭಾವವು ತುಂಬ ಮುಚ್ಚಲ್ಪಟ್ಟು ನಮ್ಮ ತಿಳಿವಳಿಕೆಯು ತುಂಬ ಕುಂಠಿತವಾಗುತ್ತದೆ,

ಇದರಿಂದ ನಮ್ಮ ಜೊತೆ ಮನುಷ್ಯರನ್ನು ಕಂಡರೆ ನಮ್ಮ ಭಾವನೆಯು ಈ ವ್ಯಾಸಂಗದ ಅನುಭವದಿಂದ ಉತ್ತಮಗೊಳ್ಳಬೇಕಲ್ಲವೇ ? ಏಕೆಂದರೆ ಆತನ ಸ್ವಭಾವವು ಆತನ ಸ್ಥೂಲ ದೃಷ್ಟಿಗೆ ಸಿಕ್ಕುವುದಕ್ಕಿಂತಲೂ ತುಂಬ ಮಿಗಿಲಾದುದು. ನಮ್ಮ ಹಿನ್ನೆಲೆಯಲ್ಲಿ ಬೇಕಾದಷ್ಟು ದೈವಿಕ ಸ್ವಭಾವವು ಸುಪ್ತಾವಸ್ಥೆಯಲ್ಲಿರುತ್ತದೆ, ಮತ್ತು ಅನೇಕ ಸಂದರ್ಭಗಳಲ್ಲಿ ಮಾನವನ ಉತ್ತಮ ಸ್ವಭಾವಕ್ಕೆ ನಾವು ಕೊಡುವ ಕರೆಯು ಅದನ್ನು ಕೆಳಮಟ್ಟದಲ್ಲಿ ಅಭಿವ್ಯಕ್ತವಾಗುವಂತೆ ಮಾಡುತ್ತದೆ. ಈ ವ್ಯಾಸಂಗವನ್ನು ಕೈಗೊಂಡನಂತರ ನಮಗೆ ಸ್ಥೂಲ ದೇಹದ ಹಿಂದಿರುವ ಆತನ ಉನ್ನತ ಸ್ವಭಾವವನ್ನು ಪತ್ತೆ ಹಚ್ಚುವುದು ಸುಲಭವಾಗಬೇಕು. ಅಲ್ಲದೆ ಮಾನವನು ದೈವಾಂಶ ಸಂಭೂತನು ಎಂಬ ತತ್ವವು ಈ ಉದಾಹರಣೆ ಚಿತ್ರಗಳ ಮೂಲಕ ನಮಗೆ ಮನವರಿಕೆಯಾದ ಮೇಲೆ ಮಾನವ ಸ್ವಭಾವದಲ್ಲಿ ನಮಗೆ ನಂಬಿಕೆ ಹೆಚ್ಚುತ್ತದೆ. ಅಲ್ಲದೆ ಆ ಮೂಲಕ ಇತರರೂ ನಾವೂ ಸಹ ತತ್ವತಃ ಒಂದೇ ಆದುದರಿಂದ ಸಹಜವಾಗಿ ನಮ್ಮ ಸಹಾಯ ಹಸ್ತವನ್ನು ಇತರರಿಗೆ ಚಾಚುವುದಕ್ಕೆ ನಮಗೆ ಸಂತೋಷವಾಗದೆ ಇರದು.

ನಮ್ಮ ಮೂಲಕ ಆ ದೈವಿಕ ಸ್ವಭಾವವು ಹೆಚ್ಚು ಹೊಳೆಯುವಂತೆ ಅಭಿವ್ಯಕ್ತವಾಗುವ ಪಕ್ಷದಲ್ಲಿ ನಾವು ಆದಿವ್ಯ ಜ್ಞಾನವನ್ನು ಇತರರೊಡನೆ ಹಂಚಿಕೊಳ್ಳಲು ಸ್ಫೂರ್ತಿ ಬರುತ್ತದೆ. ನಮಗೆ ಸಧ್ಯಸ್ಥಿತಿಯಿಂದ ಒಂದು ಮೇಲ್ಮಟ್ಟದ ಬೆಳವಣಿಗೆ ಅಂತಸ್ತು ಪ್ರಾಪ್ತವಾದರೆ, ಆ ಸೌಲಭ್ಯವು ಇತರರ ಸೇವೆಗೋಸ್ಕರವೇ ಎಂಬಂಶವನ್ನು ಮರೆಯದಿರೋಣ. ಈ ಸಂಸರಣದ ದಿವ್ಯ ಯೋಜನೆಯು ಎಷ್ಟು ರಮ್ಯವಾಗಿದೆಯೆಂಬ ತತ್ವವು ಈ ದಿವ್ಯ ಬೆಳವಣಿಗೆಯು ನಮ ದೇಹಗಳ ಮೂಲಕ ಮನವರಿಕೆಯಾದಾಗ ಆ ಭಗವಂತನ ಮಹಾತ್ಯಾಗದ ಸುಳಿವು ನಮಗೆ ಹೊಳೆಯದೆ ಇರದು, ಅದು ಎಷ್ಟು ದಿವ್ಯವಾಗಿದೆ. ಸುಂದರವೂ ಸಮರ್ಪಕವೂ ಆಗಿದೆಯೆಂಬಂಶವು ನಮ್ಮ ಊಹೆಗೂ ಮೀರಿದ್ದು. ಆದರ ಮಹಿಮೆಯು ಒಂದುಬಾರಿ ನಮಗೆ ಹೊಳೆದರೂ ಸಾಕು ಅದನ್ನು ಸಾಕ್ಷಾತ್ಕರಿಸಿಕೊಳ್ಳುವ ತ್ಯಾಗಭಾವನೆಯು ನಮ್ಮದಾಗುತ್ತದೆ. ಅದರ ದಿವ್ಯತೆಯನ್ನು ಮನಗಂಡ ಮೇಲೆ ಸುಮ್ಮನೆ ತಟಸ್ಥವಾಗಿರಲು ಸಾಧ್ಯವಿಲ್ಲ, ತ್ಯಾಗರೂಪವಾದ ಸೇವೆಗೆ ನಮ್ಮ ಅಲ್ಪ ಶಕ್ತ್ಯಾನುಸಾರ ಧುಮುಕುವ ಮನೋಭಾವನೆಯು ನಮ್ಮದಾಗ ಬೇಕು. ಏಕೆಂದರೆ ಭಗವಂತನೊಡನೆ ಅತನ ಯೋಜನೆಯಲ್ಲಿ ಯಾರು ಪಾಲ್ಗೊಳ್ಳುತ್ತಾರೆಯೋ ಅಂತಹರು ತಾತ್ಕಾಲಿಕ ಪರಿಸ್ಥಿತಿಯಿಂದ ನಿತ್ಯತ್ವಕ್ಕೆ ವರ್ಗಾಯಿಸಲ್ಪಡುತ್ತಾರೆ. ಅ ಸ್ಥಿತಿಯಲ್ಲಿ ಅಂತಹರ ಕೆಲಸಕ್ಕೆ ಅಪಜಯವೆಂಬುದೇ ಇರುವುದಿಲ್ಲ.

ಅಧ್ಯಾಯ ೨೧

ಆರೋಗ್ಯಸ್ಥಿತಿ-ತೇಜಸ್ಸು

ಇದುವರೆಗೆ ಮಾನವನ ಸೂಕ್ಷ್ಮದೇಹಗಳನ್ನು ಕುರಿತು ಪ್ರಸ್ತಾಪ ಮಾಡುತ್ತಿದ್ದೆವು. ಆದರೆ ಸ್ಥೂಲ ಲೋಕಕ್ಕೆ ಸಂಬಂಧಪಟ್ಟದ್ದು ಆದಾಗ್ಯೂ ಸ್ಥೂಲ ದೃಷ್ಟಿಗೆ ನಿಲುಕದ ಆತನ ಪ್ರಾಣಮಯ ಕೋಶಕ್ಕೆ ಸಂಬಂಧಪಟ್ಟ ತೇಜಸ್ಸಿನ ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳದೇ ಇದ್ದರೆ ಈ ವಿಷಯವು (ಅದೃಶ್ಯ ಮನುಷ್ಯ) ಪೂರ್ತಿಯಾಗುವುದಿಲ್ಲ. ಈ ಕೋಶಕ್ಕೆ ಸಂಬಂಧ ಪಟ್ಟ ಪ್ರಕೃತಿಯು ಸ್ಥೂಲಲೋಕದ ಅತಿವಾಯು ತತ್ವದಿಂದ ಪ್ರಾರಂಭವಾಗುವ ಸೂಕ್ಷ್ಮ ಅಂತಸ್ತುಗಳಿಗೆ ಸಂಬಂಧಪಟ್ಟದ್ದು. ಇದು ಬೇರೆ ದೇಹವಲ್ಲ. ಸ್ಥೂಲ ದೇಹದ ಸೂಕ್ಷ್ಮ ಭಾಗವು, ದಿವ್ಯ ದೃಷ್ಟಿಗೆ ಸ್ಥೂಲದೇಹವನ್ನು ಒಳಗೂ ಹೊರಗೂ ವ್ಯಾಪಿಸಿರುವ ಈ ಪ್ರಾಣಮಯ ಕೋಶದ ಪ್ರಕೃತಿಯು ಬೂದು ಮಿಶ್ರವಾದ ಊದ ಬಣ್ಣದ ಮೋಡದಂತೆ ಕಾಣುತ್ತದೆ. (24-25ನೆಯ ಚಿತ್ರಗಳನ್ನು ನೋಡಿರಿ) ಇದು ಕಾಮದೇಹಕ್ಕೂ ಸ್ಥೂಲ ದೇಹಕ್ಕೂ ಒಂದು ಸೇತುವೆಯಂತೆ ಸಂಬಂಧವನ್ನು ಕಲ್ಪಿಸುವುದಲ್ಲದೇ ಪ್ರಾಣಶಕ್ತಿಗೆ ವಾಹಿನಿಯಾಗಿ ಸ್ಥೂಲದೇಹವನ್ನು ಸಜೀವವಾಗಿ ಇಟ್ಟಿದೆ.

ಸೂರ್ಯನು ಹೇಗೆ ಹೊರಗಿನ ಪ್ರಪಂಚಕ್ಕೆ ಬೆಳಕು ಮತ್ತು ಶಾಖಗಳಿಗೆ ಮೂಲಸ್ಥಾನವಾಗಿರುತ್ತಾನೆಯೋ ಹಾಗೆಯೇ ಒಳಗಿನ ಪ್ರಾಣ ಶಕ್ತಿಗೂ ಕೂಡ ತೌರು ಮನೆಯಂತೆ ಇರುತ್ತಾನೆ. ಭೂಮಿಯ ವಾತಾವರಣದಲ್ಲಿ ಈ ಶಕ್ತಿಯು ತುಂಬಿ ತುಳುಕಾಡುತ್ತಿರುತ್ತದೆ. ಆದರೆ ಅದು ಪ್ರಕಾಶ ಮಾನವಾದ ಬಿಸಿಲಿನಲ್ಲಿ ಮಾತ್ರ ತುಂಬ ಚುರುಕಾಗಿಕೆಲಸ ಮಾಡುತ್ತದೆ. ಈ ಪ್ರಾಣ ಶಕ್ತಿಯನ್ನು ನಮ್ಮ ಸ್ಥೂಲ ದೇಹಗಳು ಜೀರ್ಣಿಸಿಕೊಳ್ಳುವ ಮೂಲಕವೇ ಸಜೀವವಾಗಿರಬಲ್ಲವು. ಈ ಪ್ರಾಣ ಶಕ್ತಿಯನ್ನು ಆಕರ್ಷಿಸಿ ಸ್ಥೂಲದೇಹಕ್ಕೆ ತಕ್ಕಂತೆ ಜೀರ್ಣಿಸಿಕೊಳ್ಳುವುದು. ನಮ್ಮ ಸ್ಥೂಲ ಶರೀರದ ಅಂಗವಾದ ಗುಲ್ಮದ ಕೆಲಸಗಳಲ್ಲೊಂದಾಗಿದೆ. ಈ ಅಂಗಕ್ಕೆ ಸೂರ್ಯನಿಂದ ಬರುವ ಪ್ರಾಣವನ್ನು ಒಂದು ವಿಶೇಷ ರೀತಿಯಲ್ಲಿ ಬದಲಾಯಿಸಿ ಸ್ಥೂಲ ಶರೀರದ ಜಾಯಮಾನಕ್ಕೆ ತಕ್ಕಂತೆ ವಿನಿಯೋಗ ಮಾಡುವಂತಹ ಒಂದು ವಿಶೇಷ ಶಕ್ತಿಯಿದೆ. ಈಯಂಗದ ಮೂಲಕ ಹಾದು ಬಂದ ಪ್ರಾಣ ವಾಹಿನಿಯು ರೂಪಾಂತರ ಗೊಳ್ಳುವುದು ಕಂಡು ಬರುತ್ತದೆ.

ಈ ಪ್ರಾಣ ಶಕ್ತಿಯು ಇತರೆ ಎಲ್ಲ ಶಕ್ತಿಗಳಂತೆ ಸ್ವಾಭಾವಿಕವಾಗಿ ಕಣ್ಣಿಗೆ ಗೋಚರವಾಗುವುದಿಲ್ಲ. ಆದರೆ ನಮ್ಮ ಸುತ್ತಮುತ್ತಲಿನ ವಾತಾವರಣದಲ್ಲಿ ಇದು

ತುಂಬಿ ತುಳುಕಾಡುತ್ತಿರುತ್ತದೆ. ಈ ಸ್ಥಿತಿಯಲ್ಲಿ ಅದು ಬಹು ಸೂಕ್ಷ್ಮವಾದ ಬಣ್ಣವಿಲ್ಲದ ಲಕ್ಷಾಂತರ ಕಣಗಳ ರೂಪವನ್ನು ತಾಳುತ್ತದೆ. ಇದು ಮಾನವನ ಶರೀರಕ್ಕೆ ತಕ್ಕಂತೆ ಪರಿವರ್ತನೆಯಾದ ಮೇಲೆ ಈ ಕಣಗಳು ತೆಳುವಾದ ಗುಲಾಬಿ ಬಣ್ಣವನ್ನು ತಾಳಿ ನೋಟಕ್ಕೆ ಅಂದವಾಗಿ ಕಾಣುತ್ತವೆ. ಈ ಕಣಗಳು ಶರೀರಾದ್ಯಂತ ನರಗಳ ದ್ವಾರ ಸದಾ ಹರಿದಾಡುತ್ತಿರುತ್ತವೆ. ಈ ಚಲನೆಗೆ ಮೆದುಳೇ ಕೇಂದ್ರ ಸ್ಥಾನವು. ಪ್ರಾಣ ಶಕ್ತಿಯ ವಾಹಿನಿಯು-ರಕ್ತನಾಳಗಳಲ್ಲಿ ರಕ್ತ ಸಂಚಾರ ಮಾಡುವಂತೆ ನರಮಂಡಲದ ದ್ವಾರಾ ಚಲಿಸುತ್ತಿರುತ್ತದೆ ನಮ್ಮ ಚಿತ್ರಗಳಲ್ಲಿ ಈ ಸಂಚಾರವನ್ನು ಪ್ರತಿನಿಧಿಸಲು ಯತ್ನಿಸಿರುತ್ತೇವೆ. ಆದರೆ ನರಮಂಡಲದ ಕರಾರುವಾಕ್ಕಾದ ಚಿತ್ರ ಇದಲ್ಲ.

ನರಗಳ ದ್ವಾರ ಪ್ರಾಣ ಶಕ್ತಿಯು ಹರಿಯುವಿಕೆಯು ಅತ್ಯಾವಶ್ಯಕವೆಂಬದು ಎದ್ದು ಕಾಣುತ್ತದೆ. ಏಕೆಂದರೆ ನರಗಳು ಅದರಿಂದ ಬೇರ್ಪಟ್ಟರೆ, ಸ್ಪರ್ಶಶಕ್ತಿಯನ್ನೇ ಕಳೆದುಕೊಳ್ಳುತ್ತವೆ. (ಎಂದರೆ-ಆ ಭಾಗದಲ್ಲಿ ಇಂದ್ರಿಯ ಜನ್ಯವಾದ ಅರಿವೇ ಇರುವುದಿಲ್ಲ). ಯಾವುದಾದರೂ ಅಂಗಕ್ಕೆ (ಉದಾಹರಣೆಗೆ ಕಾಲಿಗೆ) ಜೋಮು ಹಿಡಿದಾಗ ಆ ಭಾಗದಲ್ಲಿ ಅರಿವೇ ಇರುವುದಿಲ್ಲ. ಇದಕ್ಕೆ ಕಾರಣವೇನೆಂದರೆ ಪ್ರಾಣ ಶಕ್ತಿಯು ಆ ಭಾಗದ ಮೂಲಕ ಹರಿಯದೇ ತಟಸ್ಥವಾಗಿರುವುದೇ ಕಾರಣ, ಕೆಲವರು ಹೀಗಾಗುವುದು ರಕ್ತ, ಪರಿಚಲನೆಯು ನಿಂತಿರುವುದರಿಂದ ಎಂದು ತಪ್ಪಾಗಿ ಭಾವಿಸುತ್ತಾರೆ. ಆದರೆ ವಶೀಕರಣ ವಿದ್ಯೆಯನ್ನು ವ್ಯಾಸಂಗ ಮಾಡಿರುವವರಿಗೆ ಹಸ್ತವನ್ನು ಯಾವ ಭಾಗದ ಮೇಲಾದರೂ ಆಡಿಸಿ ಪ್ರಾಣ ಶಕ್ತಿಯ ಚಲನೆಯನ್ನು ತಡೆಯುವುದರಿಂದ ಜೋಮನ್ನುಂಟು ಮಾಡಬಹುದೆಂಬುದು ಚೆನ್ನಾಗಿ ಗೊತ್ತು. ಏಕೆಂದರೆ ಆ ವಿಧವಾಧ ಪ್ರಯೋಗ ಮಾಡಿ ಅವರು ಅನುಭವಪಡೆದಿರುತ್ತಾರೆ. ಈ ರೀತಿಯಾಗಿ ಉಂಟಾದ ಜೋಮು ರಕ್ತಸಂಚಾರಕ್ಕೆ ಅಡ್ಡಿಮಾಡುವುದಿಲ್ಲ. ಜೋಮು ಹಿಡಿದ ಅಂಗವನ್ನು ಮುಟ್ಟಿ ನೋಡಿದರೆ ಶಾಖವಾಗಿಯೇ ಇರುವುದು ಕಂಡುಬರುತ್ತದೆ. ವಶೀಕರಣ ವಿದ್ಯೆಗೆ ಸಂಬಂಧಪಟ್ಟಂತೆ ಪ್ರಯೋಗ ಮಾಡುವವನು ಸಂಬಂಧಪಟ್ಟ ಅಂಗದ ನರಗಳಿಂದ ಪ್ರಾಣ ಶಕ್ತಿಯು ಹರಿಯದಂತೆ ತಡೆಯುತ್ತಾನೆ. ಆಗ ಆನರವಿಶೇಷಗಳ ಕೆಲಸವು ತಟಸ್ಥವಾಗುತ್ತದೆ. ಆಗ ಪ್ರಯೋಗಕಾರಕನು ತನ್ನ ಪ್ರಾಣ ಶಕ್ತಿಯನ್ನು ಆ ಭಾಗದಲ್ಲಿ ಹರಿಯಬಿಡುತ್ತಾನೆ. ಈ ಪ್ರಾಣ ಶಕ್ತಿಯು ಆ ದೇಹದ ಮೆದುಳಿಗೆ ಸಂಬಂಧಪಟ್ಟುದಲ್ಲವಾದುದರಿಂದ ಆ ನರಗಳು ಮೆದುಳಿನ ಸಂಬಂಧವನ್ನು ಕಳೆದುಕೊಂಡು ಪ್ರಜ್ಞಾಹೀನವಾಗಿರುತ್ತವೆ.

ಆರೋಗ್ಯವಾಗಿರುವ ಮನುಷ್ಯನಲ್ಲಿ ಗುಲ್ಮವು (ಇದು ಹೊಟ್ಟೆಯ ಎಡ ಭಾಗದಲ್ಲಿರುತ್ತದೆ) ಯಥೇಚ್ಛವಾದ ಪ್ರಮಾಣದಲ್ಲಿ ಪ್ರಾಣಶಕ್ತಿಯನ್ನು ಒದಗಿಸು

ತ್ತದೆ. ಇದು ನರಗಳ ದ್ವಾರ ದೇಹದ ಪರಿಧಿಯಿಂದ ನೇರವಾದ ಗೆರೆಗಳ ರೂಪದಲ್ಲಿ ಹೊರಕ್ಕೆ ಚಿಮ್ಮುತ್ತಿರುತ್ತದೆ. ಸಂಪೂರ್ಣವಾದ ಆರೋಗ್ಯಸ್ಥಿತಿಯಲ್ಲಿರುವ ಮನುಷ್ಯನು ಉದ್ದೇಶಪೂರ್ವಕವಾಗಿ ದುರ್ಬಲರಿಗೆ ಸ್ವಲ್ಪಮಟ್ಟಿಗೆ ಅದನ್ನು ಕೊಟ್ಟು ಸಹಾಯ ಮಾಡಬಹುದು. ಅಲ್ಲದೇ ಅರಿವಿಲ್ಲದೇನೇ ಆತನು ಇರುವ ಸ್ಥಳದ ಸುತ್ತಲೂ ಇರುವ ಜನರ ಮೇಲೆಲ್ಲ ಪ್ರಾಣಶಕ್ತಿಯನ್ನೂ ದಾರ್ಢ್ಯವನ್ನು ಅನವರತ ಚಿಮ್ಮುತ್ತಲೇ ಇರುತ್ತಾನೆ. ಹೀಗೆಯೇ ದುರ್ಬಲನು ಎಂದರೆ ಯಾರು ತನ್ನ ಆರೋಗ್ಯಕ್ಕೆ ತಕ್ಕಷ್ಟು ಪ್ರಾಣ ಶಕ್ತಿಯನನ್ನು ಜೀರ್ಣಿಸಿಕೊಳ್ಳಲಾರನೋ ಅಂತಹನು ಅರಿವಿಲ್ಲದೇನೇ ಬಲಾಢ್ಯರಿಂದ ಸ್ಪಂಜಿನಂತೆ ಪ್ರಾಣ ಶಕ್ತಿಯನ್ನು ಹೀರಿ ತಾತ್ಕಾಲಿಕ ಪ್ರಯೋಜನವನ್ನು ಪಡೆಯಬಹುದು. ಆದರೆ ಯಾರ ದೇಹದಿಂದ ಆ ರೀತಿ ಪ್ರಾಣ ಶಕ್ತಿಯನ್ನು ಹೀರುತ್ತಾನೆಯೋ ಅಂತಹವನಿಗೆ ಆರೋಗ್ಯದಲ್ಲಿ ತೊಂದರೆಯಾಗಬಹುದು. ಕೆಲವು ಜನ ಸೂಕ್ಷ್ಮಗ್ರಹಣ ಶಕ್ತಿಯುಳ್ಳವರಿಗೆ ಇದು ತಿಳಿದು ಬರುತ್ತದೆ, ಏಕೆಂದರೆ ಅಂತಹ ಮನುಷ್ಯನು ತಮ್ಮ ಸಂಪರ್ಕವನ್ನು ಪಡೆದು ಹೋದಾಗಲೆಲ್ಲ ತಮಗೆ ಒಂದು ಬಗೆಯ ನಿಶ್ಶಕ್ತಿಯುಂಟಾಗುವುದನ್ನು ಗಮನಿಸುತ್ತಾರೆ. ಹೀಗೆಯೇ ಪ್ರೇತಗಳ ಪ್ರದರ್ಶನಕ್ಕೆ ಹೋಗಿಬರುವವರಿಗೂ ಮುಂಜಾಗರೂಕತೆಯಿಂದ ಆತ್ಮರಕ್ಷಣೆ ಮಾಡಿಕೊಳ್ಳದೇ ಇರುವಂಥವರಿಗೂ ಶಕ್ತಿಯು ಕುಂದುವುದು ಮನವರಿಕೆಯಾಗುತ್ತದೆ.

ಪ್ರಾಣಮಯ ಕೋಶದಿಂದ ಸುತ್ತಲೂ ಹೊರ ಚಿಮ್ಮುತ್ತಿರುವ ಗೆರೆಗಳ ರೂಪದ ವಾಹಿನಿಗಳು ಅದರ ಸುತ್ತಲೂ ಪ್ರಸರಿಸಿರುವ ತೇಜಸ್ಸನ್ನು ಎದ್ದುಕಾಣುವಂತೆ ಪರಿಷ್ಕಾರ ಗೊಳಿಸುತ್ತವೆ. ಸ್ಥೂಲ ದೇಹದಿಂದ ಪ್ರತಿ ಕ್ಷಣದಲ್ಲೂ ಬಹು ಸೂಕ್ಷ್ಮವಾದ ಕಣಗಳು ಹೊರದೂಡಲ್ಪಡುತ್ತಿರುತ್ತವೆ. ಇವೂ ಕೂಡ ದಿವ್ಯದೃಷ್ಟಿಗೆ ಗೋಚರವಾಗುತ್ತವೆ-ಕೆಲವು ಸಂದರ್ಭಗಳಲ್ಲಿ ಆರು ಮೈಯುಳ್ಳ ಉಪ್ಪಿನ ಹರಳಿನಂತೆ ಇರುವ ರೂಪಗಳಂತೆಯೂ ಮತ್ತು ಇತರೆ ರೇಖಾ ರೂಪಗಳಂತೆಯೂ ಆ ಗೆರೆಗಳು ಗೋಚರವಾಗುತ್ತವೆ. ಈ ತೇಜುಸ್ಸು ಸ್ಥೂಲ ಲೋಕದ ಮೇಲ್ಮಟ್ಟಕ್ಕೆ ಸಂಬಂಧಪಟ್ಟದ್ದುಇದು ಆರೋಗ್ಯದ ತೇಜಸ್ಸೆಂದು ಕರೆಯಲ್ಪಡುತ್ತದೆ. ಏಕೆಂದರೆ ಅದರ ಪರಿಸ್ಥಿತಿಯಿಂದ ಮನುಷ್ಯನ ಆರೋಗ್ಯ ಸ್ಥಿತಿಯನ್ನು ಗೊತ್ತು ಹಚ್ಚಬಹುದು, ಈ ತೇಜಸ್ಸು ತೆಳುವಾದ ನೀಲಿ ಮಿಶ್ರವಾದ ಬಿಳಿ ಬಣ್ಣದಂತೆ ಕಾಣುತ್ತದೆ. ಇದರಲ್ಲಿ ಸ್ಥೂಲ ದೇಹದ ಮೈಮೇಲಿರುವ ರೋಮ ಕೂಪಗಳಿಂದ ನಾನಾ ಕಡೆಗೆ ನಿಮಿರಿರುವ ನೇರವಾದ ಗೆರೆಗಳಂತೆ ವಾಹಿನಿಗಳನ್ನು ಕಾಣಬಹುದು. ಸೂಲದೇಹವು ಪೂರ್ಣ ಆರೋಗ್ಯಸ್ಥಿತಿಯಲ್ಲಿದ್ದರೆ ಮಾತ್ರ ಈ ವಾಹಿನಿಗಳು ನೇರವಾಗಿ ಚಾಚಲ್ಪಟ್ಟ ಗೆರೆಗಳಂತೆ ಕಂಗೊಳಿಸುತ್ತವೆ, ಒಂದು ಗೆರೆಗೂ ಮತ್ತೊಂದ ಗೆರೆಗೂ ಮಧ್ಯೆ ಸಮಾನಾಂತರವಿರುತ್ತದೆ, ಆದರೆ ಖಾಯಿಲೆ ಸಂಭವಿಸಿದರೆ ಈ ಗೆರೆಗಳು ಸಿಕ್ಕಾಪಟ್ಟೆ ಚದುರಿ

ಮುದುಡಿಕೊಳ್ಳುತ್ತವೆ, ಅಲ್ಲದೆ ಬಾಚದೆ ಇರುವ ಕೂದಲುಗಳಂತೆ ಸಿಕ್ಕು ಬಿದ್ದಂತೆ ಕಾಣುತ್ತವೆ. ಶರೀರದ ಯಾವುದಾದರೂ ಒಂದು ಭಾಗಕ್ಕೆ ಸಂಬಂಧಪಟ್ಟ ಅಸ್ವಸ್ಥತೆಯು ಆ ಭಾಗದ ಗೆರೆಗಳನ್ನು ಮಾತ್ರ ಬಾಡಿ ಮುದುಡಿಕೊಳ್ಳುವಂತೆ ಮಾಡುತ್ತದೆ.

ಆರೋಗ್ಯತೆಯನ್ನು ಸೂಚಿಸುವ ಗೆರೆಗಳು ನೇರವಾಗಿ ಚಾಚಿಕೊಂಡಿರುವುದಕ್ಕೆ ಇರತಕ್ಕ ಕಾರಣವೂ ಕೂಡ ಸ್ವಾರಸ್ಯವಾಗಿದೆ. ಆರೋಗ್ಯ ಸ್ಥಿತಿಯಲ್ಲಿರುವ ದೇಹದಿಂದ ಚೈತನ್ಯ (ಪ್ರಾಣಶಕ್ತಿಯು) ವು ಒಂದೇ ಸಮನೆಗೆ ಧಾರಾಪೂರ್ವಕವಾಗಿ ಹೊರಹೊಮ್ಮುತ್ತಿರುತ್ತದೆ. ಅನಾರೋಗ್ಯವುಂಟಾಗಿ ಪ್ರಾಣ ಚೈತನ್ಯ ಧಾರೆಯು ತಗ್ಗಿದ ಕೂಡಲೇ ಈ ಗೆರೆಗಳು ಮುದುಡಿಕೊಂಡು ಅವ್ಯವಸ್ಥಿತವಾಗುವುವು. ಆರೋಗ್ಯವು ಸುಧಾರಣೆಯಾಗುತ್ತ ಎಂದಿನಂತೆ ಸರ್ವೇಸಾಧಾರಣ ಪ್ರಮಾಣದ ಪ್ರಾಣಶಕ್ತಿಯು ಪ್ರವಹಿಸುವುದಕ್ಕೆ ಪ್ರಾರಂಭವಾದ ಕೂಡಲೇ ಆರೋಗ್ಯಸ್ಥಿತಿಗೆ ಸಂಬಂಧಪಟ್ಟ ನೇರವಾದ ಸಮಾನಾಂತರದ ಅಡ್ಡಗೆರೆಗಳು ಪುನಹ ಮೊದಲಿನಂತೆ ಕ್ರಮಬದ್ಧವಾದ ಸ್ಥಿತಿಗೆ ಬರುತ್ತವೆ. ಈ ರೀತಿ ಆರೋಗ್ಯಸ್ಥಿತಿಯು ಸಮರ್ಪಕವಾಗಿರುವವರೆಗೆ ರೋಗಗಳಿಗೆ ಸಂಬಂಧಪಟ್ಟ ಯಾವ ಕೆಟ್ಟ ಕ್ರಿಮಿಗಳೂ ಶರೀರದೊಳಕ್ಕೆ ಪ್ರವೇಶಿಸಲು ಸಾಧ್ಯವಿಲ್ಲ, ಏಕೆಂದರೆ ಆ ವೀರ್ಯವತ್ತಾದ ಪ್ರಾಣಶಕ್ತಿಯ ಪ್ರವಾಹವು ಅವುಗಳನ್ನು ಹೊರಕ್ಕೆ ದೂಡುತ್ತದೆ. ಹಾಗಲ್ಲದೆ ಯಾವುದಾದರೂ ಕಾರಣದಿಂದ-ಎಂದರೆ ಪೆಟ್ಟುಬಿದ್ದು ಘಾಯವಾಗೋಣ-ಅತ್ಯಾಯಾಸದಿಂದುಂಟಾದ ದೌರ್ಬಲ್ಯ ಅಥವ ಪ್ರಬಲವಾದ ಖಿನ್ನತೆ–ಅಥವ ಅಕ್ರಮ ಜೀವನಕ್ಕೆ ಸಂಬಂಧಪಟ್ಟ ಅತಿರೇಕತೆಗಳಿಂದ-ಉಂಟಾದ ಕೊರತೆಯಿಂದ ಶರೀರದಲ್ಲಿನ ಪ್ರಾಣಶಕ್ತಿಯ ಪ್ರಮಾಣವು ತಗ್ಗಿ ಹೋದಲ್ಲಿ–ಆಗ ಆರೋಗ್ಯ ರಕ್ಷಣೆಗೆ ಸಂಬಂಧಪಟ್ಟ ಬಲವು ತಗ್ಗಿ ಹೊರಗಿನಿಂದ ಬಂದು ಪ್ರವೇಶ ಮಾಡುವ ಜಾಡ್ಯಗಳಿಗೆ ಸಂಬಂಧಪಟ್ಟ ಕ್ರಿಮಿಗಳಿಗೆ ಆಮಂತ್ರಣ ಕೊಟ್ಟಂತೆ ಆಗುತ್ತದೆ,

ಇಚ್ಛಾಶಕ್ತಿಯಿಂದ ಕೂಡಿದ ಸಂಕಲ್ಪದಿಂದ ಈ ಆರೋಗ್ಯಕ್ಕೆ ಸಂಬಂಧಪಟ್ಟ ತೇಜಸ್ಸಿನ ಹೊರಮೈಯ್ಯಲ್ಲಿ ಒಂದು ಕವಚವನ್ನು ರಚಿಸಿಕೊಂಡು ಅಂತಹ ಹೊರಗಿನಿಂದ ಬರುವ ಅನಿಷ್ಟವಾದ ಪ್ರಭಾವಗಳನ್ನು ತಡೆಯುವುದಕ್ಕೆ ಸಾಧ್ಯವೆಂಬುದು ಗೊತ್ತಾಗಿದೆ. ಇನ್ನೂ ಸ್ವಲ್ಪ ಹೆಚ್ಚು ಪ್ರಯತ್ನ ಮಾಡಿ ಕಾಮದೇಹದ ತೇಜಸ್ಸಿನ ಮಟ್ಟದಲ್ಲೂ ಕೂಡ ಆ ರೀತಿಯಾದ ರಕ್ಷಣ ಕವಚವನ್ನು ನಿರ್ಮಿಸಿಕೊಳ್ಳುವ ದ್ವಾರ ಕಾಮಲೋಕ ಮಟ್ಟದ ಕೃತಕ ಭೂತಗಳೂ ಕೂಡ ಪ್ರವೇಶಿಸದಂತೆ ತಡೆಯಬಹುದು.

ಈ ತೇಜಸ್ಸಿನ ಮಾದರಿಗಳು- ಎಂದರೆ ಆರೋಗ್ಯಸ್ಥಿತಿ (24) ಮತ್ತು ಅನಾರೋಗ್ಯಸ್ಥಿತಿ (25) ಗಳನ್ನು ಸೂಚಿಸುವ ಚಿತ್ರಗಳ ಮೂಲಕ ಉದಾಹರಿಸಲಾಗಿದೆ.



XXIV



XXV

ಈ ತೇಜಸ್ಸು ಸಮಾನ್ಯವಾಗಿ ಬಣ್ಣವಿಲ್ಲದ್ದು ಮತ್ತು ಸ್ಥೂಲಲೋಕಕ್ಕೆ ಸಂಬಂಧಪಟ್ಟದ್ದೂ, ಆದುದರಿಂದ ಸ್ವಲ್ಪ ಮಟ್ಟಿಗೆ ದಿವ್ಯದೃಷ್ಟಿ ಬೆಳೆದಿದ್ದರೂ ಸಾಕು-ಇದನ್ನು ನೋಡಲು ಸಾಧ್ಯವಾಗುತ್ತದೆ. ಆದರೆ ದಿವ್ಯದೃಷ್ಟಿಯು ಇನ್ನೂ ಮೇಲಿನ ಹಂತಕ್ಕೆ ಬೆಳೆದಾಗ ಮೊದಲು ಕಾಣುವಂಥದು ಕಾಮದೇಹದ ತೇಜಸ್ಸು-ಏಕೆಂದರೆ ಅದು ಅಷ್ಟರ ಮಟ್ಟಿಗೆ ಆಕರ್ಷಣೀಯವಾದಷ್ಟು ಪ್ರಕಾಶಮಾನವಾದ ಬಣ್ಣಗಳಿಂದ ಕಂಗೊಳಿಸುತ್ತದೆ.

—

ದೃಶ್ಯಾದೃಶ್ಯ ಮನುಷ್ಯ

2ನೇ ಭಾಗ

ಮನಶ್ಶರೀರ

'ದೃಶ್ಯಾದೃಶ್ಯ ಮನುಷ್ಯ' ಎಂಬ ಗ್ರಂಥವನ್ನು ಓದಿದನಂತರ ಕೆಲವರು ವಿದ್ಯಾರ್ಥಿಗಳು ಆ ಗ್ರಂಥದಲ್ಲಿ ಉದಾಹರಿಸಿರುವ ಗುಣಗಳ ಪಟ್ಟಿಯು ಅಪೂರ್ಣವೆಂದು-ಅವುಗಳಂತೆಯೇ ಅನೇಕರಲ್ಲಿ ಇರಬಹುದಾದ-ಧೈರ್ಯ, ಗಾಂಭೀರ್ಯ–ಪ್ರಸನ್ನತೆ-ಸತ್ಯನಿಷ್ಠೆ ಮತ್ತು ಸ್ವಾಮಿನಿಷ್ಠೆ, ಇಂತಹ ಗುಣಗಳ ಪ್ರಸ್ತಾಪವನ್ನೇ ಮಾಡಿಲ್ಲ-ಕಾರಣವೇನು ? ಎಂಬುದಾಗಿ ಪ್ರಶ್ನೆ ಹಾಕಿರುತ್ತಾರೆ, ಇಂತಹ ಗುಣಗಳನ್ನು ಆ ಗ್ರಂಥದಲ್ಲಿ ಉದಾಹರಿಸದೆ ಇರುವುದಕ್ಕೆ ಕಾರಣವಿದೆ-ಏನೆಂದರೆ ಇವು ತಮ್ಮದೇ ಆದ ಬಣ್ಣಗಳ ಮೂಲಕ ವ್ಯಕ್ತವಾಗುವುದಿಲ್ಲ. ಇಂತಹ ಗುಣಗಳು ಮನೋದೇಹದ ರೂಪರೇಖೆಗಳ ಮೂಲಕ ವ್ಯಕ್ತವಾಗುತ್ತವೆ, ಇವು ಮನೋದೇಹದ ವ್ಯವಸ್ಥಿತವಾದ ಆಕಾರಕ್ಕೆ ಸಂಬಂಧಪಟ್ಟುವೇ ವಿನಾ ಅದರ ಬಣ್ಣಗಳಿಗಲ್ಲ, ಆದಾಗ್ಯೂ ಮನೋಲೋಕ ಮಟ್ಟದ ದಿವ್ಯದೃಷ್ಟಿಯುಳ್ಳವನಿಗೆ ಇವುಗಳ ಇರುವಿಕೆ-ಅಥವ ಇಲ್ಲದೆ ಇರುವಿಕೆಗಳನ್ನು ಪತ್ತೆ ಹಚ್ಚಲು ಸಾಧ್ಯವಿಲ್ಲದೇ ಇಲ್ಲ.

ಹಿಂದೆ ಹೇಳಿರುವಂತೆ ಒಳ್ಳೆಯ ಗುಣಗಳನ್ನು ಪ್ರತಿನಿಧಿಸುವ ಬಣ್ಣಗಳೆಲ್ಲ ಅಂಡಾಕೃತಿಯ ತೇಜಸ್ಸಿನ ಮೇಲ್ಭಾಗದಲ್ಲೂ ಮತ್ತು ನೋಡುವುದಕ್ಕೆ ಅಷ್ಟು ಅಂದವಾಗಿಲ್ಲದ ರೀತಿಯಲ್ಲಿ ಕಾಣಿಸಿಕೊಳ್ಳುವ ದುರ್ಗಣಗಳು ಅದರ ಕೆಳಭಾಗದಲ್ಲೂ ವ್ಯಕ್ತವಾಗುತ್ತವೆ. ಉನ್ನತ ಮಟ್ಟದ ಉತ್ಕಾಂಕ್ಷೆಗೆ ಸಂಬಂಧಪಟ್ಟ ನೇರಳೆ ಬಣ್ಣ, ಭಕ್ತಿಯ ನೀಲಿ, ಪ್ರೇಮದ ಗುಲಾಬಿ ರಂಗೂ, ವಿಚಾರಶಕ್ತಿಯ ಹಳದಿ-ಅಲ್ಲದೆ ಇದಕ್ಕೆ ಸಂಬಂಧಪಟ್ಟ ಅಹಂಭಾವದ ಕಿತ್ತಲೆ ಬಣ್ಣ ಕೂಡ- ಇವೆಲ್ಲವೂ ಅಂಡಾಕೃತಿಯ ಮೇಲಿನ ಅರ್ಧ ಭಾಗದಲ್ಲೂ, ಹಾಗಲ್ಲದೆ ಕೋಪ, ಸ್ವಾರ್ಥತೆ, ಹೊಟ್ಟೆಕಿಚ್ಚು ಇವುಗಳಿಂದ ಪ್ರಚೋದನೆಯಾದ ಯೋಚನೆಗಳು ಅದರ ಕೆಳಗಿನ ಅರ್ಧಭಾಗದಲ್ಲೂ ವ್ಯಕ್ತವಾಗುತ್ತವೆ. ಈ ಪರಿಸ್ಥಿತಿಯು ಮನೋದೇಹದ ಸ್ಥಬ್ಧ ಸ್ಥಿತಿಗೆ ಅನ್ವಯವಾಗುತ್ತದೆ. ಆದರೆ ಮನುಷ್ಯನು ಅಂತಹ ಯೋಚನೆಗಳಲ್ಲೇ ತೊಡಗಿರುವಾಗ ಆತನ ಮನೋದೇಹದ ತೋರಿಕೆಯೇ ಬೇರೆ ರೀತಿಯಲ್ಲಿರುತ್ತದೆ.

ಮನೋದೇಹ ಬೀಜವಾದ ಅಣುಸಮುದಾಯವು ಮನೋದೇಹದ ಚಟುವಟಿಕೆ
ಗಳಿಗೆಲ್ಲ ಕೇಂದ್ರವಾಗಿರುತ್ತದೆ. ಈ ದೇಹ ಬೀಜಕ್ಕೆ ಬೇರೆ ಬೇರೆ ಯೋಚನೆಗಳಿಗೆ
ಸಂಬಂಧಪಟ್ಟಂತೆ ಬೇರೆ ಬೇರೆ ಭಾಗಗಳಿರುತ್ತವೆ ಒಬ್ಬ ವ್ಯಕ್ತಿಯ ದೇಹ ಬೀಜ
ಇದ್ದಂತೆ ಮತ್ತೊಬ್ಬನ ಮನೋದೇಹ ಬೀಜವಿರುವುದಿಲ್ಲ. ಮನೋದೇಹ ಬೀಜ
ಗಳು ಮನುಷ್ಯರ ಸ್ವಭಾವ (ಶಾಖೆ) ಮತ್ತು ಬೆಳವಣಿಗೆ ಮಟ್ಟಗಳಿಗೆ ತಕ್ಕಂತೆ
ಭಿನ್ನಭಿನ್ನವಾಗಿ ರೂಪಗೊಂಡಿರುತ್ತವೆ. ಇಂತಹ ದೇಹಾಣುಸಮುದಾಯವು
ಕೆಲಸಮಾಡದೆ ತಟಸ್ಥವಾಗಿರುವಾಗ ಅದಕ್ಕೆ ಸಂಬಂಧಪಟ್ಟ ಮೇಲ್ಮಯ್ಯಲ್ಲಿ
ಅಲಿಕೆ ರೂಪದ ಪಟ್ಟೆಗಳು ಕಾಣಿಸಿಕೊಳ್ಳುತ್ತವೆ. (ಘರದೆಯ ಮೇಲೆ ಚಿತ್ರವನ್ನು
ಪ್ರಸರಿಸುವ ಮ್ಯಾಜಿಕ್‌ಲಾಂಟರ್ನ್ ಯಂತ್ರದಿಂದ ಹೊರಹೊಮ್ಮುವ ಕಿರಣಗಳಂತೆ-
ಬುಡದಲ್ಲಿ ಕಿರಿದಾಗಿದ್ದು ಮುಂದಕ್ಕೆ ಪ್ರಸರಿಸುತ್ತಾ ವಿಸ್ತಾರಗೊಳ್ಳುವ ಬೆಳಕಿನ
ವಾಹಿನಿಯಂತೆ) (ಇಲ್ಲಿ ಕೆಲಸ ಮಾಡದೆ ತಟಸ್ಥವಾಗಿರುವಾಗ-ಎಂದರೆ ಅದು ಯೋಚನೆ
ಗಳೆಂಬ ಪ್ರವೃತ್ತಿಗಳಿಗೆ ಓಗೊಡದೆ-ತನ್ನ ಅಕ್ಷದ ಮೇಲೆ ತಾನು ಇತರೆಎಲ್ಲ ಅಣುಗಳಂತೆ
ಗಿರ್ರನೆ ತಿರುಗುತ್ತಿರುವಾಗ ಎಂದು ಅರ್ಥಮಾಡಿಕೊಳ್ಳಬೇಕು T.V.R)

ಉತ್ಕಾಂಕ್ಷೆಗಳಿಗೆ ಸಂಬಂಧಪಟ್ಟ ನೇರಳೆ ಬಣ್ಣದ ಪಟ್ಟೆಯು ಮೇಲ್ಭಾಗದಲ್ಲಿ
ಕಾಣಿಸಿಕೊಳ್ಳುತ್ತದೆ. ಆದರೆ ಸಂಬಂಧಪಟ್ಟ ವ್ಯಕ್ತಿಯು ಯೋಗ ಮಾರ್ಗವನ್ನು
ಪ್ರವೇಶಿಸುವಂತಹ ಬೆಳವಣಿಗೆ ಮಟ್ಟಕ್ಕೆ ಹತ್ತಿರವಾದಂತೆಲ್ಲ ಅದು ವಿಕಾಸವಾಗುತ್ತಾ
ಹೋಗುವುದಲ್ಲದೇ, ಪ್ರಕಾಶವು ಹೆಚ್ಚುತ್ತಾ ಹೋಗುತ್ತದೆ. ದೀಕ್ಷೆಯನ್ನು ಪಡೆದವನ
ಲ್ಲಾದರೋ ಆ ಕಿರೀಟದಂತಿರುವ ವೃತ್ತವು ನಮ್ಮ ಊಹೆಗೆ ಮೀರಿದಷ್ಟು ದಿವ್ಯತೆ
ಯಿಂದಲೂ ಸೊಬಗಿನಿಂದಲೂ ಕಂಗೊಳಿಸುತ್ತದೆ. ಇದರ ಕೆಳಗೆ ಇದನ್ನು ಅನುಸರಿ
ಸುತ್ತ ಭಕ್ತಿಗೆ ಸಂಬಂಧಪಟ್ಟ ಯೋಜನೆಯ ಪಟ್ಟೆಯು ಇರುತ್ತದೆ. ಇದು ಸಾಮಾನ್ಯ
ವಾಗಿ ಕಿರಿದಾಗಿದ್ದು ಯಾರಿಗೆ ಈ ಭಾವನೆಯು ಸಹಜವಾಗಿ ಆಳವಾಗಿರುತ್ತದೆಯೋ
ಅಂತಹರಲ್ಲಿ ವಿಶಾಲವಾದ ರೀತಿಯಲ್ಲಿ ವಿಸ್ತರಿಸಿರುತ್ತದೆ. ಇದರ ಕೆಳಗೆ ಪ್ರೇಮ
ಭಾವನೆಗೆ ಸಂಬಂಧಪಟ್ಟ ಗುಲಾಬಿ ಬಣ್ಣವುಸಾಂದ್ರವಾಗಿಯೋ ಅಥವ ತೆಳುವಾಗಿಯೋ
ಅವರವರ ಜಾಯಮಾನಕ್ಕೆ ತಕ್ಕಂತೆ ಸ್ವಲ್ಪ ವಿಶಾಲವಾದ ಪಟ್ಟೆಯಾಕೃತಿಯಲ್ಲಿ ಕಾಣಿಸಿ
ಕೊಳ್ಳುತ್ತದೆ. ಈ ಪ್ರೇಮವಲಯಕ್ಕೆ ಹತ್ತಿರವಾಗಿ ಅಹಂಭಾವಕ್ಕೆ ಸಂಬಂಧಪಟ್ಟ
ಕಿತ್ತಲೆ ಬಣ್ಣವೂ (ಹಳದಿ-ಕೆಂಪುಮಿಶ್ರ) ಮತ್ತು ಇದಕ್ಕೆ ಹತ್ತಿರವಾಗಿ ವಿಚಾರ ಶಕ್ತಿಗೆ
ಸಂಬಂಧಪಟ್ಟ ಹಳದಿ ಪಟ್ಟೆಯೂ ಕಾಣಿಸಿಕೊಳ್ಳುತ್ತವೆ-ಈ ಹಳದಿ ಪಟ್ಟೆಯಲ್ಲಿ ಎರಡು
ಪ್ರತ್ಯೇಕವಾದ ವಲಯಗಳಿರುತ್ತವೆ. ಒಂದು ತತ್ವಜ್ಞಾನಕ್ಕೂ ಮತ್ತೊಂದು ವಿಜ್ಞಾನ
ಕ್ಕೂ ಸಂಬಂಧಪಟ್ಟುವು. ಕೆಲವು ಸಂದರ್ಭಗಳಲ್ಲಿ ಈ ಹಳದಿ ಬಣ್ಣದ ವಲಯವು ಭಕ್ತಿ
ಮತ್ತು ಪ್ರೇಮಗಳಿಗೆ ಸಂಬಂಧಪಟ್ಟ ಪಟ್ಟೆಗಳ ಮೇಲೆ ಕಾಣಿಸಿಕೊಳ್ಳುವುದುಂಟು
ಅಂತಹ ಸಂದರ್ಭದಲ್ಲಿ ಅಹಂಭಾವನೆಯು ಹೆಚ್ಚು ಪ್ರಮಾಣದಲ್ಲಿರುತ್ತದೆಂದು ತಿಳಿದು
ಕೊಳ್ಳಬೇಕಾಗುತ್ತದೆ.

ಈ ಮೇಲ್ಕಂಡ ಗುಂಪಿನ ಕೆಳಗೆ ಎಂದರೆ ಅಂಡಾಕೃತಿಯ ಮಧ್ಯಭಾಗದಲ್ಲಿ ಸ್ಥೂಲ ವಸ್ತುಗಳಿಗೆ ಸಂಬಂಧಪಟ್ಟರೂಪಗಳುಳ್ಳ ವಿಶಾಲವಾದ ಪಟ್ಟಿಯಿರುತ್ತದೆ. ಈ ಪಟ್ಟೆಯು ಹಸರು ಬಣ್ಣದ್ದಾಗಿರುತ್ತದೆ. ಈ ಹಸುರು ಬಣ್ಣವು ಆಯಾ ವ್ಯಕ್ತಿಯ ಸ್ವಭಾವಕ್ಕೆ ಸಂಬಂಧಪಟ್ಟಂತೆ ಕಂದು ಮತ್ತು ಹಳದಿ ಬಣ್ಣಗಳ ಛಾಯೆ ಗಳಿಂದ ಮಿಶ್ರವಾಗಿರುತ್ತದೆ. ಈ ಮಧ್ಯಸ್ಥವಾಗಿರುವ ಪಟ್ಟಿಯಲ್ಲಿರಬಹುದಾದ ವೈವಿಧ್ಯತೆಗಳು ಬೇರೆ ಭಾಗಗಳಲ್ಲಿ ಕಂಡುಬರುವುದಿಲ್ಲ. ಕೆಲವರ ಮನೋದೇಹಗಳಲ್ಲಿ ಅನೇಕ ಬಿಂಬಗಳು ತುಂಬಿರುತ್ತವೆ. ಮತ್ತೆ ಕೆಲವರಲ್ಲಿ ಅವುಗಳ ಸಂಖ್ಯೆ ಕೇವಲ ಕಡಮೆಯಾಗಿರುತ್ತದೆ. ಕೆಲವರ ಸಂಕಲ್ಪ ರೂಪಗಳು ಪರಿಷ್ಕಾರವಾಗಿ ಅಂಚು ಕಟ್ಟಿ ಕೊಂಡು ಇರುತ್ತವೆ, ಅಲ್ಲದೆ ಒಂದು ನಿರ್ದಿಷ್ಟವಾದ ರೀತಿಯಲ್ಲಿ ವಿಂಗಡಿಸಲ್ಪಟ್ಟಿರು ತ್ತವೆ. ಮತ್ತೆ ಕೆಲವರ ಸಂಕಲ್ಪ ರೂಪಗಳು ಅಸ್ಪಷ್ಟವಾಗಿರುವುದಲ್ಲದೇ ಅವುಗಳ ಜೋಡಣೆಯಲ್ಲೂ ಕೂಡ ಗೊಂದಲವಿರುತ್ತದೆ.

ಕೆಳಗಿನ ಭಾಗದಲ್ಲಿ ಸಾಧುವಲ್ಲದ ಅನೇಕ ವಿಧವಾದ ಯೋಚನೆಗಳಿಂದ ಕೂಡಿದ ಪಟ್ಟಿಯಿರುತ್ತದೆ. ಸ್ವಾರ್ಥತೆಯನ್ನು ಸೂಚಿಸುವ ಮಣ್ಣಿನ ಬಣ್ಣವು ಕೆಳಗಿನ ಮೂರನೆಯ ಒಂದು ಭಾಗವನ್ನೆಲ್ಲ ಆಕ್ರಮಿಸಿರುತ್ತದೆ, ಕೆಲವುಸಂದರ್ಭಗಳಲ್ಲಿ ಅದುಕೆಳ ಗಿನ ಅರ್ಧಭಾಗದಷ್ಟು ಪ್ರಸರಿಸುವುದೂಉಂಟು. ಇದರಮೇಲ್ಭಾಗದಲ್ಲಿಭಯ ಅಥವಾ ದ್ವೇಷ ಮತ್ತು ಕುಯುಕ್ತಿಗಳ ವಲಯಗಳು ಇರುತ್ತವೆ, ಮಾನವರು ಸಂಸರಣದಲ್ಲಿ ಮುಂದುವರಿದಂತೆಲ್ಲ ಈ ಕೆಳಗಿನ ಭಾಗವು ಕಡಿಮೆಯಾಗುತ್ತ ಮೇಲ್ದರ್ಜೆಯ ಗುಣ ಗಳೇ ಅಂಡಾಕೃತಿಯನ್ನೆಲ್ಲ ವ್ಯಾಪಿಸಿಕೊಂಡಿರುವಂತೆ ವ್ಯಕ್ತವಾಗುತ್ತವೆ (ಸಂಬಂಧ ಪಟ್ಟ ಉದಾಹರಣೆ ಚಿತ್ರಗಳನ್ನು ನೋಡಿರಿ.)

ಭಾವನೆಯು ಎಷ್ಟು ಸಾಂದ್ರವಾಗಿರುತ್ತದೆಯೋ ಅದು ಅಷ್ಟಷ್ಟು ಬಣ್ಣಗಳ ಕಾಂತಿ ಸಂಪತ್ತಿನ ಮೂಲಕ ವ್ಯಕ್ತವಾಗುತ್ತದೆ. ಭಕ್ತಿಭಾವನೆಯನ್ನು ತೆಗೆದುಕೊಂಡರೆ ಇದು ಗೌರವ, ಪೂಜ್ಯಭಾವನೆ ಮತ್ತು ಆರಾಧನೆ, ಪ್ರೀತಿಭಾವನೆಯಲ್ಲಿ-ಒಳ್ಳೆಯದಾ ಗಲಿಯೆಂಬ ಮನೋಭಾವನೆ, ಸ್ನೇಹ-ಪ್ರೇಮ-ಹೀಗೆ ಮೂರು ಅಂತಸ್ತುಗಳಿರುತ್ತವೆ. ಭಾವನೆಯು ಎಷ್ಟು ಒತ್ತಾಗಿರುತ್ತದೆಯೋ ಆ ಸಂಬಂಧವಾದ ಪಟ್ಟೆಯೂ ಕೂಡ ಅಷ್ಟು ವಿಶಾಲವಾಗಿಯೂ, ಅದು ಆಧ್ಯಾತ್ಮಿಕದ ಅಂತಸ್ತಿನದಾದರೆ ಸ್ಪಂದಗತಿಯು ಮೇಲ್ಮಟ್ಟದ್ದೂ ಆಗುತ್ತದೆ, ಮೊದಲನೆಯದು ಪ್ರಕಾಶದ ಸಂಪತ್ತನ್ನೂ, ಎರಡನೆಯದು ಬಣ್ಣದ ನಾಜೋಕನ್ನೂ ಸೂಚಿಸುತ್ತದೆ.

ಈ ಭಿನ್ನಭಿನ್ನ ವಲಯಗಳಲ್ಲಿ ಅಂಚುಗಳು ಕಟ್ಟಿಕೊಂಡಿರುವ ಕ್ರಮದಿಂದ ಮನುಷ್ಯನ ಇಚ್ಛಾಶಕ್ತಿ ಮೊದಲಾದ ಗುಣಗಳನ್ನು ಪತ್ತೆಹಚ್ಚಬಹುದು. ಒಂದು

ವಿಧವಾದ ಭಾವನೆಗೂ ಮತ್ತೊಂದು ವಿಧವಾದ ಭಾವನೆಗೂ ನಿರ್ದಿಷ್ಟವಾದ ಎಲ್ಲ ಗೆರೆಗಳು ರೂಪಗೊಂಡಿದ್ದಾದರೆ ಅಂತಹ ಮನುಷ್ಯನಲ್ಲಿ ಇಚ್ಛಾಶಕ್ತಿಯು ಬೆಳೆದಿದೆ ಯೆಂದು ಹೇಳಬಹುದು. ಆ ರೀತಿ ಇಚ್ಛಾಶಕ್ತಿ ಬೆಳೆಯದೆ ಇರುವವರ ತೇಜಸ್ಸಿನ ಪಟ್ಟೆಗಳು ಒಂದಕ್ಕೊಂದು ಕಲೆಸಿದಂತೆ ಸೇರಿಕೊಂಡಿರುತ್ತವೆ. ಅಹಂ ಭಾವಕ್ಕೆ ಸಂಬಂಧಪಟ್ಟ ಪಟ್ಟೆಯ ಅಂಚುಗಳು ದೃಢವಾದ ರೇಖಾರೂಪವನ್ನು ತಾಳಿದ್ದರೆ ಅಂತಹನಲ್ಲಿ ಧೈರ್ಯವು ಎದ್ದು ಕಾಣುವಷ್ಟು ಬೆಳೆದಿದೆಯೆಂದು ಗೊತ್ತು ಹಚ್ಚಬಹುದು. ಈ ಪಟ್ಟೆಗೆ ಸಂಬಂಧಪಟ್ಟಂತೆಯೇ ಒಂದು ವಿಧವಾದ ಪ್ರಶಾಂತತೆಗೂ ಖಚಿತತೆಗೂ ಸಂಬಂಧಪಟ್ಟಂತಹ ಲಕ್ಷಣಗಳನ್ನು ಆ ಎಲ್ಲೆಯ ಗೆರೆಗಳ ಮೂಲಕ ವ್ಯಕ್ತಪಟ್ಟದ್ದರೆ, ಗಾಂಭೀರ್ಯವಿದೆಯೆಂದು ಹೇಳಬಹುದು.

ಸತ್ಯನಿಷ್ಠೆಯೂ ನಿರ್ದಿಷ್ಟತೆಯೂ ಮನೋದೇಹದ ಮಧ್ಯಭಾಗದಲ್ಲಿರುವ ಸಂಕಲ್ಪರೂಪಗಳ ಖಚಿತವಾದ ಮತ್ತು ಪರಿಷ್ಕಾರವಾದ ಲಕ್ಷಣಗಳ ಮೂಲಕ ವ್ಯಕ್ತವಾಗುತ್ತವೆ. ಭಕ್ತಿ ಮತ್ತು ಪ್ರೇಮಭಾವನೆಗಳು ಒತ್ತಾಗಿದ್ದು ಆ ಭಾಗದಲ್ಲಿನ ನಾಯಕರ ರೂಪಗಳು ಸ್ಪಷ್ಟವಾಗಿ ಏರ್ಪಟ್ಟು, ಸ್ಥಿರವಾಗಿ ಮುಂದುವರಿಯುವಂತೆ ಕಾಣಿಸಿಕೊಳ್ಳುವ ಪಕ್ಷದಲ್ಲಿ ಸ್ವಾಮಿನಿಷ್ಠೆಯು (loyalty) ಬೆಳೆದಿದೆಯೆಂದೂ ಊಹಿಸಬಹುದು. ಅನೇಕ ಸಂದರ್ಭಗಳಲ್ಲಿ ಭಕ್ತಿ ,ಪ್ರೇಮ ಮತ್ತು ನಾಯಕನಲ್ಲಿಟ್ಟಿ ರುವ ಅಚಲವಾದ ವಿಶ್ವಾಸ–ಇವುಗಳು ಅಭಿವ್ಯಕ್ತವಾಗುವ ಸಂದರ್ಭಗಳಲ್ಲಿ ಆ ಭಾವನೆಗಳಿಗೆ ಸಂಬಂಧಪಟ್ಟ ನಾಯಕರ ನಿರ್ದಿಷ್ಟವಾದ ಸಂಕಲ್ಪ ರೂಪಗಳು ಖಚಿತ ವಾಗಿ ಏರ್ಪಟ್ಟು ಅಂತಹ ತೇಜಸ್ಸಿನಲ್ಲಿ ಮುಂದುವರಿಯುತ್ತವೆ. ವ್ಯಕ್ತಿಯು ಆ-ಪ್ರೇಮಪಾತ್ರ ಅಥವ ನಾಯಕನನ್ನು ಜ್ಞಾಪಿಸಿಕೊಂಡು ತನ್ನ ಭಾವನೆಯನ್ನು ಸಮರ್ಪಣೆಮಾಡಿದಾಗಲೆಲ್ಲ ಅಂತಹ ಭಾವನೆಗಳು ಹೊಸ ರೂಪವನ್ನು ನಿರ್ಮಿಸುವು ದಕ್ಕೆ ಬದಲು, ಆ ಹಿಂದಿನ ರೂಪವನ್ನೇ ಬಲಪಡಿಸುತ್ತಾ ಹೋಗುತ್ತವೆ.

ಉಕ್ಕಿಹರಿಯುವ ಸುಖ ಸಂತೋಷ ಭಾವನೆಗಳು ಮನೋದೇಹ-ಕಾಮದೇಹ ಗಳನ್ನು ಥಳಥಳನೆ ಹೊಳೆಯುವಂತೆ ಮಾಡುತ್ತವೆ, ಅಲ್ಲದೆ ಅವುಗಳ ಮೇಲ್ಮೈಗಳ ಮೇಲೆ ಮಿಂಚಿನಂತಹ ಅಲೆಗಳು ತಾಂಡವವಾಡುವಂತೆ ಮಾಡುತ್ತವೆ.(Rippling) ಸಾಧಾರಣವಾದ ಪ್ರಸನ್ನತೆಯು ಇದೇ ವಿಧವಾದ ತಗ್ಗಿನ ಮಟ್ಟದ ಪರಿಸ್ಥಿತಿಯನ್ನೂ ಮತ್ತು ಸ್ಥಿರವಾಗಿ ಮುಂದುವರಿಯುವ ಪ್ರಶಾಂತತೆ ಲಕ್ಷಣವನ್ನೂ ನೋಡುವುದಕ್ಕೆ ಆಹ್ಲಾದಕರವಾಗಿರುವಂತೆ ವ್ಯಕ್ತಪಡಿಸುತ್ತದೆ. ಆಶ್ಚರ್ಯ ಭಾವನೆಯು ಪ್ರಿಯವಾಗಿದ್ದ ಪಕ್ಷದಲ್ಲಿ ಮನೋದೇಹವು ಥಟ್ಟನೆ ಕುಗ್ಗುವಂತೆಯೂ ಆದರೆ ಪ್ರೇಮಕ್ಕೆ ಸಂಬಂಧ ಪಟ್ಟ ಗುಲಾಬಿರಂಗಿನ ಪಟ್ಟೆಯು ಥಟ್ಟನೆ ಬೆಳಗುವಂತೆಯೂ, ಆದರೆ ಆಶ್ಚರ್ಯ ಭಾವ ನೆಯು ಅಪ್ರಿಯವಾಗಿದ್ದ ಪಕ್ಷದಲ್ಲಿ ಕೆಳಗಿನಭಾಗದ ಕಂದು ಮತ್ತು ಬೂದು ಬಣ್ಣಗಳು ವಿಜೃಂಭಿಸುವಂತೆಯೂ ಮಾಡುತ್ತದೆ. ಕುಗ್ಗುವಿಕೆಗೆ ಸಂಬಂಧಪಟ್ಟ ಅಲೆಗಳುಕಾಮದೇ

ದೇಹಕ್ಕೂ ಮತ್ತು ಸ್ಥೂಲದೇಹಕ್ಕೂ ಸಾಗಿಸಲ್ಪಟ್ಟು, ಸೂಲ ಹೃದಯವು ದುರ್ಬಲ ವಾಗಿದ್ದ ಪಕ್ಷದಲ್ಲಿ ಸಾವೂ ಕೂಡ ಸಂಭವಿಸಬಹುದು. ಥಟ್ಟನೆ ಉಂಟಾಗುವ ಪೂಜ್ಯ ಭಾವನೆಯು ಭಕ್ತಿಭಾವನೆಗೆ ಸಂಬಂಧಪಟ್ಟ ನೀಲಿ ಬಣ್ಣದ ಪಟ್ಟಿಯನ್ನು ವಿಜೃಂಭಿ ಸುವಂತೆ ಮಾಡುವುದಲ್ಲದೆ ಅದರ ಎಲ್ಲೆಕಟ್ಟು ನಿರ್ದಿಷ್ಟವಾದ ರೀತಿಯಲ್ಲಿ ದೃಢ ಪಡುವಂತೆ ಮಾಡುತ್ತದೆ.

ಒಬ್ಬ ಮನುಷ್ಯನು ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿಯಬೇಕೆಂದು ಪ್ರಯತ್ನಿಸಿದಲಾಗಾಯಿತು ಆತನ ಮನೋದೇಹವು ಅದಷ್ಟು ಬೇಗನೆ ಪರಿಶುದ್ಧವಾಗ ಬೇಕಾಗುತ್ತದೆ. ಅಲ್ಲದೆ ಅದರ ಪ್ರಕೃತಿಯೆಲ್ಲವನ್ನೂ ಕೆಲಸಕ್ಕೆ ವಿನಿಯೋಗವಾಗು ವಂತೆ ಅಳವಡಿಸಬೇಕಾಗುತ್ತದೆ. ಏಕೆಂದರೆ ಅದರ ಪ್ರತಿಯೊಂದು ಭಾಗವೂ ಅತ್ಯುತ್ತಮ ಸ್ಥಿತಿಯಲ್ಲಿರಬೇಕಾಗುತ್ತದೆ. ಹಾಗಿದ್ದಲ್ಲಿ ಮಾತ್ರ ಅಂತಹ ಸಾಧಕನು ಪ್ರಗತಿಯನ್ನು ಸಾಧಿಸಬಲ್ಲನು. ಇಂತಹನು ಮಾಡುವ ಪ್ರತಿಯೊಂದು ಯೋಜನೆಯೂ ಪರಿಷ್ಕಾರವಾಗಿಯೂ ದೃಢವಾಗಿಯೂ ಇರುವಂತೆ ನೋಡಿಕೊಳ್ಳಬೇಕು. (ಕೆಲವರು ತಾವು ಮಾಡುವ ಸಂಕಲ್ಪರೂಪಗಳನ್ನು ನೋಡುವುದಕ್ಕೆ ಪ್ರಯತ್ನ ಪಡುತ್ತಾರೆ. ಈ ಪ್ರಯತ್ನವೂ ಫಲಕಾರಿಯಾದರೆ ತುಂಬ ಒಳ್ಳೆಯದು ಆದರೆ ಇವೆರಡು ಶಕ್ತಿಗಳೂ ಬೇರೆ ಬೇರೆ. ಇಚ್ಛಾ ಶಕ್ತಿಯು ದೃಢವಾಗಿದ್ದಲ್ಲಿ ಅದು ಕಟ್ಟತಕ್ಕ ಸಂಕಲ್ಪ ರೂಪವೂ ಕೂಡ ಪರಿಷ್ಕಾರವಾಗಿ ಏರ್ಪಡುತ್ತದೆ. ಅದರ ರೂಪವನ್ನು ನೋಡಲು ಪ್ರಯ ತ್ನಿಸುವುದು ದಿವ್ಯದೃಷ್ಟಿಗೆ ಸಂಬಂಧಪಟ್ಟದು.)

ಮತ್ತೊಂದು ಮುಖ್ಯಾಂಶ–ಎಲ್ಲಕ್ಕಿಂತಲೂ ಪ್ರಾಮುಖ್ಯವಾದುದ್ದು, ಅದೇ ನೆಂದರೆ ಅಂತಹ ಸಾಧಕನು ತನ್ನ ಮನಸ್ಸಿಗೂ (ಎಂದರೆ ದೇಹಾತ್ಮಕ್ಕೂ) ಅಂತ ರಾತ್ಮಕ್ಕೂ ಸೇತುವೆಯನ್ನು ಕಟ್ಟಬೇಕು. ಹಾಗಾದರೆ ಅಂತರಾತ್ಮನು ದೇಹಾತ್ಮದ ಗುಣವಿಶೇಷಗಳನ್ನೂ ಶಕ್ತಿ ಸಾಮರ್ಥ್ಯಗಳನ್ನು ಸದ್ವಿನಿಯೋಗ ಮಾಡಬಲ್ಲನು. ನಾವು ಯಾವುದನ್ನಾದರೂ ಫಲಕಾರಿಯಾಗಿ ಯೋಚಿಸಬೇಕಾದರೆ ಅದನ್ನು ನಾವು ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಆ ರೀತಿ ಅದು ನಮ್ಮ ನೆನಪಿಗೆ ಬರಬೇಕಾದರೆ ನಾವು ಅದಕ್ಕೆ ಗಮನ ಕೊಟ್ಟಿರಬೇಕು. ಆ ರೀತಿ ಗಮನ ಕೊಟ್ಟಾಗ ಅಂತರಾತ್ಮನು ತನ್ನ ದೃಷ್ಟಿಯನ್ನು ಕೆಳಕ್ಕೆ ತಿರುಗಿಸಿ ಅಂಥದನ್ನು ನೋಡುತ್ತಾನೆ. ಅನೇಕ ಸಾಧಕರು ಸುವ್ಯವಸ್ಥಿತವಾದ ಮನೋದೇಹವೂ ಮಿದುಳೂ ಇದ್ದಾಗ್ಗೂ ಜೀವಿತದಲ್ಲಿಸಂಭವಿಸುವ ಪ್ರತಿಯೊಂದು ಘಟನೆಗೂ ಗಮನವಿಟ್ಟು ಬಾಳುವುದಿಲ್ಲ, ಇದರಿಂದ ಅಂತರಾತ್ಮನ ಸಹಾಯವೂ ಮಾರ್ಗದರ್ಶನವೂ ಅವರಿಗೆ ಒದಗದೇ ದೇಹಗಳು ತಮ್ಮ ಸ್ವೇಚ್ಛಾನು ಸಾರ ವರ್ತಿಸುವಂತೆ ಆಗುತ್ತವೆ. ಇಂತಹರಿಗೆ ನಾನು ಬೇರೆ ಕಡೆ ಸಲಹೆಗಳನ್ನು ಕೊಟ್ಟಿರುತ್ತೇನೆ. ಅದರೆ ಆ ಸಲಹೆಗಳ ಸಾರಾಂಶವೆಲ್ಲ ಇಷ್ಟೇ. ಆತನಿಗೆ ಏನು ಬೇಕು ಎಂಬುದನ್ನು ವಿವೇಚಿಸಿ ಅಂತಹ ಪ್ರೇಮ, ಜ್ಞಾನ ಮತ್ತು ಸೇವೆ ಇಂತಹವು

ಗಳನ್ನು ನಾವು ನಮ್ಮ ಸ್ಥೂಲ ಜೀವಿತದಲ್ಲಿ ಅಭ್ಯಾಸ ಮಾಡುತ್ತಾ ಬಂದರೆ ಆಗ ಅಂತರಾತ್ಮನು ನಮ್ಮ ಜೊತೆಯಲ್ಲಿ ಸಹಕರಿಸಲು ತನ್ನ ಸಹಾಯವನ್ನು ನೀಡುತ್ತಾನೆ. ಆತನಿಗೆ ಪ್ರಿಯವಾದುದು ಯಾವುದು ಎಂಬುದನ್ನು ವಿವೇಚಿಸಿ ಅದರಂತೆ ನಡೆಯುತ್ತಾ ಬಂದರೆ ಆತನ ಸಹಾಯ ಖಚಿತ. ಸದ್ಗುಣಗಳ ಅನುಷ್ಠಾನ ತತ್ವಚಿಂತನೆ ಮತ್ತು ಪರೋಪಕಾರ ಬುದ್ಧಿ ಇವು ಅಂತರಾತ್ಮನಿಗೆ ಬೇಕಾದುವು. ಇವುಗಳನ್ನು ಬೆಳೆಸಿಕೊಳ್ಳುವುದರಲ್ಲಿ ಆತನ ಸಹಾಯ ಪಡೆಯಬಹುದು.

ಅನಾದರಣೆಗೆ ಒಳಗಾದ ಶಕ್ತಿ

ಮನಸ್ಸು, ಯೋಚನೆ, ಸಂಕಲ್ಪ ಇಂತಹ ಸೂಕ್ಷ್ಮ ವಿಷಯಗಳನ್ನು ಕುರಿತು ಅನೇಕರು ವ್ಯಾಸಂಗ ಮಾಡಿ ತಿಳಿದು ಕೊಂಡಿಲ್ಲ. ಆದುದರಿಂದ ಆವಿಶಕ್ತಿ. ವಿದ್ಯುಚ್ಛಕ್ತಿಗಳಂತಹ ಸ್ಥೂಲ ಲೋಕದ ಶಕ್ತಿಗಳೇ ಅವರ ಭಾಗಕ್ಕೆ ವಾಸ್ತವವಾದುವುಗಳು. ಮನಶ್ಶಕ್ತಿ, ಯೋಚನಾಶಕ್ತಿಗಳು ಕನಸಿನಂತೆ ಅಸ್ಪಷ್ಟವಾದುವುಗಳು. ಆದಾಗ್ಯೂ ಯಾರು ಈ ವಿಷಯಕ್ಕೆ ಪ್ರವೇಶ ಮಾಡಿರುತ್ತಾರೆಯೋ ಅಂತಹರಿಗೆ ಇವೂ ಕೂಡ ಸ್ಥೂಲಲೋಕದ ಶಕ್ತಿಗಳಷ್ಟೇ ವಾಸ್ತವ ವಾದುವು ಎಂಬುದು ಖಚಿತವಾಗುತ್ತದೆ. ಅವುಗಳಿಗಿಂತಲೂಪ್ರಬಲವಾದುವು ಎಂದೇಹೇಳಬೇಕು. ಏಕೆಂದರೆ ಮನಸ್ಸು ಮಾಡಿದರೆ ಏನನ್ನು ಬೇಕಾದರೂ ಸಾಧಿಸಬಹುದು TVR) ಮನಶಕ್ತಿಯು ಎರಡು ವಿಧಗಳಲ್ಲಿ ಕೆಲಸ ಮಾಡಬಲ್ಲದು ಒಂದು ಪರೋಕ್ಷವಾಗಿ, ಮತ್ತೊಂದು ನೇರವಾದ ರೀತಿಯಲ್ಲಿ, ಒಂದು ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡುವವನಿಗೆಲ್ಲ ಆ ವಿಷಯ ಗೊತ್ತು ಯೋಚನೆಯೇ ಕೆಲಸದ ಹಿಂದಿರುವ ಶಕ್ತಿಯೆಂಬುದು. ಒಂದು ಮಿಲ್ಲು ಕೆಲಸ ಮಾಡಬೇಕಾದರೆ ನೀರಿನ ಪ್ರವಾಹ ಶಕ್ತಿ ಹೇಗೆ ಅವಶ್ಯಕವೋ ಹಾಗೆ ಪ್ರತಿಯೊಂದು ಕೆಲಸಕ್ಕೂ ಯೋಚನಾಶಕ್ತಿಯು ಅವಶ್ಯಕ. ಹೀಗೆಯೇ ಯೋಚನೆಯು ನೇರವಾಗಿ ಕೆಲಸಮಾಡುವ ವಿಧಾನವೂ ಇದೆ. ಅನೇಕರಿಗೆ ಇದು ತಿಳಿಯದು, ಒಬ್ಬನು ಒಂದು ಯೋಚನೆ ಮಾಡಿದ ಕೂಡಲೇ, ಅದು ಕಾರ್ಯಗತವಾಗಲಿ, ಬಿಡಲಿ ಅದು ಸುತ್ತು ಮುತ್ತಲಿನ ಪ್ರಕೃತಿಯ ಮೇಲೆ ಆಗಲೇ ತನ್ನ ಪರಿಣಾವನ್ನುಂಟುಮಾಡಿ ಬಿಟ್ಟಿರುತ್ತದೆ.

ನಮ್ಮ ವಿದ್ಯಾರ್ಥಿಗಳಿಗೆ ಗೊತ್ತಿರುವಂತೆ ಸ್ಥೂಲದೃಷ್ಟಿಗೆ ಅತೀತವಾದಷ್ಟು ಸೂಕ್ಷ್ಮವಾಗಿರುವ ಪ್ರಕೃತಿ ಮಟ್ಟಗಳಿರುತ್ತವೆ. ಮನುಷ್ಯನ ಯೋಚನಾಶಕ್ತಿಯು ಅಂತಹ ಮೇಲ್ಮಟ್ಟದ ಪ್ರಕೃಲತಿತತ್ವಗಳ ಮೇಲೆ ತನ್ನ ಪರಿಣಾಮವನ್ನುಂಟು ಮಾಡುತ್ತದೆ. ಮನೋದೇಹದಲ್ಲಿ ಯೋಚನೆಯು ಸ್ಪಂದರೂಪವಾಗಿ ವ್ಯಕ್ತವಾಗುತ್ತದೆ. ಆ ಸ್ಪಂದವು ಅದರ ಹೊರಗಿರುವ ಪ್ರಕೃತಿಗೆ ಸಾಗಿಸಲ್ಪಟ್ಟು ಆ ಮೂಲಕ ಪರಿಣಾಮವನ್ನುಮಾಡುತ್ತದೆ. ಆದುದರಿಂದ ಯೋಚನಾಶಕ್ತಿಯೂ ಕೂಡ ಒಂದು ವಾಸ್ತವ

ವಾಗಿಯೂ ಗೊತ್ತಾದ ಶಕ್ತಿಯೇ, ಅಲ್ಲದೆ ಇದು ನಮ್ಮೆಲ್ಲರಲ್ಲೂ ಅಭಿರುಚಿಯನ್ನು ಕೆರಳಿಸತಕ್ಕ ವಿಷಯ, ಏಕೆಂದರೆ ನಮಗೆಲ್ಲ ಈ ಯೋಜನೆ ಮಾಡುವ ಶಕ್ತಿಯಿದೆ. ಪ್ರಪಂಚದಲ್ಲಿನ ಆವಿಶಕ್ತಿ ಮತ್ತು ವಿದ್ಯುಚ್ಛಕ್ತಿ ಇವುಗಳು ಕೇವಲ ಕೆಲವರೇ ಆದ ಬಂಡವಾಳಸ್ಥರ ಕೈಯಲ್ಲಿರುತ್ತವೆ. ಆದುದರಿಂದ ಅವುಗಳು ಅನೇಕರಿಗೆ ಏಟುಕುವುದಿಲ್ಲ. ಆದರೆ ಈ ಯೋಚನಾಶಕ್ತಿಯು, ಬಡವರು, ಬಲ್ಲಿದರು, ಪ್ರಾಯಸ್ಥರು, ವೃದ್ಧರು, ಇಂತಹ ಭೇದವಿಲ್ಲದೆ ಎಲ್ಲರಲ್ಲಿಯೂ ಇದೆ, ಆದರೆ ಅದನ್ನು ಪ್ರಯೋಗ ಮಾಡುವುದನ್ನು ಕಲಿಯಬೇಕು ಅಷ್ಟೇ. ನಾವೆಲ್ಲರೂ ಈ ಶಕ್ತಿಯನ್ನು ವಿನಿಯೋಗ ಮಾಡುತ್ತಿದ್ದೇವೆ. ತಿಳಿಯದೇ ನಮಗೂ ಇತರರಿಗೂ ಕೆಟ್ಟದುಂಟಾಗುವ ರೀತಿಯಲ್ಲಿ ಅದನ್ನು ಬಳಸುತ್ತಿದ್ದೇವೆ.

Thought Forms (ಸಂಕಲ್ಪ ರೂಪಗಳು) ಎಂಬ ಗ್ರಂಥದಲ್ಲಿ ವಿವರಿಸಿರುವಂತೆ ಒಂದು ಯೋಜನೆಯಿಂದ ಒಂದೇ ಕಾಲದಲ್ಲಿ ಎರಡು ಪರಿಣಾಮಗಳು ಉಂಟಾಗುತ್ತವೆ. ಒಂದು ಅದಕ್ಕೆ ಸಂಬಂಧಪಟ್ಟ ಶಕ್ತಿಧಾರೆ ಮತ್ತೊಂದು ಸಂಕಲ್ಪ ರೂಪ. ಮೊದಲು ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದುದೇನು, ಎಂದರೆ ಅಭ್ಯಾಸದಲ್ಲಿ ಬಲವಿದೆ-ಎಂಬುದನ್ನು. ನಾವು ಒಂದು ಉನ್ನತವಾದ ಮಟ್ಟದಲ್ಲಿ ನಮ್ಮ ಮನೋದೇಹವನ್ನು ಸ್ಪಂದಿಸುವಂತೆ ಅಭ್ಯಾಸ ಮಾಡಿಸಿದರೆ ಅದು ಅದೇ ರೀತಿಯಲ್ಲಿ ಕೆಲಸ ಮಾಡುವುಗನ್ನು ಕಲಿಯುತ್ತದೆ. ಈ ದಿನ ಎಂತಹ ಯೋಚನೆಗಳನ್ನು ಮಾಡುತ್ತೇವೆಯೋ ನಾಳೆ ಅದೇ ಯೋಚನೆಗಳನ್ನು ಮಾಡುವುದು ಸುಲಭವಾಗುತ್ತದೆ. ಒಬ್ಬನು ತನ್ನ ನೆರೆಯವರ ವಿಷಯವಾಗಿ ಕೆಟ್ಟ ಯೋಚನೆಗಳನ್ನು ಮಾಡಿದರೆ ಆತನಿಗೆ ಅವರ ವಿಷಯವಾಗಿ ಒಳ್ಳೆಯದನ್ನು ಚಿಂತಿಸುವುದು ಕಷ್ಟವಾಗುತ್ತದೆ. ಹೀಗೆ ಆತನಲ್ಲಿ ವಾಸ್ತವಾಂಶಕ್ಕೆ ವಿರೋಧವಾದ ವಕ್ರ ಭಾವನೆಗಳು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಎಂದರೆ ಆತನು ಯಾರ ವಿಷಯವಾಗಿ ಕೆಟ್ಟುದನ್ನು ಚಿಂತಿಸಿದ್ದನೋ ಅವರಲ್ಲಿರಬಹುದಾದ ಒಳ್ಳೆಯದು ಆತನ ಕಣ್ಣಿಗೆ ಕಾಣದಂತೆ ಆಗಿ ಕೆಟ್ಟದು ಮಾತ್ರ ಎದ್ದು ಕಾಣುವಂತೆ ಆಗುತ್ತದೆ,

ಹೀಗೆ ಆತನ ಯೋಚನೆಗಳು ಆತನಿಗೆ ಅಸಂಬಂಧವಾದ ಕೆಟ್ಟ ಭಾನೆಗಳನ್ನು ಆತನ ಕಾಮದೇಹದಲ್ಲಿ ಎಬ್ಬಿಸುತ್ತವೆ. ಇದರಿಂದ ಆತನು ಅಂತಹರನ್ನು ದ್ವೇಷಿಸುವುದಕ್ಕೆ ಪ್ರಾರಂಭಿಸುತ್ತಾನೆ. ಗಾಳಿಯು ನೀರನ್ನು ಅಳ್ಳಾಡಿಸುವಂತೆ ಕೆಟ್ಟ ಯೋಚನೆಗಳು ಕಾಮದೇಹದಲ್ಲಿ ಕೋಪವನ್ನು ಎಬ್ಬಿಸುತ್ತವೆ. ಆದರೆ ಮನುಷ್ಯನು ಅದಕ್ಕೆ ಅವಕಾಶಕೊಡದೆ ತನ್ನಲ್ಲೂ ದೋಷಗಳಿವೆ. ಎಲ್ಲರೂ ಅಪೂರ್ಣರು, ಎಂಬ ವಾಸ್ತವ ಸ್ಥಿತಿಯನ್ನು ಸಾವಧಾನವಾಗಿ ಪರ್ಯಾಲೋಚಿಸಿದರೆ ಕೋಪವನ್ನು ಮಾಡದೆ ಇರುವುದಕ್ಕೆ ಸಾಧ್ಯ.

ಸಂಕಲ್ಪರೂಪದಿಂದ ಸಂಕಲ್ಪ ಮಾಡಿದವನ ಮೇಲೆ ಉಂಟಾಗುವುದು ಮತ್ತೊಂದು ಪರಿಣಾಮ. ಸಂಕಲ್ಪ ರೂಪವು ಮತ್ತೊಬ್ಬನಿಗೆ ಸಂಬಂಧಪಟ್ಟಿದ್ದರೆ ಅದು ಬಾಣದಂತೆ ಆತನಿಗೆ ಹೋಗಿ ಸೇರುತ್ತದೆ. ಹಾಗಲ್ಲದೆ ಅದು ಆತನಿಗೇ ಸಂಬಂಧಪಟ್ಟದ್ದು ಆಗಿದ್ದ ಪಕ್ಷದಲ್ಲಿ (ಅನೇಕ ಯೋಚನೆಗಳು ಸ್ವಂತಕ್ಕೇ ಸಂಬಂಧ ಪಟ್ಟುವು ಆಗಿರುತ್ತವೆ) ಅದು ಆತನ ಬಳಿಯಲ್ಲೇ ಕಾದಿದ್ದು ಅವಕಾಶ ಸಿಕ್ಕಿದ ಕೂಡಲೇ ಆತನ ಮನಸ್ಸಿನೊಳಕ್ಕೆ ಅದು ಪ್ರವೇಶಿಸಿ ಅಗರಂತೆ ಮತ್ತೊಂದು ಯೋಚನೆಯನ್ನು ಎಬ್ಬಿಸುತ್ತದೆ. ಮನುಷ್ಯನು ಕ್ರೈಸ್ತಮತಾವಲಂಬಿಯಾಗಿದ್ದ ಪಕ್ಷದಲ್ಲಿ ಸೈತಾನನಿಂದ ಅಂತಹ ಕೆಟ್ಟುದು ಪ್ರೇರೇಪಿಸಲ್ಪಟ್ಟಿರುತ್ತೆಂದು ತಪ್ಪಾಗಿ ಭಾವಿಸಬಹುದು. ಆದರೆ ವಾಸ್ತವವಾಗಿಯೂ ಅದು ಆತನಿಗೇ ಸೇರಿದ್ದು.

ಈ ನಿಯಮದಿಂದ ಒಂದು ಅಂಶ ವ್ಯಕ್ತಪಟ್ಟಂತೆ ಆಯಿತು. ಏನೆಂದರೆ ಪ್ರತಿಯೊಬ್ಬ ಮನುಷ್ಯನೂ ತನ್ನ ಒಳ್ಳೆಯ ಸ್ವಭಾವವನ್ನಾದರೂ ಬಲಪಡಿಸಿಕೊಳ್ಳಬಹುದು, ಅಥವಾ ತನ್ನ ದೌರ್ಬಲ್ಯವನ್ನು ಹೆಚ್ಚಿಸಿಕೊಳ್ಳಬಹುದು. ಆದುದರಿಂದ ಎಂತಹ ಯೋಚನೆ ಅಥವಾ ಭಾವನೆಗೆ ಅವಕಾಶ ಕೊಡುತ್ತೇವೋ ಅದನ್ನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ಸಾಧಾರಣ ಮನುಷ್ಯರಂತೆ ಅಸಾಧುವಾದ ಭಾವನೆಗಳು ನಮ್ಮ ಸಧ್ಯ ಸ್ಥಿತಿಗೆ ಸ್ವಾಭಾವಿಕವಾದುವುಗಳು, ಎಂದು ನಾವು ನಮ್ಮನ್ನು ಕ್ಷಮಿಸಿಕೊಳ್ಳಕೂಡದು. ಕೆಟ್ಟ ಯೋಚನೆಗಳಂತೆಯೇ ಒಳ್ಳೆಯ ಯೋಚನೆಗಳನ್ನೇ ಮಾಡುವುದನ್ನು ಅಭ್ಯಾಸ ಮಾಡುವುದಕ್ಕೆ ಸಾಧ್ಯ. ಅಲ್ಲದೆ ಇತರರಲ್ಲಿನ ಒಳ್ಳೆಯದನ್ನೇ ನೋಡುವ ಅಭ್ಯಾಸವನ್ನು ಅನುಷ್ಠಾನಕ್ಕೆ ತರುವುದಕ್ಕೂ ಸಾಧ್ಯ. ನಾವು ಆ ರೀತಿ ನೋಡುವುದಕ್ಕೆ ಮನಸ್ಸುಕೊಟ್ಟರೆ ಅಂತಹ ಒಳ್ಳೆಯ ಗುಣಗಳು ಎಷ್ಟು ಇರುತ್ತವೆ, ಮತ್ತು ಅವು ಎಷ್ಟು ಮುಖ್ಯವಾದುವು ಎಂಬುದು ನಮಗೆ ಆಶ್ಚರ್ಯವನ್ನುಂಟು ಮಾಡದೆ ಇರಲಾರದು. ಆಗ ಅವರನ್ನು ಕಂಡರೆ ಸಂತೋಷವಾಗುತ್ತದೆ. ಅವರ ವಿಷಯವಾಗಿದ್ದ ನಿರಾಧಾರವಾದ ಅಸಹನೆಯು ತೊಲಗಿ ಹೋಗುವುದು. ಆಗ ವಾಸ್ತವವಾಗಿಯೂ ಅವರಿಗೆ ಸಲ್ಲಬೇಕಾದ ನ್ಯಾಯವು ಸಂದಹಾಗೆ ಆಗುತ್ತದೆ.

ಆದುದರಿಂದ ನಾವು ಯಾವಾಗಲೂ ಒಳ್ಳೆಯ ಮತ್ತು ಉಪಯುಕ್ತವಾದ ಯೋಚನೆಗಳನ್ನೇ ಮಾಡುವುದು ನಮಗೆ ಸಹಜವಾಗುವಂತೆ ಅಭ್ಯಾಸ ಮಾಡುತ್ತಾ ಬರಬೇಕು. ಈ ಅಭ್ಯಾಸವು ಖಚಿತವಾದ ಮೇಲೆ ನಮ್ಮ ಯೋಚನೆಗಳು ಇತರರ ವಿಷಯವಾಗಿ ಸಂಶಯಾಸ್ಪದವಾಗಿರುವುದಕ್ಕೆ ಬದಲಾಗಿ ಅವರಲ್ಲಿನ ಒಳ್ಳೆಯದಕ್ಕೆ ಸಂಬಂಧಪಟ್ಟ ಮೆಚ್ಚುಗೆಯನ್ನು ವ್ಯಕ್ತಪಡಿಸುವಂತೆ ಆಗುತ್ತವೆ. ನಮ್ಮ ಮೆದುಳು ಖಾಲಿಯಾಗಿರುವಾಗ ಕೆಟ್ಟುದಕ್ಕೆ ಬದಲಾಗಿ ಒಳ್ಳೆಯ ಯೋಚನೆಗಳೇ ಉದಯವಾಗುತ್ತವೆ. ಏಕೆಂದರೆ ನಾವು ನಮ್ಮ ಸುತ್ತುಮುತ್ತಲೂ ಒಳ್ಳೆಯ ಸಂಕಲ್ಪರೂಪಗಳೇ

ಇರುವಂತೆ ಶ್ರಮಿಸಿರುತ್ತೇವೆ. ಯಾವ ರೀತಿ ಆಗಬೇಕೆಂದು ಮನುಷ್ಯನು ಬಯಸುತ್ತಾನೆಯೋ ಆ ರೀತಿ ಆಗುತ್ತಾನೆ. ಇಂತಹ ಸದಭ್ಯಾಸದ ಮೂಲಕ ನಮ್ಮ ಜೀವಿತವು ಲಘುವಾಗಿಯೂ ಸುಖಮಯವಾಗಿಯೂ ಆಗುತ್ತದೆ.

ಈಗ ನಮ್ಮ ಯೋಚನೆಗಳಿಂದ ಇತರರ ಮೇಲೆ ಎಂತಹ ಪರಿಣಾಮವಾಗುತ್ತದೆ ವಿಮರ್ಶಿಸೋಣ. ನಮ್ಮ ಪ್ರತಿಯೊಂದು ಯೋಚನೆಯೂ ಅದಕ್ಕೆ ತಕ್ಕ ಸ್ಪಂದ ಶಕ್ತಿಯನ್ನು ಸುತ್ತಲೂ ಹರಡುತ್ತದೆ. ಉದಾಹರಣೆಗಾಗಿ ಒಲೆಯಮೇಲಿರುವ ಪಾತ್ರೆಯು ಕಾದು ಬಿಸಿಯಾಗುತ್ತದೆ, ಕಾರಣವೇನು ? ಬೆಂಕಿಯು ತನ್ನ ಶಾಖವನ್ನು ಬೀರುವುದರಿಂದ ಪಾತ್ರೆಯ ಅಣುಸಮುದಾಯಗಳು ಅದೇ ಸ್ಪಂದ ಗತಿಯಲ್ಲಿ ಚಲಿಸುತ್ತವೆ. ಆಗ ಪಾತ್ರೆಯೂ ಕೂಡ ಬೆಂಕಿಯಂತೆ ಸುಡುವಂತೆ ಆಗುತ್ತದೆ. ಹೀಗೆಯೇ ದಯಾಮಯವಾದ ಯೋಚನೆಗಳನ್ನು ಕಳುಹಿಸಿದರೆ, ನಾವು ಯಾರನ್ನು ಕುರಿತು ಅದನ್ನು ಕಳುಹಿಸುತ್ತೇವೋ ಆತನಲ್ಲೂ ಅವು ಕಾಲಕ್ರಮದಲ್ಲಿ ಕರುಣೆಯನ್ನು ಎಬ್ಬಿಸುತ್ತವೆ. ನಮ್ಮ ಒಳ್ಳೆಯ ಯೋಚನೆಗಳು ಆತನ ಹತ್ತಿರ ಹೋಗಿ ಸಮಯ ಕಾದು ಆತನಿಗೆ ಒಳ್ಳೆಯದನ್ನೇ ಮಾಡುವ ದೇವತೆಗಳಂತೆ ವರ್ತಿಸುತ್ತವೆ. ಕೆಟ್ಟ ಯೋಚನೆಗಳು ಪಿಶಾಚಿಗಳಂತೆ ನಮಗೂ, ಇತರರಿಗೂ ಕೆಟ್ಟ ಪರಿಣಾಮವನ್ನೇ ಉಂಟು ಮಾಡುವಂತೆ ನಮ್ಮ ಒಳ್ಳೆಯ ಯೋಚನೆಗಳು ಆತನ ರಕ್ಷಣಾ ದೇವತೆಯಂತೆ ಕೆಟ್ಟದನ್ನೂ ದೂರೀಕರಿಸಿ ಒಳ್ಳೆಯದನ್ನು ಉತ್ತೇಜನಗೊಳಿಸುತ್ತವೆ.

ಈಗಿನ ಕಾಲದಲ್ಲಿ ಇತರರಲ್ಲಿ ತಪ್ಪನ್ನೇ ನೋಡುತ್ತಾ ‚‚ಇದು ಸರಿಯಲ್ಲ-ಅದು ಸರಿಯಲ್ಲ'' ಎಂಬುದಾಗಿ ಗೊಣಗುಟ್ಟಿಕೊಂಡು ಅಸಮಾಧಾನ ಮನೋಭಾವನೆಯುಳ್ಳವರೇ ಹೆಚ್ಚು ಜನರಿರುತ್ತಾರೆ. ಅಂತಹರಿಂದ ಉಂಟಾಗುವ ಕೆಟ್ಟದು ಎಷ್ಟೆಂಬುದು ಅವರಿಗೆ ತಿಳಿಯದು-ಪಾಪ! ಹೀಗೆಯೇ ನಿಂದಾಸ್ಪದವಾದ ಹರಟೆಯಲ್ಲಿ ತೊಡಗಿರುವ ಜನರಿಂದಲೂ ಸಮಾಜಕ್ಕೆ ತುಂಬ ಕೆಡುಕು ಸಂಭವಿಸುತ್ತದೆ. ಆ ನಿಂದೆಗೆ ಸತ್ಯದ ಆಧಾರವಿರಲಿ, ಇಲ್ಲದೆ ಇರಲಿ, ಆಗುವ ಕೆಡಕಿನಲ್ಲಿ ವ್ಯತ್ಯಾಸವೇನೂ ಇರುವುದಿಲ್ಲ. ಏಕೆಂದರೆ ಈ ಸಂದರ್ಭದಲ್ಲಿ ಅನೇಕರು ಒಬ್ಬನಲ್ಲಿರುವ ದೋಷ ಅಥವಾ ಇದೆಯೆಂದು ಊಹಿಸಲ್ಪಟ್ಟಿರುವ ದೋಷವನ್ನು ಕುರಿತು ಒಟ್ಟಿಗೆ ತಮ್ಮ ಮನಶ್ಶಕ್ತಿಯನ್ನು ಕೇಂದ್ರೀಕರಿಸಿ ಚಿಂತಿಸುತ್ತಾ ಅದಕ್ಕೆ ಪುಷ್ಟಿಕೊಡುತ್ತಾರೆ. ಇದರಿಂದ ಅಷ್ಟು ಜನರ ಕೆಟ್ಟ ಯೋಚನೆಗಳೂ ಒಟ್ಟಿಗೆ ಸೇರಿ ಆತನಲ್ಲಿ ಆ ದೋಷವಿದ್ದರೆ ಅದನ್ನು ಸಮೃದ್ಧಿಯಾಗಿ ಬೆಳೆಸುತ್ತವೆ, ಅಥವ ಆ ದೋಷವಿಲ್ಲದಿದ್ದರೆ ಅದರ ಬೀಜ ಬಿತ್ತಿ ಅದು ಕಾಲಕ್ರಮದಲ್ಲಿ ಬೆಳೆಯುವಂತೆ ಮಾಡುತ್ತವೆ. ಎಂತಹ ಘೋರ ಕೃತ್ಯ!

ನಿಮ್ಮ ಸ್ನೇಹಿತರನ್ನು ಕುರಿತು ಚಿಂತಿಸಬೇಕಾಗಿ ಬಂದಾಗಲೆಲ್ಲ ಅವರ ಒಳ್ಳೆಯ ಗುಣಗಳನ್ನು ಚಿಂತಿಸುತ್ತಾ ಬನ್ನಿರಿ. ಇದರಿಂದ ನಿಮಗೂ ಒಳ್ಳೆಯದಾಗುವುದಲ್ಲದೆ

ಅವರಿಗೂ ಶ್ರೇಯಸ್ಸಾಗುತ್ತದೆ. ಒಂದು ವೇಳೆ ನಿಮ್ಮ ಸ್ನೇಹಿತನಲ್ಲಿ ಕೆಟ್ಟುದನ್ನು ಕುರಿತು ಪ್ರಸ್ತಾಪ ಮಾಡಬೇಕಾಗಿ ಬಂದಾಗ ಆ ಕೆಟ್ಟ ಗುಣಕ್ಕೆ ವಿರೋಧವಾದ ಒಳ್ಳೆಯ ಗುಣವನ್ನು ಚಿಂತಿಸಿರಿ. ‘‘ಇಂತಹ ದೋಷವಿದೆಯೆಂದು ಹೇಳುವುದಕ್ಕೆ ಬದಲು ಇಂತಹ ಒಳ್ಳೆಯ ಗುಣ ಬೆಳೆಯಬೇಕು” ಎಂದು ಹೇಳಿರಿ. ಉದಾಹರಣೆಗಾಗಿ ಜಿಪುಣತನವಿದೆ ಎಂದು ಹೇಳುವುದಕ್ಕೆ ಬದಲಾಗಿ ಉದಾರತೆ ಬೆಳೆಯಬೇಕು ಎಂದು, ನೀವು ಹೆಚ್ಚು ಜನರು ಚಿಂತಿಸುವುದರಿಂದ ಆ ಸಂಕಲ್ಪ ಶಕ್ತಿಯು ಆತನ ಮೇಲೆ ಮಳೆ ಗರೆದು ಆತನಲ್ಲಿ ‘ಉದಾರತೆ’ಯು ಬೆಳೆಸುತ್ತದೆ. (ಆದರೆ ಮಾತಿನಲ್ಲಿ ಮಾತ್ರ ‘ಉದಾರತೆ’ ಇದ್ದರೆ ಸಾಲದು ಮನಃಪೂರ್ವಕವಾಗಿ ‘ಉದಾರತೆ’ಯನ್ನು ಚಿಂತಿಸ ಬೇಕು—T.V.R.)

ಈ ರೀತಿಯಲ್ಲಿ ಯಾರೂ ಜಾಗರೂಕತೆಯಿಂದ ತನ್ನ ಮನಶ್ಶಕ್ತಿಯನ್ನು ಲೋಕಕ್ಕೆ ಒಳ್ಳೆಯದನ್ನೇ ಮಾಡುವಂತೆ ಸದ್ವಿನಿಯೋಗ ಮಾಡುತ್ತಿರುತ್ತಾರೆಯೋ ಅಂತಹನು ಆತನು ವಾಸಿಸುವ ಪ್ರಪಂಚದ ಭಾಗದಲ್ಲಿ ಮೇಲಿನ ಅನುಗ್ರಹಶಕ್ತಿಗೆ ಒಂದು ನೆಲೆಯಂತೆ ಆಗುತ್ತಾನೆ. ಆದರೆ ನಮಗೆ ಇರುವ ಈ ಮನಶ್ಶಕ್ತಿಯು ಕೇವಲ ಸ್ವಲ್ಪಮಾತ್ರ—ಇರುವಷ್ಟನ್ನು ಪೋಲಂಮಾಡದೇ ಸದ್ವಿನಿಯೋಗ ಮಾಡಬೇಕು: ಒಬ್ಬ ಸಾಧಾರಣ ಮನುಷ್ಯನನ್ನು ನೋಡಿರಿ, ಯಾವುದಾದರೂ ಒಂದು ಕಾರಣಕ್ಕಾಗಿ ಪರಿತಪಿಸುತ್ತಾ ಅಸಮಾಧಾನ ಸ್ಥಿತಿಯಲ್ಲಿರುತ್ತಾನೆ, ತನ್ನ ಅಲ್ಪ ಶಕ್ತಿಯನ್ನು ಪೋಲುಮಾಡುತ್ತಾ ಇರುತ್ತಾನೆ. ತನ್ನಲ್ಲಿರುವ ಮನಶ್ಶಕ್ತಿಯನ್ನು-ಇರುವ ಸ್ವಲ್ಪ ವನ್ನು ಪೋಲುಮಾಡದೆ ಸದ್ವಿನಿಯೋಗ ಮಾಡಬೇಕು, ಎಂಬ ಜವಾಬ್ದಾರಿಯನ್ನು ಅರಿತುಕೊಂಡರೆ ಆತನಿಗೂ ಕ್ಷೇಮ, ಇತರರಿಗೂ ಒಳ್ಳೆಯದು ಆಗುತ್ತದೆ. ಮತ್ತೊಂದು ರೀತಿಯಲ್ಲಿ ನಮ್ಮ ಸಂಕಲ್ಪಶಕ್ತಿಯು ಪೋಲಾಗುತ್ತಿದೆ. ಅದೇನೆಂದರೆ ಯಾವುದಾದರೂ ಒಂದು ವಿಷಯವನ್ನು ಕುರಿತು, ಆ ವಿಷಯವು ರಾಜಕೀಯ, ಸಾಮಾಜೀಕ ಮತ ಅಥವ ತತ್ವಕ್ಕೆ ಸಂಬಂಧಪಟ್ಟಿರಬಹುದು. ಪ್ರತಿಯೊಬ್ಬನೂ ತಾನು ತಿಳಿದಿರುವುದೇ ಸರಿ ಎಂಬ ಮನೋಭಾವನೆಯಿಂದ ಚರ್ಚೆ ಮಾಡುತ್ತಿರುತ್ತಾನೆ. ಈ ರೀತಿ ಚರ್ಚೆ ಮಾಡುವ ಸ್ವಭಾವದವರು, ತಾವು ವಾದ ಮಾಡುತ್ತಿರುವ ವಿಷಯಕ್ಕೆ ಅನೇಕ ಮುಖಗಳಿವೆಯೆಂಬುದನ್ನೂ ತಮಗೇನೇ ಆ ವಿಷಯ ಚೆನ್ನಾಗಿ ತಿಳಿಯದು— ಎಂಬುದನ್ನೂ ಸಹ ಅರಿಯರು. ಅಲ್ಲದೇ ಆ ರೀತಿ ವಾದಮಾಡತಕ್ಕ ವಿಷಯಗಳು ಅನೇಕ ಸಂದರ್ಭದಲ್ಲಿ ಕೆಲಸಕ್ಕೆ ಬಾರದವುಗಳೇ ಆಗಿರುವುದು ಹೆಚ್ಚು, ಅಂತಹ ಚರ್ಚೆಯಿಂದ ಯಾರಿಗೂ ಏನೂ ಪ್ರಯೋಜನವಾಗುವುದಿಲ್ಲ; ಅಲ್ಲದೇ ಆ ರೀತಿ ಚರ್ಚೆಯಲ್ಲಿ ತೊಡಗಿರುವವರಿಗೆ ಹೆಚ್ಚು ಕೆಡಕೇ ಆಗುತ್ತದೆ. ಅಲ್ಲದೇ ಅವರ ಮನಶ್ಶಕ್ತಿ ವೃಥಾ ಖರ್ಚಾಗುತ್ತದೆ.

ವಾಸ್ತವವಾಗಿಯೂ ತನಗೂ ಇತರರಿಗೂ ಒಳ್ಳೆಯದನ್ನೇ ಬಯಸುವವನು ತನ್ನ ಮನಶ್ಶಕ್ತಿಯನ್ನು ವೃಥಾ ಪೋಲು ಮಾಡದೆ ಶೇಖರಿಸಿಟ್ಟುಕೊಳ್ಳಬೇಕು. ಅನಾವಶ್ಯಕವಾಗಿ ಮಾತನಾಡದೆ ಮೌನವಾಗಿರುವುದನ್ನು ಕಲಿಯಬೇಕು. ಎಲ್ಲವನ್ನೂ ತತ್ವದೃಷ್ಟಿಯಿಂದ ನೋಡುವುದನ್ನು ಕಲಿಯಬೇಕು. ಮನಶ್ಶಕ್ತಿಯು ಮಹತ್ತರವಾದುದು. ಇದರ ಬೆಲೆಯನ್ನು ಅರಿತುಕೊಂಡು ಸಾಧಕನು ಅದನ್ನು ತನಗೂ ಇತರರಿಗೂ ಒಳ್ಳೆಯದಾಗುವಂತೆ ಸದ್ವಿನಿಯೋಗ ಮಾಡುತ್ತ ಬಂದರೆ ಅಂತಹನಿಗೆ ಆಧ್ಯಾತ್ಮಿಕ ಪ್ರಗತಿಯು ತುಂಬ ತೀವ್ರಗತಿಯಲ್ಲಿ ಮುಂದುವರಿಯುತ್ತದೆ. ಎಂಬುದರಲ್ಲಿ ಸಂಶಯವಿಲ್ಲ.

ಸಂಕಲ್ಪಶಕ್ತಿಯು ಬಲವತ್ತರವಾದುದು ಎಂಬ ತಿಳಿವಳಿಕೆ ಬಂದಮೇಲೆ ನಾವು ನಮ್ಮ ಯೋಚನೆಗಳನ್ನು ಎಚ್ಚರಿಕೆಯಿಂದ ಕಾದು ನೋಡುತ್ತಿರಬೇಕು. ಸ್ವಾರ್ಥಕವಾದುವು, ಕೆಟ್ಟುವು ಮತ್ತು ನಿರ್ದಯವಾದುವುಗಳನ್ನು ದಮನಮಾಡಿ ಪರಾರ್ಥವನ್ನೇ ಬಯಸುವ, ಒಳ್ಳೆಯವೂ, ಘನವೂ, ಉದಾರವೂ ಆದ ಯೋಚನೆಗಳನ್ನೇ ಮಾಡುವುದನ್ನೇ ಅಭ್ಯಾಸ ಮಾಡಬೇಕು. ಪ್ರತಿಯೊಂದು ಕೆಟ್ಟ ಯೋಚನೆಯನ್ನು ದಮನಮಾಡಬೇಕು. ಒಂದು ಸಾರಿ ಕೆಟ್ಟ ಯೋಚನೆಯನ್ನು ತಡೆದರೆ ಮತ್ತೊಂದು ಬಾರಿ ಅದನ್ನು ತಡೆಯುವುದು ಇನ್ನೂ ಸುಲಭವಾಗುವುದು. ಒಳ್ಳೆಯ ದಯಾಮಯವಾದ ಯೋಚನೆಗಳನ್ನು ಕಳುಹಿಸುವ ಮೂಲಕ ಸಂಬಂಧಪಟ್ಟವರಿಗೆ ತುಂಬ ಪ್ರಯೋಜನವಾಗುತ್ತದೆ. (ಹಣವನ್ನು ದಾನ ಮಾಡುವುದಕ್ಕಿಂತಲೂ ಒಳ್ಳೆಯ ಯೋಚನೆಗಳನ್ನು ಕಳುಹಿಸುವುದು ಹೆಚ್ಚು ಪುಣ್ಯಪ್ರದವಾದುದು. ಹಣವನ್ನು ತೆಗೆದುಕೊಂಡವನು ದುರುಪಯೋಗ ಮಾಡಲು ಸಾಧ್ಯ—ಆದರೆ ಒಳ್ಳೆಯ ಯೋಚನೆಗಳು ಸಂಬಂಧಪಟ್ಟವರನ್ನು ಒಳ್ಳೆಯವರನ್ನಾಗಿ ಪರಿವರ್ತನೆ ಮಾಡುವ ಸಂಭವವಿರುತ್ತದೆ. ಆ ಮೂಲಕ ಕೆಟ್ಟುದು ಸ್ವಲ್ಪವೂ ಆಗುವುದಿಲ್ಲ. (ನಹಿಜ್ಞಾನೇನ ಸದೃಶಂ ಪವಿತ್ರಮಿಹವಿದ್ಯತೇ, ಜ್ಞಾನಕ್ಕಿಂತಲೂ ಪವಿತ್ರವಾದ ವಸ್ತುವು ಮತ್ತೊಂದಿಲ್ಲವೆಂದು ಭಗವದ್ಗೀತೆಯೂ ಕೂಡ ಬೋಧಿಸುತ್ತದೆ—T.V.R.) ಅಲ್ಲದೆ ಹಣವನ್ನು ಸತ್ಪಾತ್ರದಲ್ಲಿ ದಾನ ಮಾಡುವುದರ ಮೂಲಕ ದಾನಸ್ವೀಕಾರ ಮಾಡಿದವನ ಸ್ಥೂಲವಾದ ಕಷ್ಟಗಳು ಹೇಗೆ ಪರಿಹಾರವಾಗುತ್ತವೆಯೋ ಅಷ್ಟೇ ಖಚಿತವಾಗಿ ಒಳ್ಳೆಯ ಯೋಚನೆಗಳ ಮೂಲಕವೂ ಪ್ರಯೋಜನವಾಗುತ್ತದೆ. ಬಡವನೂ ಸಹ ಇಂತಹ ಉನ್ನತ ಮಟ್ಟದ ಸಹಾಯವನ್ನು ಮಾಡಬಹುದು, ವಿವೇಕಿಯು ತನ್ನ ಮನಶ್ಶಕ್ತಿಯನ್ನು ಉದ್ದೇಶಪೂರ್ವಕವಾಗಿ ವಿನಿಯೋಗ ಮಾಡುತ್ತಾನೆ. ಖಿನ್ನತೆ, ವ್ಯಸನ ಇವುಗಳಿಗೆ ಸಂಬಂಧಪಟ್ಟ ಯೋಚನೆಗಳಿಂದ ಸುತ್ತುಮುತ್ತಲಿನ ಪ್ರಪಂಚಕ್ಕೆ ಹೆಚ್ಚು ಕೇಡಾಗುತ್ತದೆ. ಖಿನ್ನತೆಯು ಉನ್ನತಮಟ್ಟದ ಯೋಚನೆಗಳನ್ನು ತಡೆಯುವುದಲ್ಲದೇ ಸೂಕ್ಷ್ಮಪ್ರಕೃತಿಯುಳ್ಳ ಜನರಿಗೆ ಹೆಚ್ಚು ದುಃಖವನ್ನುಂಟು

ಮಾಡುತ್ತದೆ. ಅಲ್ಲದೆ ಮಕ್ಕಳಿಗೆ ರಾತ್ರಿಕಾಲದಲ್ಲಿ ಭಯಪಡುವ ಸನ್ನಿವೇಶವನ್ನು ನಿರ್ಮಿಸುತ್ತದೆ. ಈ ರೀತಿ ಮಾಡುವುದು ತುಂಬ ಪಾಪಕರವಾದುದು. ನಿನ್ನ ವ್ಯಸನವನ್ನು ಮರೆತು ಧೈರ್ಯೋತ್ಸಾಹಗಳನ್ನು ಉತ್ತೇಜನ ಗೊಳಿಸುವ ಒಳ್ಳೆಯ ಯೋಚನೆ ಗಳನ್ನು ಪ್ರಸರಿಸುವುದನ್ನು ಕಲಿತರೆ ಪ್ರಪಂಚಕ್ಕೆ ತುಂಬ ಮೇಲನ್ನುಂಟು ಮಾಡಿದಂತೆ ಆಗುತ್ತದೆ, ಉದಾಹರಣೆಗಾಗಿ ರೋಗಿಗಳಿಗೆ ಸ್ಥೈರ್ಯವನ್ನು ಕೊಡುವ ಯೋಚನೆ ಗಳನ್ನು ಕಳುಹಿಸು.

ನಿಮ್ಮ ಯೋಚನೆಗಳು ನಿಮಗೆ ಸಂಬಂಧಪಟ್ಟುವಲ್ಲ, ಇತರರಿಗೂ ಕೂಡ ಒಳ್ಳೆಯದನ್ನೋ ಕೆಟ್ಟುದನ್ನೋ ಮಾಡುತ್ತವೆ. ಕೆಟ್ಟ ಯೋಚನೆಗಳು ಕೆಟ್ಟ ಮಾತುಗಳಿಗಿಂತಲೂ ತೀವ್ರವಾಗಿ ಪ್ರಯಾಣ ಮಾಡುತ್ತವೆ. ಆದರೆ ಯಾರಲ್ಲಿ ಅವುಗಳಿಗೆ ಸಂಬಂಧಪಟ್ಟ ದೋಷವಿಲ್ಲವೋ ಅಂಥವರಿಂದ ಪುಟ ನೆಗೆದು ಕಳುಹಿಸಿದವ ರಿಗೇ ವಾಪಸ್ಸು ಬಂದು ಸೇರುತ್ತವೆ. ಒಳ್ಳೆಯವರು ಈ ರೀತಿ ರಕ್ಷಿಸಲ್ಪಡುವ ಪ್ರಕೃತಿನಿಯಮವಿದೆ. (ನಮ್ಮ ಡಾ॥ ಅನಿಬೆಸೆಂಟು ಮಾತೆಯವರು ತಮಗೆ ಆಗಿರುವ ಒಂದು ಅನುಭವವನ್ನು ಕುರಿತು ಬೇರೆಕಡೆ ಬರೆದಿರುತ್ತಾರೆ. ಅವರು ಪ್ರತಿದಿನವೂ ನಾಲ್ಕು ಘಂಟೆಗಳ ಕಾಲ ಮಾತ್ರ ನಿದ್ರಿಸುತ್ತಿದ್ದರಂತೆ. ಆ ಕಾಲದಲ್ಲೂ ಕೂಡ ಕಾಮ ಲೋಕದಲ್ಲಿ ವ್ಯವಹರಿಸುತ್ತಾ ಎಲ್ಲಿ, ಯಾರಿಗೆ ಯಾವ ಸಹಾಯ ಬೇಕೋ ಅದನ್ನು ಮಾಡುತ್ತ ಆ ನಿದ್ರಾಕಾಲವನ್ನೂ ಸಹ ಸದ್ವಿನಿಯೋಗ ಮಾಡುತ್ತಿದ್ದರಂತೆ. ಈ ರೀತಿ ಮಾಡುತ್ತಿದ್ದಾಗ ಒಂದು ರಾತ್ರಿ ಒಂದು ಘಟನೆ ನಡೆಯಿತಂತೆ. ಅದೇನೆಂದರೆ ಒಬ್ಬ ಹೆಣ್ಣು ಮಗಳು ಯಾವುದೋ ಭಯೋತ್ಪಾದಕವಾದ ವಸ್ತುವಿನಿಂದ ತಪ್ಪಿಸಿ ಕೊಂಡು ಓಡಿಹೋಗುತ್ತಿದ್ದ ದೃಶ್ಯವು ಅವರ ಕಣ್ಣಿಗೆ ಬಿದ್ದಿತಂತೆ–ಆಗ ಕರುಣಾ ಮಯರಾದ ಅವರು ಆಕೆಗೆ ಭಯವನ್ನುಂಟು ಮಾಡುತ್ತಿದ್ದುದು-ಏನು ಎಂಬುದನ್ನು ಪತ್ತೆ ಹಚ್ಚಿದರಂತೆ-ಯಾರೋ ಒಬ್ಬ ಮಾಟಗಾರನು ಒಂದು ಕೃತಕವಾದ ಭೂತ ವನ್ನು ಸೃಷ್ಟಿಮಾಡಿ ಆಕೆಯನ್ನು ಅಟ್ಟಿಸಿಕೊಂಡು ಹೋಗಿ ತೊಂದರೆ ಮಾಡುವಂತೆ ಏರ್ಪಡಿಸಿದ್ದನೆಂಬುದು ಅವರಿಗೆ ಗೊತ್ತಾಯಿತಂತೆ. ಆಕೂಡಲೇ ಬೆಸೆಂಟು ಮಾತೆಯು ಆ ಕೃತಕವಾದ ಭೂತವನ್ನು ನಾಶಪಡಿಸಿ-ಆ ಹೆಣ್ಣು ಮಗಳನ್ನು ಅಪಾಯದಿಂದ ತಪ್ಪಿಸಿದರಂತೆ-ಆ ಕೂಡಲೇ ಆ ಭೂತವು ನಾಶವಾದುದು, ಆ ಮಾಟಗಾರನಿಗೆ ಗೊತ್ತಾಗಿ ಆತನು ತನ್ನ ಶಕ್ತಿಯನ್ನೆಲ್ಲ ಪ್ರಯೋಗಮಾಡಿ ಮತ್ತೊಂದು ಅತ್ಯಂತ ದೊಡ್ಡ ಭೂತವನ್ನು ಕಲ್ಪನೆ ಮಾಡಿ ತನ್ನ ಹಿಂದಿನ ಭೂತವನ್ನು ನಾಶಪಡಿಸಿದವರನ್ನು ನಾಶಪಡಿಸುವಂತೆ ಕಳುಹಿಸಿದನಂತೆ. ಆ ಪೆಡಂಭೂತವು ಭಯಂಕರವಾದ ರೀತಿಯಲ್ಲಿ ಘೋರ್ಗರೆಯುತ್ತಾ ಬರುತ್ತಿರುವುದನ್ನು ದೂರದಿಂದಲೇ ಕಂಡಕೂಡಲೇ ನಮ್ಮ ಬೆಸೆಂಟು ಮಾತೆಯವರು ಈ ರೀತಿಯೋಚಿಸಿದರಂತೆ. ಓಹೋ ! ಈ ಮಾಟಗಾರ ನಸು ನನಗಿಂತ ಬಲಿಷ್ಠನಾಗಿರುವಂತೆ ತೋರುತ್ತದೆ. ಹೇಗಾದರೂ ಆಗಲಿ ನಾನು

ಮಾಡುತ್ತಿರುವುದು ಜಗತ್ಪ್ರಭುಗಳ ಕೆಲಸವಲ್ಲವೇ! ಎಂಬುದಾಗಿ ಸನತ್ಕುಮಾರ ಪ್ರಭುಗಳನ್ನು ಸ್ಮರಣೆ ಮಾಡಿಕೊಂಡರಂತೆ—ಆ ಕೂಡಲೇ ಒಂದು ವಜ್ರದಂತಹ ಚಕ್ರವು ಅವರ ಮುಂದೆ ಗಿರ್ರನೆ ತಿರುಗುತ್ತಿರುವಂತೆ ಏರ್ಪಾಡಾಯಿತಂತೆ ಆ ಪೆಡಂಭೂತವು ಬಂದು ಆ ಚಕ್ರಕ್ಕೆ ಡಿಕ್ಕಿ ಹೊಡೆದು ಪುಟ ನೆಗೆದು ಹಿಂದಕ್ಕೆ ಹೋಗಿ ಆ ಮಾಟಗಾರನನ್ನೇ ಆಹುತಿತೆಗೆದುಕೊಂಡಿತಂತೆ. ಆದುದರಿಂದ ನಮ್ಮಲ್ಲಿರಬಹದಾದ ದೋಷಗಳನ್ನು ಗೆದ್ದು ಪರಿಶುದ್ಧರಾಗುತ್ತ ಬಂದರೆ ಪ್ರಪಂಚದಲ್ಲಿ ತಾಂಡವಾಡುತ್ತಿರುವ ಕೆಟ್ಟ ಯೋಚನೆಗಳಿಂದ ನಮಗೇನೂ ತೊಂದರೆಯಾಗುವುದಿಲ್ಲ. ಅಲ್ಲದೆ ಗುರುಗಳ ಕೆಲಸವನ್ನು ನಾವು ಹೃತ್ಪೂರ್ವಕವಾಗಿ ಮಾಡುತ್ತಾ ಬಂದರೆ ನಮ್ಮ ಯೋಗ ಕ್ಷೇಮವು ಅವರ ಕೈಯಲ್ಲಿದ್ದು ನಮ್ಮನ್ನು ಆ ಮಹಾತ್ಮರುರಕ್ಷಿಸುತ್ತಾರೆ ಎಂಬುದೂ ಖಚಿತ (T. V. R)

ನಮ್ಮ ಸ್ಥೂಲ ಪ್ರಕೃತಿ ಮೇಲೂ ಕೂಡ ನಮ್ಮ ಇಚ್ಛಾಶಕ್ತಿಯು ಪರಿಣಾಮವುಂಟಾಗುವಂತೆ ಕೆಲಸ ಮಾಡಬಲ್ಲುದು. ಆ ರೀತಿ ನಮ್ಮ ಇಚ್ಛಾಶಕ್ತಿಯನ್ನೂ ಬೆಳೆಸಿಕೊಳ್ಳಬಹುದೆಂಬುದು ಕಂಡುಬಂದಿದೆ, ಉದಾಹರಣೆಗಾಗಿ ಒಬ್ಬನು ತನ್ನ ಧ್ಯಾನಕಾಲದಲ್ಲಿ ಒಬ್ಬ ಮಹಾತ್ಮರ ಚಿತ್ರವನ್ನು ವಿನಿಯೋಗ ಮಾಡುತ್ತಿರುತ್ತಾನೆಂದು ಇಟ್ಟುಕೊಳ್ಳೋಣ. ಅಂತಹನಿಗೆ ಆ ಚಿತ್ರದ ಭಾವವು ಬದಲಾಯಿಸುವುದು ಕಂಡುಬರದೇ ಇಲ್ಲ. ಒಂದೇ ಸಮನೆ ಬಿಡದೆ ಮುಂದುವರಿಸತಕ್ಕ ಸಂಕಲ್ಪ ಶಕ್ತಿಯಿಂದ ಸ್ಥೂಲ ಕಣಗಳೂ ಕೂಡ ಬದಲಾವಣೆ ಹೊಂದುವುದೂ ವಾಸ್ತವವಾದ ಸಂಗತಿಯೇ, ಅಲ್ಲದೆ ಮೇಡಂ ಬ್ಲಾವಟ್ಸ್ಕಿಯವರು ತಮ್ಮ ಶಿಷ್ಯರಿಗೆ ಯೋಚನೆಗಳು ಸ್ಥೂಲ ವಸ್ತುಗಳನ್ನೂ ಕೂಡ ಕದಲಿಸಬಲ್ಲುವು ಎಂಬಂಶವನ್ನು ದೃಢಪಡಿಸಿಕೊಡಲು ಒಂದು ಪ್ರಯೋಗವನ್ನು ಹೇಳಿಕೊಟ್ಟು ಮಾಡಿಸುತ್ತಿದ್ದರಂತೆ-ಅದೇನೆಂದರೆ ‹‹ಒಂದು ರೇಷ್ಮೆ ದಾರದಿಂದ ಒಂದು ಸೂಜಿಯನ್ನು ಕಟ್ಟಿ ನೇತುಹಾಕಿರಿ-ಅದನ್ನು ನಿಮ್ಮ ಇಚ್ಛಾಶಕ್ತಿಯ ಪ್ರಭಾವದಿಂದ ಚಲಿಸುವಂತೆ ಮಾಡಬಹುದು" ಎಂಬುದು.

ಆದುದರಿಂದ ನೀವು ಪ್ರತಿದಿನವೂ ಬೆಳಿಗ್ಗೆ ಅಥವಾ ನಿಮಗೆ ಅನುಕೂಲವಾದಾಗ ಸ್ವಲ್ಪ ಕಾಲವನ್ನು ಒಳ್ಳೆಯ ಯೋಚನೆಗಳನ್ನು ಉತ್ಪತ್ತಿ ಮಾಡಿ ಕಳುಹಿಸಿಕೊಡುವ ಅಭ್ಯಾಸಕ್ಕೆ ಮೀಸಲಾಗಿಡಿರಿ, ಇದು ಒಳ್ಳೆಯ ಉಪಯುಕ್ತವಾದ ಸಾಧನವೆಂಬುದನ್ನು ನೀವೇ ಕಂಡುಕೊಳ್ಳುತ್ತೀರಿ. ಇಂತಹ ಬಿಡದೆ ಮಾಡತಕ್ಕ ಸದಭ್ಯಾಸದಿಂದ ನಿಮಗೇ ಶ್ರೇಯಸ್ಸಾಗುವುದಲ್ಲದೆ ಇತರರಿಗೂ ಅದರಲ್ಲೂ ರೋಗಿಗಳಿಗಂತೂ ನಿಮ್ಮ ಒಳ್ಳೆಯ ಯೋಚನೆಗಳಿಂದ ತುಂಬ ಪ್ರಯೋಜನವನ್ನುಂಟು ಮಾಡಿದಂತಾಗುತ್ತದೆ.

'ನಿನ್ನನ್ನು ನೀನು ತಿಳಿ'

ಗ್ರೀಕರ ಸಂಸ್ಕೃತಿಯಲ್ಲಿ ಈ ಮೆಲ್ಕಂಡ ಸವಾಲು ಇದೆ, "ನನ್ನ ಪರಿಚಯ ನನಗೆ ಇಲ್ಲವೇ!" ಎಂಬುದಾಗಿ ಓದುಗರನೇಕರು ಆಶ್ಚರ್ಯ ಪಡಬಹುದು. ವಾಸ್ತವವಾಗಿಯೂ ಮನುಷ್ಯನು ತನ್ನನ್ನು ತಾನು ಅರಿಯನು. ಮನುಷ್ಯನಿಗೆ ತನ್ನ ಬಿಟ್ಟು ಅನೇಕ ವಿಷಯಗಳು ಗೊತ್ತಿರಬಹುದು, ಆದರೆ ತನ್ನನ್ನು ತಾನು ವಾಸ್ತವವಾಗಿಯೂ ತಿಳಿಯನು, ಕೋಟಿಗೊಬ್ಬ ಭಕ್ತ ಕುಲಕೊಬ್ಬ ಶರಣರೆಂದು ಹೇಳುವ ಗಾದೆ ಮಾತಿದೆ. ಆದರೆ ಕೋಟಿಗೆ ಒಬ್ಬ ಭಕ್ತನಿರಬಹುದೇನೋ ಕುಲಕ್ಕೊಬ್ಬ ಶರಣನಂತೂ ಇಲ್ಲ. ಶರಣನೆಂದರೆ ಈಶ್ವರನ ನಿಯಮವನ್ನು ಪೂರ್ತ ನಂಬಿ ಸ್ವಾರ್ಥವನ್ನು ಪೂರ್ತ ಮರೆತು ಲೋಕ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ ಯೋಗಿಗೆ ಮಾತ್ರ ಆ ಹೆಸರು ಅನ್ವಯವಾಗುತ್ತದೆ. ಈ ಲೋಕವು ಒದಗಿಸುವ ಅಧಿಕಾರ ಸುಖ, ಮತ್ತು ಕೀರ್ತಿ ಇವುಗಳು ಧೂಳಿನ ಸಮಾನವೆಂದು ಅರಿತುಕೊಂಡು ಈಶ್ವರನ ಲೋಕೋದ್ಧಾರ ಕೆಲಸದಲ್ಲಿ ಪಾಲ್ಗೊಳ್ಳುವುದೇ ಅತ್ಯಂತ ಉನ್ನತ ಮಟ್ಟದ ಆನಂದವೆಂಬ; ಅಂತಿಮ ತೀರ್ಮಾನಕ್ಕೆ ಬರುತ್ತಾನೆ. ಆಗ ಶ್ವೇತರ್ಷಿಸಂಘದಜೀವನ್ಮುಕ್ತಮಹಾತ್ಮರ ನೇತೃತ್ವದಲ್ಲಿ ಶಿಷ್ಯತ್ವಕ್ಕೆ ಸಂಬಂಧಪಟ್ಟ ಯೋಗ್ಯತೆಯನ್ನು ಮೈಗೂಡಿಸಿಕೊಂಡು ಈಶ್ವರ ಸಂಕಲ್ಪಾನುಸಾರವಾಗಿ ಲೋಕ ಸೇವೆ ಕಾರ್ಯದಲ್ಲಿ ನಿರತನಾಗಿ ಒಂದು ಬೆಳವಣಿಗೆ ಮಟ್ಟವನ್ನು ತಲುಪಿದಾಗ-ಎಂದರೆ ತನ್ನ ಅಂತರಾತ್ಮನ ವಾಣಿಯಂತೆ ತನ್ನ ದಿನಚರಿ ಜೀವಿತವನ್ನು ಮೂರರಲ್ಲಿ ಎರಡು ಭಾಗದಷ್ಟು ಸನ್ಮಾರ್ಗದಲ್ಲಿ ನಡೆಸುತ್ತ ತನ್ನ ಅಂತರಾತ್ಮ—ದೇಹಾತ್ಮ ಬಹುಭಾಗ ಸಮರಸವಾದಾಗ, ಅಂತಹ ಸಾಧಕನು ಮೊದಲನೆಯ ದೀಕ್ಷೆಯನ್ನು ಪಡೆಯುತ್ತಾನೆ. ಅಲ್ಲಿಂದಾಚೆಗೆ ಆತನ ಜೀವಿತವು ಬುದ್ಧಿಮಟ್ಟದ ಪ್ರಜ್ಞೆಯ ಸ್ಫುರಣೆಯ ಬೆಳಕಿನಲ್ಲಿ ನಡೆದುಕೊಂಡು ಹೋಗುತ್ತದೆ. ಈ ಅಂತಸ್ತನ್ನು ತಲುಪಿದ ಯೋಗಿಗೆ ಪರಿವ್ರಾಜಕನೆಂದು ಹಿಂದೂ ಸಂಸ್ಕೃತಿಯಲ್ಲೂ, 'ಮಹೇಶ'ನೆಂದು ವೀರಶೈವ ಸಂಸ್ಕೃತಿಯಲ್ಲೂ ಹೆಸರುಗಳು ಬಂದಿವೆ. ಇಲ್ಲಿಂದ ಮುಂದಕ್ಕೆ ದೀಕ್ಷಿತನು, 'ಸ್ವಕಾಯ ದೃಷ್ಟಿ' (ದೇಹಾಭಿಮಾನ) ವಿಚಿಕಿತ್ಸ (ಕರ್ಮ ಪುನರ್ಜನ್ಮಗಳಲ್ಲಿನ ಸಂಶಯ) ಮತ್ತು ಶೀಲ ವ್ರತ ಪರಾಮರ್ಶ (ಮತಗಳಿಗೆ ಸಂಬಂಧಪಟ್ಟ ಒಣಾಚಾರಗಳಿಗೆ ಮರುಳಾಗಿರುವಿಕೆ) ಈ ಮೂರು ಬಂಧಗಳಿಂದ ವಿಮೋಚನೆ ಪಡೆಯಬೇಕು. ಆಗ ಆತನ ಗುರುವಿಗೆ ಆತನ ಯೋಗ್ಯತೆಯೂ, ಸೇವೆಯೂ ಸಮರ್ಪಕವಾದರೆ ಆತನಿಗೆ 2ನೆಯ ದೀಕ್ಷೆಯನ್ನು ಕೊಡಿಸುತ್ತಾನೆ. 2ನೆಯ ದೀಕ್ಷೆಗೂ ಮೂರನೆಯ ದೀಕ್ಷೆಗೂ ಮಧ್ಯೆ ಯಾವ ಬಂಧಗಳನ್ನೂ ಕಳಚಿಹಾಕಬೇಕಾಗಿರುವುದಿಲ್ಲ. ಆದರೆ ಅಂತರಾತ್ಮನು ಬುದ್ಧಿಯ ಪ್ರಜ್ಞೆಗೆ ಒಂದು ಕನ್ನಡಿಯಂತೆ ಆಗಿ ಮನಸ್ಸಿಗೆ ಎಟುಕದಿರುವ ಅತೀತ ತತ್ವಗಳನ್ನು ಅನುಭವ ಮಾಡಿಕೊಳ್ಳುತ್ತಾನೆ. ಅನಂತರ ಹಿಂದಿನ ಜೀವಿತಕ್ಕೆ

ಸಂಬಂಧಪಟ್ಟ ಕಾಮ—ಕ್ರೋಧಗಳ ಲೇಪಗಳಿದ್ದರೆ; ಅವುಗಳನ್ನು ಪೂರ್ತಿ ಮೂಲೋತ್ಪಾದನೆ ಮಾಡಬೇಕು. ಇವುಗಳನ್ನು 'ಕಾಮರಾಗ' ಮತ್ತು 'ಪಟಿಘ' ಎಂದು ಬೌದ್ಧ ಸಂಪ್ರದಾಯದಲ್ಲಿ ಕರೆಯುತ್ತಾರೆ. ಅನಂತರ ಅತನ ಗುರುವಿಗೆ ಮೇಲ್ಕಂಡ ದೃಷ್ಟಿಯಿಂದ ಶಿಷ್ಯನು ತಕ್ಕ ಯೋಗ್ಯತೆಯನ್ನು ಸಾಧಿಸಿರುವುದು ಕಂಡು ಬಂದರೆ ಆತನಿಗೆ ನಾಲ್ಕನೆಯ ದೀಕ್ಷೆ ಕೊಡಿಸುತ್ತಾನೆ. ಆಗ ಅಂತಹನು ಹಿಂದೂ ಸಂಸ್ಕೃತಿಯ ಮೇರೆಗೆ "ಶರಣ" ನೆಂದೂ ಕರೆಯಲ್ಪಡುತ್ತಾನೆ. (ಎರಡನೆಯ ದೀಕ್ಷೆಗೆ ಕುಟೀಚಕ—ಪ್ರಸಾದಿ—ಮೂರನೆಯ ದೀಕ್ಷೆಗೆ, ಹಂಸ—ಪ್ರಾಣಲಿಂಗಿ, ಎಂಬುದಾಗಿ ಕ್ರಮವಾಗಿ ಹಿಂದೂ ಮತ್ತು ವೀರಶೈವ ಸಂಸ್ಕೃತಿಗಳಲ್ಲಿ ಹೆಸರುಗಳು ಬಳಕೆಗೆ ಬಂದಿವೆ.) ಅಲ್ಲಿಂದಾಚೆಗೆ ಐದನೆಯ ದೀಕ್ಷೆಯನ್ನು ಪಡೆಯಬೇಕಾದರೆ ರೂಪರಾಗ, ಅರೂಪರಾಗ, ಮಾನೋ ಉದ್ಧಚ್ಚ ಮತ್ತು ಅವಿಧ್ಯೆ ಎಂದರೆ ಯಾವುದಾದರೂ ಒಂದು ರೂಪಕ್ಕೆ ಕಟ್ಟು ಬಿದ್ದಿರುವುದು, ಅಥವಾ ಕೆಳಗಿನ ಲೋಕಗಳಲ್ಲಿ ಲೋಕ ಕಲ್ಯಾಣದ ನಿಮಿತ್ತ ವಾದರೂ ಜನ್ಮತಾಳುವುದಕ್ಕೆ ಇಷ್ಟವಿಲ್ಲದೇ ಇರುವುದೂ, ಅಹಂಭಾವನೆ, ಅಸಹನೆ ಮತ್ತು ಅಜ್ಞಾನ (ಕರ್ತೃತ್ವ ಭಾವನೆ) ಈ ಐದು ಬಂಧಗಳನ್ನು ಕಳಚಿ ಹಾಕ ಬೇಕು, ಅಂತಹನಿಗೆ ಮಾತ್ರ ಸರ್ವಾತ್ಮ ಭಾವನೆಯು ಅಳವಡುತ್ತದೆ-ಎಂದರೆ ಎಲ್ಲೆಲ್ಲಿಯೂ ತನ್ನ ನಿಜ ಸ್ವರೂಪವನ್ನೇ ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಅಂತಹನು ಮಾತ್ರ ಈ ಸಂಸಾರ ಚಿತ್ರವನ್ನು ದಾಟಿದ ಸಿದ್ಧ ಪುರುಷನು. ಈ ಮಟ್ಟದ ಸಿದ್ಧಿ ಯನ್ನು ಪಡೆದವನನ್ನೇ ಶ್ರೀಕೃಷ್ಣನು "ಮನುಷ್ಯಾಂಣಾಂ ಸಹ ಸ್ರೇಷು ಕಶ್ಚಿದ್ಯತತಿ ಸಿದ್ಧಯೇ ಯತತಾಮಪಿ ಸಿದ್ಧಾನಾಂ ಕಶ್ಚಿನಾಂ ವೇತ್ತಿತ್ವತಃ "ಎಂಬ ಶ್ಲೋಕದಲ್ಲಿ ಪರ ಮಾತ್ಮನ ಸ್ವರೂಪವನ್ನು ಸರಿಯಾಗಿ ಸಾಕ್ಷಾತ್ಕಾರ ಮಾಡಿಕೊಂಡಿರುವವನು ಎಂದು ಹೇಳಿರುವುದು. ಸಾವಿರಾರು ಜನರಲ್ಲಿ ಯಾರೋ ಒಬ್ಬ ಒಂದು ಧ್ಯೇಯಕ್ಕಾಗಿ ಶ್ರಮಿಸುತ್ತಾನೆ," ಆ ಧ್ಯೇಯವು ಲೋಕ ಕಲ್ಯಾಣವೇ ಆಗಿದೆ. ಲೋಕ ಸಂಗ್ರಹ ಮೇಲಾಗೆ ಸಂಪಶ್ಯನ್ ಕರ್ತುರ್ಮಹರ್ಸಿ ವಾಪಿ ಲೋಕಸೇವೆಯೇ ಅತ್ಯಂತ ಉನ್ನತ ಧ್ಯೇಯವೆಂದು ಭಗವದ್ಗೀತೆಯಲ್ಲೂ ವೀರಶೈವ ಸಂಸ್ಕೃತಿಯಲ್ಲೂ ಮುಕ್ತ ಕಂಠವಾಗಿ ಹೇಳಿದೆ, ಸಕಲ ಜೀವರಾಶಿಗಳಿಗೆ ಲೇಸನೇ ಬಯಸುವರು ನಮ್ಮ ಕೂಡಲ ಸಂಗನ ಶರಣರು ಎಂದು ಬಸವೇಶ್ವರನೂ ಹೇಳಿರುತ್ತಾನೆ. ಆ ಉನ್ನತ ಮಟ್ಟದ ಸೇವೆಯೇ ಜೀವನ್ಮುಕ್ತ ಮಹಾತ್ಮನಿಗೆ (ವೀರಶೈವ ಸಂಸತ್ಕೃಯಲ್ಲಿ ಇದನ್ನು ಐಕ್ಯ (ಪರಮಾತ್ಮನಲ್ಲಿ ಒಂದಾಗುವುದು) ಸ್ಥಾನವೆಂದೂ ಕರೆಯುತ್ತಾರೆ. ತನ್ನ ಉಸಿರಿನಂತೆ ಆಗುತ್ತದೆ. ಅಂತಹ ಸಿದ್ಧಿಯನ್ನು (ಎಂದರೆ ಪರಿಪೂರ್ಣತೆ), ಮನುಷ್ಯನಾಗಿ ಕಲಿಯ ಬೇಕಾದ ಪಾಠಗಳನ್ನೆಲ್ಲ ಕಲಿತು ಪರಿಪಕ್ವತೆಯನ್ನು ಪಡೆದಿರುವುದು) ಪಡೆದ ಮಹಾತ್ಮರು ಈಗಿನ ಪ್ರಪಂಚದ ಬೆಳವಣಿಗೆ ಮಟ್ಟದಲ್ಲಿ 67 ಜನರು ಮಾತ್ರ ಇರುತ್ತಾರೆಂದು ತಿಳಿದು ಬಂದಿದೆ. 6 ಸಾವಿರ ಕೋಟಿ ಜೀವರಾಶಿಗಳಲ್ಲಿ 67

ಜನ ಮಾತ್ರ ಆ ಉನ್ನತ ಮಟ್ಟವನ್ನು ತಲುಪಿರುತ್ತಾರೆ. ಎಂದರೆ ಒಂದು ನೂರು ಕೋಟಿ ಜೀವಾತ್ಮರುಗಳಿಗೆ ಒಬ್ಬ ಜೀವನ್ಮುಕ್ತ ಮಹಾತ್ಮನೆಂದು ಸ್ಥೂಲವಾಗಿ ಹೇಳಿದ ಹಾಗಾಯಿತು. ಈ ಗ್ರಂಥವನ್ನು ಓದಿ ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯುಳ್ಳ ನಮ್ಮಂತಹ ಮುಮುಕ್ಷುವಿನ ಅಂತಸ್ತಿನಿಂದ ಆತ್ಮನ್ನನ್ನು ಸಾಕ್ಷಾತ್ಕಾರ ಮಾಡಿಕೊಂಡಿರುವ ಸಿದ್ಧಪುರುಷನ ಅಂತಸ್ತಿಗೆ ಕರೆದುಕೊಂಡು ಹೋಗುವ ಸಂಸರಣ ಪಥವನ್ನು ಯೋಗಿ ಲೆಡ್ಬೀಟರ್ರವರು "ಅಂತರಂಗ ಜೀವಿತ" ಎಂಬ ಗ್ರಂಥದಲ್ಲಿ "ನಿನ್ನನ್ನು ನೀನು ತಿಳಿ" ಎಂಬ ಶಿರೋನಾಮೆಯ ಕೆಳಗೆ ಈ ಮುಂದೆ ಬರೆದಿರುವಂತೆ ವಿವರಿಸಿರುತ್ತಾರೆ.—T.V.R)

"ನಿನ್ನನ್ನು ನೀನು ತಿಳಿ"

ಪುರಾತನ ಕಾಲದ ಗ್ರೀಕ್ ಸಂಸ್ಕೃತಿಯು ಈ ಹೇಳಿಕೆಯು ತುಂಬ ಶ್ಲಾಘನೀಯ ವಾದುದು. ಏಕೆಂದರೆ ಪ್ರತಿಯೊಬ್ಬ ಸಾಧಕನಿಗೂ ತನ್ನ ಸ್ವಭಾವವನ್ನು ವಿಮರ್ಶೆ ಮಾಡಿ ಕೊಳ್ಳುವುದು ಅತ್ಯಾವಶ್ಯಕ. (ಇಲ್ಲಿ—'ನಿನ್ನನ್ನು ನೀನು ತಿಳಿ' ತಂಬ ಬುದ್ಧಿವಾದವು ಕೆಳಗಿನ ಮಟ್ಟದ ದೇಹಾತ್ಮ ಜೀವಿತಕ್ಕೆ ಸಂಬಂಧಪಟ್ಟಂತೆ ಪ್ರಯೋಗ ವಾಗಿದೆ—T.V.R.) ಅನೇಕ ವಿದ್ಯಾರ್ಥಿಗಳೂ ಈ ಮೇಲ್ಕಂಡ ಅತ್ಯುನ್ನತ ಧ್ಯೇಯವನ್ನು ಮನಗಂಡು ತಾವು ಎಲ್ಲಿ ಹಿಂದಕ್ಕೆ ಜಾರಿ ಬೀಳುತ್ತಿದ್ದೀವೊ, ಎಂಬು ದಾಗಿ ಚಿಂತೆಗೆ ಒಳಗಾಗುವುದುಂಟು. ಸಂಸರಣ ನಿಯಮದ ಲಕ್ಷಣಗಳನ್ನು ಸರಿ ಯಾಗಿ ತಿಳಿದುಕೊಂಡಿದ್ದೇ ಆದರೆ ಅಂತಹ ಚಿಂತೆಗೆ ಅವಕಾಶವಿರುವುದಿಲ್ಲ. ಏಕೆಂದರೆ ಯಾರೂ ಕೂಡಾ ಹಿಂದಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ.

ಈ ಸಂಸರಣದ ಚೈತನ್ಯ ಪ್ರವಾಹವು ಗಂಗಾ ನದಿಯಂತೆ ಒಂದೇ ಸಮನೆ ಮುಂದು ಮುಂದಕ್ಕೆ ಹರಿದು ಕೊಂಡು ಹೋಗುತ್ತಲೇ ಇರುತ್ತದೆ. ಅಲ್ಲಲ್ಲಿ ಕೆಳಕ್ಕೆ ಪ್ರವಾಹವು ಧುಮುಕುವ ಸಂದರ್ಭಗಳಲ್ಲಿ ದಾರಿಯಲ್ಲಿರುವ ಬಂಡೆಗಳ ದೆಸೆಯಿಂದ ಸುಳಿಗಳು ಉತ್ಪತ್ತಿಯಾಗಿ ನೀರು ಹಿಂದಕ್ಕೆ ಸರಿದಂತೆ ಕಾಣಬಹುದು. ಆದರೆ ಒಟ್ಟಿ ನಲ್ಲಿ ಮುಖ್ಯವಾದ ಪ್ರವಾಹವು ಆ ಹಿಮ್ಮುಖವಾದ ಸುಳಿಗಳನ್ನು—ಎಲ್ಲವನ್ನೂ ಮುಂದಕ್ಕೆ ಸೆಳೆದುಕೊಂಡು ಹೋಗದೆ ಬಿಡುವುದಿಲ್ಲ. ಹೀಗೆ ತಮ್ಮ ಪುರುಷಾರ್ಥ ಸಾಧನೆಗಾಗಿ ಏನೂ ಪ್ರಯತ್ನ ಮಾಡದೇ ಇರುವ ಮಂದ ಸಂಸ್ಕಾರಿಗಳೂ ಸಹ ಪ್ರತಿ ಕ್ಷಣದಲ್ಲಿಯೂ ಕ್ರಮೇಣ ಅಲ್ಪ-ಸ್ವಲ್ಪ ಪ್ರಗತಿಯನ್ನು ಹೊಂದುತ್ತಲೇ ಇರುತ್ತಾರೆ. ಏಕೆಂದರೆ ಈ ಸಂಸರಣದ ಹಿಂದಿರುವ ಈಶ್ವರ ಸಂಕಲ್ಪವು ಅಷ್ಟು ಬಲವತ್ತರವಾ ದುದು. ಅದನ್ನು ತಡೆಗಟ್ಟಲು ಯಾರಿಗೂ ಸಾಧ್ಯವಿಲ್ಲ. ಆದರೆ ಸ್ವಂತವಾಗಿ ಪ್ರಯತ್ನ ಮಾಡದೆ ಇರುವ ಮನುಷ್ಯರ ಅಭಿವೃದ್ಧಿಯು ತುಂಬ ನಿಧಾನವಾಗಿ ಮುಂದೆ ಸಾಗುತ್ತದೆ. ಅಲ್ಲದೆ ಅಂತಹವರು ಲಕ್ಷಾಂತರ ಜನ್ಮಗಳನ್ನು ಎತ್ತಿ ಕಷ್ಟ ಪಡಬೇಕಾಗುತ್ತದೆ.

ಮನುಷ್ಯನು ಧರಿಸಿರುವ ದೇಹಗಳ ರಚನಾಕ್ರಮವೇ ತುಂಬ ಚಮತ್ಕಾರವಾದ ವಿಜ್ಞಾನದಿಂದ ಕೂಡಿದೆ. ಎಲ್ಲ ವಿಧವಾದ ಕೆಟ್ಟ ಭಾವನೆಗಳೂ ಯೋಚನೆಗಳೂ ಆತನ ದೇಹಗಳ ಕೆಳಗಿನ ಪ್ರಕೃತಿಯಲ್ಲಿ ವ್ಯಕ್ತವಾಗುತ್ತವೆ. ಕಾಮದೇಹದ ಕೆಳಗಿನ ದರ್ಜೆ ಪ್ರಕೃತಿ ಮೂಲಕ— ಉದಾಹರಣೆಗಾಗಿ ಮನುಷ್ಯರ ಸ್ವಾರ್ಥತೆ—ಕೋಪ,

ದ್ವೇಷ ಹೊಟ್ಟೆಕಿಚ್ಚು ಮತ್ತು ಇಂದ್ರಿಯ ಲೋಲುಪ್ತತೆ,—ಮೊದಲಾದುವು ವ್ಯಕ್ತವಾಗಬಲ್ಲವು. ಆದರೆ ಪ್ರೇಮ, ಭಕ್ತಿ, ಸಹಾನುಭೂತಿ ಮೊದಲಾದ ಆ ವಿಧವಾದ ಉನ್ನತ ಭಾವನೆಗಳು ಕಾಮ ಲೋಕದ ಮೇಲಿನ ಮೂರು ಉಪ ಪ್ರಕೃತಿ ತತ್ವಗಳ ಮೂಲಕ ಮಾತ್ರ ವ್ಯಕ್ತವಾಗಬಲ್ಲವು. ಈ ವಿಧವಾದ ದೇಹದ ರಚನಾ ಕ್ರಮದಿಂದ ಎರಡು ದೊಡ್ಡ ಫಲಿತಾಂಶಗಳು ಲಭ್ಯವಾಗುವುದಕ್ಕೆ ಸಾಧ್ಯವಾಯಿತು. ಕಾಮ ಲೋಕದ ಪ್ರತಿಯೊಂದು ಉಪಲೋಕ ತತ್ವವೂ ಆಯಾ ಮಟ್ಟದ ಮನೋ ಲೋಕದ ಉಪ ತತ್ವಕ್ಕೆ ವಿಶೇಷ ಸಂಬಂಧವುಳ್ಳದ್ದು. ಕಾಮ ದೇಹದ ಕೆಳಗಿನ ನಾಲ್ಕು ಉಪತತ್ವಗಳು ಮನೋ ದೇಹದ ಕೆಳಗಿನ ನಾಲ್ಕು ಉಪತತ್ವಗಳಿಗೂ—ಕಾಮದೇಹದ ಮೇಲಿನ ಮೂರು ಉಪತತ್ವಗಳು ಕಾರಣದೇಹದ ಮೇಲಿನ ಮೂರು ಉಪತತ್ವಗಳಿಗೂ ಸಂಬಂಧ ಪಟ್ಟುವು, ಇದರಿಂದ ಒಳ್ಳೆಯ ಮತ್ತು ಉನ್ನತ ಮಟ್ಟದ ಗುಣಗಳು ಮಾತ್ರ ಕಾರಣ ದೇಹದ ಸ್ವಭಾವದೊಳಕ್ಕೆ ಸಮರಸವಾಗಿ ಸೇರಿಕೊಳ್ಳಬಲ್ಲುವು. ಕೆಳಗಿನ ಪ್ರಕೃತಿಯಲ್ಲಿ ವ್ಯಕ್ತವಾಗಬಹುದಾದ ನೀಚ ಗುಣಗಳು ಕಾರಣ ದೇಹಕ್ಕೆ ಅಂಟುವಂತೆಯೇ ಇಲ್ಲ. ಇದರಿಂದ ಕಾರಣದೇಹವು, ಅದು ಬೆಳೆದಿರುವಷ್ಟು ಮಟ್ಟಿಗೆ ಯಾವಾಗಿಲೂ ಶುದ್ಧವಾಗಿಯೇ ಇರುತ್ತದೆ. ನೀಚ ಭಾವನೆ ಮತ್ತು ಯೋಚನೆಗಳೊಡನೆ ಸೇರಿಕೊಳ್ಳುವಂತಹ ಮನೋದೇಹದ ಪ್ರಕೃತಿಯು ಪ್ರತಿ ಜನ್ಮದಲ್ಲೂ ಹೊಸದಾಗಿರುತ್ತದೆ. ಆದರೆ ಕೆಟ್ಟುದ್ದು ಎರಡು ಮಟ್ಟಗಳಲ್ಲೂ ಆಯಾ ದೇಹದ ದೇಹ ಬೀಜದಲ್ಲಿ ಸಂಸ್ಕಾರ ರೂಪವಾಗಿ ಶೇಖರವಾಗುತ್ತಿರುತ್ತದೆ. ಇದನ್ನು ಜೀವಾತ್ಮನು ಪ್ರತಿ ಜನ್ಮದಲ್ಲೂ ಎದುರಿಸಿ ಕಳೆಚಿ ಹಾಕಲು ಪ್ರಯತ್ನ ಮಾಡಲೇಬೇಕು. ಆದರೆ ಬೇರಿನಂತಿರುವ ಕಾರಣದೇಹದಲ್ಲೇ ಆ ಕೆಟ್ಟುದೆಲ್ಲ ಸೇರಿಕೊಳ್ಳುವಂತೆ ಇದ್ದಿದ್ದ ಪಕ್ಷದಲ್ಲಿ ಅದನ್ನು ಗೆಲ್ಲುವುದು ಇನ್ನೂ ಕಷ್ಟವಾಗುತ್ತಿತ್ತು. (ಇಬ್ಬರು ಈಜುಬಾರದವರಿರುತ್ತಾರೆ, ಎಂದು ಇಟ್ಟುಕೊಳ್ಳೋಣ, ಒಬ್ಬ ಕೊಳದೊಳಕ್ಕೆ ಕಾಲುಜಾರಿ ಬಿದ್ದರೆ ಮತ್ತೊಬ್ಬ ದಡದ ಮೇಲಿರುವವನಿಂದ ಸಹಾಯ ಪಡೆದು ಮೇಲಕ್ಕೆ ಬರಬಹುದು. ಇಬ್ಬರೂ ನೀರಿನೊಳಕ್ಕೆ ಬಿದ್ದರೆ ಅವರಿಗೆ ಸಹಾಯಕರು ಇಲ್ಲದೇ ಹೋಗುತ್ತಿತ್ತು. ಹೀಗೆ ಮನುಷ್ಯರ ಜನ್ಮ-ಜನ್ಮಕ್ಕೂ ಶಾಶ್ವತವಾಗಿ ಮುಂದುವರಿಯುವ ಕಾರಣದೇಹವು ಶುದ್ಧವಾಗಿರುವುದರಿಂದ ಆ ಮೂಲಕ ವ್ಯಕ್ತವಾಗಿರುವ ಅಂತರಾತ್ಮನು ದೇಹಾತ್ಮದಲ್ಲಿನ ಮಾಲಿನ್ಯವನ್ನು ಹೋಗಲಾಡಿಸಲು ಸಾಧ್ಯವಿದೆ.—T.V.R.)

ಎರಡನೆಯ ಫಲಿತಾಂಶವೇನೆಂದರೆ ಒಂದೇ ಪರಿಮಾಣದಶಕ್ತಿಯು ಕೆಟ್ಟುದಕ್ಕೆ ವಿನಿಯೋಗವಾಗುವುದಕ್ಕಿಂತಲೂ ಒಳ್ಳೆಯದಕ್ಕೆ ವಿನಿಯೋಗವಾದರೆ ಹೆಚ್ಚು ಪ್ರಯೋಜನವನ್ನುಂಟುಮಾಡಬಲ್ಲುದು. ಏಕೆಂದರೆ ಕೆಟ್ಟುದು ಕಾಮಲೋಕದ ಸಾಂದ್ರವಾದ ಕೆಳಗಿನ ಪ್ರಕೃತಿಯ ಮೂಲಕ ವ್ಯಕ್ತವಾಗಬೇಕು, ಆದರೆ ಅಷ್ಟೇ ಶಕ್ತಿ ಒಳ್ಳೆಯದಕ್ಕೆ

ವಿನಿಯೋಗವಾದರೆ ಕಾಮಲೋಕದ ಮೇಲ್ಮಟ್ಟದ ಸೂಕ್ಷ್ಮ ಪ್ರಕೃತಿ ಮೂಲಕ ವ್ಯಕ್ತವಾಗುತ್ತದೆ. ಆದುದರಿಂದ ಒಳ್ಳೆಯದು ಕೆಟ್ಟುದದಕ್ಕಿಂತ ನೂರರಷ್ಟು ಹೆಚ್ಚು ಪ್ರಯೋಜನ ಪಡೆಯಲು ಸಾಧ್ಯ. ಇಲ್ಲಿ ಕೇವಲ ಕೆಳಗಿನ ಮಟ್ಟದ ಉಪಪ್ರಕೃತಿಗೂ ಕೇವಲ ಮೇಲ್ಮಟ್ಟದ ಉಪಪ್ರಕೃತಿಗೂ ಹೋಲಿಸಿದರೆ ಸಾವಿರ ಪಾಲಿಗಿಂತಲೂ ಹೆಚ್ಚು ಪ್ರಯೋಜನವುಂಟಾಗುತ್ತದೆ ಎಂದು ಹೇಳಬೇಕಾಗುತ್ತದೆ. (ಉದಾಹರಣೆಗಾಗಿ 10 ನಿಮಿಷ ಕೋಪಮಾಡಿಕೊಂಡರೆ, ಅದರ ಚಲನೆಯು ಕಾಮದೇಹದಲ್ಲಿ ಒಂದಕ್ಕೆ ಮುನ್ನೂರಷ್ಟು ಕಾಲ ಇರುತ್ತದಂತೆ. ಆದರೆ ಅಷ್ಟೇಕಾಲ ಧ್ಯಾನ ಅಥವಾ ಸಚ್ಚಿಂತನೆಯನ್ನು ಮಾಡಿದರೆ, ಆ ಮಟ್ಟದ ಅಲೆಗಳು ನಮ್ಮ ಮನೋದೇಹದಲ್ಲಿ 8–9 ದಿನಗಳ ಪರ್ಯಂತರ ಮುಂದುವರಿಯುತ್ತವೆಂದು ಯೋಗೀಲೆಡ್ಬೀಟರ್‌ರವರೇ ಬೇರೆಕಡೆ ಬರೆದಿರುತ್ತಾರೆ. ಹೀಗೆಯೇ ಪ್ರತಿದಿನವೂ ತಪ್ಪದೆ ಅಂತಹ ಸದಭ್ಯಾಸವನ್ನು ಮುಂದುವರಿಸುತ್ತಾ ಬಂದರೆ ನಾವು ಊಹಿಸಲು ಆಗದೆ ಇರುವಷ್ಟು ತೀವ್ರವಾಗಿ ನಮ್ಮ ಪ್ರಗತಿಯು ಮುಂದುವರಿಯುವುದರಲ್ಲಿ ಸಂಶಯವಿಲ್ಲ. ಉದಾಹರಣೆಗಾಗಿ ಒಂದು ಕೊಳದ ದಡದಲ್ಲಿ ಒಂದು ಮರವಿದೆ ಎಂದು ಊಹಿಸೋಣ, ಆಗ ಗಾಳಿ ಬೀಸಿದರೆ ಮರದ ಕೊಂಬೆಗಳನ್ನೂ ಕೊಳದ ನೀರನ್ನೂ ಚಲಿಸುವಂತೆ ಮಾಡುತ್ತದೆ. ಆದರೆ ಆ ಒಂದೇ ಪರಿಮಾಣದ ಗಾಳಿಯ ಶಕ್ತಿಯು ಮರದ ಕೊಂಬೆಗಳು ಸ್ಥೂಲವೂ ಸಾಂದ್ರವೂ ಆಗಿರುವುದರಿಂದ ಅವುಗಳಲ್ಲುಂಟುಮಾಡಿದ ಚಲನೆಯು ಸ್ವಲ್ಪಹೊತ್ತಿನ ಮೇಲೆ ನಿಂತುಹೋಗುತ್ತದೆ. ಆದರೆ ನೀರಿನಲ್ಲುಂಟಾದ ಚಲನೆಯು ಬಹು ದೀರ್ಘಕಾಲ ಮುಂದುವರಿಯುತ್ತದೆ. ಏಕೆಂದರೆ ನೀರು (ದ್ರವ) ಸೂಕ್ಷ್ಮಸ್ಥಿತಿಯಲ್ಲಿರುತ್ತದೆ.—T.V.R.) ಈ ವಿಧವಾದ ನಮ್ಮ ದೇಹ ರಚನಾ ಕ್ರಮದಿಂಲೇ ನಾವು ಹಿಂದಕ್ಕೆ ಸರಿಯುವುದಕ್ಕೆ ಸಾಧ್ಯವಿಲ್ಲವೆಂಬಂಶವು ವ್ಯಕ್ತಪಡುತ್ತದೆ. ಇಷ್ಟೇ ಅಲ್ಲದೆ, ಈಶ್ವರನ ಮಹತ್ತರವಾದ ಇಚ್ಛಾಶಕ್ತಿಯು ಎಡಬಿಡದೆ ಕೆಲಸಮಾಡುತ್ತಿರುವುದರಿಂದ ಒಳ್ಳೆಯ ಮಾರ್ಗದಲ್ಲಿ ಮುಂದುವರಿಯಲು ಏನೂ ಪ್ರಯತ್ನಮಾಡದೇ ಇರುವವರನ್ನೂ ಸಹ ಸ್ವಲ್ಪ ಉತ್ತಮಗತಿಗೆ ಕರೆದೊಯ್ಯುತ್ತದೆ. ಹಿಂದಿನ ಕಾಲದ ಕ್ರೈಸ್ತಮತಾನುಯಾಯಿಗಳ ಮೂಢನಂಬಿಕೆಯು ಎಂದರೆ, ಸೈತಾನನಕ್ಕೈ, ದೇವರದಕ್ಕಿಂತಲೂ ಬಲವಾದುದು ಎಂಬುದು ನಿರಾಧಾರವಾದುದು. ಈಶ್ವರನು ಸರ್ವಶಕ್ತನು, ಆತನ ದೃಢಸಂಕಲ್ಪಕ್ಕೆ ವಿರೋಧವಾಗಿ ಯಾವ ಶಕ್ತಿಯೂ ಜಯಪ್ರದವಾಗಿ ಕೆಲಸಮಾಡಲಾರದು. ಮನುಷ್ಯನು ಸರಿಯಾಗಿ ಅರ್ಥಮಾಡಿಕೊಳ್ಳುವುದಾದರೆ ಆತನ ಹಿಂದಿನ ದುಷ್ಕರ್ಮವೂ ಕೂಡ ಆತನ ಪ್ರಗತಿಗೆ ಸಹಾಯಕರವಾಗಿ ವಿನಿಯೋಗಮಾಡಿಕೊಳ್ಳಬಹುದು. (ಉದಾಹರಣೆಗಾಗಿ ನಮ್ಮ ಥಿಯಾಸಫಿ ಸಮಾಜದ ಸದಸ್ಯಳಾದ ಒಬ್ಬ ಸಾಧ್ವೀಮಣಿ ಇರುತ್ತಾರೆ. ಅವರಿಗೆ ಮಕ್ಕಳಿಲ್ಲ. ಮಕ್ಕಳಿಲ್ಲದಿರುವುದು ದುಷ್ಕರ್ಮವೆಂದು ಹೇಳುವುದು ವಾಡಿಕೆಯಾಗಿದೆ. ಮೇಲ್ಕಂಡ ಹೆಣ್ಣುಮಗಳು ಎಲ್ಲ ಮಕ್ಕಳನ್ನೂ ತನ್ನ ಮಕ್ಕಳಂತೆ ಪ್ರೀತಿ ವಿಶ್ವಾಸದಿಂದ ಕಾಣುತ್ತಾ ಎಲ್ಲರಿಗೂ ಉಚಿತ

ವಾದ ಸಹಾಯವನ್ನು ಮಾಡಿ ಸಂತೋಷ ಪಡಿಸುತ್ತಾಳೆ, ಇದರಿಂದ ಅನೇಕ ಮಕ್ಕಳೂ ಆಕೆಯ ಪ್ರೀತಿಗೆ ಆಕರ್ಷಣೆಯಾಗಿ ಆಕೆಯನ್ನು ಓಲೈಸಿ ಆಕೆಯ ಸಹ ವಾಸದಲ್ಲಿರಲು ಅಪೇಕ್ಷಿಸುತ್ತವೆ. ಸ್ವಂತ ಮಕ್ಕಳಿದ್ದರೆ ಆಕೆಗೆ ಈ ವಿಧವಾದ ಸಾರ್ವತ್ರಿಕವಾದ ಪ್ರೇಮವು ಬೆಳೆಯಲು ಅವಕಾಶವಾಗುತ್ತಿರಲಿಲ್ಲ. ಆದುದರಿಂದ ಆಕೆಗೆ ಮಕ್ಕಳಿಲ್ಲದಿರುವ ಕರ್ಮವನ್ನು ಆಕೆಯು ತನ್ನ ಮೇಲ್ಮಟ್ಟದ ಪ್ರಗತಿಗೆ ವಿನಿಯೋಗ ಮಾಡಿಕೊಂಡ ಹಾಗಾಯಿತು.—T.V.R.)

ಅನೇಕರು ಒಳ್ಳೆಯ ಮಾರ್ಗದಲ್ಲಿ ಮುಂದುವರಿಯಲು ತೀವ್ರ ಕಾಂಕ್ಷೆಯುಳ್ಳವರಾಗಿ ತಮ್ಮನ್ನು ತಾವು ಪರೀಕ್ಷಿಸಿಕೊಳ್ಳುತ್ತಿರುವಂತಹ ಸಾಧಕರು ಮಕ್ಕಳಿದ್ದಂತೆ. ಮಕ್ಕಳು ಗಿಡಗಳನ್ನು ನೆಟ್ಟು ಅವುಗಳ ಬೆಳವಣಿಗೆಯಲ್ಲಿ ತೀವ್ರವಾದ ಆಸಕ್ತಿ ವಹಿಸುವುದರಿಂದ, ಪ್ರತಿದಿನವೂ ಆ ಗಿಡಗಳನ್ನು ಕಿತ್ತು ತೆಗೆದು ಅವು ಎಷ್ಟು ಉದ್ದ ಬೇರು ಬಿಟ್ಟಿವೆ ಎಂಬುದನ್ನು ಪರೀಕ್ಷಿಸುತ್ತಾರೆ—ಹೀಗೆ ಮಾಡುವುದಾದರೆ ಬೆಳವಣಿಗೆಯು ಮುಂದುವರಿಯಲು ಸಾಧ್ಯವೇ ಇಲ್ಲ. ಆದುದರಿಂದ ತಮ್ಮ ಸ್ವಂತ ಅಭಿವೃದ್ಧಿಯನ್ನು ಪೂರ್ತ ಮರೆತು ತಮ್ಮ ಕೈಯ್ಯಲ್ಲಾದಷ್ಟು ತಮ್ಮ ಶೀಲ ಸ್ವಭಾವವನ್ನು ಬೆಳಸಿಕೊಳ್ಳುವುದರಲ್ಲೂ ಇತರರ ಸೇವಾ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುವ ಪಕ್ಷದಲ್ಲಿ ಪ್ರಗತಿಯು ತಾನಾಗಿಯೇ ಮುಂದುವರಿಯುವುದರಲ್ಲಿ ಸಂಶಯ ವಿಲ್ಲ.

ಸ್ವಲ್ಪ ಮಟ್ಟಿಗೆ ಆತ್ಮ ವಿಮರ್ಶೆಯು ಆವಶ್ಯಕ, ಆದರೆ ಅದನ್ನು ಅತಿಯಾಗಿ ಮುಂದುವರಿಸಿಕೊಂಡು ಹೋಗಕೂಡದು. ನಮಗೆ ಕೆಲವು ಶಕ್ತಿಗಳಿರುತ್ತವೆ. ಅವುಗಳನ್ನು ಉಪಯೋಗಮಾಡುವುದರಲ್ಲಿ ಇತರೆ ಶಕ್ತಿಗಳೂ ಬೆಳೆಯುತ್ತವೆ. ಉದಾಹರಣೆಗಾಗಿ ಹೊಸ ಭಾಷೆಯನ್ನು ಕಲಿಯಬೇಕಾಗಿದ್ದ ಸಂದರ್ಭದಲ್ಲಿ ನಮ್ಮ ಪ್ರಯತ್ನವು ಬರಿಯ ಪುಸ್ತಕ ವ್ಯಾಸಂಗದಲ್ಲೇ ಮಗ್ನವಾಗಿರದೆ ಆ ಭಾಷೆ ತಿಳಿದಿರುವವರೊಡನೆ ಬೆರೆತು ಮಾತನಾಡಬೇಕು. ಆ ರೀತಿಮಾಡುವುದರಲ್ಲಿ ಮೊದ ಮೊದಲು ತಪ್ಪುಗಳುಂಟಾದಾಗ್ಯೂ ನಾವು ಆ ಹೊಸ ಭಾಷೆಯನ್ನು ಜಾಗ್ರತೆ ಕಲಿಯಲು ಅವಕಾಶ ಸಿಕ್ಕುತ್ತದೆ. ನಾವು ನಮ್ಮ ಧ್ಯೇಯವನ್ನು ಹಿಡಿದು ಪಟ್ಟಾಗಿ ಸಾಧನೆ ಮಾಡುತ್ತಾ ಬಂದರೆ ವೈರಾಗ್ಯ ಭಾವನೆಯು ಸಹಜವಾಗಿಯೇ ಬೆಳೆಯುತ್ತದೆ. ಯಾರು ಉನ್ನತಜೀವಿತವನ್ನು ಅವಲಂಬಿಸುತ್ತಾರೆಯೋ ಅಂತಹವರಿಗೆ ಕೆಳಗಿನ ಮಟ್ಟದ ಸುಖಾಪೇಕ್ಷೆಗಳು ಉದುರಿ ಹೋಗುವುದು ಖಂಡಿತ. (ವಿಷಯಾ ವಿನಿವರ್ತಂತೇ ನಿರಾಹಾರಸ್ಯದೇಹಿನಃ। ರಸವರ್ಜ್ಯಂ ರಸೋಪ್ಯಸ್ಯಪರಂ ದೃಷ್ಟ್ವಾ ನಿವರ್ತತೇ॥ ಉನ್ನತ ಜೀವಿತಕ್ಕೆ ಸಂಬಂಧಪಟ್ಟ ಮೇಲ್ಮಟ್ಟದ ಸುಖಗಳು ಕರಗತವಾದಾಗ ಕೆಳಗಿನ ಮಟ್ಟದ ಸುಖಾಪೇಕ್ಷೆಗಳು ತಾವಾಗಿಯೇ ಉದುರಿ ಹೋಗುತ್ತವೆ.

ಉದಾಹರಣೆಗಾಗಿ ಮಕ್ಕಳು ಆಟಗಳಲ್ಲೇ ಆಸಕ್ತರಾಗಿರುತ್ತಾರೆ. ಪ್ರಾಪ್ತವಯಸ್ಕರಾಗಿ ಕುಟುಂಬಿಗಳಾದ ಮೇಲೆ—ಆ ಹಿಂದಿನ ಆಟಗಳ ಮೇಲಿನ ಆಶೆಗಳು ಕಳಚಿ ಬಿದ್ದು ಹೋಗುತ್ತವೆ. ಏಕೆಂದರೆ ಕುಟುಂಬ ಭರಣಕ್ಕೆ ಸಂಬಂಧಪಟ್ಟ ಮೇಲ್ಮಟ್ಟದ ಅಪೇಕ್ಷೆಗಳು ಅವರ ಮನಸ್ಸನ್ನು ಆಕರ್ಷಿಸುತ್ತವೆ. ಅಲ್ಲವೇ ? ಉದಾಹರಣೆಗಾಗಿ ಒಬ್ಬ ಪ್ರೌಢ ವಯಸ್ಕನು ಮದುವೆಯಾದ ಮೇಲೆ ಆತನು ಹಿಂದಿನ ಪೂರ್ವ ವಯಸ್ಸಿಗೆ ಸಂಬಂಧಪಟ್ಟ ಆಟ-ಕ್ರೀಡೆಗಳಲ್ಲಿ ತೊಡಗುವುದಿಲ್ಲ. ತನ್ನ ಪ್ರೀತಿಪಾತ್ರಳಾದ ಪತ್ನಿಗೆ ಬೇಕಾದ ಉಡುಗೆ ತೊಡುಗೆ (ಆಭರಣ) ಗಳನ್ನು ಒದಗಿಸಲು ಅವಶ್ಯಕವಾದ ಹಣ ಸಂಪಾದನೆ ಕಾರ್ಯದಲ್ಲಿ ಆಸಕ್ತನಾಗುತ್ತಾನೆ. ಆಗ ಆಟ-ಕ್ರೀಡೆಗೆ ಸಂಬಂಧಪಟ್ಟ ಆಶೆಗಳೂ ನೀರಸವಾಗಿ ಬಿಡುತ್ತವೆ. ಅವು ತಾವಾಗಿಯೇ ಬತ್ತಿ ಹೋಗುತ್ತವೆ. ಹೀಗೆಯೇ ಅಧ್ಯಾತ್ಮ ಜೀವಿತಕ್ಕೆ ಸಂಬಂಧಪಟ್ಟ ಧ್ಯೇಯದ ಬೆಲೆಯನ್ನು ಮನುಷ್ಯನು ಮನಗಂಡಾಗ ಅದರ ಸಾಧನೆಗಾಗಿ ಆವಶ್ಯಕವಾದ ತಿಳಿವಳಿಕೆಯನ್ನು ಸಂಪಾದನೆ ಮಾಡುವುದರಲ್ಲಿ ಆಸಕ್ತನಾಗುತ್ತಾನೆ. ಆಗ ಆತನ ಮನಸ್ಸನ್ನು ಆ ಮಾರ್ಗದ ಪ್ರಗತಿಗೆ ಸಂಬಂಧಪಟ್ಟ ಉನ್ನತ ಕಾಂಕ್ಷೆಗಳು ಆಕರ್ಷಿಸುತ್ತವೆ. ಕೆಳಗಿನ ಮಟ್ಟದ ಆಶೆಗಳು ತಾವಾಗಿಯೇ ಉದುರಿ ಹೋಗುತ್ತವೆ. ಕಾಮವನ್ನು ಗೆಲ್ಲಬೇಕು. ಕಾಮವನ್ನು ಗೆಲ್ಲಬೇಕು ಎಂಬುದಾಗಿ ಯೋಚಿಸುವುದರಿಂದ ಕಾಮಕ್ಕೆ ಶಕ್ತಿ ಕೊಟ್ಟಂತೆ ಆಗುತ್ತದೆ. ಅದಕ್ಕೆ ಬದಲು ಶಾಶ್ವತವಾದ ಆನಂದವನ್ನು ಕೊಡುವ ಸದ್ವಿಷಯಗಳ ಚಿಂತನೆ ಮತ್ತು ವ್ಯಾಸಂಗದಲ್ಲಿ ತೊಡಗಿದರೆ ಕೆಳಗಿನ ಮಟ್ಟದ ಆಶೆಗಳು ಬತ್ತಿ ಹೋಗುತ್ತವೆ.

ಸಾಧಕನು ತಾನು ಒಳ್ಳೆಯ ಮಾರ್ಗವನ್ನು ಪ್ರವೇಶಿಸಿ ಅದರಲ್ಲಿ ಮುಂದು ವರಿಯಲು ಪ್ರಯತ್ನಿಸುತ್ತಿರುವುದು ಮುಖ್ಯವೇ ವಿನಾ-ಆ ಮಾರ್ಗಕ್ಕೆ ಸಂಬಂಧಪಟ್ಟ ಗುರಿಯಿಂದ ಎಷ್ಟು ದೂರವಿರುತ್ತಾನೆಂಬುದು ಅಷ್ಟು ಮುಖ್ಯವಲ್ಲ, -ಎಂಬುದಾಗಿ ನಮ್ಮ ಹಿಂದಿನ ಅಧ್ಯಕ್ಷರಾದ ಶ್ರೀರಾಂರವರು ಒಂದು ಕಡೆ ಹೇಳಿರುತ್ತಾರೆ.— T.V.R.)

ಆದುದರಿಂದ ನಮ್ಮ ಪ್ರಗತಿ ವಿಷಯವಾಗಿ ನಾವು ಆಗಾಗ್ಗೆ ನಮ್ಮ ತಲೆ ಕೆಡಿಸಿಕೊಳ್ಳಕೂಡದು. (ಧ್ಯೇಯವನ್ನೇ ಅರಿಯದ ಎಷ್ಟೋ ಜನರು ಪಶುಗಳಂತೆ ಜೀವಿತ ನಡೆಸುತ್ತಿರುವಲ್ಲಿ ಜೀವಿತದ ಪರಮ ಧ್ಯೇಯವನ್ನು ಮನಗಂಡ ನಾವೇ ಧನ್ಯರಲ್ಲವೇ ?—T.V.R.) ಯಾವ ಕಾರಣದಿಂದಲಾದರೂ ಖಿನ್ನತೆ-ವ್ಯಸನ-ಇವುಗಳಿಗೆ ಒಳಗಾಗಕೂಡದು—ಏಕೆಂದರೆ ಖಿನ್ನತೆಯು ಪಾಪಕರವಾದುದು, ಅದು ನಮ್ಮನ್ನೇ ಈಶ್ವರನ ಸಹಜಾನಂದದಿಂದ ದೂರಮಾಡುವುದಲ್ಲದೇ ನಮ್ಮ ನೆರೆಹೊರೆಯವರಿಗೂ ಕೂಡ ಅದು ಅಂಟು ಜಾಡ್ಯದಂತೆ ವ್ಯಾಪಿಸಿ ಎಲ್ಲರಿಗೂ ಕೆಟ್ಟ ಪರಿಣಾಮ

ವನ್ನುಂಟುಮಾಡುತ್ತದೆ. ನಮ್ಮ ಕೈಯ್ಯಲ್ಲಾದಷ್ಟು ಪ್ರಯತ್ನ ಮಾಡುತ್ತ ಒಂದೊಂದು ಹೆಜ್ಜೆಯನ್ನಿಟ್ಟುಕೊಂಡು ಹೋದರೂ ಕೊನೆಯಲ್ಲಿ ಗುರಿಯನ್ನು ತಲುಪುವುದು ಖಂಡಿತ. ಕೆಲವರು ಸಾಧಕರು ಎಷ್ಟೇ ಜಾಗರೂಕರಾಗಿದ್ದಾಗ್ಯೂ ಆಗಾಗ್ಗೆ ಮಾಡಿದ ತಪ್ಪನ್ನೇ ಮಾಡುತ್ತಾ-ಇರಬಹುದು ಏಕೆಂದರೆ ಆ ತಪ್ಪು ಮಾರ್ಗದಲ್ಲಿ ಅವರು ಮಾಡಿದ ಪ್ರಯತ್ನದ ಶಕ್ತಿಯು ಸಮೆಯುವವರೆಗೆ ಆ ರೀತಿ ಸೋಲುವುದು ಸಹಜವಾಗಿಯೇ ಇರುತ್ತದೆ, ಆದರೆ ಅದರ ಜೊತೆಗೆ ವ್ಯಸನಕ್ಕೆ ಒಳಗಾದರೆ ಮತ್ತೊಂದು ತಪ್ಪನ್ನು ಹೆಚ್ಚಾಗಿ ಮಾಡಿದಂತೆ ಆಗುತ್ತದೆ.

(ಕೆಲವರು-ಪಾಪೋಹಂ ಪಾಪಕರ್ಮೋಹಂ। ಪಾಪಾತ್ಮಾ ಪಾಪ ಸಂಭವಃ। ಪಾಹಿಮಾಂ ಕೃಪಯಾ ದೇವ ಸರ್ವಪಾಪಹರೋ ಭವ॥ ಎಂಬುದಾಗಿ ದೇವರಿಗೆ ಮೊರೆಯಿಡುವುದುಂಟು. (ಈ ಶ್ಲೋಕದ ಅರ್ಥ). ನಾನು ಪಾಪಿಯು ನಾನು ಪಾಪಕರ್ಮ ಮಾಡತಕ್ಕವನು. ನಾನು ಪಾಪ ಸ್ವಭಾವದಲ್ಲಿ ಹುಟ್ಟಿದವನು ಪರಮಾತ್ಮನೇ ನನ್ನನ್ನು ಈ ಪಾಪದಿಂದ ಬಿಡುಗಡೆ ಮಾಡಿ ನನ್ನನ್ನು ಉದ್ಧರಿಸು, ಎಂದು ಕೇಳಿಕೊಳ್ಳುತ್ತಾರೆ. ಹೀಗೆ ನಾವು ಪಾಪ ಸ್ವಭಾವವನ್ನೇ ಚಿಂತಿಸುವುದರಿಂದ ಹೆಚ್ಚು ಹೆಚ್ಚು ಪಾಪ ಸ್ವಭಾವವನ್ನು ಬಲಪಡಿಸಿಕೊಂಡಂತೆ ಆಗುತ್ತದೆ. ನಾವು ಯಾವುದನ್ನು ಚಿಂತಿಸುತ್ತೇವೆಯೋ ಅದರಂತೆ ಆಗುತ್ತೇವೆ. (ಯದ್ಭಾವಂ ತದ್ಭವತಿ) ಆದುದರಿಂದ ಈ ಮಾರ್ಗವನ್ನು ಬಿಟ್ಟು ನಮ್ಮ ಮೂಲ ಸ್ವರೂಪವಾದ-ನಿಜ ಸ್ವಭಾವವನ್ನು ಚಿಂತಿಸೋಣ. ಅಹಂ ದೇವೋ ನಚಾನೋಸ್ಮಿ ಬ್ರಹ್ಮೈವಾಹಂ ನಶೋಕಭಾಕ್। ಸಚ್ಚಿದಾನಂದ ರೂಪೋಹಂ ನಿತ್ಯಮುಕ್ತ ಸ್ವಭಾವನಾನ್॥ ನಾನು ಸಾಕ್ಷಾತ್ ಭಗವಂತನ ಸ್ವರೂಪನು ನಾನು ಬೇರೆಯಲ್ಲ. ಸಚ್ಚಿದಾನಂದನೂ ನಿತ್ಯ ಶುದ್ಧನೂ ಆದ ಪರಬ್ರಹ್ಮ ಚೈತನ್ಯಾಂಶವೇ ನಾನು, ಈ ಸ್ವಭಾವವನ್ನು ನಾನು ಮೈಗೂಡಿಸಿಕೊಳ್ಳುತ್ತೇನೆ, ಎಂಬ ದೃಢ ಸಂಕಲ್ಪದಿಂದ ಪ್ರಯತ್ನ ಶೀಲನಾಗಿ ಮುಂದುವರಿಯುತ್ತಿರಬೇಕು, ಹಿಂದಿನ ಶ್ಲೋಕದಲ್ಲಿ ನಚಾನ್ಯೋಸ್ಮಿ ಎಂದು ಹೇಳಿದೆ 'ನಾನು ಆತ್ಮನಲ್ಲದೆ ಬೇರೆಯಲ್ಲ' ಎಂದು ಅದರ ಅರ್ಥ. ನಾವು ಈ ಸ್ಥೂಲ ದೇಹದ ಮೂಲಕ ಈ ಭೂಲೋಕದಲ್ಲಿ ವ್ಯವಹರಿಸುತ್ತಿದ್ದೇವೆ-ಆದರೆ ಈ ದೇಹವು ನಾವಲ್ಲ ದೇಹವು ಬಾಲ್ಯ ಯೌವ್ವನ, ವೃದ್ಧಾಪ್ಯಗಳೆಂಬ ಬದಲಾವಣೆಗಳನ್ನು ಹೊಂದುತ್ತಿರುತ್ತದೆ. ಆದರೆ ಒಳಗಿರುವ 'ನಾನು' ಎಂಬುದು ಯಾವ ಹೊರಗಿನ ಬದಲಾವಣೆಗಳಿಗೆ ಒಳಗಾಗದೆ ಒಂದೇ ಸಮನೆ ಮುಂದುವರಿಯುತ್ತದೆ. ಹೀಗೆಯೇ ಇಂದ್ರಿಯಗಳಿಗೆ ಬೇರಿನಂತಿರುವ ಕಾಮದೇಹವೂ ಕೂಡ ಬದಲಾವಣೆ ಹೊಂದುತ್ತಲೇ ಇರುತ್ತದೆ. (ಬಾಲ್ಯಸ್ತಾವತ್ಕ್ರೀಡಾಸಕ್ತಃ) ಬಾಲ್ಯದಲ್ಲಿ ಆಟಪಾಠಗಳಲ್ಲಿ ಆಸಕ್ತಿ. ತಾರುಣ್ಯದಲ್ಲಿ ಇಂದ್ರಿಯ ಸುಖಾಪೇಕ್ಷೆ. ಮುದಿತನ ಬಂದಾಗ ತನ್ನನ್ನು ಯಾರೂ ಮೊದಲಿನಂತೆ ಗಮನಿಸಿ ತನ್ನ ಇಷ್ಟ ಪ್ರಕಾರ ನಡೆದುಕೊಳ್ಳುವುದಿಲ್ಲವಲ್ಲ।" ಎಂಬ

ಚಿಂತೆ—ಅಲ್ಲದೆ ಸಾವಿನ ಭಯ—ಕಳವಳ—ಇವುಗಳ ರೂಪದಲ್ಲಿ ಆ ದೇಹವೂ ಬದಲಾವಣೆ ಹೊಂದುತ್ತಿರುತ್ತದೆ. ಮನಸ್ಸು ಕೂಡ ಕಾಮದೊಡನೆ ಸೇರಿಕೊಂಡೇ ಕೆಲಸ ಮಾಡುತ್ತದೆಯಾದುದರಿಂದ ಮನೋದೇಹವೂ ಸಹ ಬದಲಾವಣೆ ಹೊಂದುತ್ತಲೇ ಇರುತ್ತದೆ. ಆದರೆ ಒಳಗಿರುವ ಜೀವಾತ್ಮನು ಎಂದರೆ ಜನ್ಮ-ಜನ್ಮಕ್ಕೂ ಅಚ್ಚಳಿಯದೆ ಮುಂದುವರಿದುಕೊಂಡು ಹೋಗುವ ಅಂತರಾತ್ಮನು ಒಂದೇ ಸಮನೆ ಪ್ರಗತಿ ಪರವಾಗಿ ಮುಂದುವರಿಯುತ್ತಾನೆ. ಆದುದರಿಂದ ಈ ಸಧ್ಯಕ್ಕೆ ನಾವು ನಮ್ಮ ಕೆಳಗಿನ ಅನ್ಯ ಸ್ವಭಾವವಾದ ಸ್ಥೂಲದೇಹ, ಕಾಮದೇಹ, ಮತ್ತು ಮನೋದೇಹ, ಇವುಗಳಿಂದ ಬಿಡಿಸಿಕೊಂಡು ನಮ್ಮ ಅತ್ಯುನ್ನತವಾದ ಪುರುಷಾತ್ಮನ ಪ್ರತಿಬಿಂಬದಂತಿರುವ ಅಂತರಾತ್ಮನೇ "ನಾನು" ಎಂಬ ಭಾವನೆಯಿಂದ ಬಾಳುವುದನ್ನು ಕಲಿಯೋಣ. ಈಯಂತಸ್ತು ಸಿದ್ಧಿಸಿದ ಮೇಲೆ ಮುಂದಿನ ಹೆಜ್ಜೆ ಅನಂತರ— T.V.R.)

ನಾವು ದೇವರಲ್ಲಿ ಪ್ರಾರ್ಥನೆ ಸಲ್ಲಿಸುವಾಗ 'ನಾನು ಪಾಪಿ' ಎಂದು ಹೇಳಬಹುದು. ಈ ಭಾವನೆ ನಿಜವಾಗಿದ್ದಲ್ಲಿ ಬೇರೆಯವರು ನಮ್ಮನ್ನು 'ಪಾಪಿ' ಎಂದು ಕರೆದರೆ ನಾವು ಒಪ್ಪಿಕೊಳ್ಳುವ ಹಾಗಿದ್ದಲ್ಲಿ ಆ ಭಾವನೆ ನಿಜವಾದುದು. ಇಲ್ಲದಿದ್ದರೆ ಅದು ಬರಿಯ ಕಪಟ, ಮತ್ತು ನಟನೆಯಾಗುತ್ತದೆ. ಆದುದರಿಂದ ಇಂತಹ ಅಸಹಜವಾದ ಭಾವನೆಯನ್ನು ಬದಿಗೊತ್ತಿ 'ನಾನು ಆ ಆನಂದ ಸ್ವರೂಪನಾದ ಪರಮಾತ್ಮನ ಒಂದು ಕಿಡಿ' ಎಂದುಕೊಳ್ಳುತ್ತಾ ನಮ್ಮ ಸಹಜ ಸ್ವಭಾವವನ್ನು ಮೈಗೂಡಿಸಿಕೊಳ್ಳೋಣ. ಬರಿಯ ಪಶ್ಚಾತ್ತಾಪದ ಭಾವನೆಯನ್ನು ಮುಂದುವರಿಸಿಕೊಂಡು ಹೋಗುವುದರಿಂದ ಪ್ರಯೋಜನವಿಲ್ಲ. ನಮ್ಮ ಗುರುಗಳು ಒಂದು ಸಂದರ್ಭದಲ್ಲಿ ಈ ರೀತಿ ಹೇಳಿರುತ್ತಾರೆ. "ನಿಜವಾದ ಪಶ್ಚಾತ್ತಾಪಕ್ಕೆ ಸಾಕ್ಷಿಯಂತೆ ಇರುವುದು ಯಾವುದು? ಆ ತಪ್ಪನ್ನು ಪುನಃ ಮಾಡದೇ ಇರುವುದು."

ಓಂ ಶಾಂತಿ ಶ್ಶಾಂತಿ ಶ್ಶಾಂತಿಃ

ಅಂತರಾತ್ಮ ಮತ್ತು ದೇಹಾತ್ಮ

(ಪುರುಷಾತ್ಮನ ಒಂದು ಕಿರಣ ಅಂತರಾತ್ಮವು—ಅಂತರಾತ್ಮನ ಒಂದು ಕಿರಣವೇ ದೇಹಾತ್ಮವು. ನಮ್ಮ ನಿಜ ಸ್ವರೂಪವಾದ ಪುರುಷಾತ್ಮವು ಅನುಪಾದಕ ಲೋಕದಲ್ಲಿ ವಾಸಮಾಡುತ್ತದೆ—ಅದು ಕೆಳಗಿನ ಲೋಕಗಳಲ್ಲಿ ವ್ಯಕ್ತವಾಗಲು ಸಾಧ್ಯವಿಲ್ಲ. ಆಕಾಶ ತತ್ವ ಮೊದಲ್ಗೊಂಡು ತೇಜಸ್ತತ್ವದ ಮೇಲ್ಭಾಗದವರೆಗೆ ಮಾಯೆಯು ಆವರಣ ಶಕ್ತಿ ಕೆಲಸಮಾಡುತ್ತದೆ. ತೇಜಸ್ತತ್ವದ ನಾಲ್ಕನೆಯ ಉಪತತ್ವ ಮೊದಲ್ಗೊಂಡು ಪೃಥ್ವಿ ತತ್ವದ ಕೇವಲ ಕೆಳಗಿನ ಮಟ್ಟದವರೆಗೆ ಮಾಯೆಯು ಎರಡು ಶಕ್ತಿಗಳೂ ಪ್ರಬಲವಾಗಿ ಕೆಲಸ ಮಾಡುತ್ತವೆ—ಎಂದರೆ ಆವರಣ ಮತ್ತು ವಿಕ್ಷೇಪ—ವಿಕ್ಷೇಪವೆಂದರೆ ವಿಕಾರಕೊಳ್ಳಪಡಿಸತಕ್ಕ ಶಕ್ತಿ—ಒಂದು ವಿಧವಾದ ಕನ್ನಡಿಯಿರುತ್ತದೆ. (ವಿವಿಧ ವಸ್ತುಪ್ರದರ್ಶನ ಶಾಲೆಯಲ್ಲಿ) ಅದರಲ್ಲಿ ಒಮ್ಮೆ ಮುಖವನ್ನು ನೋಡಿಕೊಂಡರೆ ಅದು ಉದ್ದುದ್ದವಾಗಿ ಪ್ರತಿಬಿಂಬಿಸುತ್ತದೆ. ಮತ್ತೊಂದು ಬಗೆ ದರ್ಪಣವಿರುತ್ತದೆ—ಅದರಲ್ಲಿ ನಮ್ಮ ಮುಖವು ಅಡ್ಡಡ್ಡಲಾಗಿ ವಿಸ್ತರಿಸಿ ಪ್ರತಿ ಬಿಂಬಿಸುತ್ತದೆ. ಹೀಗೆ ಈ ಬ್ರಹ್ಮಾಂಡದ ಏಳು ತತ್ವಗಳನ್ನು ಮೂರು ದೊಡ್ಡ ವಿಭಾಗಗಳನ್ನಾಗಿ ವಿಂಗಡಿಸಬಹುದು—ಮೇಲಿನ ಆದಿ ಮತ್ತು ಅನುಪಾದಕ (ಕೈಲಾಸ ಮತ್ತು ವೈಕುಂಠ) ತತ್ವಗಳಿಗೆ ಸಂಬಂಧಪಟ್ಟ ಪ್ರಕೃತಿಯು ಶುದ್ಧ ಸತ್ವವೆಂದು ನಮ್ಮ ಹಿಂದೂ ಸಂಸ್ಕೃತಿಯಲ್ಲಿ ಕರೆಯಲ್ಪಟ್ಟಿದೆ. ಇದು ಒಳಗಿರುವ ಚೈತನ್ಯಕ್ಕೆ ಯಾವ ವಿಧವಾದ ಅಡಚಣೆಯನ್ನೂ ಉಂಟುಮಾಡದೆ ಅದರ ಸಹಜ ಸ್ವರೂಪವನ್ನು ಇದ್ದುದು ಇದ್ದಹಾಗೆ ವ್ಯಕ್ತಪಡಿಸುತ್ತದೆ—ಆದುದರಿಂದಲೇ ಇದು ಈಶ್ವರನ ಪ್ರಜ್ಞೆಗೆ ತಕ್ಕ ಸಾಧನ ಸಾಮಗ್ರಿಯಾಗಿದೆ—ಪುರುಷಾತ್ಮವು ಈಯಂತಸ್ತಿನಲ್ಲಿರುವುದರಿಂದ ಆತನು ಈಶ್ವರನ ಸರ್ವಜ್ಞತ್ವ—ಸರ್ವ ಶಕ್ತಿತ್ವ-ಮತ್ತು ಸರ್ವವ್ಯಾಪಕತ್ವಗಳೊಡನೆ ಪಾಲ್ಗೊಳ್ಳಬಲ್ಲನು-ಆದುದರಿಂದಲೇ ಮಾಯೆಗೆ ಒಳಪಟ್ಟಿರುವ ಕೆಳಗಿನ ಲೋಕಗಳಲ್ಲಿ ಆತ್ಮನು ವ್ಯಕ್ತವಾಗುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಆತನ ಕಿರಣವು ಆ ಲೋಕದ ಸೂತ್ರಾತ್ಮದ ದ್ವಾರ ಆಕಾಶತತ್ವದಲ್ಲಿನ ಒಂದು ಪರಮಾಣುವನ್ನು ಸಂಬಂಧಿಸಿಕೊಂಡು ಆತ್ಮವೆಂದೂ ವಾಯುತತ್ವದಲ್ಲಿನ ಒಂದು ಪರಮಾಣುವನ್ನು ಜಂಟಿಸಿಕೊಂಡು ಬುದ್ಧಿಯೆಂದೂ-ಅನಂತರ ತೇಜಸ್ತತ್ವದ ಒಂದು ಪರಮಾಣುವನ್ನು ಜಂಟಿಸಿಕೊಂಡು ಮನಸ್ಸೆಂದೂ ಅಭಿವ್ಯಕ್ತವಾಗಿ—ಆ ಸೂತ್ರಾತ್ಮವು ಪುನಹ ಮೇಲಿನ ವೈಕುಂಠ ತತ್ವದಲ್ಲಿರುವ ಪುರುಷಾತ್ಮನಿಗೆ ಹೋಗಿ ಸೇರಿಕೊಳ್ಳುತ್ತದೆ. ಆದುದರಿಂದಲೇ ವೈಕುಂಠ ಲೋಕದಲ್ಲಿರುವ ಪುರುಷಾತ್ಮವನ್ನು ಅವ್ಯಕ್ತಾತ್ಮವೆಂದು ಹಿಂದೂ ಸಂಸ್ಕೃತಿಯು ಕರೆ

ಯಂದಿರುವುದು— ಈ ಮಧ್ಯವರ್ತಿಯಾದ ಪ್ರಕೃತಿ ತತ್ವವು (ಎಂದರೆ ತೇಜಸ್ತತ್ವದ ಮೇಲಿನ ಮೂರು ಉಪತತ್ವಗಳು ಮೊದಲ್ಗೊಂಡು ವಾಯು ಮತ್ತು ಆಕಾಶ ತತ್ವಪೂರ್ತ) ಮಂದವಾದ ಗಾಜಿನಂತೆ ಚೈತನ್ಯವನ್ನು ಮರೆಮಾಡುವ ಸ್ವಭಾವದ್ದು—ಮಾತ್ರ—ಇಲ್ಲಿ ವಿಕಾರವಿಲ್ಲ. ಆದುದರಿಂದ ಅಂತರಾತ್ಮನು ವಿಕಾರಕ್ಕೊಳಪಡುವುದಕ್ಕೆ ಆಸ್ಪದವಿಲ್ಲ. ಆತನಿಗೆ ಎಷ್ಟು ತಿಳಿವಳಿಕೆಯಿರುತ್ತದೆಯೋ ಅಷ್ಟು ಸರಿಯಾಗಿರುತ್ತದೆ—ಎಂದರೆ ಸತ್ಯವನ್ನು ಪ್ರತಿಬಿಂಬಿಸಬಲ್ಲುದು—ಆದರೆ ದೇಹಾತ್ಮವು—ಎಂದರೆ ಅಂತರಾತ್ಮನ ಒಂದು ಕಿರಣವು ಬುದ್ಧಿ ಲೋಕದಿಂದ ಹೊರ ಹೊಮ್ಮಿದ ಸೂತ್ರಾತ್ಮದ ಮೂಲಕ ರೂಪಲೋಕದ ಒಂದು ಅಣು ಸಮುದಾಯವನ್ನೂ-ಕಾಮಲೋಕದ ಒಂದು ಪರಮಾಣುವನ್ನೂ ಮತ್ತು ಪೃಥ್ವಿ ತತ್ವದ ಒಂದು ಪರಮಾಣುವನ್ನೂ ಜಂಟಿಸಿಕೊಂಡು ಮನಸ್ಸು-ಕಾಮ-ಸ್ಥೂಲೋಪಾಧಿಗಳಲ್ಲಿ ಕೆಲಸ ಮಾಡುವಂತಹ ಕೇವಲ ಕೆಳಗಿನ ಪ್ರತಿನಿಧಿಯಂತೆ ಇರುತ್ತದೆ. ಇದರ ಪ್ರಜ್ಞೆಯು ಮಾಯೆಯ ಎರಡುಶಕ್ತಿಗಳಿಗೂ ಒಳಪಟ್ಟು ಕೆಲಸ ಮಾಡುವುದರಿಂದ ಸತ್ಯವನ್ನು ಅಸತ್ಯವನ್ನಾಗಿಯೂ ಅಸತ್ಯವನ್ನು ಸತ್ಯವನ್ನಾಗಿಯೂ ತಿಳಿಯುವಂತಹ ಭ್ರಾಂತಿಗೊಳಗಾಗಿರುವುದು ಸಹಜವಾಗಿಯೇ ಇರುತ್ತದೆ, T·V·R·)

ಮೇಲ್ಕಂಡ ಮೂರು ಅಂತಸ್ತುಗಳಲ್ಲಿ ಅಭಿವ್ಯಕ್ತವಾಗಿರುವ ಚೈತನ್ಯವೆಲ್ಲವೂ ಒಬ್ಬನೇ ಪುರುಷಾತ್ಮನಿಗೆ ಸೇರಿದುದು. ಒಂದೇ ಪ್ರಜ್ಞೆಯು ಮೂರು ಅಂತಸ್ತುಗಳಲ್ಲಿ ಕೆಲಸಮಾಡುವುದರಿಂದ-ಎಂದರೆ ಮೂರು ವಿಧವಾದ ಪ್ರಕೃತಿ ಮಟ್ಟಗಳಲ್ಲಿ ಕೆಲಸ ಮಾಡುವುದರಿಂದ ಭಿನ್ನ ಭಿನ್ನವಾಗಿ ತೋರುತ್ತದೆ. (ಈ ಹಿನ್ನೆಲೆಯ ದೃಷ್ಟಿಯಿಂದ ಅಂತರಾತ್ಮಕ್ಕೂ ದೇಹಾತ್ಮಕ್ಕೂ ಇರುವ ಸಂಬಂಧವನ್ನು ತಿಳಿಯಲು ಪ್ರಯತ್ನಿಸೋಣ.)

ಪದೇ ಪದೇ ಎಲ್ಲ ಮಟ್ಟಗಳಲ್ಲಿ ಕೆಲಸಮಾಡುತ್ತಿರುವ ಪ್ರಜ್ಞೆಯೂ ಒಂದೇ ಎಂಬುದನ್ನು ಕೇಳಿರುತ್ತೇವೆ. ಆದರೆ ನಮ್ಮಲ್ಲಿ ಪ್ರತಿಯೊಬ್ಬರಲ್ಲೂ ಎರಡು ಸ್ವಭಾವದ ಪ್ರಜ್ಞೆಗಳಿರುವಂತೆ ತೋರುತ್ತದೆ. ಅಂತರಾತ್ಮನು ಸ್ಥೂಲದೇಹದ ಸಂಬಂಧವಿಲ್ಲದಂತೆಯೇ ತೋರುತ್ತಾನೆ. (ಇದಕ್ಕೆ ಕಾರಣ ಸ್ಥೂಲದೇಹದ ಪ್ರಜ್ಞೆಯು ಹೊರಮುಖವಾಗಿ ಕೆಲಸಮಾಡುವ ಸ್ವಭಾವದ್ದು. ಆದುದರಿಂದ ಪ್ರಾಪಂಚಿಕ ಸುಖವನ್ನೇ ಬಯಸುತ್ತದೆ. ಈ ಪರಿಸ್ಥಿತಿಯಲ್ಲಿ ಹೊರಗಿನ ಸುಖವು ಧರ್ಮಕ್ಕೆ ವಿರುದ್ಧವಾಗಿದ್ದಾಗ್ಯೂ ಅದರ ಬೆನ್ನು ಹತ್ತಿ ಹೋಗುತ್ತದೆ. ಆಗ ಅಂತರಾತ್ಮನ ವಾಣಿಯು ಅದನ್ನು ಖಂಡಿಸುತ್ತದೆ - ಈ ಕಾರಣದಿಂದ ದೇಹಾತ್ಮದ ಪ್ರಜ್ಞೆಯು ಅಂತರಾತ್ಮ ಪ್ರಜ್ಞೆಗಿಂತ ಭಿನ್ನವಾಗಿ ತೋರುವುದು ಸಹಜವಾಗಿಯೇ ಇದೆ-T·V·R·) ಅಂತರಾತ್ಮನ ಪ್ರಜ್ಞೆಯು ಅರೂಪ ಲೋಕದಲ್ಲೇ ಕೆಲಸ

ಮೂಡುತ್ತದೆ. ಆದರೆ ಸಾಧಾರಣ ಮನುಷ್ಯರಲ್ಲಿ ಅದು ಇನ್ನೂ ಸ್ಪಷ್ಟವಾಗಿ ಎಚ್ಚರಗೊಂಡಿಲ್ಲ. ಅದು ಎಷ್ಟು ಸ್ವಲ್ಪಮಟ್ಟಿಗೆ ಜಾಗೃತವಾಗಿದೆಯೋ ಅಷ್ಟರ ಮಟ್ಟಿಗೆ ಒಳ್ಳೆಯದರ ಕಡೆಗೇ ಒಲವುಳ್ಳದು. ಏಕೆಂದರೆ ಅದು ಆತ್ಮ ಶ್ರೇಯ ಸ್ಸನ್ನೇ ಯಾವಾಗಲೂ ಬಯಸುತ್ತಾ ಆ ದಿಕ್ಕಿನಲ್ಲೇ ಕೆಲಸಮಾಡುತ್ತಿರುತ್ತದೆ. ಆದರೆ ಅದರ ಒಂದು ಅಂಶವಾದ ದೇಹಾತ್ಮವು ಪರಿಮಿತಿಗೊಳಪಟ್ಟು ತಾನು ಬೇರೆ-ಇತರರು ಬೇರೆ-ಎಂಬ ಭ್ರಾಂತಿಗೊಳಗಾಗಿ ಅಂತರಾತ್ಮನ ಹಿತಕ್ಕೆ ವಿರೋಧ ವಾದ ರೀತಿಯಲ್ಲಿ ಬಾಳುವುದು (ಆಗ ದೇಹಾತ್ಮವು ತನ್ನ ತಂದೆಯನ್ನೇ ಮರೆತು ಆದರ ನಿಜವಾದ ಹಿತಕ್ಕೆ ಶತ್ರುವಿನಂತೆ ವರ್ತಿಸುತ್ತದೆ. ಉದ್ಧರೇದಾತ್ಮಾ ಽಽತ್ಮಾನಂ ನಾತ್ಮಾನಮವಸಾದಯೇತ್। ಆತ್ಮೈವ ಹ್ಯಾತ್ಮನೋ ಬಂಧುಃ ಆತ್ಮೈವರಿ ಪುರಾತ್ಮನಃ ॥ ಬಂಧುರಾತ್ಮಾಽತ್ಮಾನಸ್ತಸ್ಯ ಯೇನಾ ತ್ಮೈವಾಽತ್ಮಾನಾ ಜಿತಃ। ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್ ॥ ಇಲ್ಲಿ ಒಂದೇ ಪ್ರಜ್ಞೆಯು ಎರಡು ವಿಧವಾಗಿ ಕಾಣುವುದಕ್ಕೆ ಕಾರಣವು ಸ್ಪಷ್ಟಪಟ್ಟಿದೆ. ಮೇಲಿನ ಆತ್ಮವು (ಅಂತರಾತ್ಮವು) ಕೆಳಗಿನ ಆತ್ಮವನ್ನೂ ಮೇಲಕ್ಕೆ ಎತ್ತಿ ಉದ್ಧ ರಿಸಬೇಕು. ಅದನ್ನು ಕೆಳಕ್ಕೆ ಜಾರುವುದಕ್ಕೆ ಬಿಡಕೂಡದು-ಯಾವ ಮನುಷ್ಯನ ಉತ್ತಮಾತ್ಮವು ದೇಹಾತ್ಮವನ್ನು ಜೈಯಿಸಿ ತನ್ನೊಡನೆ ಸಮರಸ ಮಾಡಿ ಕೊಂಡಿರುತ್ತದೆಯೋ ಅಂತಹ ಸಂಯಮಿಯಲ್ಲಿ ಉನ್ನತಾತ್ಮವು ಕೆಳಗಿನ ಆತ್ಮ ನೊಡನೆ ಬಂಧುವಿನಂತೆ ಸಹಾಯಮಾಡುತ್ತದೆ. ಯಾವ ಮನುಷ್ಯನಲ್ಲಿ ದೇಹಾ ತ್ಮವು ಇಂದ್ರಿಯ ಚಾಪಲ್ಯಕ್ಕೆ ಒಳಗಾಗಿ ತನ್ನ ಮೂಲ ತಂದೆಯಾದ ಅಂತ ರಾತ್ಮವನ್ನು ಮರೆತು ಬಿಡುತ್ತದೆಯೋ ಅಂತಹನಲ್ಲಿ ಮೇಲಿನ ಆತ್ಮವು ಕೆಳಗಿನ ಆತ್ಮಕ್ಕೆ ಶತ್ರುವಿನಂತೆ ತೋರುತ್ತದೆ.– T·V·R·) ಅಂತಹ ಸನ್ನಿವೇಶದಲ್ಲಿ ವಿವೇಕಶಾಲಿಯಾದವನು ಎಚ್ಚೆತ್ತು ಅಂತರಾತ್ಮನವಾಣಿಯಂತೆ ನಡೆದುಕೊಳ್ಳಲು ಪ್ರಯತ್ನಿಸುತ್ತಾನೆ.

ಅಂತರಾತ್ಮನ ಒಂದು ಕಿರಣ ಮಾತ್ರ ದೇಹಾತ್ಮದ ಮೂಲಕ ವ್ಯಕ್ತವಾಗ ಬಲ್ಲುದು - ಏಕೆಂದರೆ ಕೆಳಗಿನ ತತ್ವಗಳು-ಎಂದರೆ ರೂಪ (ಮನಸ್ಸು) - ಕಾಮ ಮತ್ತು ಸ್ಥೂಲಲೋಕಗಳು ಕೇವಲ ಪರಿಮಿತಿಯುಳ್ಳವು. ಅಂತರಾತ್ಮನ ಕಿರಣವು ಅವುಗಳಿಗೊಳಪಟ್ಟಿರುವುದರಿಂದ ಅದೂ ಕೂಡ ತನ್ನ ಶಕ್ತಿ ಮತ್ತು ಗುಣ ವಿಶೇಷಗಳನ್ನೆಲ್ಲ ಅಭಿವ್ಯಕ್ತ ಮಾಡಲು ಸಾಧ್ಯವಿಲ್ಲದೆ ಹೋಗುತ್ತದೆ. ಉದಾ ಹರಣೆಗೆ ಒಂದು ಚಚೌಕವಾದ ವಿಭೂತಿ ಗಟ್ಟಿಯನ್ನು ತೆಗೆದುಕೊಳ್ಳೋಣ. ಅದನ್ನು ಸಮನಾದ ಭೂಮಿಯ ಮೇಲೆ ಇಟ್ಟರೆ ಅದರ ಆರು ಮುಖಗಳಲ್ಲಿ ಒಂದು ಮಾತ್ರ ಭೂಮಿಯನ್ನು ಸ್ಪರ್ಶ ಮಾಡುತ್ತದೆ. ಉಳಿದ ಐದು ಮುಖ ವು ಭೂಮಿಗೆ ತಾಕದೆ ಅತೀತಾವಸ್ಥೆಯಲ್ಲಿರುತ್ತವೆ. ಅಲ್ಲದೆ ಅದರ ಆರು

ಮುಖಗಳನ್ನೂ ಒಂದಾದಮೇಲೊಂದರಂತೆ ಭೂಮಿಗೆ ತಾಕುವಂತೆ ಇಟ್ಟರೂ ಕೂಡ ಅದರ ಒಳಭಾಗ ಭೂಮಿಗೆ ಯಾವಾಗಲೂ ಅತೀತವಾಗಿಯೇ ಉಳಿಯುತ್ತದೆಯಲ್ಲವೇ ? ಹೀಗೆ ಒಬ್ಬ ಅಂತರಾತ್ಮನು ತೆಗೆದುಕೊಳ್ಳುವ ಜನ್ಮಗಳನ್ನೆಲ್ಲ ಪರಿಶೋಧನೆ ಮಾಡಿದರೂ ಕೂಡ ಅಂತರಾತ್ಮನ ಪೂರ್ಣ ಸ್ವಭಾವವನ್ನು ದೇಹಾತ್ಮದ ದೃಷ್ಟಿಯಿಂದ ಪೂರ್ತಿಯಾಗಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ಅಂತರಾತ್ಮನನ್ನು ಅರ್ಥಮಾಡಿಕೊಳ್ಳಬೇಕಾದರೆ ನಮ್ಮ ಪ್ರಜ್ಞೆಯು ಆತನಿರುವ ಮಟ್ಟಕ್ಕೆ ಏರಬೇಕು ಅಷ್ಟೇ.

ಅಂತರಾತ್ಮನ ಪ್ರಜ್ಞೆಯೂ ಕೂಡ ಬೆಳೆಯಬೇಕು. ಮೊದಮೊದಲು– ಎಂದರೆ ಪಶು ಜನ್ಮದಿಂದ ಮಾನವ ಜನ್ಮಕ್ಕೆ ಪ್ರವೇಶ ಮಾಡಿದಲಾಗಾಯ್ತು ಒಂದು ವಿಧವಾದ ಅಸಕು ಮಸಕಾದ ಪ್ರಜ್ಞೆಯು ಅಂತರಾತ್ಮನಿಗೆ ಇದ್ದೇ ಇರುತ್ತದೆ. ಇದರ ಸ್ವರೂಪವನ್ನು ಸ್ವಲ್ಪಮಟ್ಟಿಗೆ ನಾವು ಅರ್ಥ ಮಾಡಿಕೊಳ್ಳಬೇಕಾದರೆ ನಮ್ಮ ಅನುಭವದ ಒಂದು ಉದಾಹರಣೆ ಆವಶ್ಯಕ. ಛಳಿಗಾಲದಲ್ಲಿ ಕೆಲವರು ಹೊತ್ತಿಗೆ ಮುಂಚೆಯೇ ಎಚ್ಚರವಾಗಿರುತ್ತಾರೆ - ಆದರೆ ಕಣ್ಣು ಬಿಟ್ಟು ಸುತ್ತುಮುತ್ತಲೂ ಇರುವ ಜನರನ್ನಾಗಲೀ ವಸ್ತುಗಳನ್ನಾಗಲೀ ಗುರ್ತಿಸುವ ಸ್ಥಿತಿಯಲ್ಲಿರುವುದಿಲ್ಲ - ಆದರೆ ಒಂದು ವಿಧವಾದ ಆನಂದಸ್ಥಿತಿಯಲ್ಲಿರುವಂತೆ ಭಾಸವಾಗುತ್ತದೆ. ಅದನ್ನು ಭೇದಿಸಿಕೊಂಡು ಈಚೆಗೆ ಬರಲು ಇಷ್ಟವಿಲ್ಲದೇ ಅದೇ ಅರ್ಧ ಎಚ್ಚರ - ಅರ್ಧ ನಿದ್ರೆ ಸ್ಥಿತಿಯಲ್ಲಿರುತ್ತಾರೆ. ಸಾಧಾರಣ ಮನುಷ್ಯನ ಅಂತರಾತ್ಮನು ಆ ಸ್ಥಿತಿಯಲ್ಲಿರುತ್ತಾನೆ. ಅಂತಹ ಮನುಷ್ಯನು ಪುನಹ ಜನ್ಮ ಎತ್ತುವ ಸಮಯ ಬಂದಾಗ ಒಂದು ವಿಧವಾದ ಪರಿಷ್ಕಾರವಾದ ಪ್ರಜ್ಞೆಯು ಮೂಡುತ್ತದಂತೆ - ಆಗ ಅದುವರೆಗೆ ಆತನು ಹಿಂದಿನ ಜನ್ಮಗಳ ಪರಂಪರೆಯಲ್ಲಿ ಸಾಧಿಸಿರುವ ಪ್ರಗತಿ ಮತ್ತು ಮುಂದಿನ ಜನ್ಮದಲ್ಲಿ ತಾನು ಸಾಧಿಸಬೇಕಾದುದೇನು - ಎಂಬ ಅರಿವಾಗುತ್ತದಂತೆ, ಅನೇಕ ಜನ್ಮಗಳ ಪರ್ಯಂತರ - ಎಂದರೆ ಆತನು ಈ ವಿಧವಾದ ಅಸಕು - ಮಸಕಾದ ಪ್ರಜ್ಞೆಯ ಸ್ಥಿತಿಯಿಂದ ಎಚ್ಚೆತ್ತು ತನ್ನ ಸುತ್ತ ಮುತ್ತಲೂ ಇರುವ ಅರೂಪ ಲೋಕದ ಪರಿಸ್ಥಿತಿಯನ್ನೂ ಇತರೆ ಅಂತರಾತ್ಮರುಗಳನ್ನೂ ಅರಿತುಕೊಳ್ಳುವ ಅಂತಸ್ತಿಗೆ ಬೆಳೆದಾಗ ಆತನ ಭಾವೀ ಗುರುವಿನ ಪ್ರಭಾವದೊಳಕ್ಕೆ ಬರುತ್ತಾನೆ - ವಾಸ್ತವವಾಗಿಯೂ ಹೇಳಬೇಕಾದರೆ ಆತನಿಗೆ ಪ್ರಥಮತಃ ಉಂಟಾಗುವ ಹೊರಗಿನ ಪ್ರಜ್ಞೆಯೇ ಆತನ ಗುರುವಿಗೆ ಸಂಬಂಧಪಟ್ಟುದು - (ಮಗುವಿಗೆ ಎಷ್ಟೋ ಕಾಲ ಬಾಹ್ಯ ಪ್ರಜ್ಞೆಯಿರುವುದಿಲ್ಲ– ಅದಕ್ಕೆ ಹಸಿವಿನ ಸಂಕಟವಾದಾಗ ಅಳುತ್ತದೆ. ಆಗ ತಾಯಿಯು ಅದಕ್ಕೆ ಸ್ತನ್ಯಪಾನ ಮಾಡಿಸುತ್ತಾಳೆ. ಈ - ಹಸಿವಿಗೆ ಸಂಬಂಧಪಟ್ಟ ಸಂಕಟ ಮತ್ತು ಅದನ್ನು ನಿವಾರಿಸುವ ಸ್ತನ್ಯಪಾನ ಆವೆರಡೂ ಅನೇಕ ಸಾರಿ ಪುನರಾವರ್ತನೆಯಾದಮೇಲೆ

ಮಗುವಿಗೆ ಬಾಹ್ಯ ಪ್ರಪಂಚದ ಅರಿವುಂಟಾಗುತ್ತದೆ – ಆ ಪ್ರಪ್ರಥಮ ಬಾಹ್ಯ ಅರಿವೇ ತಾಯಿಗೆ ಸಂಬಂಧಪಟ್ಟುದು. ಹೀಗೆ ಮಗುವಿಗೆ ಬಾಹ್ಯ ಪ್ರಪಂಚದ ಅರಿವು ತಾಯಿಯ ಮೂಲಕ ಹೇಗೆ ಆಗುತ್ತದೆಯೋ ಹಾಗೆ ಬಾಲ್ಯಾವಸ್ಥೆಯಲ್ಲಿ ಅಂತರಾತ್ಮನಿಗೆ ಉಂಟಾಗುವ ಹೊರಗಿನ ಪ್ರಪಂಚದ ಅರಿವು ಆತನ ಗುರುವಿಗೆ ಸಂಬಂಧಪಟ್ಟುದು. ಸಿದ್ಧಪುರುಷರಾದ ಪರಮ ಗುರುಗಳು ಕಾರಣ ದೇಹದ ಮಟ್ಟದಲ್ಲಿ ಅವರ ಅನುಗ್ರಹ ಶಕ್ತಿಯನ್ನು ವರ್ಷಿಸುತ್ತಿರುತ್ತಾರೆ. ಆ ರೀತಿ ವರ್ಷಿಸಲ್ಪಡುವ ಅನುಗ್ರಹ ಧಾರೆಗೆ ಯಾರು ಓಗೊಡುವ ಬೆಳವಣಿಗೆ ಮಟ್ಟವನ್ನು ತಲುಪಿರುತ್ತಾರೆಯೋ ಅಂತಹ ಅಂತರಾತ್ಮರುಗಳೇ ಮಹಾತ್ಮರ ಪ್ರಭಾವಕ್ಕೆ ಒಳಗಾಗತಕ್ಕವರು - ಸಾಮಾನ್ಯವಾಗಿ ಈ ವಿಧವಾಗಿ ಅಂತರಾತ್ಮನಿಗೆ ಆದ ಗುರುವಿನ ಪರಿಚಯವು ಸ್ಥೂಲ ಲೋಕದಲ್ಲಿ ವಾಸಿಸುವ ದೇಹಾತ್ಮನ ಪ್ರಜ್ಞೆಯ ಮಟ್ಟಕ್ಕೆ ಇಳಿದು ಆತನಿಗೆ ಜೀವಿತೋದ್ದೇಶವನ್ನು ಕೊಡುತ್ತದೆ. ಅಲ್ಲದೆ ಆ ಪರಮ ಗುರುವಿನ (ಎಂದರೆ ಜೀವನ್ಮುಕ್ತ ಮಹಾಪುರುಷನ) ಸ್ಫುರಣೆಗೆ ಓಗೊಡುವಂತಹ ಮನೋಭಾವನೆಯು ಯಾವಾಗ ಮೂಡುತ್ತದೆಯೋ ಅಲ್ಲಿಂದಾಚೆಗೆ ಅಂತಹ ಧ್ಯೇಯದ ಬೆಲೆಯನ್ನು ಮನಗಂಡವನ ಆಧ್ಯಾತ್ಮಿಕ ಪ್ರಗತಿಯು ತುಂಬ ತೀವ್ರವಾಗಿ ಮುಂದುವರಿದುಕೊಂಡು ಹೋಗುತ್ತದೆ - ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ಧಯೇ । ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ವತಃ ॥ ಎಂಬ ಗೀತಾ ಶ್ಲೋಕದಂತೆ ಸಾವಿರಾರು ಜನರಲ್ಲಿ ಯಾರೋ ಒಬ್ಬ (ಪರಮ ಪುರುಷಾರ್ಥದ) ಜೀವಿತೋದ್ದೇಶವನ್ನು ಮನಗಾಣುತ್ತಾನೆ. ಅಂತಹ ಸಾವಿರಾರು ಜನರಲ್ಲಿ ಯಾರೋ ಒಬ್ಬ ಪರಮಾತ್ಮನ ಸಾಕ್ಷಾತ್ಕಾರ ಪಡೆಯುವ ಸಿದ್ಧಿಯನ್ನು ಪಡೆಯುತ್ತಾನೆ - T.V.R.)

ಇಂತಹ ಬೆಳವಣಿಗೆ ಅಂತಸ್ತನ್ನು ಮುಟ್ಟಿದವನಿಗೆ ಎಂದರೆ ಗುರುಗಳ ಲೋಕ ಕಲ್ಯಾಣಕ್ಕೆ ಸಂಬಂಧಪಟ್ಟ ಕೆಲಸದಲ್ಲಿ ಯಾರು ಆಸಕ್ತಿ ವಹಿಸುತ್ತಾನೆಯೋ ಅಂತಹನ ಪ್ರಗತಿಯು ಅಲ್ಲಿಂದಾಚೆಗೆ ರೇಖಾಗಣಿತದ ಲೆಕ್ಕಾಚಾರದ ಪ್ರಕಾರ ಎಂದರೆ - 2×2=4, 4×4=16, 16×16=256 ಹೀಗೆ ತೀವ್ರ ಗತಿಯಲ್ಲಿ ಮುಂದುವರಿದುಕೊಂಡು ಹೋಗುತ್ತದೆ. ಈ ರೀತಿ ಗುರುಗಳಿಂದ ಅಂತರಾತ್ಮನ ಮೇಲೆ ವರ್ಷಿಸಲ್ಪಡುವ ಅನುಗ್ರಹ ಶಕ್ತಿಯಲ್ಲಿ ಸ್ವಲ್ಪಭಾಗ ದೇಹಾತ್ಮಕ್ಕೆ ಹರಿದು ಬರುತ್ತದೆ. ಆದರೆ ಸಾಧಾರಣ ಮನುಷ್ಯರ ದೇಹಾತ್ಮಗಳ ಸ್ವಭಾವಕ್ಕೂ ಅವರ ಅಂತರಾತ್ಮಗಳ ಸ್ವಭಾವಕ್ಕೂ ತುಂಬ ಭಿನ್ನತೆಯಿರುತ್ತದೆ. ಏಕೆಂದರೆ ದೇಹಾತ್ಮವು ಅಂತರಾತ್ಮನ ಸ್ವಭಾವಕ್ಕೆ ಹೊಂದಿಕೊಳ್ಳುವಂತಹ ಅನುಭವಗಳನ್ನು ಸಂಗ್ರಹಿಸುವುದಲ್ಲದೆ ತನ್ನದೇ ಆದ ಪ್ರಾಪಂಚಿಕ ಮನೋಭಾವನೆಯನ್ನೂ ಸಹ ಬೆಳೆಸಿಕೊಳ್ಳುತ್ತದೆ, ಎಂದರೆ ಅದಕ್ಕೆ ಸ್ವಾರ್ಥ ದೃಷ್ಟಿಯಿಂದ ಎಲ್ಲವನ್ನೂ ಎಲ್ಲ

ರನ್ನೂ ನೋಡುವ ಸ್ವಭಾವವು ಹೆಚ್ಚಾಗಿರುವುದರಿಂದ ಸರಿಯಾದ ತಿಳಿವಳಿಕೆಯ ಜೊತೆಗೆ ತಪ್ಪು ಅಭಿಪ್ರಾಯ ಮತ್ತು ವಕ್ರ ಭಾವನೆಗಳನ್ನೂ ಸಹ ಬೆಳೆಸಿಕೊಳ್ಳು ತ್ತದೆ. ಈ ವಿಧವಾದ ಮನೋಭಾವನೆಯು ಜೀವನ್ಮುಕ್ತಿ ಅಂತಸ್ತನ್ನು ಹೊಂದುವ ವರೆಗೂ ದೇಹಾತ್ಮಗಳಿಗೆ ಇದ್ದೇ ಇರುತ್ತದೆ. ಆದರೆ ಕ್ರಮೇಣ ತಮ್ಮ ತಪ್ಪು ಗಳನ್ನೂ ಅರಿತುಕೊಂಡು ತಿದ್ದಿಕೊಳ್ಳುವ ಅವಕಾಶವೂ ಇದ್ದೇ ಇರುತ್ತದೆ. ಈ ವಿಧವಾದ ದೋಷಗಳು ಅಂತರಾತ್ಮನಿಗೆ ಇರುವುದೇ ಇಲ್ಲ. ಆತನಲ್ಲಿ ಎಷ್ಟು ತಿಳಿವಳಿಕೆಯಿದೆಯೋ ಅಷ್ಟೂ ಪೂರ್ಣ ಸತ್ಯದ ಆಧಾರದ ಮೇಲೆ ನಿಂತಿರುತ್ತದೆ.

ದೇಹಾತ್ಮವು ಅಂತರಾತ್ಮನ ಒಂದು ಕಿರಣವಾಗಿರುವುದರಿಂದ ಆ ಮಟ್ಟದ ಆಧ್ಯಾತ್ಮಿಕ ಶಕ್ತಿಯಲ್ಲಿ ಸ್ವಲ್ಪವಾದರೂ ದೇಹಾತ್ಮದೊಳಕ್ಕೆ ಹರಿದುಕೊಂಡು ಬರಲೇಬೇಕು - ಆದರೆ ದೇಹಾತ್ಮವು ಎಷ್ಟರಮಟ್ಟಿಗೆ ಅದಕ್ಕೆ ತಕ್ಕ ಪಾತ್ರವಾಗಿ ದೆಯೋ ಅಷ್ಟನ್ನು ಮಾತ್ರ ಪಡೆಯಬಲ್ಲುದು – ಗುರುಗಳು ಅಂತರಾತ್ಮನಲ್ಲಿ ಇನ್ನೂ ಬೀಜರೂಪವಾಗಿರುವ ಗುಣಗಳಮೇಲೆ ತಮ್ಮ ಅನುಗ್ರಹ ಶಕ್ತಿಯನ್ನು ಸುರಿಸಿ ಅವುಗಳನ್ನು ಬೆಳೆಸಲು ಪ್ರಯತ್ನ ಮಾಡುತ್ತಿರುತ್ತಾರೆ – ಆದರೆ ದೇಹಾತ್ಮ ದಲ್ಲಿ ಆ ಗುಣಗಳು ಇನ್ನೂ ಬೆಳೆಯದೇ ಇರುವ ಸಂದರ್ಭದಲ್ಲಿ ಆ ವಿಧವಾದ ಅನುಗ್ರಹ ಶಕ್ತಿಗೆ ತಕ್ಕಂತೆ ಅದು ಓಗೊಡಲಾರದು. ದೇಹಾತ್ಮದ ಅನುಭವ ಗಳು ಅಂತರಾತ್ಮ ಸ್ವಭಾವಕ್ಕೆ ಹೊಂದಾಣಿಕೆಯಾಗಿದ್ದಪಕ್ಷದಲ್ಲಿ ಅವುಗಳು ಮಾತ್ರ ಅಂತರಾತ್ಮನಿಗೆ ಹೋಗಿ ಸೇರಿಕೊಳ್ಳಬಲ್ಲುವು. ಹೀಗೆಯೇ ಅಂತರಾತ್ಮನ ಸ್ವಭಾ ವಕ್ಕೆ ಓಗೊಡಬಲ್ಲಂತಹ ಸ್ವಭಾವಕ್ಕೆ ತಕ್ಕಂತೆ ಮೇಲಿನ ಶಕ್ತಿಗಳು ಕೆಳಗಿನ ದೇಹಾತ್ಮ ದಲ್ಲಿ ಅಭಿವ್ಯಕ್ತವಾಗಬಲ್ಲುವು. ಆದರೆ ಅನೇಕ ದೇಹಾತ್ಮಗಳು ಪ್ರಾಪಂಚಿಕ ವ್ಯವಹಾರ ಗಳಲ್ಲಿ ಮಗ್ನವಾಗಿರುತ್ತವೆ– ಆಧ್ಯಾತ್ಮಿಕ ಪ್ರಗತಿಗೆ ತಕ್ಕ ಮನೋಭಾವನೆಯನ್ನು ಬೆಳೆಸಿಕೊಂಡಿರುವುದಿಲ್ಲ – ಅಂತಹ ದೇಹಾತ್ಮಗಳಿಗೂ. ಅಂತರಾತ್ಮಗಳಿಗೂ ಮಧ್ಯೆ ಇರುವ ನಾಲೆಯು ತೆರೆದಿರುವುದು ಅತ್ಯಲ್ಪ - ಕೇವಲ ಒಂದು ಸೂತ್ರದಂತಹ ಸಂಬಂಧವಿರುತ್ತದೆ. ಅಂತಹ ಅಂತರಾತ್ಮನು ಕೋಳಿಮೊಟ್ಟೆಯೊಳಗಿನ ಎಳೆಯ ಕೋಳಿಮರಿಯಂತೆ ಇರುತ್ತಾನೆ – ಆದರೆ ದೇಹಾತ್ಮವು ಆಧ್ಯಾತ್ಮಿಕ ಗುರಿಯ ಕಡೆಗೆ ತನ್ನ ಮನಸ್ಸನ್ನು ತಿರುಗಿಸಿ-ಆಧ್ಯಾತ್ಮಿಕ ವಿಷಯಗಳ ವ್ಯಾಸಂಗ ಮತ್ತು ಧ್ಯಾನ. ಇವುಗಳನ್ನು ಶ್ರದ್ಧೆಯಿಂದ ಅನುಷ್ಠಾನ ಮಾಡುವಷ್ಟರಮಟ್ಟಿಗೆ ಬೆಳೆದಾಗ - ಆ ಸಂಬಂಧವಾದ ಅಂತರಾತ್ಮನು ತನ್ನ ಲೋಕದ ಮಟ್ಟದಲ್ಲಿ ಪ್ರಜ್ಞಾವಂತನಾಗಿ ಬೆಳೆದು ಕೆಲಸಮಾಡುತ್ತಿದ್ದಾನೆಂದು ಹೇಳಬಹುದು. ಸಾಧಾರಣ ಮನುಷ್ಯನ ಅಂತ ಸ್ತನ್ನು - (ಎಂದರೆ ಕೋಳಿಮರಿಯು ತನ್ನ ಚಿಪ್ಪನ್ನು ಹೊಡೆದು ಈಚೆಗೆ ಬಂದು ತನ್ನ ಸ್ವತಂತ್ರ ಜೀವನ ನಡೆಸುತ್ತಿರುವಂತಹ) ಅಂತಹ ಅಂತರಾತ್ಮನು ಬಹು ಹಿಂದೆಯೇ ದಾಟಿ - ಬಂದು, ಸಂಸರಣಪಥದಲ್ಲಿ ಬಹುದೂರ ಮುಂದೆ ಹೋಗಿರು

ತ್ತಾನೆಂದು ಹೇಳಬೇಕಾಗುತ್ತದೆ. ಅಂತಹ ಅಂತರಾತ್ಮನಿಗೂ ದೇಹಾತ್ಮಕ್ಕೂ ನೇರವಾದ ಸಂಬಂಧವಿರುತ್ತದೆ. ಏಕೆಂದರೆ ಇಂತಹ ಬೆಳೆದು ಮುಂದುವರಿದ ಅಂತಸ್ತಿನಲ್ಲಿ ದೇಹಾತ್ಮವು ಅಂತರಾತ್ಮನ ಧ್ಯೇಯಕ್ಕೆ ಓಗೊಡುವ ಪ್ರವೃತ್ತಿಯನ್ನು ಹೊಂದಿರುತ್ತದೆ.

ಆದರೆ ಕೇವಲ ಸ್ಥೂಲ ದೃಷ್ಟಿಯಿಂದ ದೇಹಾತ್ಮದ ವ್ಯವಹಾರಗಳನ್ನೂ ಚಟುವಟಿಕೆಗಳನ್ನೂ ಗಮನಕ್ಕೆ ತೆಗೆದುಕೊಂಡು ಅಂತರಾತ್ಮನ ಬೆಳವಣಿಗೆಯನ್ನು ಗೊತ್ತುಹಚ್ಚುವುದಕ್ಕೆ ಸಾಧ್ಯವಿಲ್ಲ - ಏಕೆಂದರೆ ಕೆಲವು ಆಡಂಬರ ಸ್ವಭಾವದ ದೇಹಾತ್ಮಗಳು ವಾಸ್ತವವಾಗಿಯೂ ಬೆಳೆದ ಅಂತರಾತ್ಮರುಗಳಿಗೆ ಸಂಬಂಧಪಟ್ಟ ದೇಹಾತ್ಮಗಳಿಗಿಂತ ಹೆಚ್ಚು ಪ್ರಭಾವಯುತವಾಗಿ ಕಾಣಬಹುದು. ಅಷ್ಟುಮಾತ್ರಕ್ಕೆ ಆ ಸಂಬಂಧವಾದ ಅಂತರಾತ್ಮನ ಬೆಳವಣಿಗೆಯು ಮುಂದುವರಿದ ಮಟ್ಟದ್ದು ಎಂದು ಊಹಿಸಲು ಸಾಧ್ಯವಿಲ್ಲ. ಆದುದರಿಂದ ಹೊರಗಿನ ದೃಷ್ಟಿಯಿಂದ ಎಂದರೆ ದೇಹಾತ್ಮನ ಪರಿಸ್ಥಿತಿಯಿಂದ ಅಂತರಾತ್ಮನ ಬೆಳವಣಿಗೆಯನ್ನು ಗೊತ್ತುಹಚ್ಚುವುದು ತುಂಬ ತಪ್ಪುಅಭಿಃಪ್ರಾಯಕ್ಕೆ ಎಡೆಗೊಡುವುದರಲ್ಲಿ ಸಂಶಯವಿಲ್ಲ. ಅಂತರಾತ್ಮನ ಬೆಳವಣಿಗೆ ಅಂತಸ್ತನ್ನು ಸರಿಯಾಗಿ ತಿಳಿದುಕೊಳ್ಳಬೇಕಾದರೆ ಆತನ ಪ್ರಜ್ಞೆ ಮಟ್ಟಕ್ಕೆ ಹತ್ತಿಹೋದರೆ ಮಾತ್ರ ಸಾಧ್ಯ ....

ಥಿಯಾಸಫಿಯಂತಹ ದಿವ್ಯ ಜ್ಞಾನವನ್ನು ಸಂಗ್ರಹಿಸಬೇಕೆಂಬ ಉದ್ದೇಶದಿಂದ ಥಿಯಾಸಫಿ ಸಾಹಿತ್ಯವನ್ನು ವ್ಯಾಸಂಗಮಾಡುತ್ತ ಆ ಬೆಳಕಿನಲ್ಲಿ ತನ್ನ ಜೀವಿತವನ್ನು ಅಳವಡಿಸಿಕೊಂಡು ಅದನ್ನು ಅನುಷ್ಠಾನ ಮಾಡಲು ಪ್ರಯತ್ನಪಟ್ಟಾಗ ಅಂತರಾತ್ಮನ ಗಮನವು ದೇಹಾತ್ಮದ ಕಡೆಗೆ ತಿರುಗಿ ಅದರ ಅಭಿವೃದ್ಧಿಗೆ ತುಂಬ ಪ್ರಯೋಜನವಾಗುತ್ತದೆ. ಅಲ್ಲದೆ ಅಂತರಾತ್ಮನ ಆಧ್ಯಾತ್ಮಿಕ ಲಕ್ಷ್ಯಕ್ಕೆ ಅನುಗುಣವಾದ ಪ್ರೇಮ - ಭಕ್ತಿ ಮೊದಲಾದ ಉನ್ನತ ಭಾವನೆಗಳಿಗೆ ದೇಹಾತ್ಮವು ಗಮನಕೊಟ್ಟು ಬೆಳೆಸಿಕೊಳ್ಳಲು ಪ್ರಯತ್ನಪಟ್ಟಾಗ ಅಂತರಾತ್ಮನೊಡನೆ ದೇಹಾತ್ಮದ ಜೀವನವು ಸಮರಸವಾಗುವುದರಲ್ಲಿ ಸಂಶಯವಿಲ್ಲ. ಏಕೆಂದರೆ ಕಾಮದೇಹದ ಪ್ರಕೃತಿಯಲ್ಲಿನ ಮೇಲಿನ ಮೂರು ಉಪಲೋಕ ಪ್ರಕೃತಿ ಅಂತಸ್ತುಗಳು ಮನೋಲೋಕದ ಮೇಲಿನ ಮೂರು ಉಪಲೋಕ ಪ್ರಕೃತಿ ಅಂತಸ್ತುಗಳಿಗೆ ನೇರವಾದ ಸಂಬಂಧವುಳ್ಳವುಗಳಾಗಿರುತ್ತವೆ. ಮೇಲ್ಕಂಡ ಪ್ರೇಮ ಮೊದಲಾದ ಉನ್ನತ ಭಾವನೆಗಳು ಆ ಮೇಲಿನ ಉಪಲೋಕಗಳ ಪ್ರಕೃತಿ ತತ್ವಗಳ ಮೂಲಕ ಅಭಿವ್ಯಕ್ತವಾಗುವುದರಿಂದ ಅವುಗಳಿಗೆ ಸಂಬಂಧಪಟ್ಟ ಸ್ಪಂದಗಳು ಕಾರಣ ದೇಹದ ಪ್ರಕೃತಿಯನ್ನು ಪ್ರಚೋದನೆ ಮಾಡುತ್ತವೆ. ಆ ಮೂಲಕ ಕಾರಣ ದೇಹಾಂತರ್ಗಾದ ಅಂತರಾತ್ಮನ ಸ್ವಭಾವಕ್ಕೆ ಹೋಗಿ ಸೇರಿಕೊಳ್ಳುತ್ತವೆ.

ಸ್ವಾರ್ಥಯುತವಾದ ಉದ್ದೇಶಗಳಿಗೆ ಸಂಬಂಧಪಟ್ಟ ಯೋಚನೆಗಳೂ ಭಾವನೆಗಳೂ ಆಯಾ ಮಟ್ಟದ ದೇಹದ ನಿತ್ಯಾಣುಗಳಲ್ಲಿ ವಾಸನೆ ರೂಪದಲ್ಲಿ ಶೇಖರವಾಗುತ್ತವೆ.

ಆದುದರಿಂದ ದೇಹಾತ್ಮ ಮಟ್ಟದ ಪ್ರಜ್ಞೆಯು ಅಂತಸ್ತಿನಲ್ಲಿರುವ ನಾವು ನಮ್ಮ ಸ್ಥೂಲ- ಕಾಮ ಮತ್ತು ರೂಪದೇಹಗಳೇ ನಾವೆಂಬ ಅಜ್ಞಾನಕ್ಕೆ ಅವಕಾಶ ಕೊಡದೆ ನಮ್ಮ ನಮ್ಮ ಅಂತರಾತ್ಮದೊಡನೆ ಒಂದಾಗಿ ಅತನ ಅಂತರ್ವಾಣಿಗೆ ಓಗೊಟ್ಟು ಆ ರೀತಿ ನಮ್ಮ ಕೆಳಗಿನ ಮಟ್ಟದ ಜೀವಿತವನ್ನು ನಡೆಸುತ್ತ ಬರಬೇಕು - ಈ ರೀತಿ ಅನುಷ್ಠಾನ ಮಾಡುತ್ತಿರುವ ಸನ್ನಿವೇಶದಲ್ಲಿ ಅನೇಕ ಬಾರಿ ನಮ್ಮ ಪ್ರಯತ್ನಗಳಲ್ಲಿ ವಿಫಲರಾಗಿ ನಮ್ಮ ನೀಚ ಸ್ವಭಾವಕ್ಕೆ ಒಳಗಾಗಿ ಬಿಡುವುದು - ಸ್ವಾಭಾವಿಕ. ಇದಕ್ಕಾಗಿ ತುಂಬ ಖಿನ್ನತೆಗೆ ಒಳಗಾಗುವುದು ಅನುಚಿತ. ಏಕೆಂದರೆ ಆ ಮೂಲಕ ನಮಗೆ ಅನುಭವದ ಸಂಪತ್ತು ಹೆಚ್ಚಿ ಮುಂದಿನ ಪರಿಸ್ಥಿತಿಯನ್ನು ಹೆಚ್ಚು ವಿವೇಚನೆಯಿಂದ ಎದುರಿಸುವಂತೆ - ಆಗುತ್ತೇವೆ. ಈಗಿನ ನಮ್ಮ ಬೆಳವಣಿಗೆ ಅಂತಸ್ತಿನಲ್ಲಿ ನಮ್ಮ ಆತ್ಮ ಸಂಯಮದ ಪ್ರಯತ್ನಗಳು ಯಾವಾಗಲೂ ಜಯಪ್ರದವಾಗಲಾರವು - ಆದರೆ ಮುಂದೆ ಪೂರ್ಣ ಜಯವು ಲಭಿಸುವುದು ಖಚಿತ. ಆದರೆ ಎಲ್ಲಾ ಸಂದರ್ಭಗಳಲ್ಲೂ ಹೃತ್ಪೂರ್ವಕವಾಗಿ ನಮ್ಮ ಹೋರಾಟವನ್ನು ಬಿಡದೆ ಮುಂದುವರಿಸಿಕೊಂಡು ಹೋಗಬೇಕು. ಅಂಥವರೇ ಧನ್ಯರು ಮತ್ತು ಅಂತ್ಯದಲ್ಲಿ ಪೂರ್ಣ ಜಯವನ್ನು ಗಳಿಸುವಂಥವರು.

ತಪಸ್ಸು

ಅನೇಕರು ಈ ವಿಷಯವಾಗಿ ತಪ್ಪು ಅಭಿಪ್ರಾಯವುಳ್ಳವರಾಗಿರುತ್ತಾರೆ. ಕ್ರೈಸ್ತಮತಾನುಯಾಯಿಗಳಲ್ಲೂಕೂಡ ಈ ವಿಷಯವಾಗಿ ತಪ್ಪು ಅಭಿಪ್ರಾಯವಿದೆ. ದೇಹ ಸ್ವಭಾವವು ಯಾವಾಗಲೂ ಕೆಟ್ಟುದೆಂದೂ ಅದನ್ನು ದಮನ ಮಾಡಿ ದಂಡಿಸಬೇಕೆಂದೂ ಕೆಲವರು ತಿಳಿದುಕೊಂಡಿರುತ್ತಾರೆ ಮತ್ತೆ ಕೆಲವು ಪಂಗಡದ ಕ್ರೈಸ್ತ ಮತಾನುಯಾಯಿಗಳು ಸಂತೋಷವಾಗಿರುವುದೇ ಕೆಟ್ಟುದೆಂದೂ - ಅದು ಸೈತಾನನಿಂದ ಪ್ರೇರೇಪಿತವಾದುದೆಂದೂ ಭಾವಿಸುತ್ತಾರಂತೆ – ಇದು ಕೇವಲ ತಪ್ಪು ಅಭಿಪ್ರಾಯ. ಪೌರ್ವಾತ್ಯ ಸಂಸ್ಕೃತಿಯಲ್ಲಿ ಬ್ರಹ್ಮವು ಆನಂದ ಸ್ವರೂಪವಾದುದು - ಎಂದು ಒತ್ತಿ ಹೇಳಿದೆ. ನಮ್ಮ ಥಿಯಾಸಫಿ ಸಮಾಜದ ಹಿಂದಿರುವ

ಜೀವನ್ಮುಕ್ತ ಮಹಾತ್ಮರುಗಳೂಕೂಡ ಸದಾ ಸಂತೋಷಚಿತ್ತರಾಗಿರುತ್ತಾರೆ. ನಾವು ಇತರರ ಕಷ್ಟ ಪರಿಸ್ಥಿತಿಗಳಿಗೆ ಮರುಗಿ ಸಹಾನುಭೂತಿಯಿಂದ ಅವರಿಗೆ ತಕ್ಕ ನೆರವು ನೀಡಬೇಕೇ ವಿನಾ ಅವರ ದುಃಖದೊಳಕ್ಕೆ ನಾವೂ ಸೇರಿಕೊಳ್ಳಬಾರದು. ದುಃಖಿಯ ಕಷ್ಟವನ್ನು ಆರೀತಿ ಮಾಡುವುದರಿಂದ ಹೆಚ್ಚಿಸುತ್ತೇವೆಯೇ ಹೊರತು ಕಡಮೆ ಮಾಡಲಾರೆವು. ಸಂತೋಷಚಿತ್ತರೂ—ನೆಮ್ಮದಿಯಿಂದ ಇರುವವರೂ ಮಾತ್ರ ಅಂತಹ ದುಃಖವನ್ನು ಕಡಮೆ ಮಾಡಬಲ್ಲರು ಆದುದರಿಂದ ಮೇಲ್ಕಂಡ ತಪ್ಪು ಅಭಿಪ್ರಾಯಕ್ಕೆ ಥಿಯಾಸಫಿ ಔಪಾಸಕರು ಒಳಗಾಗಕೂಡದು.

ಆದರೆ ನಮ್ಮ ದೇಹ ಇಂದ್ರಿಯಗಳು ಮತ್ತು ಮನಸ್ಸು ಇವುಗಳನ್ನು ನಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ಕೆಲವು ಕಷ್ಟ ಪರಿಸ್ಥಿತಿ ಗಳನ್ನು ಎದುರಿಸಬೇಕಾಗುತ್ತದೆ. ಉದಾಹರಣೆಗಾಗಿ ಅನೇಕರು ಮಾಂಸಾಹಾರ ಮತ್ತು ಮದ್ಯಪಾನ ಮಾಡತಕ್ಕ ಜನರಲ್ಲಿ ಹುಟ್ಟಿರುತ್ತಾರೆ — ಅಂಥವರಿಗೆ ಮಾಂಸಾಹಾರ, ಮದ್ಯಪಾನ ಮತ್ತು ಧೂಮಪಾನ ಮೊದಲಾದ ದುಷ್ಚಟ ಗಳು ಅಭ್ಯಾಸವಾಗಿಬಿಟ್ಟಿರುತ್ತವೆ—ಅಂತಹರಲ್ಲಿ ಕೆಲವರಿಗೆ ಇವು ಅಪವಿತ್ರವೂ ನಿಷ್ಯವೂ ಆದುವುಗಳು—ಎಂಬುಶವು ಥಿಯಾಸಫಿ ಗ್ರಂಥಗಳನು ಓದಿದಾಗ ಅವರ ಮನಸ್ಸಿಗೆ ಚೆನ್ನಾಗಿ ತಾಕಿ ಅಂಥ ದುರಭ್ಯಾಸಗಳನ್ನು ಬಿಡಬೇಕೆಂಬ ತೀರ್ಮಾನಕ್ಕೆ ಅಂಥವರು ಬರಬಹುದು. ಅವರು ಅವುಗಳನ್ನು ಬಿಡಬೇಕೆಂದಿದ್ದರೂ ಅವರ ದೇಹ ಸ್ವಭಾವವು ಅವುಗಳ ಮೇಲಿನ ಆಶೆಯಿಂದ ಪಾರಾಗಿರುವುದಿಲ್ಲ. ಆಗ ಕುರುಕ್ಷೇತ್ರ ಹೋರಾಟ ಪ್ರಾರಂಭವಾಗುತ್ತದೆ. ಎಷ್ಟೋಸಾರಿ ಆದರೂ ಪುನಃ ಅಂತಹ ಆಶೆಗಳಿಗೆ ಸೋತು ಹಿಂದಿನ ಅಭ್ಯಾಸಕ್ಕೆ ಬಿದ್ದು ಹೋಗು ತ್ತಾರೆ. ಹೀಗಿದ್ದಾಗ್ಯೂ ಅಂತಹರು ಬಿಡದೆ ದೃಢ ಮನಸ್ಸಿನಿಂದ ಪ್ರಯತ್ನ ವನ್ನು ಮುಂದುವರಿಸಿಕೊಂಡು ಹೋದರೆ ಅಂತ್ಯದಲ್ಲಿ ಅವುಗಳ ಮೇಲೆ ಪೂರ್ತ ಜಯವನ್ನು ಗಳಿಸಬಹುದು. ಹೀಗೆಯೇ ನಮ್ಮ ನೀಚಸ್ವಭಾವಕ್ಕೆ ಸಂಬಂಧ ಪಟ್ಟ ಕಾಮ ಕ್ರೋಧಾದಿಗಳನ್ನೂ ಸಹ ಗೆಲ್ಲಬೇಕು—ಇಂತಹ ಆತ್ಮ ಸಂಯಮ ಮಾರ್ಗದಲ್ಲೂ ಕೂಡ ಸಾಧಕರು ಪದೇ ಪದೇ ಹಿಂದಿನ ಸ್ವಭಾವಕ್ಕೆ ಸೋತು ಪರಾಜಿತರಾಗಿರುತ್ತಾರೆ—ಆದರೆ ಬಿಡದೆ ಪ್ರಯತ್ನವು ಮುಂದುವರಿದರೆ ಅಂತ್ಯದಲ್ಲಿ ಜಯ ಖಂಡಿತ. ಆರೀತಿ ಪೂರ್ತ ಜಯ ಸಿದ್ಧಿಸುವವರೆಗೂ ಸಾಧಕರಿಗೆ ಅತೃಪ್ತಿ—ಅಸಮಾಧಾನಗಳು ಇದ್ದೇ ಇರುತ್ತವೆ. ಹಾಗಿರುವುದು ಸ್ವಾಭಾವಿಕ. ಅಂತಹ ಸಂದರ್ಭದಲ್ಲೂ ಕೂಡ ಸಾಧಕನು "ಇವುಗಳನ್ನು ಬಯಸುವವನು ನಾನಲ್ಲ—ಇವು ನನ್ನ ದೇಹಗಳ ಹಿಂದಿನ ದುರಭ್ಯಾಸನ ಚಟಗಳಿಗೆ ಸಂಬಂಧ ಪಟ್ಟುವು—ಆದುದರಿಂದ ಇವುಗಳನ್ನು ನಾನು ಸ್ವಾಧೀನಕ್ಕೆ ತೆಗೆದುಕೊಳ್ಳುವುದು

ಖಂಡಿತ"—ಎಂಬ ಭರವಸೆಯಿಂದ ಪ್ರಯತ್ನವನ್ನು ಮುಂದುವರಿಸಿಕೊಂಡು ಹೋದರೆ ಅಂತ್ಯದಲ್ಲಿ ಜಯ ಸಿದ್ಧ.

ಅಲ್ಲದೆ ಗೀತೆಯು ಬೋಧಿಸುವಂತೆ, ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ। ರಸವರ್ಜ್ಯಂ ರಸೋಪ್ಯಸ್ಯ ಪರಂದೃಷ್ಟ್ವಾ ನಿವರ್ತತೇ—ಇಂದ್ರಿಯಗಳಿಗೆ ಆಹಾರದಂತಿರುವ ಶಬ್ದ—ಸ್ಪರ್ಶ ರೂಪ—ರಸ—ಗಂಧಾದಿ ವಿಷಯಗಳಿಂದ ಸಾಧಕನು ದೂರವಿರಬಹದು—ನಿರಾಹಾರವೆಂದರೆ ಸ್ಥೂಲದೇಹದ ಆಹಾರವನ್ನು ಮಾತ್ರ ಬಿಡುವುದು—ಎಂದು ಅರ್ಥಮಾಡಿಕೊಳ್ಳುತ್ತಾರೆ. ಇದನ್ನೇ ಉಪವಾಸ ವ್ರತವೆಂದೂ ಕರೆಯುತ್ತಾರೆ. (ಉಪವಾಸವೆಂದರೆ ನಿಜವಾದ ಅರ್ಥ ಪರಮಾತ್ಮನ ಸ್ವಭಾವಕ್ಕೆ ಹತ್ತಿರ—ಹತ್ತಿರ ಹೋಲುವಂತಹ ಸ್ವಭಾವವನ್ನು ಮೈಗೂಡಿಸಿಕೊಳ್ಳುವುದೇ ಆಗಿದೆ. ಬರೀ ಸ್ಥೂಲ ದೇಹಕ್ಕೆ ಸಂಬಂಧಪಟ್ಟ ಆಹಾರವನ್ನು ತ್ಯಜಿಸುವುದು ಮಾತ್ರ ಅಲ್ಲ—ಹೇಗೆ ಶಿವರಾತ್ರಿ ಮತ್ತು ಏಕಾದಶೀ ದಿನಗಳಲ್ಲಿ ಜನರು ದೈನಂದಿನ ಆಹಾರವನ್ನು ಬಿಟ್ಟಿರುತ್ತಾರೆಯೋ ಹಾಗೆ ಧರ್ಮಕ್ಕೆ ವಿರುದ್ಧವಾದ ವಿಷಯಗಳನ್ನೂ ತ್ಯಜಿಸಬೇಕು. ತ್ಯಜಿಸಬೇಕು ಎಂದರೆ ಬಲವಂತವಾಗಿ ಅಲ್ಲ—ಎಲ್ಲಿಯವರೆಗೆ ಅವುಗಳ ಮೇಲಿನ ಆಶೆಯು ನಮ್ಮ ಸ್ವಭಾವದಲ್ಲಿ ಸೇರಿಕೊಂಡಿರುತ್ತದೆಯೋ ಅದುವರೆಗೆ ಸಂದರ್ಭಾನುಸಾರ ಅವುಗಳಿಗೆ ಸೋಲುವ ಸಂಭವವಿರುತ್ತದೆ. ಆದರೆ ಅಂತಹ ಆಶೆಗಳನ್ನೂ ತೃಪ್ತಿಪಡಿಸಿಕೊಳ್ಳುವ ಮೂಲಕ ನಮಗೆ ಉಂಟಾಗುವ ಸುಖಕ್ಕಿಂತಲೂ ಉನ್ನತ ಮಟ್ಟದ ಸುಖವು ನಮ್ಮ ಕರಗತವಾದಾಗ ಅವುಗಳ ಮೇಲಿನ ಆಶೆಯೂ ಕೂಡಾ ಪೂರ್ತ ಕಳಚಿ ಬೀಳುತ್ತದೆ. ಉದಾಹರಣೆಗಾಗಿ ಮಕ್ಕಳು ಆಟ-ಕ್ರೀಡೆ ವಿನೋದಗಳಲ್ಲೇ ನಿರತರಾಗಿರುತ್ತಾರೆ. ಏಕೆಂದರೆ ಅವರಿಗೆ ಆ ದರ್ಜೆಯಲ್ಲಿ ಎಟಕುವುದು ಅದೊಂದೇ ಸುಖ—ಆದರೆ ಅವರೇ ಬೆಳೆದು ಪ್ರಾಪ್ತವಯಸ್ಸಿಗೆ ಬಂದು ಮದುವೆಯಾಗಿ ಸಂಸಾರ ಸುಖವನ್ನು ಕಂಡಾಗ ಹಿಂದಿನ ಅಂತಸ್ತಿನ ಆಟಗಳ ಮೇಲಿನ ವ್ಯಾಮೋಹವು ತಾನಾಗಿಯೇ ಉದುರಿ ಹೋಗುತ್ತದೆ—ಏಕೆಂದರೆ ಆಗ ಅವರಿಗೆ (ಪರಂದೃಷ್ಟ್ವಾ) ಅದಕ್ಕಿಂತ ಉತ್ತಮ ದರ್ಜೆ ಸುಖ ಅವರ ಅನುಭವಕ್ಕೆ ಬರುತ್ತದೆ. ಹೀಗೆ ಈ ಲೋಕವು ಕೊಡತಕ್ಕಂತಹ ಇಂದ್ರಿಯ ಸುಖ—ಐಶ್ವರ್ಯ—ಅಧಿಕಾರ—ಕೀರ್ತಿ ಇವುಗಳ ಮೇಲಿನ ವ್ಯಾಮೋಹವು ಕಳಚಿ ಬಿದ್ದು ಹೋಗಬೇಕಾದರೆ ಅವುಗಳಿಗಿಂತ ಉತ್ತಮವೂ ಶಾಶ್ವತವೂ ಆದ ಆನಂದವು ನಮ್ಮ ಕೈಸೇರಬೇಕು—ಇಂತಹ ಆನಂದಕ್ಕೆ ಜ್ಞಾನಾನಂದವೆಂದು ಹೆಸರು. ಇದನ್ನು ಸ್ವತಃ ಅನುಭವಕ್ಕೆ ತಂದುಕೊಂಡಿರುವ ಪ್ರಾಜ್ಞರ ಉಪದೇಶದಿಂದಲೂ—ಅಂತಹರು ಬರೆದಿರುವ ಸದ್ಗ್ರಂಥಗಳ ವ್ಯಾಸಂಗದಿಂದಲೂ ಪಡೆಯಬಹುದು. ಇಂತಹ ದಿವ್ಯ ಜ್ಞಾನವು ಥಿಯಾಸಫಿ ಎಂಬ ದಿವ್ಯ ಸಾಹಿತ್ಯದಲ್ಲಿ ಹೇರಳವಾಗಿ

ನೊರೆಯುತ್ತದೆ. ಉತ್ತಿಷ್ಠತ—ಜಾಗೃತ - ಪ್ರಾಪ್ಯವರಾನ್ ನಿಭೋಧತ, ಎಂಬ ಉಪನಿಷದ್ವಾಕ್ಯದಂತೆ ಈ ಲೋಕದ ಸುಖವೇ ಸುಖ – ಇದಕ್ಕಿಂತ ಉತ್ತಮವಾದುದು—ಇಲ್ಲ-ಎಂಬ ಮಾಯೆಯ ಭ್ರಾಂತಿಯಿಂದ ಎಚ್ಚೆತ್ತು—ಪುನಹ ಅದರೊಳಕ್ಕೆ ಹಿಂದಕ್ಕೆ ಸರಿಯದಂತೆ ಜಾಗರೂಕನಾಗಿದ್ದುಕೊಂಡು, ಪರಿಶುದ್ಧ ಜೀವಿತವನ್ನು ನಡೆಸುತ್ತಾ ಈಶ್ವರನೂ ಆತನ ಪ್ರತಿನಿಧಿಗಳೂ ಆದ ಜೀವನ್ಮುಕ್ತ ಮಹಾತ್ಮರುಗಳು ಯಾವ ಲೋಕ ಕಲ್ಯಾಣ ಕಾರ್ಯವನ್ನು ಕೈಗೊಂಡಿರುತ್ತಾರೆಯೋ ಅಂತಹ ಸೇವೆಯಲ್ಲಿ ಭಾಗವಹಿಸುತ್ತಾ ಬಂದರೆ ಕೊನೆಗೆ ಅಂತಿಮ ಘಟ್ಟವಾದ ಬ್ರಹ್ಮಾನಂದವು ಲಭ್ಯವಾಗುತ್ತದೆ—ಇಂತಹ ಸುಖದ ಸ್ವರೂಪವನ್ನು (ಭಗವದ್ಗೀತೆಯ ಶ್ಲೋಕವು—ಬ್ರಹ್ಮಣೋಹಿ ಪ್ರತಿಷ್ಠಾಹ ಮಮೃತಸ್ಯಾ ಽ ವ್ಯಯಸ್ಯಚ। ಶಾಶ್ವತಸ್ಯಚ ಧರ್ಮಸ್ಯ ಸುಖಸ್ಸೈ ಕಾಂತಿ ಕಸ್ಯಚ॥) ವರ್ಣಿಸುತ್ತಿದೆ. ಶಾಶ್ವತವಾದ ಧರ್ಮಕ್ಕೂ ನಾಶರಹಿತವಾದ ಅಮೃತ ಸ್ವರೂಪವಾದ ಅನುಪಮ ಸುಖಕ್ಕೂ ತೌರುಮನೆಯಂತಿರುವ ಪರಬ್ರಹ್ಮದ ಪ್ರತೀಕವಾದ ತನ್ನ ಸ್ವರೂಪವನ್ನು ಈಶ್ವರನು ವರ್ಣಿಸುತ್ತಾನೆ. ಈಶ್ವರನು ಈಶ್ವರನಾದದ್ದು ಆ ತನ್ನ ಸರ್ವಾರ್ಪಣಭಾವದ ಸೇವೆಯಿಂದಲೇ ಅಲ್ಲವೇ !

ಕ್ರೈಸ್ತ ಮತಾನುಯಾಯಿಗಳಲ್ಲೇ ಅಲ್ಲ—ನಮ್ಮ ಹಿಂದೂ ಸಂಸ್ಕೃತಿಯಲ್ಲೂ ಸಹ ಪ್ರಕೃತಿಯು ಕೆಟ್ಟದು ಆದುದರಿಂದ ಅದನ್ನು ದಂಡಿಸಿ ಹಿಂಸಾತ್ಮಕವಾದ ಮತ್ತು ಕಠಿಣವಾದ ತಪಸ್ಸನ್ನು ಆಚರಿಸುವ ಮೂಲಕವೇ ಆತ್ಮ ಶ್ರೇಯಸ್ಸನ್ನು ಪಡೆಯಬಹುದು ಎಂಬ ತಪ್ಪು ಅಭಿಪ್ರಾಯವು ಹಠಯೋಗವನ್ನು ಅನುಸರಿಸುವ ಕೆಲವರಲ್ಲಿ ಹುಟ್ಟಿಕೊಂಡಿರುತ್ತದೆ. ಪ್ರಕೃತಿಯು ಕೆಟ್ಟದಲ್ಲ—ಒಳ್ಳೆಯದೂ ಅಲ್ಲ-ನಾವು ಅದನ್ನು ಹೇಗೆ ಉಪಯೋಗ ಮಾಡಿದರೆ ಅದು ಹಾಗಾಗುತ್ತದೆ—ಆದರೆ ತಪ್ಪು ಅಭಿಪ್ರಾಯದ ಹಠಯೋಗಿಗಳು ಪಂಚಾಗ್ನಿಗಳ ಮಧ್ಯೆ ನಿಂತು ಕಠಿಣವಾದ ತಪಸ್ಸು ಮಾಡುವವರು ಇದ್ದರೆಂದೂ ತಿಳಿದು ಬರುತ್ತದೆ—ಅಲ್ಲದೇ ಕೈ ತೋಳನ್ನು ಎತ್ತಿ ಅಲುಗಾಡದಂತೆ ಹಿಡಿದುಕೊಳ್ಳುವಂತಹ ತಪಸ್ಸನ್ನೂ ಕೆಲವರು ಆಚರಿಸುತ್ತಾರೆಂದು ತಿಳಿದು ಬರುತ್ತದೆ—ಇದರಿಂದ ಕೈಯಲ್ಲಿರುವ ಮಾಂಸಖಂಡಗಳು ತಮ್ಮ ಮಾರ್ದವತೆಯನ್ನು ಕಳೆದುಕೊಂಡು ಗಟ್ಟಿಯಾಗುತ್ತವೆ. ಇದರಿಂದ ಕೈಯು ಸ್ವಾಧೀನ ತಪ್ಪಿಹೋಗುತ್ತದೆ. ಇದಕ್ಕಿಂತಲೂ ನಮ್ಮ ನೀಚ ಸ್ವಭಾವಕ್ಕೆ ಸಂಬಂಧಪಟ್ಟ ಕೋಪ—ಅಹಂಕಾರ—ಇಂದ್ರಿಯ ಸುಖಲೋಲುಪ್ತತೆ-ಇಂತಹ ದೋಷಗಳನ್ನು ಗೆದ್ದರೆ ತುಂಬಾ ಪ್ರಯೋಜನವಾಗುತ್ತದೆ. ಕೈಯ್ಯನ್ನು ಸ್ತಬ್ಧ ಮಾಡುವುದರಿಂದ ನಮ್ಮ ಇಚ್ಛಾ ಶಕ್ತಿಯೇನೊ ಬೆಳೆಯುತ್ತದೆ—ಆದರೆ ಕೈಯಿ ಉಪಯೋಗಕ್ಕೆ ಬರುವುದಿಲ್ಲ. ಇದಕ್ಕಿಂತ ನಮ್ಮ ನೀಚ ಸ್ವಭಾವವನ್ನು ಮೇಲ್ಕಂಡಂತೆ ಗೆಲ್ಲುವ ಪ್ರಯತ್ನದಲ್ಲಿ ನಿರತರಾದರೆ ನಮ್ಮ ಇಚ್ಛಾ

ಶಕ್ತಿಯೂ ಬೆಳೆಯುವುದಲ್ಲದೆ ನಮ್ಮ ಸ್ವಭಾವವು ಉತ್ತಮಗೊಂಡು ಯೋಗ ಮಾರ್ಗದಲ್ಲಿನ ಪ್ರಗತಿಯನ್ನು ಸಾಧಿಸುವುದಕ್ಕೂ ಅನುಕೂಲವಾಗುತ್ತದೆ.

ಅಲ್ಲದೆ ಭಗವದ್ಗೀತೆಯಲ್ಲೂ ಸಹ (ಅಧ್ಯಾಯ 5 - 6 ನೆಯ ಶ್ಲೋ॥) ಕಠಿಣವಾದ ತಪಸ್ಸನ್ನು ಆಸುರೀ ಮಾರ್ಗವೆಂದು ಖಂಡಿಸಿದೆ. ಅಷ್ಟೇ ಅಲ್ಲ ದೇಹ ವನ್ನು ಹಿಂಸೆಗೆ ಒಳಗುಮಾಡಿದರೆ ದೇಹಾಂತರ್ಗತವಾದ ತನ್ನನ್ನೂ ಸಹ ಹಿಂಸೆಗೆ ಗುರಿಪಡಿಸಿದಂತೆ ಅಗುತ್ತದೆ—ಎಂದು ಸ್ವಾಮಿ ಹೇಳುತ್ತಾನೆ. ಕರ್ಷ ಯಂತಃ ಶರೀರಸ್ಥಂ ಭೂತಗ್ರಾಮಮ ಚೇತಸಃ । ಮಾಂಚೈವಾಂತ ಶ್ಶರೀರಸ್ಥಂತ ದ್ವಿದ್ಧಿ ಆಸುರ ನಿಶ್ಚಯಾನ್ ॥ ಅಲ್ಲದೆ ವಾಸ್ತವವಾಗಿಯೂ ಶ್ರೇಯಸ್ಕರವಾದ ತಪಸ್ಸಿನ ಸ್ವರೂಪವನ್ನು ಕುರಿತು ಶ್ರೀ ಕೃಷ್ಣನು ಇದೇ ಅಧ್ಯಾಯದ 14, 15 ಮತ್ತು 16 ನೆಯ ಶ್ಲೋಕಗಳಲ್ಲಿ ವಿಸ್ತಾರವಾಗಿ ಹೇಳಿರುತ್ತಾನೆ. ದೇವದ್ವಿಜ ಗುರು ಪ್ರಾಜ್ಞ ಪೂಜನಂ ಶೌಚಮಾರ್ಜವಂ । ಬ್ರಹ್ಮಚರ್ಯ ಮಹಿಂಸಾ ಚ ಶಾರೀರಂ ತಪಉಚ್ಯತೇ ॥ ದೇವತೆಗಳೂ (ದ್ವಿಜ - ಎಂದರೆ) ಜ್ಞಾನೋದಯದ ಮೂಲಕ ಎರಡನೆಯ ಜನ್ಮವನ್ನು ಒಂದೇ ದೇಹ ಧರಿಸಿರುವಾಗ ಪಡೆದವರೂ, ಜೀವನ್ಮುಕ್ತ ಗುರುಗಳೂ ಸತ್ಯವನ್ನು ಆಮೂಲಾಗ್ರವಾಗಿ ತಿಳಿದಂತಹ ಪ್ರಾಜ್ಞರೂ- ಇಂತಹ ಮಹಾಪುರುಷರನ್ನು ಗೌರವಿಸುವುದೂ, ಶುಚಿತ್ವ—ನಿಷ್ಕಾಪಟ್ಯ ಭಾವನೆ ಯಿಂದ ನಡೆದುಕೊಳ್ಳುವುದೂ, ಇಂದ್ರಿಯ ನಿಗ್ರಹವನ್ನು ಆಚರಿಸುವುದೂ ಯಾವದೊಂದು ಪ್ರಾಣಿಗೂ ಹಿಂಸೆಮಾಡದೆ ಜಾಗರೂಕನಾಗಿರುವುದೂ. ಶರೀರದ ತಪಸ್ಸೆಂದು ತಿಳಿಯಬೇಕು. ಎರಡನೆಯ ತಪಸ್ಸು ವಾಕ್ಕಿಗೆ ಸಂಬಂಧಪಟ್ಟುದು – ಅನುದ್ವೇಗಕರಂವಾಕ್ಯಂ ಸತ್ಯಂ ಪ್ರಿಯಹಿತಂಚಯತ್ । ಸ್ವಾಧ್ಯಾಯಾಭ್ಯಸನಂ ಚೈವ ವಾಙ್ಮಯಂತಪ ಉಚ್ಯತೇ ॥ ಇತರರಿಗೆ ನೋವುಂಟು ಮಾಡದೆ—ಸತ್ಯವಾಗಿಯೂ ಕೇಳುವುದಕ್ಕೆ ಸಂತೋಷವನ್ನುಂಟು ಮಾಡುವುದೇ ಅಲ್ಲದೆ ಪ್ರಯೋಜನವನ್ನುಂಟುಮಾಡುವಂತಹ ಮಾತುಗಳನ್ನೇ ಆಡುವುದೂ, ತನ್ನ ಸ್ವ ಸ್ವರೂಪವನ್ನು ತಿಳಿಯಬೇಕೆಂಬ ಉದ್ದೇಶದಿಂದ ಸದ್ಗ್ರಂಥಗಳ ವ್ಯಾಸಂಗ ಮಾಡುವುದೂ—ಇವು ವಾಕ್ಕಿಗೆ ಸಂಬಂಧಪಟ್ಟ ತಪಸ್ಸಿನ ಲಕ್ಷಣಗಳು. ಮೂರ ನೆಯದಾಗಿ ಮನಸ್ಸನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ತಪಸ್ಸನ್ನು ಕುರಿತು ಈ ಮುಂದಿನ ಶ್ಲೋಕವು ಬೋಧಿಸುತ್ತದೆ. ಮನಃ ಪ್ರಸಾದ ಸೌಮ್ಯತ್ವಂ ಮೌನಮಾತ್ಮ ವಿನಿಗ್ರಹಃ ಭಾವ ಸಂಶುದ್ಧಿರಿತ್ಯೇತ್ತ ಪೋಮಾನಸ ಉಚ್ಯತೇ ॥ ಯಾವಾಗಲೂ ಪ್ರಶಾಂತವಾಗಿರುವುದೂ ಎಲ್ಲವನ್ನೂ ಮತ್ತು ಎಲ್ಲರನ್ನೂ ಸಮ ವಾಗಿ ನೋಡುವುದೂ, ಅಪ್ರಾಸಂಗಿಕವಾಗಿ ಮಾತನಾಡದೆ ಮೌನವಾಗಿರುವುದೂ. ಯಾವ ಕೆಟ್ಟ ಯೋಚನೆಗಳೂ ಬಾರದಂತೆ ತಡೆಯುವುದೂ, ಯಾವಾಗಲೂ ಪರಿಶುದ್ಧವಾದ ಭಾವನೆಯನ್ನು ಅನುಷ್ಠಾನ ಮಾಡುವುದೂ—ಇವು ಮನಸ್ಸನ್ನು

ಸ್ವಾಧೀನಕ್ಕೆ ತೆಗೆದುಕೊಳ್ಳುವ ತಪಶ್ಚರ್ಯೆಯ ಲಕ್ಷಣಗಳು - ತಪಸ್ಸನ್ನು ಮಾಡ ಬೇಕೆಂದು ಬಯಸುವವರು ಮೇಲ್ಕಂಡಂತೆ ಸಮಾಜದ ಮಧ್ಯದಲ್ಲಿದ್ದುಕೊಂಡೇ ತಪಸ್ಸನ್ನು ಆಚರಿಸಲಿ. ಮನಸ್ಸಿಗೆ ಸಂಬಂಧಪಟ್ಟ ತಪಸ್ಸಿನಲ್ಲಿ ಮೊದಲನೆಯ ನಿಯಮವೇ ಸದಾ ಸಂತೋಷ ಚಿತ್ತನಾಗಿರುವುದು—ಎಂತಹ ಕಷ್ಟಗಳು ಪ್ರಾಪ್ತ ವಾದಾಗ್ಯೂ ಎದೆಗುಂದದೆ ಅವುಗಳನ್ನು ಧೈರ್ಯವಾಗಿ ಎದುರಿಸಿ ವ್ಯಸನಾಕ್ರಾಂತ ರಾಗದೇ ಬಾಳುವುದನ್ನು ಕಲಿಯಬೇಕು. ವ್ಯಸನವು ಒಂದು ಅಂಟು ಜಾಡ್ಯ ವಿದ್ದಂತೆ. ಅದು ಒಬ್ಬರಿಂದ ಮತ್ತೊಬ್ಬರಿಗೆ ಪ್ರಸರಿಸಿ ಎಲ್ಲರನ್ನೂ ದುಃಖಕ್ಕೆ ಒಳಗು ಮಾಡುತ್ತದೆ. ಪ್ರಪಂಚದ ಜೀವನವು ದುಃಖದಿಂದ ತುಂಬಿದೆ, ಅದನ್ನು ಆದಷ್ಟು ಕಡಮೆ ಮಾಡುವುದಕ್ಕೆ ಬದಲು ದುಃಖಿಯು ಅದರ ಮೊತ್ತಕ್ಕೆ ತನ್ನ ದನ್ನೂ ಸೇರಿಸಿ ಹೆಚ್ಚಿಸಿದಂತೆ ಆಗುತ್ತದೆ - ಪರಮಾತ್ಮನು ಆನಂದದಿಂದ ತುಂಬಿ ತುಳುಕಾಡುತ್ತಿರುತ್ತಾನೆ—ಆತನ ಆನಂದದ ಕಿರಣಗಳಿಗೆ ನಾವು ನಾಲೆಯಂತೆ ಆಗಿ ಇತರರಿಗೂ ಅವುಗಳನ್ನು ಬೀರಬೇಕು. ಅದಕ್ಕೆ ಬದಲಾಗಿ ನಾವು ಖಿನ್ನತೆಗೊಳ ಗಾದರೆ ನಾವು ಆತನ ಆನಂದಕ್ಕೆ ನಾಲೆಯಾಗುವ ಸುಯೋಗವನ್ನು ಕಳೆದುಕೊಳ್ಳು ತ್ತೇವೆ. ಸ್ವಾಮಿ ವಿವೇಕಾನಂದರು ಈ ಸಂಬಂಧದಲ್ಲಿ ಹೇಳಿರುವ ಒಂದು ಸಲಹೆ ಯು ನೆನಪಿಗೆ ಬರುತ್ತದೆ. "ಬೆಳಿಗ್ಗೆ ಎದ್ದಕೂಡಲೇ ನಿನ್ನ ಮುಖವನ್ನು ಕನ್ನಡಿ ಯಲ್ಲಿ ನೋಡಿಕೊ ಅದು ಚಿಂತೆಯ ಚಿಹ್ನೆಗಳಿಂದ ಕೂಡಿದ್ದರೆ—ಇತರರಿಗೆ ನಿನ್ನ ಮುಖವನ್ನು ತೋರಿಸಬೇಡ. ಹಾಗಲ್ಲದೇ ಸಂತೋಷದಿಂದ ನಲಿಯುತ್ತಿದ್ದರೆ— ಎಲ್ಲರೊಡನೆ ಬೆರೆತು ಎಲ್ಲರಿಗೂ ಆ ಪ್ರಸನ್ನತೆಯನ್ನು ಹಂಚಿಕೊಡು" ಎಂದು ಹೇಳಿರುತ್ತಾರೆ.

ಅಲ್ಲದೆ ಭಗವಾನ್ ಗೌತಮ ಬುದ್ಧನೂ ಕೂಡ ತನ್ನ ಅರಮನೆ ಬಿಟ್ಟು ಹೋಗುವವರೆಗೂ ರಾಜನಿಗೆ ಸಲ್ಲುವಂಥ ಸುಖಲೋಲುಪ್ತತೆಯಲ್ಲಿ ತನ್ನ ಜೀವನ ವನ್ನೂ ನಡೆಸಿದನು. ಅನಂತರ ಆತನು ಕಾಡಿಗೆ ಹೋಗಿ ಕಠಿಣವಾದ ತಪಸ್ಸನ್ನು ಆಚರಿಸಿ ನೋಡಿದನು. ಜೀವಿತದ ಈ ಯೆರಡು ಅತಿ-ಗಳಲ್ಲೂ ಆತನಿಗೆ ಮನಸ್ಸಿನ ನೆಮ್ಮದಿ ಸಿಕ್ಕಲಿಲ್ಲ – ಈ ಎರಡು ಕೊನೆಗಳು—ಎಂದರೆ – ಅತಿ ಭೋಗ – ಅತಿ ದೇಹ ದಂಡನೆ—ಇವೆರಡನ್ನೂ ಬಿಟ್ಟು ಬೆಲೆಯುಳ್ಳ ಚಿನ್ನದಂತಹ ಮಧ್ಯಮಾರ್ಗ ವನ್ನು ಅನುಷ್ಠಾನ ಮಾಡಿದಾಗ ಮಾತ್ರ ಅತನಿಗೆ ಜ್ಞಾನೋದಯವಾಯಿತು. ಗೀತೆಯೂ ಕೂಡ "ಸಮತ್ವಂ" ಯೋಗ ಉಚ್ಯತೇ ಎಂದು ಸಾರುತ್ತದೆ. ಅಲ್ಲದೇ ಸರ್ವಜ್ಞ ಕವಿಯೂ ಕೂಡ-"ಹಿತ್ತ ಬಡಿದರೆ ಹಾವು ಸಾವುದೇ" ಎಂದು ಮೂದ ಲಿಸುತ್ತಾನೆ—ಉದಾಹರಣೆಗಾಗಿ ಉಪವಾಸ ವಿರುವವರು ಉಪವಾಸ ವ್ರತ ಮುಗಿದ ಕೂಡಲೇ ಎರಡರಷ್ಟು ಆಹಾರ ತೆಗೆದುಕೊಳ್ಳುತ್ತಾರೆ. ಹಾಗಲ್ಲದೆ ಯುಕ್ತಾ ಹಾರ ವಿಹಾರಸ್ಯ ಯುಕ್ತ ಚೇಷ್ಟಸ್ಯ ಕರ್ಮಸು । ಯುಕ್ತ ಸ್ವಪ್ನಾವಬೋಧಸ್ಯ

ಯೋಗೋ ಭವತಿ ದುಃಖಹಾ ॥ ದೇಹಧಾರಣೆಗೆ ಎಷ್ಟು ಆವಶ್ಯಕವೋ ಅಷ್ಟು ಮಾತ್ರ ಆಹಾರವನ್ನೇ ತೆಗೆದುಕೊಳ್ಳುತ್ತಾ—ತನ್ನ ಜೀವನಕ್ಕೆ ಅತ್ಯಾವಶ್ಯಕವಾದಷ್ಟು ವ್ಯವಹಾರದಲ್ಲಿ ತೊಡಗಿ, ಸಂಯಮ ಜೀವಿತವನ್ನು ನಡೆಸುವಂತಹ ಯೋಗಿಗೆ ಎಲ್ಲ ದುಃಖಗಳೂ ಮಾಯವಾಗುತ್ತವೆ.

ಅಲ್ಲದೆ ನಿಜವಾದ ಸಂಯಮ ದೃಷ್ಟಿಯಿಂದ ವಿಮರ್ಶೆ ಮಾಡುವುದಾದರೆ ನಿರ್ಜನ ಪ್ರದೇಶದಲ್ಲಿ ತಪಸ್ಸು ಮಾಡುವುದಕ್ಕಿಂತಲೂ ಜನರ ಮಧ್ಯೆ ಇದ್ದುಕೊಂಡು ಪದ್ಮ ಪತ್ರ ಮಿವಾಂಭಸಾ – ಎಂಬ ಭಗವಗ್ಗೀತೆಯ ಉಕ್ತಿಯಂತೆ ಪ್ರಪಂಚದ ಮಧ್ಯದಲ್ಲಿದ್ದಾಗ್ಯೂ ಪ್ರಾಪಂಚಿಕನಾಗದೇ ನಿರ್ಲಿಪ್ತ ಜೀವಿತವನ್ನು ನಡೆಸುವುದು ಮೇಲ್ಮಟ್ಟದ ತಪಸ್ಸು ಎಂದು ಹೇಳಬೇಕಾಗುತ್ತದೆ—ಏಕೆಂದರೆ ಪ್ರಪಂಚದ ಮಧ್ಯೆ ಇರುವಾಗ ಅನೇಕಾನೇಕ ದುಷ್ಟ ಪ್ರೇರೇಪಣೆಗಳು ಬಂದು ಮುತ್ತುತ್ತವೆ - ಆಗ ಅವುಗಳಿಗೆ (ಸೊಪ್ಪುಹಾಕದೇ) ಸೋಲದೇ ತನ್ನ ನಿಯಮವನ್ನು ಕಾಪಾಡುವುದು ಕಷ್ಟ. ಆದರೆ ಯಾವ ಆಶೋತ್ತರಗಳೂ ಪ್ರೇರೇಪಣೆಗಳೂ ಇಲ್ಲದ ನಿರ್ಜನ ಪ್ರದೇಶದಲ್ಲಿ ಸಂಯಮಿಯಾಗಿರುವುದು ಸುಲಭ – ಈ ದೃಷ್ಟಿಯಿಂದಲೇ ಭಗವದ್ಗೀತೆಯು – ಅನಾಶ್ರಿತಃ ಕರ್ಮ ಫಲಂ ಕಾರ್ಯಂ ಕರ್ಮ ಕರೋತಿಯಃ ಸಸನ್ಯಾಸೀಚ-ಯೋಗೀಚನೆ ನಿರಗ್ನಿಃನಚಾಕ್ರಿಯಃ ॥ ಗೃಹಸ್ಥಾಶ್ರಮದ ಕರ್ಮಗಳನ್ನು ಬಿಟ್ಟ ಮಾತ್ರಕ್ಕೆ ಯೋಗಿಯೂ ಅಲ್ಲ ಸನ್ಯಾಸಿಯೂ ಅಲ್ಲ - ಸ್ವಾರ್ಥವನ್ನು ಬದಿಗೊತ್ತಿ ಲೋಕೋಪಕಾರ ಕಾರ್ಯದಲ್ಲಿ ಯಾರು ನಿರತನಾಗಿರುವುದರಲ್ಲೇ ಸಂತೋಷಪಡುತ್ತಾರೆಯೋ ಆತನೇ ಸಹಜವಾದ ಸನ್ಯಾಸಿ- ಆತನೇ ನಿಜವಾದಯೋಗೀ – ಎಂದು ಬೋಧಿಸುತ್ತದೆ.

ಓಂ ಶಾಂತಿ ಶ್ಶಾಂತಿ ಶ್ಶಾಂತಿಃ

ತಪ್ಪು - ಒಪ್ಪೋಲೆ

ಪುಟ	ಕೆಳಗಿನಿಂದ	ಸಾಲು	ತಪ್ಪು	ಒಪ್ಪು
1	ಕೆಳಗಿನಿಂದ	13	ಪಾಶ್ಚಾತರಾಡ	ಪಾಶ್ಚಾತ್ಯರಾದ
15	ಮೇಲಿನಿಂದ	7	ವಚಕ	ವಂಚಕ
19	ಕೆಳಗಿನಿಂದ	13	ಚೈತನ್ನವು	ಚೈತನ್ಯವು
28	"	13	ಮಂಂಚಿ	ಮುಚ್ಚಿ
31	ಮೇಲಿನಿಂದ	3	ಸ್ವಭಾವ ವುಳ್ಳದು	ವುಳ್ಳುದು
31	ಕೆಳಗಿನಿಂದ	9	ಸಸ್ಯವರ್ಗದಲ್ಲಿ'	ಇದರ ಪ್ರಾರಂಭದಲ್ಲಿ (ಆವರಣ ಚಿಹ್ನೆ ಇರಬೇಕು.
39	ಮೇಲಿನಿಂದ	12	ಸುಸಂಸ್ಕೃತ	ಸುಸಂಸ್ಕೃತ
40	ಕೆಳಗಿನಿಂದ	6	ಜ್ಞನೋನಿ	ಜನೋನಿ
46	ಕಾಡು ಮನುಷ್ಯನ ಕಾರಣ ದೇಹದ ಚಿತ್ರ			
47	ಮೇಲಿನಿಂದ	2	ಪ್ರೇರೇವಿಸು	ಪ್ರೇರೇಪಿಸು
56	ಕೆಳಗಿನಿಂದ	11	ಮಂನುಷ್ಯನ್ನು	ಮನುಷ್ಯನು
64	3ನೆಯ ಪ್ಯಾರ	1	ಕೊಳ್ಳಬೇಕಾ ದುಧೇನೆಂದರೆ	ದುದೇನೆಂದರೆ
70	ಮೇಲಿನಿಂದ	8	ಸಾಮಾನ್ನ	ಸಾಮಾನ್ಯ
77	ಕೆಳಗಿನಿಂದ	5	ದೃಷ್ಟಿಯುಂವರ	ದೃಷ್ಟಿಯುಳ್ಳವರ
79	ಮೇಲಿನಿಂದ	7	ಪ್ರಗತಿಯನೂ	ಪ್ರಗತಿಯನ್ನೂ
79	ಮೇಲಿನಿಂದ	8	ಬೇಕ್ನ	ಬೇಕು
80	ಕೆಳಗಿನಿಂದ	13	ಪ್ರಾಣಿಗೇನು	ಪ್ರಾಣಿಗೇನೇ
80	ಕೆಳಗಿನಿಂದ	15	ಸೋ॥ ಲೆಡ್ಬೀಟರ್	(ಸೋ-ಹಿಂದೆ ಹೀಗೆ ಆವರಣ ಚಿಹ್ನೆ ಇರಬೇಕು.
87	ಮೇಲಿನಿಂದ	6	ವಿಚಾರಪರನಲ್ಲದೆ	ವಿಚಾರಪರನಲ್ಲದ
88	ಕೆಳಗಿನಿಂದ	11	ಚಿತಕಳ್ಯಾ	ಚಿತ್ರಕಳ್ಯಾ

ಪುಟ	ಕೆಳಗಿನಿಂದ	ಸಾಲು	ತಪ್ಪು	ಒಪ್ಪು
90	ಮೇಲಿನಿಂದ	6	ಅಸಾಧ್ಯವಾದುದು? ಪ್ರಶ್ನಾರ್ಥಕವಲ್ಲ	ಅಸಾಧ್ಯವಾ ಆಶ್ಚರ್ಯ ಚಿಹ್ನೆ
96	ಅಧ್ಯಾಯದ ಶಿರೋನಾಮ		ಜೀವನ್ಮುಕ್ತಳ	ಜೀವನ್ಮುಕ್ತನ
102	ಕೆಳಗಿನಿಂದ	11	ವಿಧವಾಧ	ವಿಧವಾದ
109	ಮೇಲಿನಿಂದ	1	ಎಲ್ಲ ಗೆರೆ	ಎಲ್ಲೆ ಗೆರೆ
109	ಮೇಲಿನಿಂದ	8	ಲಕ್ಷಣಗಳನ್ನು	ಲಕ್ಷಣಗಳು
111	ಕೆಳಗಿನಿಂದ	4	ಪ್ರಕೃಲತಿ	ಪ್ರಕೃತಿ
116	ಮೇಲಿನಿಂದ	11	ಸಾರ್ಥಕವಾದುವು	ಸ್ವಾರ್ಥವಾದು
119	ಈ ವಾಕ್ಯದ ಪ್ರಾರಂಭದಲ್ಲೇ ಆವರಣ (ಚಿಹ್ನೆ ಇರಬೇಕು.			
120	ಮೇಲಿನಿಂದ	17	ಸಂಸಾರ ಚಿತ್ರ	ಸಂಸಾರ ಚಕ್ರ
”	”	23	ಮೇಲಾಗಿ	ಮೇವಾಪಿ
”	”	23	ಕರ್ತೃಮಹರ್ಸಿ	ಕರ್ತೃಮಹರ್ಷಿ
”	”	23	ವಾಪಿ–	ಬಿಟ್ಟು ಬಿಡಬೇಕು
129–30	ಕೇವಲ ಕೆಳಗಿನ ಸಾಲು		ಕರೆಯಂದಿರುವುದು	ಕರೆದಿರುವುದು